ವಿಶ್ವ ಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಪೂರ್ಣ ಸೂರ್ಯಗ್ರಹಣ

## ಒಂದು ಸಮಾಜೋ ಸಾಂಸ್ಕೃತಿಕ ಸಮೀಕ್ಷೆ

ಡಾ. ಎಂ. ಚಿದಾನಂದಮೂರ್ತಿ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಪೂರ್ಣ ಸೂರ್ಯಗ್ರಹಣ

ಒಂದು ಸಮಾಜೋಸಾಂಸ್ಕೃತಿಕ ಸಮೀಕ್ಷೆ

ಡಾ. ಎಂ. ಚಿದಾನಂದಮೂರ್ತಿ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು - ೫೬೦ ೦೦೨

**PUURNA SUURYAGRAHANA: ONDU SAMAAJOO-SAAMSKRITIKA SAMIIKSHE** (Total Solar Eclipse: a sociocultural survey) by **Dr. M. Chidanandamurthy**, Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : XL + ೨೪೦
ಬೆಲೆ : ರೂ. ೬೫-೦೦

ರಕ್ಷಾಪುಟ ವಿನ್ಯಾಸ : ಕೆ. ಚಂದ್ರನಾಥ ಆಚಾರ್ಯ

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦ ೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ "ವಿಶ್ವ ಕನ್ನಡ ಸಮ್ಮೇಳನ" ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು - ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧

**(ಗೋವಿಂದ ಎಂ. ಕಾರಜೋಳ)**

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

(ರಮೇಶ್ ಬಿ.ಝುಳಕಿ)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**

ಅಧ್ಯಕ್ಷ

ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**

ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**

ಡಾ॥ ಚಂದ್ರಶೇಖರ ಕಂಬಾರ

ಡಾ॥ ಎಂ.ಎಂ. ಕಲಬುರ್ಗಿ

ಡಾ॥ ದೊಡ್ಡರಂಗೇಗೌಡ

ಡಾ॥ ಅರವಿಂದ ಮಾಲಗತ್ತಿ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಡಾ॥ ಪ್ರಧಾನ್ ಗುರುದತ್ತ

ಡಾ॥ ಹಂಪ ನಾಗರಾಜಯ್ಯ

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಶ್ರೀಮತಿ ಸಾರಾ ಅಬೂಬಕರ್

ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**

ಶ್ರೀ ಮನು ಬಳಿಗಾರ್, ಕ.ಆ.ಸೇ.

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಸ್ನೇಹದ ಸಮರ್ಪಣೆ



(ದಿ) ಡಾ॥ ಬಿ.ಜಿ.ಎಲ್. ಸ್ವಾಮಿ

[೪-೨-೧೯೧೬ — ೨-೧೧-೧೯೮೧]

# ಮುನ್ನುಡಿ

ಡಾ. ಚಿದಾನಂದ ಮೂರ್ತಿಯವರ ಬರೆಹ ಉದ್ಯಮಗಳು ನನಗೆ ಪ್ರಿಯ. ಅವರು ವಚನಗಳ ಬಗ್ಗೆ ಬರೆಯಲಿ ಕರ್ನಾಟಕ ಜಾನಪದ ಕಲೆ ಅಥವಾ ನಂಬಿಕೆಗಳ ಬಗ್ಗೆ ಬರೆಯಲಿ, ಕನ್ನಡ ಶಾಸನಗಳ ಬಗ್ಗೆ ನೂರಾರು ಅಂಕಿಅಂಶ ಸಂಗ್ರಹಿಸಿ ಬೃಹದ್ಗ್ರಂಥ ಬರೆಯಲಿ-ಅವರು ಬರೆದದ್ದನ್ನೆಲ್ಲ ಆಸೆಯಿಂದ ಸಮುದ್ರದಾಚೆ ಈ ಅನೇಕ ವರ್ಷ ಓದಿ, ಅವರಿಂದ ಹಲವು ವಿಷಯ ಕಲಿತುಕೊಂಡ ಸಹೋದ್ಯೋಗಿಗಳಲ್ಲಿ ನಾನೂ ಒಬ್ಬ. ಅವರು ಕನ್ನಡ ಅಧ್ಯಯನಕ್ಕೆ ಅಭಿಮಾನ ಮಾತ್ರವಲ್ಲದೆ ಹಲವು ರೀತಿಯ ಎಚ್ಚರ, ಕಲಿಕೆ, ನಿರ್ದಿಷ್ಟ ಕೌಶಲಗಳನ್ನು ಬಳಸಿಕೊಂಡವರು. ಭಾಷಾಶಾಸ್ತ್ರ, ಜಾನಪದ, ಕ್ಷೇತ್ರಕಾರ್ಯ, ಮಾನವಶಾಸ್ತ್ರ ಇವುಗಳನ್ನು ಕನ್ನಡದ ಸನ್ನಿವೇಶದಲ್ಲಿ ಅಭ್ಯಾಸ ಮಾಡಿದವರು.

ಅಚ್ಚುಪ್ರತಿ ರೂಪದಲ್ಲಿ ಈಗ ನನ್ನ ಕೈಸೇರಿರುವ ಪುಸ್ತಕ "ಪೂರ್ಣ ಸೂರ್ಯಗ್ರಹಣ"ದಲ್ಲಿ ಶ್ರೀ ಮೂರ್ತಿಯವರ ಬಹುಮುಖಜ್ಞಾನ ಒಂದುಗೂಡಿ ಅಪೂರ್ವ ಕೃತಿಯೊಂದನ್ನು ಸೃಷ್ಟಿಸಿದೆ. ಫೆಬ್ರವರಿ ೧೬-೧೯೮೦ರಂದು ಕರ್ನಾಟಕದ ಕೆಲವು ಭಾಗದಲ್ಲಿ ಕಾಣಸಿಕ್ಕ ಪೂರ್ಣಗ್ರಹಣ ವೈಜ್ಞಾನಿಕರಲ್ಲೂ ಶ್ರೀಸಾಮಾನ್ಯರಲ್ಲೂ ವಿವಿಧ ರೀತಿಯ ಪ್ರತಿಕ್ರಿಯೆಗೆ ಕಾರಣವಾಯಿತು. ಅದು ಮರೆಯುವಂತಹ ದಿನವಲ್ಲ. ಜ್ಯೋತಿಷಿಗಳು, ವಿಜ್ಞಾನಿಗಳು, ಕಲೆಗಾರರು ಇತ್ಯಾದಿಯಾಗಿ ಜನ ಶತಮಾನಗಳಿಂದ ಸೂರ್ಯಗ್ರಹಣದ ಬಗ್ಗೆ ಆಸಕ್ತರಾಗಿ ಚಿಂತನೆ ಮಾಡಿದ್ದಾರೆ. ಪ್ರಪಂಚದ ಎಲ್ಲ ಜೀವನದ ಎಲ್ಲ ಶಕ್ತಿಯ ಮೂಲ ಎನಿಸಿದ ಸೂರ್ಯನಿಗೆ ಆಪತ್ತೊದಗಿತೆಂದು ಜನರು ಭಯ ಕುತೂಹಲ ತಲ್ಲಣ ಅನುಭವಿಸಿದಾಗ ಯಜ್ಞಯಾಗಾದಿಗಳ ಮೂಲಕ, ಭವಿಷ್ಯ ಹೇಳುವುದರ ಮೂಲಕ, ಪುರಾಣಕತೆಗಳ ಮೂಲಕ, ವೈಜ್ಞಾನಿಕ ಶೋಧನೆಗಳ ಮೂಲಕ ಈ ಭಯ ತಲ್ಲಣ ಪ್ರಶ್ನೆಗಳಿಗೆ ಸಮಾಧಾನ ಹೇಳುವ ಪ್ರಯತ್ನ ಎಂದಿನಿಂದ ನಡೆದಿದೆ. ಈಚೆಗೆ ಹೊಸದೆಂದರೆ, ಸಮೂಹಮಾಧ್ಯಮಗಳು: ಟಿ.ವಿ. (ಕೆಲವು ಕಡೆ), ರೇಡಿಯೋ, ಚಲನಚಿತ್ರ, ದಿನಪತ್ರಿಕೆಗಳು, ಇವು ಕೂಡ ತಮ್ಮ ನಿರಂತರ ಸಂದೇಶಗಳ ಮೂಲಕ ಜನರ ಭಾವನೆ ನಂಬಿಕೆಗಳನ್ನು ಅತ್ತ ಇತ್ತ ಎಳೆದಾಡಿದುವು, ಅವುಗಳ ಮೇಲೆ ಪ್ರಭಾವ ಬೀರಿದುವು. ವಿದ್ಯಾವಂತ ಅವಿದ್ಯಾವಂತರೆನ್ನದೆ, ಪಟ್ಟಣ ಹಳ್ಳಿ ಎನ್ನದೆ ಎಲ್ಲರಿಗೂ ಸೂರ್ಯಗ್ರಹಣ ಮುಖ್ಯವಾಯಿತು. ಇಡೀ ಪಟ್ಟಣಗಳೇ

ಸ್ತಬ್ಧವಾಗಿ ಸೂರ್ಯನಿಗೆ ಹಿಡಿದ ಗ್ರಹಣ ಪ್ರಪಂಚಕ್ಕೂ ಹಿಡಿಯಿತೇನೋ ಅನ್ನುವಂತಾಯಿತು. ಜನರು ಈ ಅನುಭವಕ್ಕೆ ಪ್ರತಿಕ್ರಿಯೆ ತೋರಿಸಿದರು–ಗ್ರಹಣದ ಹೊತ್ತಿನಲ್ಲಿ ಊಟ ಬಿಟ್ಟರೆ ? ಮೊಸರಿನಲ್ಲಿ ದರ್ಭೆ ನೆಟ್ಟರೆ ? ಒನಕೆ ನಿಲ್ಲಿಸಿದರೆ ? ಜಪತಪಾದಿಗಳಲ್ಲಿ ನಿರತರಾದರೆ ? ಸೂರ್ಯನನ್ನು ನುಂಗಿಕೊಂಡ ರಾಹುವನ್ನು ಬೆದರಿಸಲೆಂದು ತಮಟೆ ಬಡಿದರೆ ? ಮಾಟ ಮಾಡಿದರೆ, ಅಗ್ನಿ ಬಳಸಿ ಯಾಗಮಾಡಿದರೆ ? ೧೯೮೦ ರಂತಹ ಆಧುನಿಕ ವರ್ಷದಲ್ಲಿ ಅವರ ಪ್ರತಿಕ್ರಿಯೆ ಬದಲಾಗಿತ್ತೆ ? ವಿದ್ಯಾವಂತರಿಗೂ ಅವಿದ್ಯಾವಂತರಿಗೂ ವ್ಯತ್ಯಾಸವಿತ್ತೆ ? ಇಂತಹ ಪ್ರಶ್ನೆಗಳಿಗೆಲ್ಲ ಸಮಾಜಶಾಸ್ತ್ರ ರೀತಿಯಿಂದ ಪ್ರಶ್ನಾವಳಿಗಳ ಮೂಲಕ, ಇಂಟರ್‌ವ್ಯೂ ಮೂಲಕ ಡಾ. ಮೂರ್ತಿ ಅವರು ಲವಲವಿಕೆಯಿಂದ ಪರಿಶೀಲಿಸಿದ್ದಾರೆ. ಸಾಂಸ್ಕೃತಿಕವಾಗಿ ನಮ್ಮನ್ನು ನಾವು ಅರಿತುಕೊಳ್ಳುವುದರಲ್ಲಿ ಇಂತಹ ವಾಸ್ತವವಾದೀ ಪರಿಶೀಲನೆ ಒಂದು ಮುಖ್ಯ ಹೆಜ್ಜೆ.

ಜಾನಪದವೆಂದರೆ ಜನರ ಗಾದೆ ಲಾವಣಿ ಒಡಪು ಅಜ್ಜಿಕತೆ ಬಯಲಾಟ ಕುಣಿತ ಮಾತ್ರವಲ್ಲ, ಅವರ ನಂಬಿಕೆಗಳ ಜಾಲ ಕೂಡ. ಈ ನಂಬಿಕೆಗಳ ಜಾಲದ ಹರಹು ವಿಸ್ತಾರ, ಸೂಕ್ಷ್ಮ, ಅನೂಹ್ಯ. ಹಳೆಯದು ಹೊಸದರ ನಡುವೆ ಹೊಸ್ತಿಲ ಮೇಲೆ ನಿಂತಿರುವ ನಮ್ಮ ನಾಡಿನ ಈ ಪೀಳಿಗೆಯವರಿಗೆ ನಮ್ಮ ನಂಬಿಕೆಗಳ ಬಗ್ಗೆ ನಿರ್ಭಯವಾದ ವಾಸ್ತವವಾದ ಅರಿವು ಅಗತ್ಯ. ಅನುದಿನದ ಸಾದಾ ಜೀವನದ ಮೇಲೆ ವಿಜ್ಞಾನ, ವೃತ್ತಪತ್ರಿಕೆ, ಪರಂಪರಾಗತ ನಂಬಿಕೆ, ಸ್ಕೂಲಿನಲ್ಲಿ ಕಲಿತ ವಿದ್ಯೆ ಇತ್ಯಾದಿಗಳ ಪ್ರಭಾವ ಏನು ? ಸೂರ್ಯನಿಗೆ ಗ್ರಹಣ ಹಿಡಿದು ಹಗಲು ಕಪ್ಪಿಡಿದಾಗ ನಮ್ಮನ್ನು ಚಲಿಸುವ, ಬುದ್ಧಿಯನ್ನು ಓಡಿಸುವ ಪ್ರಭಾವಗಳು ಯಾವುವು ? ವಿದ್ಯಾವಂತರ ವಿಜ್ಞಾನಬುದ್ಧಿ ಎಷ್ಟು ಆಳವಾಗಿ ದೃಢವಾಗಿ ಅವರ ನಡತೆ ನಂಬಿಕೆಗಳನ್ನು ನಡಸುತ್ತದೆ ? ಇಂತಹ ಪ್ರಶ್ನೆಗಳಿಗೆ ಸಮಾನಚಿತ್ತದಿಂದ ಬೆಳ್ಳಂಬೆಳಕಿನಲ್ಲಿ ಉತ್ತರ ಹುಡುಕುತ್ತದೆ ಈ ಪುಸ್ತಕ. ಈ ಉದ್ಯಮದ ಬಗ್ಗೆ ಇನ್ನೂ ಹೆಚ್ಚಾಗಿ ಹೇಳುವುದು ಸರಿಯಲ್ಲ–ಪತ್ತೇದಾರಿ ಕಾದಂಬರಿಯ ಕಡೆಯ ಪುಟ ಓದಿ ಗುಟ್ಟು ರಟ್ಟು ಮಾಡಿದ ಹಾಗೆ, ಒಡಪಿನ ಉತ್ತರ ಮೊದಲೇ ಬಿಟ್ಟುಕೊಟ್ಟ ಹಾಗೆ ಆದೀತು. ಅಲ್ಲದೆ ಈ ಉತ್ತರಗಳು ನಾಟಕೀಯವಾಗಿರದೆ, ಸಣ್ಣದನಿಯಲ್ಲಿ ಹೇಳಿದ ಸತ್ಯಗಳು– the still small voice ಅನ್ನುತ್ತಾರಲ್ಲ ಹಾಗೆ. ಈ ಪುಸ್ತಕದಲ್ಲಿ ಗ್ರಹಣದ ಬಗ್ಗೆ ಹಳಗನ್ನಡ ಪದ್ಯಗಳಿಂದ ಹಿಡಿದು, ೧೯೮೦ರಲ್ಲಿ ನಡೆದ ವೈಖಾನಸರ ಸೂರ್ಯಪೂಜೆಯ ವಿವರ, ವಿಜ್ಞಾನಿಗಳ ಅಭಿಪ್ರಾಯ, ಪತ್ರಿಕೆ ವರದಿಗಳವರೆಗೆ ಅನೇಕ ರೀತಿಯ ಕೌತುಕವಾದ ಸಂಗತಿ ಅಡಗಿವೆ. ಓದುಗರು ತಾವೇ ಓದಿ ಕುತೂಹಲ

ನಿವಾರಿಸಿಕೊಳ್ಳಬೇಕು, ಚರ್ಚಿಸಿಕೊಳ್ಳಬೇಕು. ಇದಕ್ಕೆ ನನ್ನಂತಹವರ ಮುನ್ನುಡಿ ಹಿನ್ನುಡಿ ಒಡನುಡಿ ಅಗತ್ಯವೇ ಇಲ್ಲ. ಇದು ಕನ್ನಡದಲ್ಲಂತೂ ಹೊಸರೀತಿಯ ಬಹುಮುಖಿ ಕಾರ್ಯ. ಇಲ್ಲಿನ ವಿವಿಧ ವಿಷಯಗಳ ಓರಣವಾದ ಸಂಗ್ರಹ, ನಿರ್ವಿಕಾರ ಶೈಲಿ, ಒಂದು ಸಾಮೂಹಿಕ ಅನುಭವ ಆಗುತ್ತಿದ್ದ ಹಾಗೇ ಅದನ್ನು ಪರಿಶೀಲಿಸಿ ಜನಮನಕ್ಕೆ ಕನ್ನಡಿ ಹಿಡಿಯುವ ಆಸಕ್ತಿ–ಇವು ಜಾನಪದ/ಮಾನವಶಾಸ್ತ್ರ/ ಸಮಕಾಲೀನ ಭಾರತದ ಅಧ್ಯಯನಗಳಿಗೆ ಅಪೂರ್ವ ಕೊಡುಗೆ. ಇದನ್ನು serious journalism ಅಂತಲೂ ಅನ್ನಬಹುದು. ಹೊಸ ಸಂಶೋಧನೆಗಳಿಗೆ ಇದು ಒಳ್ಳೆಯ ಆರಂಭ. ಇಲ್ಲಿ ಪ್ರಶ್ನಾವಳಿ, ಅಂಕಿಅಂಶಗಳ sampling ಇತ್ಯಾದಿ ತಂತ್ರಗಳನ್ನು ಇನ್ನಷ್ಟು ಸೂಕ್ಷ್ಮಗೊಳಿಸಬಹುದೇನೋ, "ಮೂಢನಂಬಿಕೆ"ಗಳ ಅರ್ಥದ ಬಗ್ಗೆ ಇನ್ನಷ್ಟು ಸಂಕೀರ್ಣವಾಗಿ ಯೋಚನೆ ಮಾಡಬಹುದೇನೋ ಅನ್ನಿಸಿದರೂ ಈ ಪುಸ್ತಕ ತನ್ನ ಮಿತಿಯಲ್ಲಿ ಕೃತಾರ್ಥ. ಇಲ್ಲಿ ಅನುಭವಿಯೊಬ್ಬರ ಪಾಂಡಿತ್ಯ ದಂತಗೋಪುರದಿಂದಿಳಿದು ಬಂದು ಅನುದಿನದ ಅರಿವಿಗೆ ಉಪಕರಣವಾಗಿದೆ.

ಚಿಕಾಗೊ,
ಡಿಸೆಂಬರ್ ೧೯೮೧

ಡಾ॥ ಎ.ಕೆ. ರಾಮಾನುಜನ್
ನಿರ್ದೇಶಕ ಮತ್ತು ಪ್ರಾಧ್ಯಾಪಕ,
ದಕ್ಷಿಣ ಏಷಿಯ ಭಾಷೆಗಳ ಮತ್ತು
ನಾಗರಿಕತೆಗಳ ವಿಭಾಗ,
ಚಿಕಾಗೋ ವಿಶ್ವವಿದ್ಯಾಲಯ

"ಪೂರ್ಣ ಸೂರ್ಯಗ್ರಹಣ" ಕೃತಿ ಡಾ. ಚಿದಾನಂದಮೂರ್ತಿಯವರ ವೈಚಾರಿಕ ಮನೋಭಾವನೆ ಮತ್ತು ವಿಮರ್ಶಾತ್ಮಕ ವಿದ್ವತ್ತುಗಳ ದ್ಯೋತಕ. ಸಮಾಜ ವಿಜ್ಞಾನ ಹಾಗೂ ಸಾಮಾಜಿಕ ಮಾನವಶಾಸ್ತ್ರದ ಅಧ್ಯಯನಗಳ ನೆರವಿನಿಂದ ಸೂರ್ಯಗ್ರಹಣದ ಸುತ್ತಲೂ ಕಟ್ಟಿಕೊಂಡಿರುವ ಪುರಾಣ, ಕಾರ್ಮಿಕ ಪ್ರಕ್ರಿಯೆ, ನಂಬುಗೆಗಳನ್ನು ವಸ್ತು ನಿಷ್ಠೆಯಿಂದ ವಿಮರ್ಶಿಸಿರುವ ಈ ಕೃತಿ ನನಗೆ ತಿಳಿದ ಮಟ್ಟಿಗೆ ಕನ್ನಡದಲ್ಲಿ ನೂತನ ಪ್ರಯತ್ನ. ಅಂತರ್ ಶಿಸ್ತುಗಳ ನೆರವಿನಲ್ಲಿ ನಡೆದ ಇಂತಹ ಅಧ್ಯಯನಗಳು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಬಲ್ಲವು.

ಈ ಕೃತಿಯ ಕೊನೆಯಲ್ಲಿ ಬಂದಿರುವ 'ಉಪಸಂಹಾರ', ಭಾರತೀಯ ಸಾಮಾಜಿಕ ಮಾನವ ಶಾಸ್ತ್ರಕ್ಕೆ ನೀಡಿದ ಒಂದು ನಿರ್ದಿಷ್ಟ ಕೊಡುಗೆ. ಪುರಾಣ, ಧಾರ್ಮಿಕ ಪ್ರಕ್ರಿಯೆಗಳು ಮತ್ತು ನಂಬುಗೆಗಳ ಕ್ರಿಯಾತ್ಮಕ ವಿಶ್ಲೇಷಣೆ ಹಾಗೂ ಭಾರತದ ನವೀನೀಕರಣದ ಪ್ರಯತ್ನದಲ್ಲಿ ಸರಕಾರದ ವಿಶಿಷ್ಟ ಘಟಕಗಳು, ಸಾಮೂಹಿಕ ಮಾಧ್ಯಮ ಮತ್ತು ಮಾರ್ಗ(ಬ್ರಾಹ್ಮಣ) ಸಂಸ್ಕೃತಿಗೆ ಸಂಬಂಧಿಸಿದ ಸಂಸ್ಥೆ, ವಿಪ್ರವರ್ಗಗಳ ನಿಷ್ಕ್ರಿಯಾತ್ಮಕ (dys functional) ಪಾತ್ರಗಳ ಬಗೆಗೆ ಬಂದಿರುವ ಇಲ್ಲಿನ ವಿವರಗಳು ಭಾರತದ ಧರ್ಮ, ನವೀನೀಕರಣದ ಅಧ್ಯಯನಕ್ಕೆ ಸಂಬಂಧಿಸಿದ ಬೆಲೆ ಬಾಳುವ ಚಿಂತನೆಗಳಾಗಿವೆ.

ವೈಚಾರಿಕ ಬರವಣಿಗೆಗೆ ಹೆಸರಾದ ಡಾ. ಮೂರ್ತಿಯವರ ಪ್ರಯತ್ನಗಳನ್ನು ಮೌನದಿಂದ ಕೊಂಡಾಡುವವರಲ್ಲಿ ನಾನೊಬ್ಬ, ಅವರ ಪಿಎಚ್.ಡಿ. ನಿಬಂಧದಲ್ಲಿ ಕಾಣಿಸಿಕೊಂಡಿರುವ ಸ್ವತಂತ್ರ ಮನೋಭಾವನೆ, ಅಂತರಶಿಸ್ತುಗಳ ವ್ಯಾಸಂಗದ ಪ್ರಯತ್ನ ಈ ಬರಹದಲ್ಲಿ ಮತ್ತಷ್ಟು ನಿಚ್ಚಳವಾಗಿ ಕಾಣಿಸಿಕೊಂಡಿವೆ.

**ಡಾ॥ ಹಿರೇಮಲ್ಲೂರ ಈಶ್ವರನ್**

ಪ್ರಾಧ್ಯಾಪಕ, ಸಮಾಜ ವಿಜ್ಞಾನ ವಿಭಾಗ

ಯಾರ್ಕ್ ವಿಶ್ವವಿದ್ಯಾಲಯ, ಒಂಟಾರಿಯೊ (ಕೆನಡ)

# ಪ್ರಸ್ತಾವನೆ

ಈ ಪುಸ್ತಕವನ್ನು ಬರೆಯಲು ಒದಗಿ ಬಂದ ಪ್ರಚೋದನೆಯನ್ನು ಮೊದಲ ಅಧ್ಯಾಯದಲ್ಲಿ ಹೇಳಿಕೊಂಡಿರುವುದರಿಂದ ಅದನ್ನು ಇಲ್ಲಿ ಪುನರುಚ್ಚರಿಸುವ ಅಗತ್ಯ ಕಾಣಿಸದು. ಆದರೆ, ಈ ಪುಸ್ತಕ ನನಗೆ ನನ್ನ ಸಂಶೋಧನ ಜೀವನದ ಕೆಲವು ವಿಶಿಷ್ಟ ಅನುಭವಗಳನ್ನು ತಂದುಕೊಟ್ಟಿತು. ವಿಜ್ಞಾನ, ಶಾಸನ ಶಾಸ್ತ್ರ, ಇತಿಹಾಸ, ಸಾಹಿತ್ಯ, ಜಾನಪದ ಶಾಸ್ತ್ರ, ಸಮಾಜವಿಜ್ಞಾನ, ಮನೋವಿಜ್ಞಾನ, ಮಾನವ ವಿಜ್ಞಾನ, ಸಮೂಹ ಮಾಧ್ಯಮ ಇತ್ಯಾದಿ ಬೇರೆ ಬೇರೆ ಶಿಸ್ತುಗಳು ಇಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಒಂದಲ್ಲ ಒಂದು ಪ್ರಮಾಣದಲ್ಲಿ ಬೆರೆತಿರುವುದನ್ನು ಓದುಗರು ಗಮನಿಸಬಹುದು. ಗ್ರಹಣದಂತಹ ಯಾವುದೇ ಒಂದು ಸಮಕಾಲೀನ ಘಟನೆಯನ್ನು ಕೇಂದ್ರವಾಗಿರಿಸಿಕೊಂಡು ಪ್ರಶ್ನಾವಳಿ ಮತ್ತು ಕ್ಷೇತ್ರಕಾರ್ಯಗಳ ಮೂಲಕ, ಒಂದು ಸಮಾಜ ಅದಕ್ಕೆ ಹೇಗೆ ಪ್ರತಿಕ್ರಿಯಿಸಿತೆಂಬುದನ್ನು ಸಮಗ್ರವಾಗಿ ವಿಚಾರಮಾಡಿ ವಿಶ್ಲೇಷಿಸಿದ ಮೊದಲ ಕೃತಿಯಿದು ಕನ್ನಡದಲ್ಲಿ ಎಂದರೆ ಓದುಗರು ಅದನ್ನು ಕೇವಲ ಸ್ವಪ್ರಶಂಸೆಯ ಮಾತೆಂದು ತಿಳಿಯಲಾರರೆಂದು ಭಾವಿಸುತ್ತೇನೆ. ಇಂತಹ ಮಾತುಗಳನ್ನು ಓದುಗರು ಸತ್ಯವಲ್ಲದಿದ್ದರೆ ತಿರಸ್ಕರಿಸುತ್ತಾರೆ ಎಂಬ ಅರಿವೂ ನನಗಿದೆ. ಇಂಗ್ಲೀಷೂ ಸೇರಿದಂತೆ ಅನ್ಯಭಾಷೆಗಳಲ್ಲಿ ಇಂತಹ ಕೃತಿ ಇಲ್ಲವೆಂದು ನಾನು ಹೇಳಲಾರೆ; ಆ ಬಗ್ಗೆ ನನ್ನ ಜ್ಞಾನ ತೀರ ಮಿತಿಗಳುಳ್ಳದು.

ಪೂರ್ಣಗ್ರಹಣದ ಬಗ್ಗೆ ಕೆಲಸ ಮಾಡಲು ಆರಂಭಿಸಿದಂದಿನಿಂದ ಆದ ಅನುಭವವೆಂದರೆ ವಿಷಯ ಬೆಳೆಯುತ್ತ ಹೋದುದು. ಮಾಹಿತಿ ಸಂಗ್ರಹ ತನ್ನಷ್ಟಕ್ಕೆ ಬೆಳೆಯಿತು; ಸುಮಾರು ಎಂಟು ತಿಂಗಳ ಅವಧಿಯಲ್ಲಿ ಎಲ್ಲಿ ಹೋದರೂ ಯಾರನ್ನು ಭೇಟಿಯಾದರೂ ಗ್ರಹಣದ ವಿಷಯ ಮಾತನಾಡಿ ಅವರ ಪ್ರತಿಕ್ರಿಯೆಗಳನ್ನು ಗಮನಿಸುತ್ತಿದ್ದೆ. ಅವರ ಮಾತಿನಲ್ಲಿ ಹೊರಟ ಹೊಸ ಸಂಗತಿಗಳನ್ನು ತಕ್ಷಣ ದಾಖಲು ಮಾಡಿಕೊಳ್ಳುತ್ತಿದ್ದೆ. ಪುಸ್ತಕವನ್ನು ಬರೆದು ಮುಗಿಸಿದ ಮೇಲೂ ಮಧ್ಯೆ ಮಧ್ಯೆ ಸೇರಿಸಿದ ವಿಷಯಗಳು ಎಷ್ಟೋ. ಅಷ್ಟು ಸುಲಭವಾಗಿ ಸೇರಿಸಲಾಗದ ವಿಷಯಗಳನ್ನು ಅಲ್ಲಲ್ಲಿ ಅನುಬಂಧಗಳಾಗಿ ಕೊಡಬೇಕಾಯಿತು. ಮಾಹಿತಿ ವ್ಯರ್ಥವಾಗಬಾರದು ಎಂಬ ಉದ್ದೇಶದಿಂದ ನಾನು ಹಾಗೆ ಮಾಡಿದೆ. ನನ್ನ ಕೈಬರಹದ ಪ್ರತಿ ಎಷ್ಟು ಗೋಜಲಾಗಿತ್ತೆಂದರೆ ಅದನ್ನು ಮಿತ್ರರಾದ ಶ್ರೀ ಜಿ. ಕೆ. ಅನಂತರಾಮ್ ಅವರು

ಬೆರಳಚ್ಚು ಮಾಡಿಸದಿದ್ದರೆ ಅಚ್ಚಿನ ಮನೆಯಲ್ಲಿ ಮೊಳೆ ಜೋಡಿಸುವವರಿಗೆ ನನ್ನ ಹಸ್ತಪ್ರತಿ ನಿಜವಾಗಿಯೂ ಕಷ್ಟ ಕೊಡುತ್ತಿತ್ತು. ಬೆರಳಚ್ಚಿನ ಶುದ್ಧಪ್ರತಿಯನ್ನು ಪರಿಶೀಲಿಸುವಾಗ, ಮುಂದೆ ಅಚ್ಚಿನ ಮನೆಯಿಂದ ಬಂದ ಕರಡು ತಿದ್ದುವಾಗ ಎಷ್ಟೋ ಹೊಸ ವಿಷಯ ಮತ್ತು ವ್ಯಾಖ್ಯಾನಗಳನ್ನು ಸೇರಿಸುತ್ತ ಬಂದೆ. ಪುಸ್ತಕ ಪೂರ್ತಿ ಅಚ್ಚಾದ ಮೇಲೆ, ಈ ಮುಂಚೆ ಭೇಟಿ ಮಾಡಲು ಪ್ರಯತ್ನಿಸಿ ವಿಫಲನಾಗಿದ್ದ ನನಗೆ ಶ್ರೀಮತಿ ರವಿಕಲಾ ಅವರ ಮೂಲಕ ಹಾವಿನ ಮಂತ್ರ ಬಲ್ಲವರ ಪರಿಚಯವಾಗಿ ಅವರಿಂದ ಮಾಹಿತಿ ಸಂಗ್ರಹ ಸಾಧ್ಯವಾಯಿತು ; ಅಚ್ಚಾದ ಚಮತ್ಕಾರ ಗ್ರಂಥಗಳ ಕಡೆ ಗಮನ ಹೋದುದೂ ಆಗಲೇ. ಹೀಗಾಗಿ, ಹತ್ತನೇ ಅನುಬಂಧವನ್ನು ಬರೆದು ಆಮೇಲೆ ಸೇರಿಸಿದೆ. (ಅದು ಅನಿವಾರ್ಯವಾಗಿ ಈ ಕೃತಿಯ ಆರಂಭದಲ್ಲಿ, ಪ್ರಸ್ತಾವನೆಯ ಬಳಿಕ ಬಂದಿರುವುದು ಆ ಕಾರಣದಿಂದಲೇ). ಹೀಗೆ, ಗ್ರಹಣದ ಸಮಸ್ಯೆ ತೆರೆದ ವಿಷಯವಾಗಿ ಪರಿಣಮಿಸಿ, ಬಹುಶಃ ಇನ್ನೂ ಹೆಚ್ಚಿನ ಕ್ಷೇತ್ರಕಾರ್ಯ ಇನ್ನೂ ಹೆಚ್ಚಿನ ಮಾಹಿತಿಯನ್ನು ಒದಗಿಸುವ ಸಾಧ್ಯತೆ ಇದೆ. ಎಸ್. ಕಾರ್ಲೋಸ್ ಅವರ Folk beliefs of the Tamils ಮತ್ತು ಸೊಹಿಂದರ್ ಸಿಂಗ್ ಬೇಡಿ ಅವರ Folklore of Punjab ಈ ಕೃತಿಗಳು ಗ್ರಹಣ ಸಂಬಂಧಿಯಾದ ಹಲವಾರು ನಂಬಿಕೆಗಳು ನೆರೆನಾಡಾದ ತಮಿಳುನಾಡಿನಲ್ಲಿ ಮಾತ್ರವಲ್ಲ, ದೂರದ ಪಂಜಾಬಿನಲ್ಲೂ ಇವೆಯೆಂಬುದನ್ನು ತೋರಿಸಿವೆ ; ಅವು ನನ್ನ ಗಮನಕ್ಕೆ ಬಂದುದು ಈ ಪುಸ್ತಕ ಅಚ್ಚಾದ ಮೇಲೆ. ಈಗ ಇರುವಷ್ಟು, ನನ್ನ ಮಟ್ಟಿಗೆ ಹೇಳುವುದಾದರೆ, ತಕ್ಕ ತೃಪ್ತಿಯನ್ನೇ ತಂದಿದೆಯಾದರೂ ಓದುಗರ ಪ್ರತಿಕ್ರಿಯೆ ಬಗ್ಗೆ ನಾನು ತೀರ ಕಾತರನಾಗಿರುವುದು ಸಹಜವೇ ಆಗಿದೆ.

ಈ ಪುಸ್ತಕದ ಮೊದಲ ಓದುಗರಾದ ಶ್ರೀ ಕೆ. ಎಚ್. ರಾಮಯ್ಯ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಆಗಾಗ್ಗೆ ಪುಸ್ತಕದ ಪ್ರಗತಿಯನ್ನು ವಿಚಾರಿಸಿದ್ದಾರೆ. ಬೆಂಗಳೂರು, ತಿರುಪತಿ, ಧಾರವಾಡ, ಮೈಸೂರುಗಳಲ್ಲಿನ ಮನೋ ವಿಜ್ಞಾನಿಗಳು, ಸಮಾಜ ಶಾಸ್ತ್ರಜ್ಞರು, ಜಾನಪದ ಶಾಸ್ತ್ರಜ್ಞರು, ಸಮೂಹ ಮಾಧ್ಯಮ ತಜ್ಞರು ನನ್ನ ಪುಸ್ತಕದ ರೂಪುರೇಷೆಗಳನ್ನು ಕೇಳಿ, ಕೆಲವು ಭಾಗಗಳನ್ನು ಪರಿಶೀಲಿಸಿ, ಅದು ಬೇಗ ಹೊರ ಬರಲಿ ಎಂದು ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. ಕೆಲವು ವಿಜ್ಞಾನಿಗಳೂ ಇದರಲ್ಲಿ ಕುತೂಹಲವನ್ನು ತೋರಿಸಿದ್ದಾರೆ ; ವಿಜ್ಞಾನಿಗಳಾದ ನಾವೂ ಪ್ರಾಕೃತಿಕ ಘಟನೆಗಳ ಸಾಮಾಜಿಕ ಪ್ರತಿಕ್ರಿಯೆಯ ಬಗ್ಗೆ ಆಸಕ್ತರು ಎಂದು ಹೇಳಿ ಈ ಪುಸ್ತಕ ಇಂಗ್ಲಿಷಿನಲ್ಲೂ ಬರಲಿ ಎಂದು ಹಾರೈಸಿದ್ದಾರೆ. ಈ ಕೃತಿ ಇಂಗ್ಲಿಷಿನಲ್ಲೂ ಪ್ರಕಟವಾಗುವ ಬಗ್ಗೆ ನನಗೂ ಅಪೇಕ್ಷೆ ಇದೆ. ಅಂತಹ ಕಾಲ ಬರಲಿ ಎಂದು

ಹಾರೈಸಿದರೂ ಮೊದಲು ನನ್ನ ಭಾಷೆಯಾದ ಕನ್ನಡದ ಓದುಗರ ಪ್ರತಿಕ್ರಿಯೆ ಅದು ಮುಂದಿನದಕ್ಕೆ ಪ್ರಚೋದಕವಾಗುತ್ತದೆ ಎಂದು ಇಲ್ಲಿ ಹೇಳಬೇಕಾಗಿದೆ.

ಈ ಕೃತಿ ರಚನೆಯಲ್ಲಿ ನಾನು ಅಕ್ಷರಶಃ ನೂರಾರು ಜನರ ಸಹಾಯ ಸಹಕಾರಗಳನ್ನು ಪಡೆದಿದ್ದು ಎಲ್ಲರನ್ನೂ ಸ್ಮರಿಸುವುದು ಅಗತ್ಯವಾಗಿದ್ದರೂ ಕೆಲವರ ಹೆಸರಾದರೂ ಬಿಟ್ಟುಹೋಗಿರುವ ಸಾಧ್ಯತೆಯಿದೆ. ಮಂಗಳೂರು ವಿಶ್ವವಿದ್ಯಾಲಯದ ಶ್ರೀ ಎಂ. ಎನ್. ವಿ. ಪಂಡಿತಾರಾಧ್ಯರ ಜೊತೆ ಮೈಸೂರಿನಲ್ಲಿ ನಾನು ನಡೆಸಿದ ಒಂದು ಕ್ಷಣದ ಮಾತುಕತೆ ಈ ಪುಸ್ತಕಕ್ಕೆ ಸೂಚನೆ ಕೊಟ್ಟಿತು. ಸಿರಸಿ ಪ್ರವಾಸದಲ್ಲಿ ನನ್ನ ಜೊತೆಗಿದ್ದ ಕನ್ನಡ ಎಂ. ಎ. ಶಾಸನ ಶಾಸ್ತ್ರ ವಿದ್ಯಾರ್ಥಿಗಳು, ಸಹೋದ್ಯೋಗಿ ಡಾ. ಎಸ್. ವಿದ್ಯಾಶಂಕರ ಅವರ ಸಹಕಾರವನ್ನು ಮೊದಲು ಹೇಳಬೇಕು. ೧೯೭೮-೭೯ರ ಎಂ. ಫಿಲ್. ವಿದ್ಯಾರ್ಥಿಗಳೂ ಮತ್ತು ಶ್ರೀ ಎಸ್. ಶಿವಣ್ಣನವರೂ ಪ್ರಶ್ನಾವಳಿ ರೂಪುಗೊಳ್ಳುವುದರಲ್ಲಿ ಸಹಕರಿಸಿದರು. ಎಂ. ಫಿಲ್. ವಿದ್ಯಾರ್ಥಿಗಳಲ್ಲಿ ಮೊರಬದ ಮಲ್ಲಿಕಾರ್ಜುನ, ಕೆ. ಎಂ. ಮುನಿಕೃಷ್ಣಪ್ಪ, ವಿಜಯ, ಪ್ರೀತಿ, ಅಮೀನ್ ಶಾಹಿನ್ ಇವರು ಕೆಲವು ಸಾಮಗ್ರಿ ಸಂಗ್ರಹಣೆಯನ್ನು ಮಾಡಿಕೊಟ್ಟರು. ಅದರಲ್ಲೂ ಮೊದಲ ಇಬ್ಬರು ಮೂರು ನಾಲ್ಕು ಜಾಗಗಳಿಗೆ ನಾನು ಹೋದಾಗ ಅಲ್ಲಿಗೆ ನನ್ನ ಜೊತೆ ಬೇಸರವಿಲ್ಲದೆ ಬಂದರು. ಇದಲ್ಲದೆ, ನನ್ನ ವಿದ್ಯಾರ್ಥಿಗಳಾದ ಎಸ್.ಎಸ್. ರೇಣುಕಾರಾಧ್ಯ, ಎನ್.ಶಿವರುದ್ರಯ್ಯ ತುಮಕೂರು ಜಿಲ್ಲೆಯಿಂದ ಮಾಹಿತಿ ಸಂಗ್ರಹಿಸಿದರು. ಮಾಹಿತಿ ಸಂಗ್ರಹದಲ್ಲಿ ಸಿ. ಯು. ಮಂಜುನಾಥ್, ರಮಾನಂದ ಮತ್ತು ಹೀ. ಚಿ. ಬೋರಲಿಂಗಯ್ಯನವರ ಸಹಾಯವೂ ಸ್ಮರಣಾರ್ಹವಾಗಿವೆ. ಬೆಂಗಳೂರಿನ ತಾತಾ ವಿಜ್ಞಾನ ಸಂಸ್ಥೆಯ ಡಾ. ನಾರಾಯಣ ಮಹಿಷಿಯವರೂ ಸಾಮಗ್ರಿ ಸಂಗ್ರಹಣೆಯಲ್ಲಿ ನನಗೆ ಸಹಾಯ ಮಾಡಿದರು. ಮಂತ್ರವಾದಿಗಳೊಬ್ಬರ ಕೈಬರದ ಅಪೂರ್ವ ಪುಸ್ತಕವನ್ನು ನೋಡುವ ಅವಕಾಶ ದೊರೆತುದು ಶ್ರೀ ಎಂ. ಜಿ. ಹೆಗಡೆಯವರ ಮೂಲಕ. ದಾವಣಗೆರೆಯಲ್ಲಿರುವ ನನ್ನ ತಂಗಿ ನಾಗರತ್ನಮ್ಮ, ಆಕೆಯ ಗಂಡ ಶ್ರೀ ಎಂ. ಶಿವಲಿಂಗಯ್ಯ, ಚನ್ನಗಿರಿ ತಾಲೂಕಿನ ದೊಡ್ಡ ಮಲ್ಲಾಪುರದ ಮಠದ ಮರುಳಯ್ಯನವರ ಸಹಕಾರವೂ ಇಲ್ಲಿ ಸ್ಮರಣಾರ್ಹ. ನಾನು ಕ್ಷೇತ್ರಕಾರ್ಯಕ್ಕೆ ಹೋದಾಗ ಸಹಕರಿಸಿದ, ಪ್ರಶ್ನಾವಳಿಗೆ ಉತ್ತರ ಕೊಟ್ಟ ವ್ಯಕ್ತಿಗಳ ಸಂಖ್ಯೆ ಬಹುದೊಡ್ಡದು. ಅವರೆಲ್ಲರ ಹೆಸರು ಹೇಳುವುದು ಸದ್ಯಕ್ಕೆ ಅಸಾಧ್ಯ. ಅವರಿಗೆಲ್ಲ ನಾನು ಋಣಿಯಾಗಿದ್ದೇನೆ. (ಅವರಲ್ಲಿ ಕೆಲವರ ಹೆಸರುಗಳು ಗ್ರಂಥದ ಒಳಗಿನ ಪುಟಗಳಲ್ಲಿ ಬಂದಿವೆ.) ಸಂಸ್ಕೃತ ಭಾಗಗಳ ಪಾಠದ ಬಗ್ಗೆ ಸಂದೇಹಗಳು ಬಂದಾಗ ನನಗೆ ಸಹಾಯ ಮಾಡಿದವರು ಶ್ರೀ ಡಿ. ಪ್ರಹ್ಲಾದಾಚಾರ್ಯರು.

ಮುಂಬಯಿಯ ಡಾ. ಶ್ರೀನಿವಾಸ ಹಾವನೂರರು ಕೆಲವು ಉಪಯುಕ್ತ ಪತ್ರಿಕೆಗಳನ್ನೂ ಲೇಖನ ಭಾಗಗಳನ್ನೂ ಕಳಿಸಿಕೊಟ್ಟರು. ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯದ ಶ್ರೀ ಸಿ. ಕೆ. ಪಟ್ಟಣಶೆಟ್ಟಿ, ರಾಘವೇಂದ್ರ ಖಾಸನೀಸ, ಎಂ. ಟಿ. ರಾಮಸ್ವಾಮಿ ಗೌಡರ ಎಂದಿನ ಸಹಕಾರ ಸ್ಮರಣೀಯವಾಗಿದೆ. ಬೆಂಗಳೂರು ಆಕಾಶವಾಣಿಯ ನಿರ್ದೇಶಕರು ಅಲ್ಲಿಯ ಕಚೇರಿ ಫೈಲುಗಳನ್ನು ನೋಡಲು ಅನುಮತಿಯಿತ್ತರು ಮತ್ತು ಅಲ್ಲಿ ವಿಜ್ಞಾನಾಧಿಕಾರಿಯಾಗಿರುವ ಶ್ರೀ ಎಚ್. ಆರ್. ಕೃಷ್ಣಮೂರ್ತಿಯವರು ಕಾರ್ಯಕ್ರಮಗಳ ಇಡೀ ಫೈಲನ್ನೇ ನನ್ನ ಕೈಗೆ ಕೊಟ್ಟಿದ್ದರು. ಮೈಸೂರು ಆಕಾಶವಾಣಿಯ ಶ್ರೀ ಆರ್. ಭಾರತಾದ್ರಿಯವರೂ ನನಗೆ ಸಾಮಗ್ರಿ ಒದಗಿಸಿದ್ದಾರೆ. ಬೆಂಗಳೂರು ಖಗೋಳ ವಿಜ್ಞಾನ ಸಂಸ್ಥೆಯ ಶ್ರೀಮತಿ ಬಿ. ಎಸ್. ಶೈಲಜಾ ಅವರ ಮೂಲಕ ಅಲ್ಲಿನ ಅಧಿಕಾರಿಗಳ ಪರಿಚಯವಾಯಿತು. ಅಲ್ಲಿನ ಡಾ. ರಮೇಶ್ ಚಂದರ್ ಕಪೂರ್ ಅವರು ಕೆಲವು ಅಪೂರ್ವ ಸಾಕ್ಷ್ಯ ಚಿತ್ರಗಳನ್ನು ನನಗೆ ತೋರಿಸಿದರು.

ಇಲ್ಲಿ ಸೇರಿಸಿರುವ ಚಿತ್ರಗಳನ್ನು ಹಲವಾರು ಜನ ಒದಗಿಸಿದ್ದಾರೆ. ಕಲಾವಿದ ಎಚ್. ಉಮಾಪತಿಯವರು ಕೆಲವು ರೇಖಾಚಿತ್ರಗಳನ್ನು ಬರೆದು ಕೊಟ್ಟಿದ್ದಾರೆ. ಶ್ರೀ ಕೃಷ್ಣಾನಂದ ಕಾಮತ್, ಡಾ. ಆರ್. ಶೇಷಶಾಸ್ತ್ರಿ, ಚಂದ್ರಶೇಖರ್, ಬಿ. ಎಸ್. ಶೈಲಜಾ, ಕೆ. ವಿಜಯಶ್ರೀ, ಶ್ರೀಲೇಖ, ಬಸವರಾಜವಾಲಿ ಇವರು ಚಿತ್ರಗಳನ್ನು ಸಿದ್ಧಪಡಿಸುವಲ್ಲಿ ಬೇರೆ ಬೇರೆ ರೀತಿಯಲ್ಲಿ ಸಹಾಯ ಮಾಡಿದ್ದಾರೆ ; ಅದರಲ್ಲೂ ಕಾಮತ್, ಶೇಷಶಾಸ್ತ್ರಿಯವರ ಸಹಾಯ ವಿಶೇಷ ಸ್ಮರಣಾರ್ಹ. ಬೆಂಗಳೂರಿನ ಭಾರತೀಯ ಪುರಾತತ್ವ ಸರ್ವೇಕ್ಷಣ ವಿಭಾಗದ (ಮಿಡ್ ವೆಸ್ಟರನ್ ಸರ್ಕಲ್) ನಿರ್ದೇಶಕರಾದ ಶ್ರೀ ಎಲ್. ಕೆ. ಶ್ರೀನಿವಾಸನ್ ಅವರು ಹಲವು ದೇವಾಲಯಗಳ ಮತ್ತು ಶಿಲ್ಪಗಳ ಚಿತ್ರಗಳನ್ನು ಒದಗಿಸಿದ್ದಾರೆ. ತಾವೇ ತೆಗೆದ ಸೂರ್ಯಗ್ರಹಣದ ಸೊಗಸಾದ ಚಿತ್ರಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಭೌತವಿಜ್ಞಾನ ವಿಭಾಗದ ಡಾ. ಮ. ನ. ಆನಂದರಾಮ್ ಕೊಟ್ಟರು. "ಗ್ರಹಣದರ್ಪಣ'ದ ಚಿತ್ರಗಳಿಗೆ ನಾನು ಮೈಸೂರಿನ ಓರಿಯಂಟಲ್ ಲೈಬ್ರರಿಯ ಅಧಿಕಾರಿಗಳಿಗೆ, ಅದರಲ್ಲೂ ವಿಶೇಷವಾಗಿ ಅಲ್ಲಿಯ ಶ್ರೀ ಪಿ. ಮರಿಬಸವಾರಾಧ್ಯ ಮತ್ತು ಶ್ರೀ ಸಿ.ಎಸ್. ನರಸಿಂಹನ್ ಅವರಿಗೆ ಋಣಿ. ಬೆಂಗಳೂರಿನ ವೈಖಾನಸ ಮಹಾಮಂಡಲಿಯ ಕಾರ್ಯದರ್ಶಿ ಶ್ರೀ ಎಚ್. ಎ. ಕೇಶವಾಚಾರ್ ಅವರೂ ಶಾಂತಿಯಜ್ಞದ ಸಾಮಗ್ರಿ ಸಂಗ್ರಹಣೆಯಲ್ಲಿ ಸಹಕರಿಸಿರುವುದು ಮಾತ್ರವಲ್ಲದೆ ಚಿತ್ರಗಳನ್ನೂ ಒದಗಿಸಿದ್ದಾರೆ. ಶ್ರೀ ಚಿ. ಶ್ರೀನಿವಾಸರಾಜು ಕೆಲವು ಕೃತಿಗಳನ್ನು ನನ್ನ ಗಮನಕ್ಕೆ ತಂದು ಉಪಕರಿಸಿದರು.

ಮಿತ್ರರಾದ ಡಾ. ಎ. ಕೆ. ರಾಮಾನುಜನ್ ಮತ್ತು ಡಾ. ಹಿರೇಮಲ್ಲೂರ್ ಈಶ್ವರನ್ ಇಬ್ಬರೂ ನನ್ನ ಬಗ್ಗೆ ಅಭಿಮಾನವುಳ್ಳವರು. ಇಬ್ಬರೂ ಮೂಲತಃ ಸಾಹಿತ್ಯದ ವಿದ್ಯಾರ್ಥಿಗಳು : ಮುಂದೆ ಡಾ. ರಾಮಾನುಜನ್ ಕವಿಯಾಗಿ ಭಾಷಾವಿಜ್ಞಾನಿಯಾಗಿ ಜಾನಪದ ಶಾಸ್ತ್ರಜ್ಞರಾಗಿ ಮತ್ತು ಡಾ. ಈಶ್ವರನ್ ಮಾನವಶಾಸ್ತ್ರಜ್ಞರಾಗಿ ಸಮಾಜ ವಿಜ್ಞಾನಿಯಾಗಿ ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದರು. ಡಾ. ರಾಮಾನುಜನ್ ಅವರಿಂದಾಗಿ ನಾನು ೧೯೬೭-೬೮ ರಲ್ಲಿ ಅಮೆರಿಕದ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಕನ್ನಡದ ಉಪಾಧ್ಯಾಯನಾಗಿದ್ದುಕೊಂಡು ಭಾಷಾವಿಜ್ಞಾನದ ಪೋಸ್ಟ್ ಡಾಕ್ಟೊರಲ್ ಅಧ್ಯಯನಗಳನ್ನು ನಡೆಸಲು ಸಾಧ್ಯವಾಯಿತು. ಡಾ. ಈಶ್ವರನ್ ಅವರ ಕೆಲವು ಬರಹಗಳು ನನ್ನ ಲೇಖನಗಳ ಮೇಲೆ ಪ್ರಭಾವವನ್ನು ಬೀರಿರುವುದನ್ನು ನಾನು ಈಗಾಗಲೇ ಒಪ್ಪಿಕೊಂಡಿದ್ದೇನೆ. ಈ ಇಬ್ಬರು ಸನ್ಮಿತ್ರರು ಈ ಕೃತಿಯನ್ನು ಕುರಿತಂತೆ ಬರೆದಿರುವ ಮಾತುಗಳು ನನಗೆ ಸಂತೋಷವುಂಟುಮಾಡಿವೆ.

ಈ ಕೃತಿಯನ್ನು ದಿವಂಗತ ಡಾ. ಬಿ. ಜಿ. ಎಲ್. ಸ್ವಾಮಿಯವರಿಗೆ ಆತ್ಮೀಯತೆ, ಸ್ನೇಹ, ಪ್ರೀತಿ, ಆದರಗಳಿಂದ ಅರ್ಪಿಸಿದ್ದೇನೆ. ಆ ಶ್ರೇಷ್ಠ ವಿಜ್ಞಾನಿಗೆ ನಾನು ಒಪ್ಪಿಸಲು ಅರ್ಹವಾದ ಈ ಕೃತಿಯ ವಸ್ತು ವಿಜ್ಞಾನವಲ್ಲದಿದ್ದರೂ ವಿವೇಚನೆಯ ರೀತಿ ಅವೈಜ್ಞಾನಿಕವಲ್ಲವೆಂಬ ನಂಬಿಕೆ ನನಗಿದೆ. ಅವರಿಗೆ ಈ ವಿಷಯದಲ್ಲಿ ಕೆಲಸ ಮಾಡುವುದು ಗೊತ್ತಿತ್ತು. ಕೆಲಸ ಅರ್ಧಸಾಗಿರುವಾಗಲೇ ಅವರು ಕಣ್ಮುಚ್ಚಿದರು: ಅವರ ನಿಧನದ ಸುದ್ದಿ ತಿಳಿದಾಗ ಬೆಳಗಾಂ ಧಾರವಾಡ ದಾವಣಗೆರೆ ಪ್ರದೇಶದಲ್ಲಿ ಕ್ಷೇತ್ರಕಾರ್ಯವನ್ನು ಮುಗಿಸಿ ವಾಪಸ್ ಬರುತ್ತ ದಾವಣಗೆರೆಯಲ್ಲಿದ್ದೆ. ಅವರಿಗೆ ಈ ಕೃತಿಯನ್ನು ಅರ್ಪಿಸುವ ನನ್ನ ನಿಶ್ಚಯವನ್ನು ಅವರ ಶ್ರೀಮತಿಯವರಿಗೆ ತಿಳಿಸಿದ್ದೆ: ಅವರೂ ಈಚೆಗೆ ನಿಧನರಾದುದು ನನಗೆ ಬಹಳ ದುಃಖದ ವಿಷಯವಾಗಿದೆ. ಡಾ. ಸ್ವಾಮಿಯವರ ಬಹು ಒಳ್ಳೆಯ ಭಾವಚಿತ್ರವನ್ನು ಕೊಟ್ಟವರು ಶ್ರೀ ಕೃಷ್ಣಾನಂದ ಕಾಮತರು. ಈ ನನ್ನ ಸ್ನೇಹದ ಕಾಣಿಕೆಯನ್ನು ದಿ. ಸ್ವಾಮಿಯವರ ಆತ್ಮ ಒಪ್ಪಿಕೊಳ್ಳುವುದೆಂದು ನಂಬಿದ್ದೇನೆ.

ಐಬಿಎಚ್ ಪ್ರಕಾಶನದ ಶ್ರೀ ಜಿ. ಕೆ. ಅನಂತರಾಮ್ ಅವರನ್ನೂ ಅದೇ ಸಂಸ್ಥೆಯ ಶ್ರೀ ಕೆ. ಎ. ಪರಮೇಶ್ವರ್, ಶ್ರೀ ಆರ್. ಎಸ್. ರಾಮರಾವ್ ಅವರನ್ನೂ ಅವರ ಸ್ನೇಹ ಸೌಜನ್ಯ ತಾಳ್ಮೆಗಳಿಗಾಗಿ ಸ್ಮರಿಸುವುದು ನನಗೆ ಸಂತೋಷದ ವಿಷಯ. ಐಬಿಎಚ್ ಮುದ್ರಣಾಲಯದ ಶ್ರೀ ಎಚ್. ಎಸ್. ನಾರಾಯಣರಾವ್ ಅವರನ್ನೂ,

ಅಲ್ಲಿನ ಕೆಲಸಗಾರರನ್ನೂ ಸ್ಮರಿಸುವುದೂ ಅಷ್ಟೇ ಸಂತೋಷದ ಕೆಲಸವಾಗಿದೆ. ಕರಡುಗಳನ್ನು ತಂದು ವಾಪಸ್ ಕೊಡುವಲ್ಲಿ ನನ್ನ ವಿದ್ಯಾರ್ಥಿಗಳಾದ ಎಸ್. ಸಚ್ಚಿದಾನಂದಸ್ವಾಮಿ ಮತ್ತು ಎಚ್. ಎಂ. ರುದ್ರಪ್ಪನವರ ಸಹಕಾರ ಸ್ಮರಣೀಯವಾಗಿದೆ. ಇಷ್ಟು ಹೇಳಿ, ಈ ಪುಸ್ತಕಕ್ಕೆ ಸ್ವಲ್ಪ ದೀರ್ಘ ಎನ್ನಬಹುದಾದ ಈ ಪ್ರಸ್ತಾವನೆಯನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

೧೪-೧-೧೯೮೨ (ಮಕರ ಸಂಕ್ರಮಣ) ಎಂ. ಚಿದಾನಂದಮೂರ್ತಿ

ಬೆಂಗಳೂರು.

## ಪ್ರಸ್ತುತ ಆವೃತ್ತಿ

ಇದು ಈ ಕೃತಿಯ ಯಥಾವತ್ತಾದ ಮೂರನೆಯ ಮರುಮುದ್ರಣ. ಐ.ಬಿ.ಎಚ್. ಪ್ರಕಾಶನದ ಮೂಲಕ ಮೊದಲು ಹೊರಬಂದ ಇದು ೨೦೦೨ರಲ್ಲಿ "ಜನ-ಜನಪದ-ಜಾನಪದ" ಎಂಬ ಸಂಪುಟದಲ್ಲಿ ಎರಡನೆಯ ಬಾರಿ ಮುದ್ರಣಗೊಂಡಿತು.

ಇದರ ಕರಡನ್ನು ತಿದ್ದುವಾಗ ಗ್ರಹಣದ ಸಾಮಾಜಿಕ ಕ್ಷೇತ್ರಕಾರ್ಯಕ್ಕಾಗಿ ನಾನು ವಹಿಸಿದ್ದ ಶ್ರಮ ನನಗೆ ನೆನಪಿಗೆ ಬಂದು ನನಗೇ ಆಶ್ಚರ್ಯವಾಯಿತು. ಇಂತಹ ಕೃತಿ ಕನ್ನಡದಲ್ಲಿ ಇಲ್ಲಿಯವರೆಗೆ ನನಗೆ ತಿಳಿದ ಮಟ್ಟಿಗೆ ಬಂದಿಲ್ಲ. ಇದರ ವಸ್ತುವು ಗ್ರಹಣವಾದರೂ, ಅದನ್ನು ಎಲ್ಲ ವೈಜ್ಞಾನಿಕ, ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳಿಂದ ನೋಡಿದ್ದೇನೆ; ಕರ್ನಾಟಕಾದ್ಯಂತ ಎಲ್ಲ ವರ್ಗದ ಜನರನ್ನೂ, ವಿಜ್ಞಾನಿಗಳನ್ನೂ ಭೇಟಿ ಮಾಡಿ ಮಾಹಿತಿ ಸಂಗ್ರಹಿಸಿದ್ದೇನೆ. ವಿಜ್ಞಾನ, ಜಾನಪದ, ಸಾಹಿತ್ಯ, ಸಮಾಜ ವಿಜ್ಞಾನ, ಮನೋವಿಜ್ಞಾನ, ಶಾಸನಶಾಸ್ತ್ರ, ಜ್ಯೋತಿಷ್ಯ, 'ಯಾಗ'ದಂತಹ ಆಚರಣೆಗಳು, ಪತ್ರಿಕೆಗಳಂತಹ ಸಮೂಹ ಮಾಧ್ಯಮಗಳು, ಇಂತಹ ಹಲವಾರು ಶಿಸ್ತುಗಳ ಹದವಾದ ಸಮ್ಮಿಶ್ರಣ ಇಲ್ಲಿಯ ಅಂತರಶಿಸ್ತೀಯ ಅಧ್ಯಯನದಲ್ಲಿದೆ. ಹಾಗೆಯೇ ಹಲವು ಬಗೆಯ ಗ್ರಂಥಗಳನ್ನು ಲೇಖನಗಳನ್ನು ಪರಾಮರ್ಶಿಸಿದ್ದೇನೆ. ಇಂತಹ ಇನ್ನೊಂದು ಗ್ರಂಥ ಕನ್ನಡದಲ್ಲಿ ನನಗೆ ತಿಳಿದಂತೆ ಇಲ್ಲ. ಇದೊಂದು ಸಂಶೋಧನ ವಿದ್ಯಾರ್ಥಿಗಳಿಗೆ ಒಂದು ವ್ಯಾವಹಾರಿಕ ಮಾರ್ಗದರ್ಶಿ ಕೂಡ ಆಗಬಲ್ಲದು ಎಂದು ಭಾವಿಸಿದ್ದೇನೆ.

ಮೊದಲ ಆವೃತ್ತಿಯಲ್ಲಿದ್ದ ಶಬ್ದಸೂಚಿಯನ್ನು ಈ ಆವೃತ್ತಿಗೆ ಸಿದ್ಧಪಡಿಸಲಾಗಲಿಲ್ಲ. ಶಬ್ದಸೂಚಿ ಇಲ್ಲದ್ದಕ್ಕೆ ನಾನು ವಿಷಾದಿಸುತ್ತೇನೆ.

ಇದನ್ನು ಹೊರತಂದಿರುವ ಕರ್ನಾಟಕ ಸಂಸ್ಕೃತಿ ನಿರ್ದೇಶನಾಲಯಕ್ಕೆ ನಾನು ಬಹು ಋಣಿಯಾಗಿದ್ದೇನೆ.

೨೧-೯-೨೦೧೧. ಎಂ. ಚಿದಾನಂದಮೂರ್ತಿ

## ಅನುಬಂಧ ೧೦

ಈ ಅನುಬಂಧ ಈ ಪುಸ್ತಕ ಪೂರ್ತಿ ಅಚ್ಚಾದ ಮೇಲೆ ಬರೆದದ್ದು. ಇಲ್ಲಿ ಸಂಗ್ರಹವಾಗಿರುವ ಮಾಹಿತಿ ಗ್ರಹಣಕ್ಕೆ ಸಂಬಂಧಿಸಿದೆ ಎಂಬ ಕಾರಣಕ್ಕಾಗಿ ಮತ್ತು ಆ ಮಾಹಿತಿ ಸ್ವಾರಸ್ಯವಾಗಿದೆ ಎಂಬ ಕಾರಣಕ್ಕಾಗಿ ವಿವರಗಳು ಸ್ವಲ್ಪ ಹೆಚ್ಚು ಎಂದು ಅನ್ನಿಸಿದರೂ, ಒಟ್ಟು ಮಾಹಿತಿ ವ್ಯರ್ಥವಾಗಬಾರದು ಎಂಬ ತಿಳಿವಳಿಕೆಯಿಂದ ಇಲ್ಲಿ ಕೂಡಿಸಿ ಕೊಟ್ಟಿದ್ದೇನೆ. ಗ್ರಂಥಾವಳಿ, ಶಬ್ದ ಸೂಚಿಗಳು ಬಂದಮೇಲೆ ಪುಸ್ತಕದ ಕೊನೆಯಲ್ಲಿ ಇನ್ನೇನೂ ಬರಬಾರದು ಎಂಬ ಪದ್ಧತಿಯನ್ನು ಮಾನ್ಯಮಾಡಿ ಈ ಅನುಬಂಧವನ್ನು ಇಲ್ಲಿಯೇ ತಂದಿದ್ದೇನೆ. ನ್ಯಾಯವಾಗಿ ಇದನ್ನು ಅನುಬಂಧ ೯ರ ಬಳಿಕ ಓದಿಕೊಳ್ಳಬೇಕು.

### ಗ್ರಹಣದಿನದಂದು ಮಾಟ ಮಂತ್ರ ಸಿದ್ಧಿ

ಕನ್ನಡದಲ್ಲಿ ಪ್ರಕಟವಾಗಿರುವ ಅನೇಕ ಯಂತ್ರ ಮಂತ್ರ ಪುಸ್ತಕಗಳಲ್ಲಿ ವಿದ್ಯೆಯ ಸಿದ್ಧಿಗೆ ಗ್ರಹಣಕಾಲವೇ ಪ್ರಶಸ್ತವೆಂದು ಒತ್ತಿ ಹೇಳಲಾಗಿದೆ. ಗ್ರಹಣ ಕಾಲದಲ್ಲಿ ನದಿ ಬಾವಿ ಸರೋವರಗಳ ನೀರಲ್ಲಿ ಪೂರ್ವಕ್ಕೆ ಮುಖಮಾಡಿ ನಿಂತುಕೊಂಡು, ಸಿದ್ಧಿಸಿಕೊಳ್ಳಲು ಉದ್ದೇಶಿಸಿರುವ ಮಂತ್ರವನ್ನು ನೂರೆಂಟು ಸಲ ಜಪಿಸಬೇಕು. ಜಪಕ್ಕೆ ಪ್ರತಿಬಾರಿ ಕೆಂಪುಹೂವನ್ನು ನೀರಿಗೆ ಹಾಕಬೇಕು. ಆ ಮಂತ್ರವು ಸಿದ್ಧಿಸಿದೆಯೋ ಇಲ್ಲವೋ ತಿಳಿಯಲು ಒಂದು ಮಾರ್ಗ ಉಂಟು. ಆ ಮಂತ್ರವನ್ನು ಇಪ್ಪತ್ತೊಂದು ಕಾಗದದ ತುಂಡುಗಳಲ್ಲಿ ಬರೆದು, ಅಷ್ಟೇ ಸಂಖ್ಯೆಯ ಗೋದಿ ಹಿಟ್ಟಿನ ಚಿಕ್ಕ ಉಂಡೆಗಳಲ್ಲಿ ಹುದುಗಿಸಿಟ್ಟು ಒಂದೊಂದೇ ಉಂಡೆಯನ್ನು ನೀರಿನಲ್ಲಿ ಹಾಕುತ್ತ ಬರಬೇಕು. ಎಲ್ಲ ಉಂಡೆಗಳನ್ನು ಮೀನುಗಳು ತಿಂದರೆ ಮಾತ್ರ ಮಂತ್ರ ಸಿದ್ಧಿಯಾಗಿದೆಯೆಂದು ತಿಳಿಯಬೇಕು. ಇಲ್ಲದಿದ್ದರೆ ಮತ್ತೊಮ್ಮೆ ಸಿದ್ಧಿಗೆ ಯತ್ನಿಸಬೇಕು.

ಕಲಿತ ಮಂತ್ರದ ತೇಜೋರಕ್ಷಣೆಗಾಗಿ ಕೃಷ್ಣಪಕ್ಷದ ಅಷ್ಟಮಿ ಚತುರ್ದಶಿಗಳಲ್ಲಾಗಲಿ, ಅಮಾವಾಸ್ಯೆ ಪೌರ್ಣಮಿ ಸಂಕ್ರಾಂತಿ ದಿನಗಳಲ್ಲಾಗಲಿ ಅಥವಾ ಮಂಗಳವಾರ ಶನಿವಾರವಾಗಲಿ ರಾತ್ರಿ ಸ್ನಾನಪೂಜಾದಿಗಳ ಬಳಿಕ ಇಷ್ಟ ದೇವತೆಯ ಮುಂದೆ ಮಂತ್ರವನ್ನು ಜಪಿಸಬೇಕು. ಈ ರೀತಿ ತಿಂಗಳಿಗೆ ಒಂದೆರಡು ಸಲ ಮಾಡದಿದ್ದರೆ ಮಂತ್ರಗಳು ನಿಸ್ತೇಜವಾಗಬಹುದು.

ಮಂತ್ರ ಸಿದ್ಧಿಯಾದ ಬಳಿಕ ಆ ವ್ಯಕ್ತಿ ಬಹಿಷ್ಠೆಯಾದ ಸ್ತ್ರೀ ಜೊತೆ ಮಾತನಾಡಕೂಡದು, ಮೈಲಿಗೆ ಮನೆಯಲ್ಲಿ ಊಟಮಾಡಕೂಡದು. ಚೌರ್ಯ, ಕಪಟ, ಸುಳ್ಳುಗಳನ್ನು ಕೈ ಬಿಡಬೇಕು.

ಯಂತ್ರವನ್ನು ಬರೆಯುವುದಕ್ಕೂ ಗ್ರಹಣ ಪ್ರಶಸ್ತ. ಗ್ರಹಣದ ಕಾಲದಲ್ಲಿ ತಾಮ್ರದ ಅಥವಾ ಪಂಚಲೋಹದ ತಗಡನ್ನು ಪಂಚಗವ್ಯದಿಂದ ಶುದ್ಧಗೊಳಿಸಿ ಪೂಜಿಸಿ ಯಂತ್ರವನ್ನು ತಾಮ್ರದ ತಗಡಲ್ಲಿ ಬರೆದು (ಯಂತ್ರದಲ್ಲಿ ಬೇರೆ ಬೇರೆ ಮನೆ ಮಾಡಿ ಅದರಲ್ಲಿ ಅಕ್ಷರಗಳನ್ನು ಬರೆದಿರುತ್ತಾರೆ) ಬಳಿಕ ನೂರೆಂಟು ಬಾರಿ ಮಂತ್ರವನ್ನು ಜಪಿಸಿ ಸಿದ್ಧಿಸಿಕೊಳ್ಳಬೇಕು. 'ಭೂತನಿವಾರಣೆ ಯಂತ್ರ'ವನ್ನು ಭೂತ ಪಿಶಾಚಿ ಹಿಡಿದವರಿಗೆ ಕಟ್ಟಿ ಹೇಳಬೇಕಾದ ಮಂತ್ರ ಇದು—

**"ಓಂ ಶರವಣಭವ ಜಾಡು ಜಾಡು ಐಯಂ ಕಿಲಿಯುಂ ಶವುಂ ಸ್ವಾಹಾ".**

ಹಾವು ಕಚ್ಚಿದವರಿಗೆ ಪಂಚಲೋಹದ ತಗಡಲ್ಲಿ ಯಂತ್ರವನ್ನು ಬರೆದು ಕಟ್ಟಿ, ಜೊತೆಗೆ ಉಚ್ಚರಿಸಬೇಕಾದ ಗರುಡ ಮಂತ್ರ ಇದು ;

> **"ಓಂ ನಮೋ ಭಗವತೇ ಗರುಡಾಯ ಕಾಲಾಗ್ನಿರೂಪಯೇ ಏಹ್ಯೇಹಿ ಕಾಲಾನಲಲೋಲಜಿಹ್ವಾಯ ಪಾತಯ ಪಾತಯ ಮೋಹಯ ಮೋಹಯ ವಿದ್ರಾವಯ ವಿದ್ರಾವಯ ಭ್ರಮ ಭ್ರಮ ಭ್ರಾಮಹ ಭ್ರಾಮಹ ಹನ ಹನ ದಹ ದಹ ಪಚ ಪಚ ಹೂಂ ಫಟ್ ಸ್ವಾಹಾ"**

ಸಣ್ಣ ಸಣ್ಣ ಮಂತ್ರಗಳಿಗೆ ದಕ್ಷಿಣಾಯನ, ಉತ್ತರಾಯನ, ಭಾನುವಾರ, ಅಮಾವಾಸ್ಯೆ ದಿನಗಳಾದರೂ ಸರಿಯೇ ; ಆದರೆ ಮಹಾ ಮಹಾ ಮಂತ್ರಗಳಿಗೆ. ಸೂರ್ಯ ಅಥವಾ ಚಂದ್ರ ಗ್ರಹಣಗಳೇ ಅತಿ ಪ್ರಶಸ್ತವೆಂದು ಗ್ರಂಥಗಳಲ್ಲಿ ಒತ್ತಿ ಹೇಳಲಾಗಿದೆ (ಮೇಲಿನ ಮಾಹಿತಿಯನ್ನು ಕೆಳಗಿನ ಗ್ರಂಥಗಳಿಂದ ಸಂಗ್ರಹಿಸಿದೆ. ತೋಟಪ್ಪಯ್ಯ ಶಾಸ್ತ್ರಿ : ಚಮತ್ಕಾರ ಫಲ ಚಂದ್ರಿಕೆ ಎಂಬ ಸಚಿತ್ರ ಸರ್ವವಿದ್ಯಾ ಭಾಂಡಾರ, ಗದಗ, ೧೯೬೬ ; ತೋಟಪ್ಪಯ್ಯ ಶಾಸ್ತ್ರಿ ; ಯಂತ್ರ ಚಿಂತಾಮಣಿ, ಗದಗ, ೧೯೭೭ ; ಟಿ. ಎಚ್. ಎಂ. ಸದಾಶಿವ ಶಾಸ್ತ್ರಿ : ಪ್ರತ್ಯಕ್ಷ ಚಮತ್ಕಾರ ಚಂದ್ರಿಕೆ ಎಂಬ ವಿದ್ಯಾಮಹೋದಧಿ, ಬೆಂಗಳೂರು, ೧೯೩೧. ಸಂತೆಗಳಲ್ಲಿ ಪೇಟೆಬೀದಿಗಳಲ್ಲಿ ಮಾರಾಟಕ್ಕೆ ಸಿಗುವ ಇಂತಹ ಕೃತಿಗಳೂ ಶಕುನ ವೈದ್ಯ ಗ್ರಂಥಗಳೂ ಜಾನಪದಶಾಸ್ತ್ರಜ್ಞರ ಗಂಭೀರ ಗಮನಕ್ಕೆ ಇನ್ನೂ ಬರಬೇಕಾಗಿದೆ. ಇವುಗಳಲ್ಲಿ ಸಮೃದ್ಧವಾದ ಸಾಮಗ್ರಿಯಿದೆಯೆಂಬುದನ್ನು ಮನಗಾಣುವುದು ಅತ್ಯವಶ್ಯ.)

ಮಂತ್ರವಾದಿಗಳೊಬ್ಬರ ಕೈಬರಹ ಪುಸ್ತಕದಿಂದ

ನಂಜನಗೂಡು ತಾಲೂಕಿನ ಹೆಜ್ಜಿಗೆ ಊರಿನ ಶ್ರೀ ಬಿಳಿಗಿರಿರಂಗಯ್ಯ ಎಂಬ ಹರಿಜನ ಜಾತಿಯ ವ್ಯಕ್ತಿಯೊಬ್ಬರು ಹನುಮಂತನ ಆರಾಧಕರಾಗಿದ್ದು, ಇಂದಿಗೂ ಪರಂಪರಾಗತವಾಗಿ ಬಂದಿರುವ ಮಂತ್ರ ತಂತ್ರವಿದ್ಯೆಯನ್ನು ಆಚರಿಸಿಕೊಂಡು ಬಂದಿದ್ದಾರೆ. ಅವರ ಹತ್ತಿರದ ಈಚಿನ ಕಾಗದದ ಕೈ ಬರಹದ ಪ್ರತಿಯೊಂದು ಶ್ರೀ ಎಂ. ಜಿ. ಹೆಗಡೆಯವರ ಮೂಲಕ ನೋಡ ದೊರಕಿತು. ಅದರಲ್ಲಿ ಅನೇಕ ಐಂದ್ರಜಾಲಿಕ ವಿದ್ಯೆಗಳನ್ನೂ ಯಂತ್ರ ಮಂತ್ರಗಳನ್ನೂ ಬರೆದಿದೆ. "ಸರ್ವಗ್ರಹವಾರಿಣಿ" ಯಂತ್ರವನ್ನು "ಗ್ರಹಣ ಕಾಲದಲ್ಲಿ" ಬರೆದು ಕಟ್ಟುವ ವಿಧಾನವನ್ನು ಇದರಲ್ಲಿ ಹೇಳಿದೆ. "ಸಮಸ್ತ ಯಂತ್ರಗಳಿಗೆಲ್ಲಾ ಮಂತ್ರಗಳು" ಎಂದು ಹೇಳಿ.

> **"ಓನ್ನಮೋ ಭಗವತಿ ಮಹಂಕಾಳಿ ಸುರಸುಂದರಿ ಪ್ರಾಣನಾಯಕಿ ಸರ್ವೇಶ್ವರಿ ಸರ್ವಪೀಡಾಪರಿಹಾರಿಣೆ ಪರಮನಂದಿ ಸುಗುಣೆ ನಿಜನಂದಿ ಶತ್ರು ಸಂಹಾರಿಣೆ ಸರ್ವಗ್ರಹದೋಷನಾಶಿನಿ ಸರ್ವಕಾರ್ಯಫಲಕಾರಿಣೆ ಸರ್ವಕಾಲ ರಕ್ಷಿಣೆ ಓಂ ಹ್ರೀಂ ಕ್ಲೀಂ ಶ್ರೀಂ ಹ್ರೀಂ ಸ್ವಾಹ"**

ಎಂಬುದನ್ನು ಕೊಟ್ಟಿದೆ. ಅದರ ಕೆಳಗೆ ಒಂದು ಯಂತ್ರದ ಮಾದರಿಯನ್ನು ಕೊಟ್ಟು,

> **"ಈ ಮಹಾಯಂತ್ರವನ್ನು ಗುರುವಾರ ಆಗಲಿ ಆದಿತ್ಯವಾರ ಆಗಲಿ ಅಮಾವಾಸ್ಯೆ ಗ್ರಹಣ ಬಂದ ದಿನವಾಗಲಿ ತಾಮ್ರದ ತಗಡಿನಲ್ಲಿ ಬರೆದು ಧರಿಸಿಕೊಳ್ಳಬೇಕು. ಈ ಯಂತ್ರವನ್ನು ಧರಿಸಿಕೊಂಡ ನಂತರ ಮೃತ ಪ್ರಸೂತಾದಿ ಮನೆಗಳಿಗೆ ಹೋಗಬಾರದು. ಮಕ್ಕಳಿಗೆ ವರ್ಷದಲ್ಲಿ ೧ ರಿಂದ ೧೨ ವರ್ಷಗಳ ಬಾಲಗ್ರಹ ದೋಷಗಳು ಬಾಲಗ್ರಹ ಪೀಡೆಗಳು ಇದಲ್ಲದೆ ಸ್ತ್ರೀಯರಿಗೆ ಬಾಲಗ್ರಹಗಳಿಂದ ಉಂಟಾಗುವ ಪೀಡೆ ಪ್ರತಿ ತಿಂಗಳಿಗೆ ಸರಿಯಾಗಿ ಮುಟ್ಟು ಆಗದಿರುವಿಕೆ ಕೈ ಕಾಲು ಹರಿವುವಿಕೆ ಗರ್ಭನಿಂತುಹೋಗುವಿಕೆ ಹೊಟ್ಟೆ ಶೂಲೆ ಮುಂತಾದ ಪೀಡೆ ಪರಿಹಾರವಾಗಿ ಸತ್ಸಂತಾನ ಲಾಭವಾಗುತ್ತೆ"**

ಎಂದಿದೆ.

ಈ ಹಸ್ತಪ್ರತಿಯಲ್ಲಿ ಕೊಟ್ಟಿರುವ "ಸರ್ವಸರ್ಪವಿಷಕ್ಕೆ ಮಂತ್ರ" ಎಂಬ ಭಾಗ ಹೀಗಿದೆ—

> **"ಅಧೋಣಗೋ । ಶೋಲೋ । ಚಿತ್ತಿಬಾರೋ ಬೋಡಾ । ಜಾತಿ ಜಿಂಟಿ**

। ಪಿರಿ ಪಿರಿ ಕಾವೇ । ಸರ್ಪೋ । ಕಾಟೂಲೂರೇ ನೋ । ಜಾಣೆಲೋ ಜಾತಿ ।
ಈಶ್ವರ ಪಾರ್ವತಿಂ । ಕರೋ ಕೋಟಿ ಕೋಟಿ ಆಜ್ಞ"

ಈ ಸರ್ಪಮಂತ್ರವನ್ನು ಸಿದ್ಧಿಮಾಡಿಕೊಂಡ ವ್ಯಕ್ತಿಯು ಪಡವಲಕಾಯಿ ಭೋಜನ ಮಾಡಕೂಡದು. ಊಟ ಮಾಡುವಾಗ ಸರ್ಪದ ಸುದ್ದಿ ಕೇಳಬಾರದು.

ಈ ಹಸ್ತಪ್ರತಿಯಲ್ಲಿ ನೂರಾರು ಯಂತ್ರಗಳು, ಮಂತ್ರಗಳು ಇವೆ. ಕಾಯಿಲೆ ನಿವಾರಣೆ, ಭೂತೋಚ್ಚಾಟನೆ, ಚೇಳು ಹಾವು ವಿಷ ಇಳಿಸುವುದು, ಶತ್ರುವಿನ ಕೈ ಕಾಲು ಕಣ್ಣುಗಳಿಗೆ ಊನ ಮಾಡುವುದು, ಸ್ತ್ರೀವಶ್ಯ, ದಿಗ್ಬಂಧನ, ಹೂಳಿದ್ದ ಐಶ್ವರ್ಯ ಪತ್ತೆ ಹಚ್ಚುವುದು ಇತ್ಯಾದಿ ಎಷ್ಟೋ ಅಭಿಚಾರಕ ವಿದ್ಯೆಗಳ ವಿವರಗಳಿವೆ. ಅವು ಕೆಲವು ಹೀಗಿವೆ :

**ಔಪಾಸನೆಗಳು:**

ಶ್ರೀ ಸುಬ್ರಹ್ಮಣ್ಯಸ್ವಾಮಿ ಔಪಾಸನೆ
ಶ್ರೀ ಆಂಜನೇಯಸ್ವಾಮಿ ಔಪಾಸನೆ
ಶ್ರೀ ಬಾಲಪರಮೇಶ್ವರಿ ಔಪಾಸನೆ
ಶ್ರೀ ಕಾಳಿಕಾದೇವಿ ಔಪಾಸನೆ
ಶ್ರೀ ವೀರಭದ್ರ ಔಪಾಸನೆ – ಇತ್ಯಾದಿ.

**ಸಿದ್ಧಿಗಳು:**

ದೃಷ್ಟಿ ಬಂಧನ ಕೌತುಕ
ಕೈಯಲ್ಲಿರುವ ವಸ್ತುವು ಕಾಣದಂತೆ ಮಾಡುವುದು
ಆಶ್ಚರ್ಯ ಘಟಿಕಾವಿನೋದ
ರಾತ್ರಿ ಹೊತ್ತು ಕತ್ತಲೆಯಲ್ಲಿ ಪುಸ್ತಕವನ್ನು ಓದುವುದು
ಹಾಲನ್ನು ತಕ್ಷಣ ಮೊಸರಾಗಿ ಮಾಡುವುದು
ತೆಂಗಿನಕಾಯಿಗಳನ್ನು ಬೆರಳಲ್ಲಿ ಒಡೆಯುವುದು
ಅನ್ನವೆಲ್ಲವೂ ಹುಳುಗಳಂತೆ ತೋರುವುದು – ಇತ್ಯಾದಿ.

ಈ ಕೊನೆಯ ಶಕ್ತಿಯನ್ನು ಸಾಧಿಸಲು ಅನುಸರಿಸುವ ಮಾರ್ಗದ ವಿವರ ಹೀಗಿದೆ –

"ಸತ್ತು ಹೋದ ಕರಿ ನಾಯಿಯನ್ನು ಹುಳುಗಳು ಬೀಳುವವರೆಗೂ ಯಿಟ್ಟಿದ್ದು ಬಿಳೀ

ಕೋಳಿಯನ್ನು ವುಪವಾಸಯಿರಿಸಿ ಆ ಕೋಳಿಗೆ ಈ ಹುಳುಗಳನ್ನು ತಿನ್ನುವಷ್ಟು ಹಾಕಿ ಅದರ ಹಿಕ್ಕೆಯನ್ನು ಹಣೆಯಲ್ಲಿ ತಿಲಕವಿಟ್ಟು ನೋಡಿದರೆ ಅನ್ನವೆಲ್ಲಾ ಹುಳುಗಳಾಗಿ ತೋರುವುದು. ಅನ್ನ ತಿನ್ನುವವರು ಭಯದಿಂದ ಓಡಿ ಹೋಗುವರು ಅಥವಾ ಮೂರ್ಛೆ ಬೀಳುವರು"

ಅನೇಕ ಸಹಸ್ರ ರೂಪಗಳನ್ನು ಧರಿಸುವ ವಿಧಾನ ಹೀಗೆ–

"ಆ ಕ್ಷಣವೇ ಕಡಿಯಲ್ಪಟ್ಟ ಶೂರನ ತಲೆಯಾಗಲೀ ಚೋರನ ತಲೆಯಾಗಲಿ ತಂದು, ಅದರ ಬಾಯಿಯಲ್ಲಿ ಕರೀಮಣ್ಣನ್ನು ತುಂಬಿ ಅದರೊಳಗೆ ಕರೀವುಮ್ಮತ್ತಿ ಬೀಜವನ್ನು ಬಿತ್ತಿ ಆಷಾಢಮಾಸದ ಬಹುಳ ಚತುರ್ದಶೀ ದಿನ ಕರೀಭೂಮಿಯಲ್ಲಿ ರಾತ್ರಿ ಹೊತ್ತು ಅದನ್ನು ಹೂಳಿ ಭೈರವನನ್ನು ಪುಷ್ಪ ದೀಪ ಬಲಿಗಳಿಂದ ಪೂಜಿಸಿ ತುಪ್ಪದಿಂದ ಕೆಂಪು ಬತ್ತಿಯಲ್ಲಿ ದೀಪವಂ ಅಂಟಿಸಿ ರಾತ್ರಿ ಹೊತ್ತು ದೀಪವಿಟ್ಟು ಭೈರವ ಮಂತ್ರದಿಂದಲೇ ಎಂಜಲ ನೀರನ್ನು ಹಾಕುತ್ತಾ ಯೀ ರೀತಿ ಕಾಯಿ ಬಿಡುವ ಪರ್ಯಂತರವೂ ಮಾಡಿ ನಂತರ ಬಹುಳ ಪಕ್ಷದ ಚತುರ್ದಶಿಯಲ್ಲಿ ಕೋಳಿಯನ್ನು ಬಲಿಕ್ಕೊಟ್ಟು ಆ ಗಿಡದ ಪಂಚಾಂಗ ಅಂದರೆ ಕಾಯಿ ಹುವ್ವು ಬೇರು ಚಕ್ಕೆ ಬೀಜ ಅರೆದು ಗಟ್ಟಿಯಾಗಿ ವುಂಡೇಮಾಡಿ ಹಣೆಯಲ್ಲಿ ತಿಲಕವನ್ನು ಇಡಲು ಆ ಶೂರನಂತೆ ಅನೇಕ ಸಹಸ್ರ ರೂಪವುಳ್ಳವರಾಗಿ ಕಾಣುವನು. ಇದನ್ನು ಗೋಪ್ಯವಾಗಿ ಮಾಡತಕ್ಕದ್ದು."

ದನವು ಮನೆಗೆ ಬಾರದೆ ಕಾಡಲ್ಲಿ ಉಳಿದರೆ "ಹುಲಿಯ ಬಾಯನ್ನು ಕಟ್ಟುವ ಮಂತ್ರ"– (ಎಂದರೆ, ಹುಲಿಯ ಕಣ್ಣಿಗೆ ದನ ಕಾಣಿಸಿದರೂ ಹುಲಿಯನ್ನು ನಿಸ್ಸಹಾಯಕವಾಗಿ ಮಾಡುವ ಮಂತ್ರ).

ಮೂಡಲಿಂದ ಬಂದ ಗೇರಕಾಯ ತಾಳ ನಾಲಿಗೆಯಂ ನೋಡಿ ಕಟ್ಟುವೆ। ತೆಂಕಣಿಂದ ಬಂದ ಕಿರುಬನ ತಾಳ ನಾಲಿಗೆಯಂ ನೋಡಿ ಕಟ್ಟುವೇ । ಪಡುವನಿಂದ ಬಂದ ಹುಣಸೇ ಹುವ್ವಿನ ತಾಳ ನಾಲಿಗೆಯಂ ನೋಡಿ ಕಟ್ಟುವೇ । ಬಡಗಲಿಂದ ಬಂದ ಹೆಬ್ಬುಲಿ ತಾಳ ನಾಲಿಗೆಯಂ ನೋಡಿ ಕಟ್ಟುವೇ । ಮಡಕೆಯಂತ ತಲೆ ಕಟ್ಟುವೆ । ಕೆಂಜರಗಂಣನಂ ಕಟ್ಟುವೆ । ಮೂರಿಬಾಲನಂ ಕಟ್ಟುವೆ । ಹುಡುಕಿ ಬಂದ ಹುಲಿಯ ಹಲ್ಲುರಗಲ್ಲಂ ಕಟ್ಟುವೇ । ಕುಳಿತು ಬಂದ ಹುಲಯಿ ಕೋರದಾಡೆಯಂ ಕಟ್ಟುವೇಂ । ನಿಂದು ಬಂದ ಹುಲಿಯ ನಿಲುಗಂಬಕ್ಕೆ ಕಟ್ಟುವೇಂ । ಆಡುವ ನಾಲಿಗೆಯಂ ಕಟ್ಟುವೇಂ । ನೋಡುವ ದ್ರಿಷ್ಟಿಯಂ ಕಟ್ಟುವೇಂ । ನಾ ಕಟ್ಟಿದ ಕಟ್ಟು ವಜ್ರದ ಕಟ್ಟು ಭೀಮನ ಕಟ್ಟು । ಬೆನ್ನಿಗೆ ಭೀಮನಂ

ಕಟ್ಟುವೆಂ । ಬಾಲಕ್ಕೆ ಪರಮೇಶ್ವರನ ಕಟ್ಟುವೇಂ । ಹರಳು ಓದಿ ಕಟ್ಟಿದ ಕಟ್ಟು ನಾ ವೋದಿ ಕಟ್ಟಿದ ಕಟ್ಟು । ಮೇಲುಣ ಓದಿ ಕಟ್ಟಿದ ಕಟ್ಟಲ್ಲಾ । ಕೊಲ್ಲಾಪುರದ ಬನ್ನಿ ಮಹಂಕಾಳಿ ಓದಿ ಕಟ್ಟಿದ ಕಟ್ಟು । ಪಾಂಡವರು ಓದಿ ಕಟ್ಟಿದ ಕಟ್ಟು । ಗಂಡು ಭೈರವ ನೋಡಿ ಕಟ್ಟಿದ ಕಟ್ಟು । ಓಂ ಬಾಳಿ ಗುರುಂ ಬಾಳಿ ಶ್ರೀ ಗುರುಂಬಾಳಿ ಸ್ವಾಹ॥" ಈ ಮಂತ್ರದಲ್ಲಿ ೭ ಮೆಣಸನ್ನು ಹಿಡಿದು ಮಂತ್ರಿಸಲು ತಪ್ಪದು ಸಿದ್ಧಾಂತದ ಮಂತ್ರ ॥ ಮಂತ್ರಿಸಿದ ಮೆಣಸನ್ನು ಯೇಕಾಂತದಲ್ಲಿ ಮೇಲೆ ಹಾಕಲು ದೃಷ್ಟಾಂತ ಕಾಣಬಹುದು॥

ಇದರ ಜೊತೆಗೆ, ಕಟ್ಟಿದ ಹುಲಿಯ ಬಾಯನ್ನು ಬಿಚ್ಚಿಸುವ ಮಂತ್ರವೂ ಇದೆ.

ನಿಗೂಢವಾದ, ಕೆಲವೊಮ್ಮೆ ಭಯ ಜುಗುಪ್ಸೆ ಹುಟ್ಟಿಸುವ ಮಾಂತ್ರಿಕ ಜಗತ್ತಿನ ಒಳ ವ್ಯವಹಾರಗಳ ಸೂಕ್ಷ್ಮ ಪರಿಚಯಕ್ಕೆ ಈ ಕೆಲವು ಉದಾಹರಣೆಗಳನ್ನು ಆರಿಸಿ ಕೊಟ್ಟಿದ್ದೇನೆ, ಮತ್ತು ಸಂಶೋಧಕರಿಗೆ ಈ ಒಂದು ಕ್ಷೇತ್ರ ಕಾದು ನಿಂತಿದೆ. ಇಲ್ಲಿ ನಮಗೆ ಮುಖ್ಯವಾದುದೆಂದರೆ, ಅಮಾವಾಸ್ಯೆ ಹುಣ್ಣಿಮೆಗಳಂದು, ಅದರಲ್ಲೂ ಸೂರ್ಯಗ್ರಹಣಗಳ ದಿನಗಳಂದು ಮಾಟದ ಜಗತ್ತು ಅತ್ಯಂತ ಚುರುಕಾಗಿರುತ್ತದೆ ಎಂಬ ಸಂಗತಿ. ('ಮಾಟ-ಮದ್ದು'ಗಳ ತಾತ್ವಿಕ ಪರಿಚಯಕ್ಕೆ ನೋಡಿ, ಕೆ. ಮರುಳಸಿದ್ದಪ್ಪ: 'ಭಿನ್ನ ಕಲ್ಪನೆಯ ಮಾಟ ಮದ್ದುಗಳು', ಗ್ರಾಮಜ್ಯೋತಿ, ಪು. ೪೧೫-೨೨).

ಮೇಲಿನ ಮಂತ್ರವಾದಿಗಳ ಪುಸ್ತಕವು ಸಾಂಪ್ರದಾಯಕವಾದ ಶಾಸ್ತ್ರವನ್ನು (lore) ಪ್ರಾಮಾಣಿಕವಾಗಿ ಹಿಡಿದಿಟ್ಟಿದೆಯೆಂಬುದಕ್ಕೆ ಕ್ರಿ.ಶ. ೧೩೬೦ ರಲ್ಲಿದ್ದ ಮಂಗರಸನ "ಖಗೇಂದ್ರಮಣಿದರ್ಪಣ"ದ ಉಲ್ಲೇಖಗಳು ಸಾಕ್ಷಿಯಾಗಿವೆ (ಸಂ: ವಿ. ವೆಂಕಟರಾವ್ ಮತ್ತು ಎಚ್. ಶೇಷ ಅಯ್ಯಂಗಾರ್, ಮದ್ರಾಸ್, ೧೯೪೨. ಪು. ೨೬೬-೬೭)

"ಇನ್ನು ವ್ಯಾಘ್ರ ಮುಖಸ್ತಂಭನ ಮಂತ್ರ :

ಮಂತ್ರಂ ಓಂ ನಮೋ ಭಗವತೇ ಪಾರ್ಶ್ವನಾಥಾಯ ಧರಣೇಂದ್ರ ಪದ್ಮಾವತಿಸಹಿತಾಯ ಶ್ರೀ ಪೂಜ್ಯಪಾದಸ್ವಾಮಿಗಳ ನಿರೂಪದಿಂ ನಾನೋದಿ ಮಂತ್ರಿಸಿದೆನು. ಮಂತ್ರಂಬೆರಸು ಕಯ್ಯಲಿ ಕರ್ಬಾಯ ಬಾಯಂ ಕಟ್ಟುವೆ ಕರಡಿಯ ಬಾಯಂ ಕಟ್ಟುವೆ ಅಟ್ಟಿ ತಿಂಬ ಹುಲಿಯ ಬಾಯಂ ಕಟ್ಟುವೆ ಸರ್ಪನ ಬಾಯಂ ಕಟ್ಟುವೆ ಚೋರನ ಬಾಯಂ ಕಟ್ಟುವೆ ಅವು ನೋಡುವ ನಾಲ್ಕು ನಾಲ್ಕು ದೃಷ್ಟಿಯಂ ಕಟ್ಟುವೆ ಕಂಭಕ್ಕೆ ಕಟ್ಟುವೆ ಹಸುವಿನ ನಾಲ್ಕು ಕಾಲಂ ಕೆಡೆಹಿ ಕಟ್ಟುವೆ ನಾ ಕಟ್ಟಿದ ಕಟ್ಟು ಕಟ್ಟು ಓಜದಿಂ ಬಾಳುಗೆ ಗುರುಪ್ರಸಾದ

ಮೇಳಿಸಿ ಕಂಬಳಿಯೆಳೆಯಂ
ಪೀಲಿಯುಮಂ ಪೊಸೆದ ನೇಣನೀ ಮಂತ್ರದೊಳಂ
ದಾಳೋಚಿಸಿ ಗಂಟಿಪ್ಪ
ತ್ತೇಳಾಗಲ್ ಕಟ್ಟನಿಕ್ಕೆ ವೊಪ್ಪುವ ಕೊರಲೊಳ್ ॥
ಇಪ್ಪತ್ತೇಳ್ವರೆಗಂ ತಾ
ನೊಪ್ಪುವ ಮಂತ್ರದೊಳೆ ಮಂತ್ರಿಸುತ್ತುಂ ಕಟ್ಟ
ಲ್ಕಿಪ್ಪತ್ತುರುಗಳೆ ಹುಲಿಯಿಂ
ದಪ್ಪ ಭಯಂ ತಪ್ಪುಗುಂ ವಿವೇಕನಿಧಾನಾ ॥

ಮಂತ್ರಂ—ಓಂ ನಮೋ ಭಗವತೇ ಚಂದೋಗ್ರ ಪಾರ್ಶ್ವನಾಥಾಯ ಸರಳ ಕ್ಷುದ್ರೋಪದ್ರವ ನಿವಾರಣಾಯ ಓಂ ನಮೋ ಸದಾ ಥಿಂದ ಮುಂಚರದೋಮಯ ಸ್ವಾಹಾ—

ಮಂತ್ರಂ—ಈ ಮಂತ್ರದಿಂ ಮೂಡಣಿಂ ಬಂದ ಹುಲಿಯ ಬಾಯಂ ಕಟ್ಟುವೆಂ, ಪಡುವಣಿಂ ಬಂದ ಹುಲಿಯ ಬಾಯಂ ಕಟ್ಟುವೆಂ, ಬಡಗಣಿಂ ಬಂದ ಹುಲಿಯ ಬಾಯಂ ಕಟ್ಟುವೆಂ, ತೆಂಕಣಿಂ ಬಂದ ಹುಲಿಯ ಬಾಯಂ ಕಟ್ಟುವೆಂ, ಯಮದೂತನ ಬಾಯಂ ಕಟ್ಟುವೆಂ, ಸುತ್ತಿ ಬಂದು ತಿಂಬ ನಾಲ್ಕು ಕೋರದಾಡೆಯ ಹುಲಿಯಂ ಕಟ್ಟುವೆಂ ಓಂ ಗುರುಪ್ರಸಾದ-

ಈ ಮಂತ್ರದಿಂದೊಂಬತ್ತು ಸೂಳ್ ಮಂತ್ರಿಸುವುದು, ಬಿಡುವೊಡೆ ಬಿಟ್ಟೆತೆಂದು ಮೂರು ಬಾರಿ ಮಂತ್ರಿಸುವುದು."

ಮಂತ್ರವಾದಿಗಳ ಕೈ ಬರದಹ ಪುಸ್ತಕದ ಮಂತ್ರದ ಭಾಷೆಗೂ ಮಂಗರಸನ ಕೃತಿಯ ಮಂತ್ರದ ಭಾಷೆಗೂ ಇರುವ ಸಾಮ್ಯ ಎದ್ದು ಕಾಣುತ್ತದೆ. ಮಂತ್ರಗಳು ಪಾರಂಪರಿಕವಾಗಿ ಹರಿದುಬರುತ್ತವೆ, ಹಾಗೆ ಹರಿದು ಬರುವಾಗ ಕೆಲವು ವ್ಯತ್ಯಾಸಗಳನ್ನು ಪಡೆಯುತ್ತವೆ ಎಂಬುದನ್ನು ಸುಲಭವಾಗಿ ಊಹಿಸಬಹುದು.

**ಕಲಿತವರಿಂದ ನೇರವಾಗಿ ಮಾಹಿತಿ ಸಂಗ್ರಹ**

ದೇವನಹಳ್ಳಿ ತಾಲೂಕಿನ ದಿನ್ನೂರು ಗ್ರಾಮದ ಶ್ರೀ ಜಿ. ಕೆಂಪಯ್ಯನವರು ಗ್ರಹಣದ ದಿನವಾಗಲಿ ಪೌರ್ಣಮಿ ಅಮಾವಾಸ್ಯೆ ದಿನವಾಗಲಿ ಉಪವಾಸವಿದ್ದು ತಣ್ಣೀರಿನಲ್ಲಿ ನಿಂತುಕೊಂಡು ರಾತ್ರಿ ಹನ್ನೆರಡು ಗಂಟೆಯಲ್ಲಿ ಮಂತ್ರವನ್ನು ಜಪಿಸಿ

ಸಿದ್ಧಿಸಿಕೊಂಡಿರುವುದಾಗಿ ಹೇಳಿಕೊಂಡಿದ್ದಾರೆ. (ಈ ಮಾಹಿತಿ ಕನ್ನಡಸಾಹಿತ್ಯ ಪರಿಷತ್ತಿನ ಜಾನಪದವೈದ್ಯಕೋಶದ ವಿಭಾಗದಲ್ಲಿ ದಾಖಲಾಗಿದೆ).

ಹಾವಿನ ಮಂತ್ರವನ್ನು ಸಿದ್ಧಿಸಿಕೊಂಡಿರುವ ಶ್ರೀ ಚಿಕ್ಕಹನುಮಯ್ಯ ಎಂಬುವರನ್ನು ೨೫-೧೨-೧೯೮೧ ರಂದು ನೆಲಮಂಗಲ ತಾಲೂಕಿನ ಕಡಬಗೆರೆ ಎಂಬ ಊರಲ್ಲಿ ನಾನು ಭೇಟಿಮಾಡಿ ಮಾಹಿತಿ ಸಂಗ್ರಹಿಸಿದ್ದೇನೆ. (ಬೆಂಗಳೂರಲ್ಲಿ ಇಂತಹ ವ್ಯಕ್ತಿಗಳನ್ನು ಭೇಟಿಮಾಡಿ ಮಾಹಿತಿ ಸಂಗ್ರಹಿಸುವಲ್ಲಿ ಈ ಹಿಂದೆ ವಿಫಲನಾಗಿದ್ದೆ) ಹರಿಜನ ಜಾತಿಯ ಅವರು ಹರಿಜನಕೇರಿಯಲ್ಲಿ ಸ್ಥಾಪಿಸಿರುವ ಕೆಂಪಮ್ಮ ಜಾಜೂರಮ್ಮ ಎಂಬ ದೇವತೆಗಳ ಅರ್ಚಕರೂ ಹೌದು. ಹಾವಿನ ಮಂತ್ರವನ್ನು ಬಲ್ಲ ಅವರು ಆ ತಾಲೂಕಿನ ಅನೇಕ ಊರುಗಳಲ್ಲಿ ಪ್ರಖ್ಯಾತರಾಗಿದ್ದಾರೆ. ಹಾವು ಕಡಿದು ಅವರು ಮಂತ್ರ ಹಾಕಿ ವಿಷ ಇಳಿಸಿಕೊಂಡ ಒಬ್ಬ ವ್ಯಕ್ತಿ ಅವರ ಮಂತ್ರ ಶಕ್ತಿಯನ್ನು ಒಪ್ಪಿಸಿಕೊಂಡಿದ್ದಾನೆ. ಆ ಪ್ರದೇಶದಲ್ಲೆಲ್ಲ ಇವರು ದನಗಳ ರೋಗಗಳಿಗೆ ಔಷಧ ಕೊಡುವುದರಲ್ಲಿಯೂ ಪ್ರಖ್ಯಾತರಾಗಿದ್ದಾರೆ.

ಚಿಕ್ಕಹನುಮಯ್ಯನವರು ಹದಿಮೂರು ವರ್ಷದವರಾಗಿದ್ದಾಗ ಅವರ ಚಿಕ್ಕಪ್ಪ ಬಗುಳುಗುಂಟೆಯ ತಿರುಮಲಪ್ಪ ಎಂಬುವರಿಂದ ಹಾವಿನ ಮಂತ್ರ ಕಲಿತರು. ಗುರುಗಳು ಮಂತ್ರವನ್ನು ನಾಲ್ಕೈದು ದಿನ ಬಾಯಿ ಪಾಠ ಮಾಡಿಸಿ ಒಂದು ದಿನ ಮಧ್ಯ ರಾತ್ರಿ ಶಿಷ್ಯನನ್ನು ನೀರಲ್ಲಿ ಕುತ್ತಿಗೆವರೆಗೆ ಬೆತ್ತಲೆಯಲ್ಲೇ ನಿಲ್ಲಿಸಿ ಮಂತ್ರವನ್ನು ನೂರೊಂದು ಸಾರಿ ಜಪಿಸುವಂತೆ ಮಾಡಿದರು. ನೂರೊಂದು ಜಾತಿ ಹೂವನ್ನು ನೀರಲ್ಲಿ ಹುಡುಗ ಹಾಕಿ ಜಪಿಸಿದ. ಜಪಿಸುವಾಗ ಕೆರೆಯ ತೂಬಿನ ಕಡೆ ಮುಖಮಾಡಿ ನಿಂತಿದ್ದ. ಮಂತ್ರ ಕಲಿಯಲು ಯಾವುದೇ ನಿಶ್ಚಿತ ದಿನವೂ ಬೇಕಾಗಿಲ್ಲ ; ಯಾವುದೇ "ಸಯೀಮದ್ ದಿನ" ಆಗಬಹುದು (ಸಂಯಮದ ಅಥವಾ ಕಟ್ಟುನಿಟ್ಟಿನ ದಿನವೇ "ಸಯೀಮದ್ ದಿನ" ಎಂದು ತೋರುತ್ತದೆ.) ಸ್ನಾನಮಾಡಿ, ಮಡಿಯುಟ್ಟು ಜಲಾಶಯಕ್ಕೆ ಹೋಗಿ, ಬಳಿಕ ನೀರಲ್ಲಿ "ನಿರ್ವಾಣ"ದಲ್ಲಿ ನಿಲ್ಲಬೇಕು. ಆ ದಿನ ಮಾಂಸ, ಹೆಂಡ ಇಲ್ಲ. ಗ್ರಹಣ, ಅಮಾವಾಸ್ಯೆ ದಿನಗಳೇ ಆಗಬೇಕಾಗಿಲ್ಲ. ಕಲಿಯುವವನಿಗೆ ಖಯಾಲಿ ಇರಬೇಕು. ಗುರು ಒಬ್ಬ ಶಿಷ್ಯನಿಗೆ ಮಾತ್ರ ಹೇಳಿಕೊಡಬೇಕು. ಮಂತ್ರವೈದ್ಯದಿಂದ ಹಣಸಂಪಾದನೆ ಮಾಡಕೂಡದು. (ಚಿಕ್ಕಹನುಮಯ್ಯ ತಾವು ವಿಷ ಇಳಿಸಿದ ವ್ಯಕ್ತಿಗಳಿಂದ ಹಣ ಮಾಡುವುದಿರಲಿ, ವಿಷ ಇಳಿಸಿದ ದಿನ ತಮ್ಮ ರೋಗಿಯ ಮನೆಯಲ್ಲಿ ಊಟ ಕೂಡ ಮಾಡುವುದಿಲ್ಲ). ತನ್ನಿಂದ ಏನೋ ಒಳ್ಳೆಯದಾಗುತ್ತಿದೆ ಎಂಬ "ಆನಂದ"ವೇ ಅವರಿಗೆ ನಿಜವಾದ ಪ್ರತಿಫಲ.

ಮಂತ್ರವು ವಿಷವನ್ನು ಇಳಿಸಲಿಕ್ಕೆ; ವಿಷವು ವಾಂತಿಯಾಗಲು ಔಷಧಿ ಹಾಕಬೇಕು. ಆ ಔಷಧದ ಗಿಡ ಮೂಲಿಕೆಗಳನ್ನು ಮಾತ್ರ ಗ್ರಹಣದ ದಿನವೇ ತಂದು ಒಣಗಿಸಿ ಪುಡಿಮಾಡಿಕೊಂಡಿರಬೇಕು. ಚೇಳಿನ ಔಷಧಿ, ದನಗಳ ಕಾಯಿಲೆ ಔಷಧಿಗಳ ಗಿಡಮೂಲಿಕೆಗಳನ್ನೂ ಅಷ್ಟೇ. ಹಿಂದಿನ ದಿನ ಹೋಗಿ ಗಿಡ, ಮರ ಬಳ್ಳಿಗಳನ್ನು ನೋಡಿದ್ದು, ಗ್ರಹಣ ಹಿಡಿದ ಸಮಯಕ್ಕೆ ಹೋಗಿ ಅವನ್ನು ಕಿತ್ತು ತರಬೇಕು. ಚಂದ್ರ ಗ್ರಹಣವಾದರೆ ರಾತ್ರಿ ಹೋಗಬೇಕು. ಬ್ಯಾಟರಿ ಕೊಂಡೊಯ್ಯುವ ಅಗತ್ಯವೂ ಬರಬಹುದು.

ಮಂತ್ರಸಿದ್ಧಿ ದೈವಕೃಪೆ, ಆದರೆ ನಿರ್ದಿಷ್ಟ ದೈವವೆಂದೇನೂ ಇಲ್ಲ. ಎಷ್ಟು ಕಾಲವಾದರೂ ಮಂತ್ರಸಿದ್ಧಿ ಕುಂದುವುದಿಲ್ಲ. ಒಮ್ಮೆ ಸಿದ್ಧಿಯಾದರೆ ಆಯ್ತು. ಕಚ್ಚಿದ ಹಾವು ಇನ್ನೂ ಬದುಕಿದ್ದರೆ ವಿಷ ಇಳಿಸುವುದು ಸುಲಭ, ಅದು ಕಚ್ಚಿದ ತಕ್ಷಣ ಅದನ್ನು ಕೊಂದಿದ್ದರೆ ವಿಷ ಇಳಿಯುವುದು ತಡವಾಗುತ್ತದೆ. ವಿಷ ಇಳಿಸಿದ ಮೇಲೆ ಅದನ್ನು ಕೊಲ್ಲಬಹುದು. ಮಂತ್ರಸಿದ್ಧಿ ಮಾಡಿಕೊಂಡವನನ್ನು ಹಾವು ಕಚ್ಚಿದರೆ ಅವನೇ ತನ್ನ ಮೇಲೆ ಮಂತ್ರವನ್ನು ಪ್ರಯೋಗಿಸಿಕೊಳ್ಳಲು ಸಾಧ್ಯವಿಲ್ಲ.

ದನಗಳಿಗೆ ಉಳಾ (ಹುಳ, ಹಾವು) ಮುಟ್ಟಿದರೂ ಮಂತ್ರಹಾಕಿ ಇಳಿಸಲಾಗುತ್ತದೆ. ಆಗ, ದನದ ಯಜಮಾನ ಅಂಗಡಿಯಿಂದ ಎಲೆ ಅಡಿಕೆ ತರಿಸಿ ಅಲ್ಲಿದ್ದವರಿಗೆಲ್ಲ ಒಂದು ಎಲೆ, ಒಂದು ಅಡಕೆ ಕೊಡಬೇಕು. "ತಲೇ ಮೇಲೆ ಬಂದದ್ದು ಎಲೇ ಮೇಲೆ ಹೋಗಲಿ" ಎಂಬ ಗಾದೆ ಮಾತಿನಂತೆ ಆ ಕಾರ್ಯ ನಡೆಯಬೇಕು. ಮಂತ್ರಹಾಕಿ ವಿಷ ಇಳಿಸುವಾಗ ಬೇರೊಂದು ದೈವಪೂಜೆ, ಮಡಿ, ಮೈಲಿಗೆ, ಬಲಿ, ನಿಂಬೆಹಣ್ಣು ಏನೂ ಇಲ್ಲ.

ಮಂತ್ರ, ಔಷಧಿ ಇವನ್ನು ಯಾವುದೇ ಜಾತಿಯವರಿಗಾಗಲಿ, ಹೆಂಗಸರಿಗಾಗಲಿ ಹೇಳಿ ಕೊಡಬಹುದು. ಸ್ವಾಭಿಮಾನಿಗಳೂ ಸಂಪೂರ್ಣ ಆತ್ಮ ವಿಶ್ವಾಸಿಗಳೂ ಆದ ಶ್ರೀ ಚಿಕ್ಕಹನುಮಯ್ಯನವರು ನನಗೆ ಹಾವಿನ ಮಂತ್ರವನ್ನು ಕಲಿತ ರೀತಿಯನ್ನು ಹೇಳಿದರೇ ಹೊರತು ಹಾವಿನ ಮಂತ್ರವನ್ನು ಹೇಳಲಿಲ್ಲ ; ಅದನ್ನು ನಾನು ಅವರಿಂದ ನಿರೀಕ್ಷಿಸಲೂ ಇಲ್ಲ, ನಿರೀಕ್ಷಿಸಲೂಬಾರದು. ತಮ್ಮ ವಿದ್ಯೆಯನ್ನು ತಮ್ಮ ಹತ್ತಿರದ ಬಂಧುಗಳ ಪೈಕಿ ಹುಡುಗನೊಬ್ಬನಿಗೆ ಹೇಳಿಕೊಟ್ಟಿದ್ದಾರೆ ; ಸ್ವಂತ ಮಕ್ಕಳಿಗೇ ಹೇಳಿ ಕೊಟ್ಟಿಲ್ಲ. ಅದಕ್ಕೆ ಕಾರಣ, ಅಂತಹ ಮಂತ್ರವಿದ್ಯೆಯನ್ನು ಕಲಿಯಲು ಆಸಕ್ತಿ ಇರುವುದನ್ನು ಗುರುಗಳು ಮುಖ್ಯವಾಗಿ ಗಮನಿಸಬೇಕು ಎನ್ನುವುದು.

## ಕಬ್ಬಿಣದ ಮಾಟದ ಮೌಲ್ಯ

ಈ ಕೃತಿಯಲ್ಲಿ ಗ್ರಹಣ ದಿನದಂದು ಗೊಡ್ಡು ಮರಗಳಿಗೆ ಮೊಳೆ ಹೊಡೆಯುವ ಬಗ್ಗೆ, ಕಬ್ಬಿಣದ ಮಾಟದ ಮೌಲ್ಯದ ಬಗ್ಗೆ ಅಲ್ಲಲ್ಲಿ ಪ್ರಸ್ತಾಪಿಸಿದ್ದೇನೆ.

ಕಬ್ಬಿಣ ಬೇರೆ ಬೇರೆ ಸಂಸ್ಕೃತಿಗಳಲ್ಲಿ ನಿಷಿದ್ಧ ವಸ್ತುವಾಗಿದೆ (taboo). ಚೀನಾದಲ್ಲಿ ರಾಜನ ದೇಹಕ್ಕೆ ಕಬ್ಬಿಣ ಮುಟ್ಟಬಾರದಿತ್ತು. ಯಹೂದ್ಯರಲ್ಲೂ ಆಫ್ರಿಕದ ಬೇರೆ ಬೇರೆ ಜನಾಂಗಗಳಲ್ಲೂ ಪವಿತ್ರಕಾರ್ಯಗಳಲ್ಲಿ ಕಬ್ಬಿಣ ನಿಷಿದ್ಧವಾಗಿತ್ತು. ಈ ನಂಬಿಕೆ ಅಮೆರಿಕದ ರೆಡ್ ಇಂಡಿಯನ್ ಜನಾಂಗಗಳಲ್ಲೂ ಇದೆ. ಪೋಲೆಂಡಿನಲ್ಲಿ ಕಬ್ಬಿಣದ ನೇಗಿಲ ಗುಳವನ್ನು ಹೊಸದಾಗಿ ಬಳಕೆಗೆ ತಂದಾಗ, ಮುಂದೆ ಬಂದ ದುರ್ಭಿಕ್ಷ ವರ್ಷಗಳಿಗೆ ಕಬ್ಬಿಣವೇ ಕಾರಣವೆಂದು ಭಾವಿಸಿದರು. ಜಾವಾದ ಬದುವಿ ಜನರು ಇಂದಿಗೂ ಉಳುಮೆಯಲ್ಲಿ ಕಬ್ಬಿಣವನ್ನು ಬಳಸರು. ಮನುಷ್ಯನ ಚರಿತ್ರೆಯನ್ನು ನೋಡಿದರೆ ಕಬ್ಬಿಣವು ಲೋಹಗಳಲ್ಲಿ ಈಚಿನ ಶೋಧನೆಯೆಂದು (ಕ್ರಿ.ಪೂ. ೧೪೦೦) ತಿಳಿದುಬರುತ್ತದೆ. ಹೊಸತು ಯಾವುದು ಬಂದರೂ ಜನ ಅದನ್ನು ಸಂದೇಹದಿಂದ ನೋಡುವುದು ಹಿಂದಿನಿಂದಲೂ ನಡೆದು ಬಂದಿರುವ ಒಂದು ಪದ್ಧತಿ ; ಇದು ಬಹುಶಃ ಕಬ್ಬಿಣವನ್ನು ನಿಷಿದ್ಧವಾಗಿ ಕಂಡದ್ದಕ್ಕೆ ಕಾರಣವಿರಬಹುದು.

ಕಬ್ಬಿಣದ ಬಗ್ಗೆ ಇರುವ ತಿರಸ್ಕಾರವೇ ಸಮಯ ಬಂದಾಗ ದುಷ್ಟ ಶಕ್ತಿಗಳನ್ನು ದೂರವಿಡಲು ಕಬ್ಬಿಣವನ್ನು ಬಳಸುವುದಕ್ಕೆ ಪ್ರಚೋದನೆ ನೀಡಬಹುದು. ಕಬ್ಬಿಣ ತಿರಸ್ಕೃತವಸ್ತುವಾದ್ದರಿಂದ ಅದು ಎಲ್ಲಿದೆಯೋ ಅಲ್ಲಿಗೆ ಜನರೂ ಬರುವುದಿಲ್ಲ; ದುಷ್ಟ ಶಕ್ತಿಗಳೂ ಭೂತಗಳೂ ಬರುವುದಿಲ್ಲ. ದುಷ್ಟ ಶಕ್ತಿಗಳನ್ನು ದೂರವಿಡಲು ಕಬ್ಬಿಣ ಹೇಗೆ ಸಹಾಯಕವೆಂಬುದು ಇದರಿಂದ ಗೊತ್ತಾಗುತ್ತದೆ. ಸ್ಕಾಟ್ಲೆಂಡಿನಲ್ಲಿ ಯಕ್ಷಿಯರ ನಿವಾಸಕ್ಕೆ ಹೋಗುವಾಗ ಬಾಗಿಲಲ್ಲಿ ಕಬ್ಬಿಣ ಅಥವಾ ಉಕ್ಕಿನ ತುಂಡನ್ನು ಸಿಕ್ಕಿಸಿದರೆ ಯಕ್ಷಿಯರು ಬಾಗಿಲು ಮುಚ್ಚಿ ಒಳಗಿದ್ದವರನ್ನು ಸೆರೆ ಹಾಕಲು ಹೆದರಿ ದೂರವಿರುತ್ತಾರೆಂಬ ನಂಬಿಕೆಯಿದೆ. ಮೊರಾಕೋದಲ್ಲಿ ದೆವ್ವಗಳನ್ನು ದೂರವಿಡಲು ಕಬ್ಬಿಣ ಬಹಳ ಸಹಾಯಕ. ಇಂತಹುದೇ ನಂಬಿಕೆ ಸಿಂಹಳ, ಆಫ್ರಿಕಾದಲ್ಲೂ ಉಂಟು. (ಈ ಎಲ್ಲ ವಿವರಗಳು ಫ್ರೇಜರ್ ಅವರ The Golden Bough. Newyork. ೧೯೬೩: ಈ ಪುಸ್ತಕದಿಂದ, ಪು. ೨೬೦–೬೨.) ಈ ಹಿನ್ನೆಲೆಯಲ್ಲಿ ನೋಡಿದರೆ, ಫಲ ಬಿಡಲು ಗ್ರಹಣದ ದಿನ ಮರಗಳಿಗೆ ಮೊಳೆ ಹೊಡೆಯುವುದು, ಗಬ್ಬದ ದನಗಳಿಗೆ ಕಬ್ಬಿಣದ ಕೋಡಣಸು ಹಾಕುವುದು ಇವೆಲ್ಲ ದುಷ್ಟ ಶಕ್ತಿಗಳನ್ನು

ದೂರವಿಡುವ ಮೂಲೋದ್ದೇಶದಿಂದ ಹುಟ್ಟಿವೆಯೆಂಬುದು ಸ್ಪಷ್ಟವಾಗುತ್ತದೆ. ಮೂರ್ಛೆರೋಗದಿಂದ ಒದ್ದಾಡುತ್ತಿರುವ ವ್ಯಕ್ತಿಯ ಕೈಗೆ ಕಬ್ಬಿಣದ ವಸ್ತುವನ್ನು ತಾಕಿಸುವುದಕ್ಕೂ ಅದೇ ಕಾರಣ. ಕುದುರೆ ಲಾಳವನ್ನು ತಂದು ಮನೆಯಲ್ಲಿಡುವುದು, ಹೊಸದಾಗಿ ಗಂಡನ ಮನೆಗೆ ಬಂದ ವಧುವಿನ ಬಲಗಾಲನ್ನು ಹೊಸಿತಿಲ ಮೇಲಿರಿಸಿ ಬೆರಳ ಸಂದಿಯಲ್ಲಿ ಹೊಸಿತಿಲಿಗೆ ಮೊಳೆ ಹೊಡೆಯುವುದೂ ಅದೇ ಉದ್ದೇಶದಿಂದ ಪ್ರೇರಿತವಾದುದೆಂದು ತೋರುತ್ತದೆ. ಬೀಗದ ಕೈಯಿಂದ ಮಕ್ಕಳಿಗೆ ಚಟಕಿ ಹಾಕುವುದು ಶ್ರೇಷ್ಠವೆಂದೂ ಕಬ್ಬಿಣವನ್ನು ಕದ್ದರೆ ತೊನ್ನು ರೋಗ ಬರುತ್ತದೆಯೆಂದೂ ನಂಬಿಕೆಗಳಿವೆ. ವಿಶ್ವಾದ್ಯಂತ ಹರಡಿರುವ ಕಬ್ಬಿಣದ ಬಗ್ಗೆ ಇರುವ ನಂಬಿಕೆಗಳಲ್ಲಿ ಸಾಮ್ಯವಿರುವುದನ್ನು ಸುಲಭವಾಗಿ ಗುರುತಿಸಬಹುದು.

## 'ಕೋಟಿತೀರ್ಥ' ಎಲ್ಲಿದೆ ?

ಈ ಪುಸ್ತಕದಲ್ಲಿ, ಶಾಸನವೊಂದು ಗೋದಾವರೀ ತೀರದ 'ಕೋಟಿತೀರ್ಥ'ದಲ್ಲಿ, ಗ್ರಹಣದ ಸಂದರ್ಭದಲ್ಲಿ ದತ್ತಿ ಬಿಟ್ಟ ಸಂಗತಿಯನ್ನು ಹೇಳುವುದನ್ನು ಪ್ರಸ್ತಾಪಿಸಿದೆ. ನಾನು ೨೬-೯-೧೯೮೧ ರಂದು ಮಧ್ಯಪ್ರದೇಶದ ಉಜ್ಜಯಿನಿಗೆ ಹೋಗಿದ್ದಾಗ, ಅಲ್ಲಿ ಹರಿಯುವ ಶಿಪ್ರಾ ನದಿಯ ದಂಡೆಯ ಮೇಲೆ ಇರುವ ಸುಪ್ರಸಿದ್ಧ ಮಹಾಕಾಲ ದೇವಾಲಯದ ಆವರಣದಲ್ಲಿ 'ಕೋಟಿ ತೀರ್ಥ' ವಿರುವುದು ನನ್ನ ಗಮನಕ್ಕೆ ಬಂದಿತು. ಕೋಟಿತೀರ್ಥ ಎಂಬ ಹೆಸರಿನ ಕೊಳದ ದಂಡೆಯ ಸುತ್ತ ನೂರಾರು ಶಿವಲಿಂಗಗಳು ಸ್ಥಾಪಿತವಾಗಿವೆ : ಅನೇಕ ಚಿಕ್ಕ ಚಿಕ್ಕ ದೇವಾಲಯಗಳಿವೆ. ಆ ದಂಡೆಯ ಮೇಲೆ ಪೂಜೆ, ಶ್ರಾದ್ಧಾದಿಗಳನ್ನು ಮಾಡಿಸಲು ಬಹು ಸಂಖ್ಯೆಯ ಪಂಡ ಬ್ರಾಹ್ಮಣರು ಪೂಜಾ ಸಾಮಗ್ರಿಗಳೊಡನೆ ಸಿದ್ಧರಾಗಿರುತ್ತಾರೆ. ವಾರಣಾಸಿ, ಪ್ರಯಾಗಗಳಂತೆ ಉಜ್ಜಯಿನಿಯೂ ಪ್ರಾಚೀನ ಭಾರತದ ಅತ್ಯಂತ ಸುಪ್ರಸಿದ್ಧ ತೀರ್ಥ ಕ್ಷೇತ್ರವೆಂಬುದನ್ನು ಇಲ್ಲಿ ನೆನೆಯಬಹುದು. ಶಿಪ್ರಾನದಿಯ ತೀರದಲ್ಲಿ 'ಭವಭೂತಿ ಗುಹೆ' ಎಂಬ ಗುಹೆಗಳು ರಹಸ್ಯ ಸಾಧನೆಗಳನ್ನು ಕೈಗೊಳ್ಳುತ್ತಿದ್ದ ತಾಂತ್ರಿಕ ಸಾಧಕರ ಕೇಂದ್ರಗಳಾಗಿದ್ದು ಈಗ ಅವು ನಾಥಸಂಪ್ರದಾಯದ ಮುನಿಗಳ ಹಿಡಿತದಲ್ಲಿವೆ. ನಾಥರೂ ತಾಂತ್ರಿಕ ಸಾಧಕರೇ. (ಇವರಿಗೆಲ್ಲ ಗ್ರಹಣ ದಿನಗಳು ತಮ್ಮ ರಹಸ್ಯ ಸಾಧನೆಗೆ ಪ್ರಶಸ್ತ ದಿನಗಳು). ಈ ಗುಹೆಗಳಿಗೆ ಸಮೀಪದಲ್ಲೇ ಕವಿ ಕಾಳಿದಾಸನು ಅರ್ಚಿಸುತ್ತಿದ್ದನೆಂದು ಹೇಳಲಾದ ಕಾಳಿಯ ದೇವಾಲಯವಿದೆ. ಕೆಂಪು ನಾಲಿಗೆ ಚಾಚಿರುವ ದೊಡ್ಡ ಮುಖ ಮಾತ್ರ ಇರುವ ಕಾಲಿಯ ಮೂರ್ತಿಯು ನೋಟಕರಿಗೆ ಸ್ವಲ್ಪ ಭಯವನ್ನು ಹುಟ್ಟಿಸುವಂತಿದೆ. ಹಂಪಿಯ ಪಕ್ಕದ ತುಂಗಭದ್ರೆಯ

ದಡದಲ್ಲಿಯೂ ಕೋಟಿ ತೀರ್ಥವಿದೆ. ಹಾಗೆಯೇ ಗೋದಾವರಿ ದಡದಲ್ಲೂ ಆ ಹೆಸರಿನ ತೀರ್ಥ ಇರಬೇಕು.

### ೯-೧-೮೨ರಂದು ಪೂರ್ಣ ಚಂದ್ರಗ್ರಹಣ : 'ಜಡರು ತೆಗೆಯುವುದು'

೯-೧-೮೨ರ 'ಪ್ರಜಾವಾಣಿ' ಪತ್ರಿಕೆಯಲ್ಲಿ 'ನಿತ್ಯಭವಿಷ್ಯ' ವಿಭಾಗದಲ್ಲಿ ಬಂದಿದ್ದ ಚಂದ್ರಗ್ರಹಣ ಸಂಬಂಧಿ ಮಾಹಿತಿಯನ್ನು ಕೆಳಗೆ ಹಾಗೇ ಉಲ್ಲೇಖಿಸಿದೆ:

"ಪೂರ್ಣ ಚಂದ್ರಗ್ರಹಣ

ಈ ಸಂವತ್ಸರದಲ್ಲಿ ಪುಷ್ಯ ಶುದ್ಧ ಪೂರ್ಣಿಮಾ ಶನಿವಾರದಂದು (೯-೧-೮೨) ರಾತ್ರಿ ಎರಡನೆಯ ಜಾವದಲ್ಲಿ ರಾಹುಗ್ರಸ್ತ ಪೂರ್ಣ ಚಂದ್ರಗ್ರಹಣ ಆಗುತ್ತದೆ.

| | | | | |
|---|---|---|---|---|
| ಗ್ರಹಣ ಸ್ಪರ್ಶ ಕಾಲ | : | ೪೨ ಘ | ೧೮ ವಿಘ | ರಾತ್ರಿ ೧೧-೪೪ |
| ನಿಮೀಲನ | : | ೪೪ | ೫೫ | ೧೨-೪೭ ಬೆ. |
| ಪರಮಗ್ರಾಸ | : | ೪೬ | ೩೩ | ೧-೨೬ |
| ಉನ್ಮೀಲನ | : | ೪೮ | ೧೦ | ೨-೦೫ |
| ಮೋಕ್ಷಕಾಲ | : | ೫೦ | ೪೮ | ೩-೦೮ ಬೆ. |
| ಆದ್ಯಂತ ಪುಣ್ಯಕಾಲ | : | ೮ | ೩೦ | ೩-೨೪ ಘಂಟೆಗಳು |

ಗ್ರಾಸ ಪ್ರಮಾಣ ೧೦೦ಕ್ಕೆ ೧೩೪ ಭಾಗ (೧.೩೩೭). ರಾತ್ರಿ ಎರಡನೆಯ ಜಾಮದಲ್ಲಿ ಗ್ರಹಣ ಸ್ಪರ್ಶವಾಗುವುದರಿಂದ ಈ ದಿನ ಮಧ್ಯಾಹ್ನ ಎರಡನೆಯ ಜಾಮದೊಳಗೆ ಭೋಜನ ಮಾಡಬಹುದು. ಶ್ರಾದ್ಧಕ್ಕೆ ಅಪರಾಹ್ನ ಮುಖ್ಯ. ಆದರೆ ಮಧ್ಯಾಹ್ನ ಭೋಜನ ನಿಷಿದ್ಧ. ಇದರಿಂದ ಇಂದು ಹಿರಣ್ಯ ಶ್ರಾದ್ಧವನ್ನು ಮಾಡಿ ಉಪವಾಸವಿದ್ದು ಬಹುಳ ಪಾಡ್ಯದ ದಿನ ಅನ್ನ ಶ್ರಾದ್ಧವನ್ನು ಮಾಡಬೇಕು. ಪುನರ್ವಸು ನಕ್ಷತ್ರ ಮತ್ತು ಮಿಥುನ ರಾಶಿಯವರಿಗೆ ಗ್ರಹಣ ಶಾಂತಿ ಮಾಡಿಕೊಳ್ಳಬೇಕು."

ಆ ದಿನ ರಾತ್ರಿ ೭-೩೦ರಲ್ಲಿ ನನ್ನ ಸ್ನೇಹಿತರೊಬ್ಬರು ಅವಸರವಸರವಾಗಿ ಮನೆಗೆ ಹೊರಟರು. ಅವರ ಮಗಳು ಏಳೂವರೆ ತಿಂಗಳ ಗರ್ಭಿಣಿ : ಹೊರಗೆ ಬರಬಾರದೆಂದು ತಾವು ಸ್ಪಷ್ಟ ಸೂಚನೆಗಳನ್ನು ಕೊಟ್ಟು ಬಂದಿದ್ದರೂ, ತಮ್ಮ ಹೆಂಡತಿಯು ಮಗಳ ಬಗ್ಗೆ ನಿಗಾವಹಿಸುವರೆಂಬ ನಂಬಿಕೆಯಿದ್ದರೂ, ಹೇಗೋ ಏನೋ, ಹೊಟ್ಟೆಯಲ್ಲಿರುವ ಮಗುವಿಗೆ ಏನೂ ಆಗಬಾರದಲ್ಲ ಎಂಬ ಕಾತರ

ಅವರಲ್ಲಿ ಎದ್ದು ಕಾಣುತ್ತಿತ್ತು. ಕಿಟಕಿ ಮುಚ್ಚಿದರೂ, ಹಾಳಾದ್ದು ಗ್ಲಾಸ್ ಇರುತ್ತದಲ್ಲ, ಅದಕ್ಕೆ ತೆರೆಹಾಕಬೇಕು ಇತ್ಯಾದಿ ಯೋಚನೆ ಅವರಿಗೆ. ಗ್ರಹಣ ಆರಂಭ ರಾತ್ರಿ ೧೧-೪೪ ಕ್ಕೆ ; ಆದರೂ, ವಿದ್ಯಾವಂತರೂ ಲೇಖಕರೂ ಸಮಾಜ ಶಾಸ್ತ್ರ ಬಲ್ಲವರೂ ಕಮ್ಯುನಿಸಮ್ ಒಲವಿದ್ದವರೂ ಆಗಿದ್ದ ಅವರು ಆ ಕ್ಷಣಕ್ಕೆ ನನಗೆ ಭಾರತೀಯ ಸಂಪ್ರದಾಯದ ವ್ಯಕ್ತಿಯಾಗಿ ಕಾಣಿಸಿದರು. ಅವರ ನಡವಳಿಕೆಯಲ್ಲಿ ಒಂದು ವೇಳೆ ಮೆಚ್ಚುವಂತಹುದು ಕಾಣದಿದ್ದರೂ ಟೀಕಿಸುವುದಂತೂ ಏನೂ ಇರಲಿಲ್ಲ.

ಅದೇ ದಿನ ಬೆಂಗಳೂರಿಗೆ ಸಮೀಪದ ಕಡಬಗೆರೆ ಗ್ರಾಮದಲ್ಲಿ (ಇದು ವಾಸ್ತವವಾಗಿ ನೆಲಮಂಗಲ ತಾಲೂಕಿಗೆ ಸೇರಿದ್ದು) "ಜಡರು ತೆಗೆದ' ಒಂದು ನಿದರ್ಶನ ಸಿಕ್ಕಿತು (ಈ ಕೃತಿಯ ಅನುಬಂಧ-೪ ರಲ್ಲಿ ಬಂದಿರುವ ಬಲಿಯ ಜೊತೆ ಹೋಲಿಸಿ). ಕುರಿಗಳಿಗೆ ತೆಳ್ಳಗೆ ಮಲವಿಸರ್ಜನೆ ಆಗುವುದು, ಕುರಿಮರಿಗಳು ಸಣ್ಣಗಾಗುತ್ತ ಆಗುತ್ತ ಸಾಯುವುದು ಇದೇ 'ಜಡರು'.[1] ಇದು ಬಾರದ ಹಾಗೆ ತಡೆಗಟ್ಟಲು ಎಲ್ಲ ಗ್ರಹಣಗಳಂದೂ ಜಡರು ತೆಗೆಯುತ್ತಾರೆ. ಹಳ್ಳಿಯಲ್ಲಿ ಕುರಿ ಸಾಕಿರುವವರೆಲ್ಲರೂ ಸೇರಿ ಚಂದಾ ಹಣ ಹಾಕಿ ಬೇರೊಂದು ಊರಿನ ಕುರಿಯೊಂದನ್ನು ಕೊಂಡುತರುತ್ತಾರೆ. ಗ್ರಹಣದ ದಿನ ಸಂಜೆ ಅದನ್ನು ಪೂಜಿಸಿ ತಮ್ಮ ಊರಿನ ಮತ್ತು ಪಕ್ಕದ ಊರಿನ ಗಡಿ ಸೇರುವಲ್ಲಿ ಕೊಂಡೊಯ್ದು ಅಲ್ಲಿ ಹಾಕಿದ ಚಪ್ಪರದಲ್ಲಿ ಪೂಜಾದಿಗಳು ನಡೆದ ಮೇಲೆ ಅದನ್ನು ಬಲಿಕೊಟ್ಟು ಅದರ ಮಾಂಸವನ್ನೆಲ್ಲ ಬಂದವರಿಗೆ ಹಂಚಿದರು. ಹೊಟ್ಟೆಯ ಕರುಳು ಮತ್ತು ಕಸರೆಯನ್ನು ಬೇರ್ಪಡಿಸಿ ಅದಕ್ಕೆ ಆವುಗೆ ಬೂದಿಯನ್ನು (ಆವುಗೆ ಬಳಿ ದೆವ್ವಗಳು ಇರುವುದಿಲ್ಲವೆಂದೂ, ಆವುಗೆ ಬೂದಿ ದೆವ್ವಗಳನ್ನು ದೂರವಿರಿಸುತ್ತದೆಯೆಂದೂ ನಂಬಿಕೆ) ಮಿಶ್ರಮಾಡಿ ಅದನ್ನು ಆ ಗಡಿಯಲ್ಲೇ ಉದ್ದಕ್ಕೂ ಹೂಳಿದರು. ಬಳಿಕ, ಊರ ಹೊರಗಿದ್ದ ಕುರಿಗಳನ್ನೆಲ್ಲ ಊರೊಳಕ್ಕೆ ಹೊಡೆದುಕೊಂಡು ಬಂದು, ರಾತ್ರಿ ಗ್ರಹಣಕ್ಕೆ ಮುಂಚೆಯೇ ಮನೆಯ ಬಾಗಿಲಲ್ಲಿ ಒನಕೆ ಇಟ್ಟು ಕುರಿಗಳೆಲ್ಲ ಒನಕೆ

---

೧ 'ಜಡರು' ಪದ ಚಿಕ್ಕದೇವರಾಜ ವಿಜಯದಲ್ಲಿ ಉಲ್ಲೇಖಗೊಂಡಿದೆ (೧೪.೧೫)- "ವೇದಾಂತದೊಳ್ ಪ್ರಕಾಶಮಾನವಾದ ನಿಜಸ್ವರೂಪಮಂ ತಿಳಿಪಿ ಎನ್ನ ಮನದ ಜಡರು ಕಳೆದು ನಿನ್ನಡಿಯೊಳ್ ಜ್ಞಾನ ಭಕ್ತಿಗಳಂ ಬಲಿಯಿಪುದು". ಇದಕ್ಕೆ ಕನ್ನಡ ನಿಘಂಟಿನಲ್ಲಿ (ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೭೭, ಸಂಪುಟ. III, ಪು. ೨೯೬೭) ಜಡತೆ, ಆಲಸ್ಯ, ಸೋಮಾರಿತನ ಎಂದು ಅರ್ಥ ಹೇಳಿ ಸಂಸ್ಕೃತ 'ಜಡ' ದಿಂದ ಪದವನ್ನು ನಿಷ್ಪನ್ನ ಮಾಡಿದೆ. ಇದು ಸಾಧ್ಯ ಎಂದು ಹೇಳಬಹುದಾದರೂ 'ರು' ಎಂಬ ಅಂತ್ಯಭಾಗಕ್ಕೆ ಕಾರಣವನ್ನು ಹೇಳುವುದು ಕಷ್ಟ. ಎಡರು-ಯೆಡರು-ಜೆಡರು-ಜಡರು ಇದೂ ಸಾಧ್ಯ ಅಥವಾ, 'ಜಡ', 'ಎಡರು' ಎರಡೂ ಸೇರಿದ ಜಂಟಿರೂಪ ಆಗಿರಬಹುದು.

ದಾಟಿಕೊಂಡು (ಒನಕೆಯಲ್ಲಿ ಕಬ್ಬಿಣದ ಭಾಗವಿರುತ್ತದೆಯೆಂಬುದು ಗಮನಾರ್ಹ) ಬರುವಂತೆ ಮಾಡಿದರು. ಇದೇ 'ಜಡರು ತೆಗೆ' ಯುವುದು ಮತ್ತು ಇದರಿಂದ ತಮ್ಮ ಕುರಿಗಳಿಗೆ ಯಾವ ರೋಗಾದಿಗಳೂ ತಗಲುವುದಿಲ್ಲವೆಂದು ಜನರ ನಂಬಿಕೆ.

ಮಕರ ಸಂಕ್ರಮಣದಲ್ಲಿ ಮೊಲ, ನರಿ

ಇದೇ ಕೃತಿಯ ಪು. ೨೧೨ರಲ್ಲಿ ಮೊಲದ ಉಲ್ಲೇಖವಿದೆ. "ಇಂಚರ" ಮಾಸಪತ್ರಿಕೆಯಲ್ಲಿ (ಐಬಿಎಚ್ ಪ್ರಕಾಶನ ಫೆಬ್ರವರಿ ೧೯೮೨. ಪು. ೬೯) ಡಾ. ವಿ. ನಾಗರಾಜ ಅವರು ಹಾಸನ ಜಿಲ್ಲೆಯ ಕಡಬಾಹಳ್ಳಿಯಲ್ಲಿ ವರ್ಷಕ್ಕೊಮ್ಮೆ ನಡೆಯುವ ನರಿಬೇಟೆಯ ವಿವರಗಳನ್ನು ಕೊಟ್ಟಿದ್ದಾರೆ. ಸಂಕ್ರಾಂತಿಗೆ ಮೂರು ದಿನ ಮೊದಲು ಬೇಡರು ಬಲೆ ಸಮೇತ ಕಾಡಿಗೆ ಹೋಗಿ ಅಲ್ಲಿ ಬಲೆ ಹರಡಿ ನರಿಗಳನ್ನು ಸೋವಿಕೊಂಡು ಬಂದು ಬಲೆಯಲ್ಲಿ ಬೀಳಿಸುತ್ತಾರೆ.

ಮೂರು ದಿನ ಹೀಗೆ ಬೇಟೆಯಾಡಿ ನರಿಗಳನ್ನು ಪಂಜರದಲ್ಲಿಟ್ಟು ಸಂಕ್ರಾಂತಿಯ ಸಂಜೆ ಕಡಬಾಹಳ್ಳಿಯಲ್ಲಿ ಸೇರುವ ಅಪಾರ ಜನರ ಮಧ್ಯೆ ದೇವರ ರಥೋತ್ಸವದ ಮುಂದೆ ಕಿವಿಗೆ ಲೋಹದ ಬಳೆ ಹಾಕಿದ ನರಿಗಳನ್ನು ಹಿಡಿದು ಬೇಡರು ಸಾಗುತ್ತಾರೆ. ರಾತ್ರಿಯಿಡೀ ರಥದ ಮುಂದೆ ನೃತ್ಯ, ಕೋಲಾಟ ನಡೆಯುತ್ತವೆ. ಬೆಳಗಿನ ಜಾವ ಊರಾಚೆಯ ದೇವರ ಮಂಟಪದ ಹತ್ತಿರ ನರಿಗಳಿಗೆ ಹಾರ ಹಾಕಿ ಅವುಗಳಿಗೆ ಕಟ್ಟಿದ್ದ ಬಂಧನಗಳನ್ನು ಬಿಚ್ಚಿ ಬಿಡುಗಡೆ ಮಾಡುತ್ತಾರೆ. ಅವು ಓಡಿ ಹೋಗಿ ಕಾಡು ಸೇರುತ್ತವೆ. ಸಂಕ್ರಾಂತಿಗೂ ಮೊಲ, ನರಿಗಳಿಗೂ ಸಂಬಂಧ ಗೊತ್ತಾಗದಿದ್ದರೂ ಆ ದಿನ ಆ ಪ್ರಾಣಿಗಳನ್ನು ಬಂಧಿಸಿ ಬಿಡುಗಡೆ ಮಾಡುವ ವಿವರಗಳ ಸ್ವಾರಸ್ಯಕ್ಕಾಗಿ ಮೇಲಿನ ಲೇಖನದ ಸಾರಾಂಶವನ್ನು ಇಲ್ಲಿ ಕೊಟ್ಟಿದ್ದೇನೆ. ನಂಜನಗೂಡಿನಲ್ಲಿ ಸಂಕ್ರಾತಿಯ ದಿನ ಮೊಲವನ್ನು ಬಿಡುಗಡೆ ಮಾಡಿದರೆ, ಕಡಬಾಹಳ್ಳಿಯಲ್ಲಿ ನರಿಗಳನ್ನು ಬಿಡುಗಡೆ ಮಾಡುತ್ತಾರೆ.

# ಪರಿವಿಡಿ


| | |
|---|---|
| ಶುಭ ಸಂದೇಶ | III |
| ಚೆನ್ನುಡಿ | IV |
| ಎರಡು ನುಡಿ | V |
| ಅಧ್ಯಕ್ಷರ ಮಾತು | VI |
| ಪ್ರಕಾಶಕರ ಮಾತು | VII |
| ಆಯ್ಕೆ ಸಮಿತಿ | IX |
| ಮುನ್ನುಡಿ | XI |
| ಅಭಿಪ್ರಾಯ | XV |
| ಪ್ರಸ್ತಾವನೆ | XXI |
| ಅನುಬಂಧ-೧೦ | XXII |

**ಪೂರ್ಣ ಸೂರ್ಯಗ್ರಹಣ**

೧. **ಗ್ರಹಣ ಮತ್ತು ಸಾಮಾನ್ಯ ಮನುಷ್ಯ** ೧-೯

ಪೀಠಿಕೆ ೩- ವಾಸ್ತವವಾಗಿ ಗ್ರಹಣವೆಂದರೇನು? ೬.

೨. **ಗ್ರಹಣಗಳ ಬಗ್ಗೆ: ಪುರಾಣಗಳು, ನಂಬಿಕೆಗಳು ಮತ್ತು ರಿಚುಯಲ್ಲುಗಳು**

ಗ್ರಹಣ ಮತ್ತು ಖಗೋಳ ವಿಜ್ಞಾನದ ಉಗಮ ೧೦-ಭಾರತೀಯ ನಂಬಿಕೆಗಳು ೧೧-ನಂಬಿಕೆಗಳು, ಬೇರೆ ಸಂಸ್ಕೃತಿಗಳಲ್ಲಿ ೧೮-ಗ್ರಹಣದ ಕೆಲವು ಐತಿಹಾಸಿಕ ಸ್ವಾರಸ್ಯಗಳು ೨೧-ಉಪಶಾಂತಿ ೨೨.

೩. **ಗ್ರಹಣಗಳು: ಪ್ರಾಚೀನ ಕನ್ನಡಿಗರು ಕಂಡಂತೆ** ೩೬-೫೬

ಗ್ರಹಣದಂದು ಆತ್ಮಬಲಿ ೩೫-ದತ್ತಿಗಳು ೪೩-ಕನ್ನಡ ಕಾವ್ಯವೊಂದರಲ್ಲಿ ಗ್ರಹಣದ ವರ್ಣನೆ ೫೧.

೪. **ಫೆಬ್ರವರಿ ಹದಿನಾರು: ನನ್ನ ಅನುಭವ** ೫೭-೬೩

೫. ಗ್ರಹಣದ ಸಾಮಾಜಿಕ ಸಮೀಕ್ಷೆ ೬೪–೧೦೭

ಪೀಠಿಕೆ ೬೪–ಪ್ರಶ್ನಾವಳಿ ೬೫–ವಿಶ್ಲೇಷಣೆ ೬೬–ವ್ಯಾಖ್ಯಾನ (ಸಾಂಪ್ರದಾಯಕ ನಂಬಿಕೆಗಳು; ಅವು ಹೊಂದಿರುವ ನಿಯಂತ್ರಣ, ಸಮೂಹ ಮಾಧ್ಯಮಗಳು, ಪ್ರಯೋಗ ಶೀಲತೆ, ದೇಶದ ಆಗುಹೋಗುಗಳ ಮೇಲೆ ಪರಿಣಾಮ) ೭೮–ಗ್ರಹಣದ ಸಮಯದ ಇನ್ನೂ ಕೆಲವು ರಿಚುಯಲ್ಲುಗಳು, ನಿಷೇಧಗಳು, ನಂಬಿಕೆಗಳು ೮೩–ಅನುಬಂಧಗಳು (ಅನುಬಂಧ–೧. ಮಧ್ಯ ಕರ್ನಾಟಕದಲ್ಲಿ ಕ್ಷೇತ್ರಕಾರ್ಯ೮೮; ಅನುಬಂಧ–೨. ಬೆಳಗಾಂ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ ೯೨; ಅನುಬಂಧ–೩. ಬಿಜಾಪುರ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ ೯೪; ಅನುಬಂಧ–೪. ಕುಣಿಗಲ್ ತಾಲೂಕಿನಲ್ಲಿ ಸೂರ್ಯಗ್ರಹಣದ ದಿನ ಬಲಿ ೧೦೩.

೬. "ಸೂರ್ಯಗ್ರಹಣ ಅದ್ಭುತ ಮಹಾಶಾಂತಿ ಮಹೋತ್ಸವ" ೧೦೮–೧೩೦

ಸಂಕಲ್ಪ ೧೦೮–ಕಾರ್ಯಕ್ರಮ: ವೈಖಾನಸಾಗಮದಂತೆ ೧೧೦–ಕರಪತ್ರ ೧೧೨–ಯಾಗಮಂಟಪ ೧೧೫–ಸ್ವಸ್ತಿವಾಚನ ೧೧೬–ಲಲಾಟಪಟ್ಟ ೧೨೩–ಪೂರ್ಣಾಹುತಿ ೧೨೫–ಮಹಾಶಾಂತಿ ಮಹೋತ್ಸವ: ಸಾಮನ್ಯರ ಪ್ರತಿಕ್ರಿಯೆ ೧೨೬.

೭. ಸಮೂಹ ಮಾಧ್ಯಮದಲ್ಲಿ 'ಗ್ರಹಣ' ೧೩೧–೧೭೪

ವೃತ್ತಪತ್ರಿಕೆಗಳು ೧೩೧–ನಂಬಿಕೆಗಳು: ವಿಜ್ಞಾನಿಗಳಲ್ಲಿ ೧೩೨–ಫಲಾಫಲಗಳು ೧೩೩–ಕುರುಕ್ಷೇತ್ರ ಮತ್ತು ಇತರ ಯಾತ್ರಾಸ್ಥಳಗಳು ೧೩೬–ಸುಮ್ಮನೆ, ತಮಾಷೆಗೆ (ಅಥವಾ ಗಂಭೀರವಾಗಿ?) ೧೩೭–ಗ್ರಹಣದ ಬಗ್ಗೆ ಮಾಹಿತಿ ೧೩೭–ಗ್ರಹಣ ಹಿಡಿಯುವ ಕಾಲದ ವಿವರಗಳು ೧೪೦–ರಜೆ; ಬಸ್ ಸಂಚಾರ ರದ್ದು ೧೪೧–ಪ್ರಾಣಿಗಳ ಮೇಲೆ ಪ್ರಯೋಗಕ್ಕೆ ಸಿದ್ಧತೆ ೧೪೨–ಗ್ರಹಣ ಸಮಯದಲ್ಲಿ ಸಸ್ಯ ಪ್ರಾಣಿಗಳ ನಡವಳಿಕೆ ಹೀಗಿರುತ್ತದೆ ೧೪೨–ಗ್ರಹಣದ ದಿನ ೧೪೩–ಮಾರನೆಯ ದಿನದ ಮತ್ತು ಮುಂದಿನ ಪತ್ರಿಕೆಗಳಲ್ಲಿ ೧೪೮–ವೈಜ್ಞಾನಿಕ ಪ್ರಯೋಗಗಳು (ಕರ್ನಾಟಕದಲ್ಲಿ) ೧೫೩–ಕೆಲವು ಪ್ರಯೋಗಗಳು; ಮತ್ತು ಮನುಷ್ಯ, ಪ್ರಾಣಿಗಳ ಮೇಲೆ ಪರಿಣಾಮಗಳು ೧೫೪–ಕೆಲವು ವಿಚಿತ್ರ ಘಟನೆಗಳು

೧೫೭–ಗ್ರಹಣದ ಜಾಹಿರಾತು ಮೌಲ್ಯ ೧೫೮–ರೇಡಿಯೋ ೧೫೮.

೮. ಉಪಸಂಹಾರ ೧೭೫–೧೮೪

"ಸಮಾಜೋಸಾಂಸ್ಕೃತಿಕ ಸಮೀಕ್ಷೆ" ೧೭೫–ಪ್ರತಿಕ್ರಿಯೆಗಳಲ್ಲಿ ಸಮಾನತೆ ೧೭೫–ಪುರಾಣಗಳು ಮತ್ತು ರಿಚುಯಲ್ಲುಗಳು ೧೭೬–ಯಾರಲ್ಲಿ ಹೆಚ್ಚು ಮೂಢನಂಬಿಕೆಗಳು? ೧೭೮–ಸಮೂಹ ಮಾಧ್ಯಮಗಳ ಪ್ರಭಾವ: ಜನರ ಪ್ರತಿಕ್ರಿಯೆಗಳನ್ನು ನಿರ್ಣಯಿಸುವಲ್ಲಿ ೧೭೯–ಕೊನೆಯ ಮಾತುಗಳು ೧೮೩.

ಅನುಬಂಧ – ೫ (ಹೊಸೂರಿನ ಬಳಿ ವಿಜ್ಞಾನಿಗಳ ಶಿಬಿರ) ೧೮೫–೧೮೬

ಅನುಬಂಧ – ೬ ೧೮೭–೨೦೪

ಪ್ರಾಚೀನ ಭಾರತದಲ್ಲಿ ಸೂರ್ಯ ಮತ್ತು ಸೂರ್ಯಾರಾಧನೆ ೧೮೭–ಸೂರ್ಯನ ರಥಕ್ಕೆ ಕೋಣಗಳು ೨೦೦–ಮುಮ್ಮಡಿ ಕೃಷ್ಣರಾಜ ಒಡೆಯರ "ಗ್ರಹಣದರ್ಪಣ" ೨೦೧.

ಅನುಬಂಧ ೭ ೨೦೫–೨೦೮

ವ್ರತಗಳಲ್ಲಿ ಸೂರ್ಯ, ರಥಸಪ್ತಮಿ ೨೦೫–ನಿರಶನಾರ್ಕವಾರ ವ್ರತ–೨೦೬–ಹಳ್ಳಿಗಳಲ್ಲಿ ಮಕರ ಸಂಕ್ರಮಣ ೨೦೭

ಅನುಬಂಧ ೮ ೨೦೯–೨೨೯

ದೇವಾಲಯಗಳಲ್ಲಿ ಗ್ರಹಣ, ಮಕರಸಂಕ್ರಮಣ ಮತ್ತು ರಥಸಪ್ತಮಿ ಉತ್ಸವಗಳು–ಗ್ರಹಣ (ಕಳಸದ ಶ್ರೀಕಲಶೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ; ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ; ಬೇಲೂರಿನ ಶ್ರೀ ಸೌಮ್ಯಕೇಶವದೇವರ ದೇವಸ್ಥಾನದಲ್ಲಿ) ೨೦೯–ಮಕರ ಸಂಕ್ರಮಣ (ಕಳಸದ ಶ್ರೀಕಲಶೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ; ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ; ಚಾಮರಾಜನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ,ಉತ್ತರಾಯಣ ಪುಣ್ಯಕಾಲದ ಕಟ್ಲೆ; ಮೇಲ್ಕೋಟೆ ಶ್ರೀ ನಾರಾಯಣಸ್ವಾಮಿ ದೇವಸ್ಥಾನದಲ್ಲಿ) ೨೧೧–ರಥಸಪ್ತಮಿ (ನಂಜನಗೂಡಿನ ಶ್ರೀ

ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ; ಮೇಲ್ಕೋಟೆ ಶ್ರೀನಾರಾಯಣಸ್ವಾಮಿ ದೇವಸ್ಥಾನದಲ್ಲಿ; ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದಲ್ಲಿ ರಥಸಪ್ತಮಿ, ಮಾಘ ಶುದ್ಧ ಸಪ್ತಮಿ; ಬೇಲೂರಿನ ಶ್ರೀ ವೇಲಾಪುರಿ ಸೌಮ್ಯಕೇಶವದೇವರ ದೇವಾಲಯದಲ್ಲಿ) ೨೧೫–ಜಾನಪದ ವಾಙ್ಮಯದಲ್ಲಿ ಸೂರ್ಯ ೨೨೧–'ಸೂರ್ಯಸಂದೇಶ'/'ಸೂರ್ಯದೂತ' ೨೨೩–ಸೂರ್ಯನ ಬಗ್ಗೆ ಕೆಲವು ಆಧುನಿಕ ಕವನಗಳು ೨೨೫.

ಅನುಬಂಧ ೬ (ಪ್ರಶ್ನಾವಳಿ) ೨೩೦–೨೩೪

ಗ್ರಂಥಸೂಚಿ ೨೩೫–೨೪೦

# ಪೂರ್ಣ ಸೂರ್ಯಗ್ರಹಣ

# ಗ್ರಹಣ ಮತ್ತು ಸಾಮಾನ್ಯ ಮನುಷ್ಯ

## ಪೀಠಿಕೆ

'The Indian Meteorological Department' ವಿಭಾಗ ಹೊರಡಿಸಿದ (೧೬ Feb. ೧೯೮೦; ೨೭ ಮಾಘ ೧೯೦೧ ಶಕ) ಪುಸ್ತಿಕೆಯು "One of the most astronomical events of this century for India" ಎಂದು ಕರೆದ ಘಟನೆ ನಡೆದ ದಿನ ಫೆಬ್ರವರಿ ೧೬, ೧೯೮೦; ಈಚಿನ ವರ್ಷಗಳಲ್ಲಿನ ಒಂದು ಸಂಸ್ಮರಣೀಯ ದಿನ. ಆ ದಿನ ಭಾರತದ ಎಲ್ಲ ವರ್ಗದ ಎಲ್ಲ ಜನ ಕುತೂಹಲ, ಭಯ, ತಲ್ಲಣಗಳ ಭಾವಾವೇಗಕ್ಕೆ ಸಿಲುಕಿದ್ದರು. ಆ ದಿನ, ಅದಕ್ಕೆ ಸ್ವಲ್ಪ ಹಿಂದೆ ಮುಂದೆ ಎಲ್ಲರ ಬಾಯಲ್ಲೂ ಹೆಚ್ಚು ಕಡಿಮೆ ಚರ್ಚೆಯ ವಿಷಯ ಒಂದೇ: ಪೂರ್ಣ ಸೂರ್ಯಗ್ರಹಣ (ಚಿತ್ರ ೧). ವಿಶ್ವದ ನೂರಾರು ವಿಜ್ಞಾನಿಗಳು ಆ ದಿನ ನಡೆಸಬೇಕೆಂದಿದ್ದ ಪ್ರಯೋಗಗಳಿಗೆ ಬಹುಕಾಲ ಸಿದ್ಧತೆ ಮಾಡಿಕೊಂಡು ಫೆಬ್ರವರಿ ತಿಂಗಳ ಆದಿಭಾಗದಲ್ಲಿಯೇ ದಕ್ಷಿಣ ಭಾರತದ ಗ್ರಹಣ ಪ್ರದೇಶದ ಬೇರೆ ಬೇರೆ ಜಾಗಗಳಲ್ಲಿ ತಮ್ಮ ಸಾಧನೆ ಸಾಮಗ್ರಿಗಳೊಂದಿಗೆ ಸಂಸ್ಥಾಪಿತರಾದರು. ಆ ದಿನ ಮಧ್ಯಾಹ್ನದ ಬಳಿಕ ಕೆಲವು ಗಂಟೆ ತೀವ್ರ ಸಂಶೋಧನೆಯಲ್ಲಿ ತೊಡಗಿದರು. ಮನುಷ್ಯನ ಹೊರಗಿನ ಜಗತ್ತು ಗ್ರಹಣದ ಸಮಯದಲ್ಲಿ ಹೇಗಿರುತ್ತದೆ, ಸದಾ ಉರಿಯುವ ಸೂರ್ಯ ಕ್ಷಣಕಾಲ ತಣ್ಣಗಾಗಿ ತನ್ನ ಯಾವ ರಹಸ್ಯಗಳನ್ನು ಬಿಟ್ಟುಕೊಡುತ್ತಾನೆ ಎಂಬುದು ಅವರ ಸಂಶೋಧನೆಗಳ ಉದ್ದೇಶವಾಗಿದ್ದಿತು. ಗ್ರಹಣದ ಸಮಯದಲ್ಲಿ ಮತ್ತು ಗ್ರಹಣ ಹಿಡಿಯುವ ಎಷ್ಟೋ ದಿನಗಳ ಮುನ್ನ, ಗ್ರಹಣ ಬಿಟ್ಟಾದ ಮೇಲೂ ಎಷ್ಟೋ ದಿನ ಒಟ್ಟು ಆ ಗ್ರಹಣದ ಘಟನೆ ಮನುಷ್ಯನ ಒಳ ಪ್ರಪಂಚದಲ್ಲಿ ಬಗೆ ಬಗೆಯ ಪ್ರತಿಕ್ರಿಯೆಗಳನ್ನು ಎಳಿಸಿತು. ಹೊರಗಿನ ಜಗತ್ತಿನ ವ್ಯಾಪಾರಗಳಂತೆಯೇ ಮನುಷ್ಯನ ಈ ಒಳ ಜಗತ್ತಿನ ವ್ಯಾಪಾರಗಳೂ

ಅಧ್ಯಯನಯೋಗ್ಯವಾಗಿದ್ದುವು. ಹೊರಜಗತ್ತು ಖಗೋಳ ವಿಜ್ಞಾನಿಗಳ ಆಸಕ್ತಿಯ ವಿಷಯವಾಗಿದ್ದರೆ ಈ ಒಳ ಜಗತ್ತು ಮನೋವಿಜ್ಞಾನಿಗಳ, ಮಾನವವಿಜ್ಞಾನಿಗಳ, ಜಾನಪದ ಶಾಸ್ತ್ರಜ್ಞರ ಆಸಕ್ತಿಯ ವಿಷಯ. ಈ ಒಳ ಮಾನಸಿಕ ಜಗತ್ತಿನ ಎಷ್ಟೋ ಚಲನೆಗಳು ಶ್ರದ್ಧೆ, ಮೂಢನಂಬಿಕೆಗಳನ್ನು ಆಧರಿಸಿದ್ದರೂ ಅವೂ-ಅವು ಇರುವ ವರೆಗಾದರೂ-ವಾಸ್ತವಗಳೇ. ಮಾನಸಿಕ ಸಂಗತಿಗಳೂ ಸಂಗತಿಗಳೇ; ಭಾವನೆಗಳು ವೈಜ್ಞಾನಿಕ ಸಂಗತಿಗಳಿಗಿಂತ ಪರಿಣಾಮಕಾರಿಗಳು ಮತ್ತು ಎಷ್ಟೋ ಬಾರಿ ಹೆಚ್ಚು ಕ್ರಿಯಾತ್ಮಕ. ಹಳತು ಹೊಸತರ ಸಂಧಿಕಾಲದಲ್ಲಿರುವ ಭಾರತದಂತಹ ದೇಶದಲ್ಲಂತೂ, ನಂಬಿಕೆಗಳು ಮಾಯವಾಗದೆ ವೈಜ್ಞಾನಿಕ ಸಂಗತಿಗಳು ಸಾರ್ವತ್ರಿಕವಾಗಿ ರೂಢಿಗೊಳ್ಳದೆ ಇರುವ ಸಂದರ್ಭದಲ್ಲಿ ಈ ಮನುಷ್ಯನ ಒಳ ಜಗತ್ತಿನ ಅಧ್ಯಯನಗಳು ತೀರ ಸ್ವಾರಸ್ಯವಾಗಿರುತ್ತವೆ.

ನನ್ನ ಈ ಅಧ್ಯಯನಕ್ಕೆ ಇದೇ ಹಿನ್ನೆಲೆ. ವಿಜ್ಞಾನಿಗಳು ಮನುಷ್ಯನ ಹೊರಗಿನ ಜಗತ್ತನ್ನು ಪರಿಶೀಲಿಸಿದರೆ, ಅದೇ ಕ್ಷಣದಲ್ಲಿ ಮನುಷ್ಯನ ಒಳ ಜಗತ್ತನ್ನೂ ಪರಿಶೀಲಿಸುವುದು ಅಗತ್ಯ ಎಂಬ ನನ್ನ ಹುಮ್ಮಸ್ಸೇ ನನಗೆ ಮುಖ್ಯವಾಗಿ ಪ್ರಚೋದನೆ ಕೊಟ್ಟದ್ದು. ಕನ್ನಡ ಎಂ. ಎ. ತರಗತಿಯ ಶಾಸನಶಾಸ್ತ್ರ ಐಚ್ಛಿಕ ವಿಷಯದ ವಿದ್ಯಾರ್ಥಿಗಳನ್ನು ಬನವಾಸಿ ಪ್ರಾಂತಕ್ಕೆ ಫೆಬ್ರವರಿ ತಿಂಗಳ ಮಧ್ಯಭಾಗದಲ್ಲಿ ಶೈಕ್ಷಣಿಕ ಪ್ರವಾಸಕ್ಕಾಗಿ ಕರೆದೊಯ್ದಿದ್ದಾಗ, ಫೆಬ್ರವರಿ ಹದಿನಾರರಂದು ಸಿರಸಿಯಲ್ಲಿ ಪೂರ್ಣಗ್ರಹಣವನ್ನು ಕಣ್ಣಾರೆ ವೀಕ್ಷಿಸಿ ಬದುಕಿನ ಕೆಲವು ಅಪೂರ್ವ ಅನುಭವಗಳನ್ನು ಪಡೆದೆ. (ಅನುಭವಕಥನಕ್ಕೆ ಮುಂದೆ ಅಧ್ಯಾಯ ೪ ನೋಡಿ), ಹಾಗೆ ನೋಡಿದರೆ, ಶೈಕ್ಷಣಿಕ ಪ್ರವಾಸವು ಗ್ರಹಣದ ಸಮಯದಲ್ಲಿ ಬರುವಂತೆ ಪೂರ್ವನಿಯೋಜಿತವೂ ಆಗಿತ್ತು. ಆದರೆ, ಆ ಸಮಯದಲ್ಲಿ ನನಗೆ ಗ್ರಹಣದ ಸಮಾಜೋ-ಸಾಂಸ್ಕೃತಿಕ (Socio-cultural) ಸಮೀಕ್ಷೆಯನ್ನು ಕೈಗೊಳ್ಳುವ ಉದ್ದೇಶವಿರಲಿಲ್ಲ. ಅಂತಹ ಉದ್ದೇಶವು ಆಗಲೇ ಇದ್ದಿದ್ದರೆ ನನ್ನ ಅಧ್ಯಯನ ಇನ್ನೂ ಎಷ್ಟೋ ಉತ್ತಮದ್ದಾಗಿರುತ್ತಿತ್ತು. ಗ್ರಹಣ ನಡೆದ ಎರಡು ವಾರಗಳ ಮೇಲೆ (ಮಾರ್ಚ್ ೪, ೧೯೮೦) ಮೈಸೂರಿನಲ್ಲಿ ನಡೆದ ಜಾನಪದಶಾಸ್ತ್ರ ವಿಚಾರಗೋಷ್ಠಿಯೊಂದರಲ್ಲಿ ತರುಣ ಮಿತ್ರರೊಬ್ಬರ ಜೊತೆ ಮಾತನಾಡುತ್ತಿರುವಾಗ ಗ್ರಹಣದಂತಹ ವಿಷಯ ಜಾನಪದ ಶಾಸ್ತ್ರ (Folklore) ವಿದ್ಯಾರ್ಥಿಗಳಿಗೆ ಒಳ್ಳೆಯ ಸಂಶೋಧನ ವಸ್ತುವೆಂಬ ವಿಷಯದತ್ತ ಚರ್ಚೆ ಸಾಗಿದ್ದೇ ನನಗೆ ಈ ಬಗ್ಗೆ ಮುಂದುವರಿಯಲು ಸೂಚನೆಗಳನ್ನು ಕೊಟ್ಟಿತು. ತಡವಾಗಿಯಾದರೂ ಸರಿಯೇ, ಗ್ರಹಣ ಇನ್ನೂ ಜನರಲ್ಲಿ ಮಾತುಕತೆಯ ವಿಷಯವಾಗಿದ್ದು ಅವರ ನೆನಪಲ್ಲಿ ಹಚ್ಚ

ಹಸಿರಾಗಿರುವಾಗಲೇ ಸಾಮಗ್ರಿ ಸಂಗ್ರಹಣೆ ಮಾಡಬೇಕೆನ್ನಿಸಿತು. ಮಾಡದೇ ಇರುವುದಕ್ಕಿಂತ ತಡವಾಗಿಯಾದರೂ ಏನಾದರೂ ಮಾಡಬೇಕು, ಕೊರತೆಗಳು ಉಳಿದರೂ ಸರಿಯೇ, ಒಂದು ಸಮೀಕ್ಷೆಯನ್ನು ನಡೆಸಿ ಅದರ ಫಲಿತಾಂಶಗಳನ್ನು ಒಂದು ಸಂಪ್ರಬಂಧದ (Paper) ರೂಪವಾಗಿಯಾದರೂ ಪ್ರಕಟಿಸಬೇಕು ಎಂಬ ಆಸೆ ಮೊಳೆಯಿತು. ೧೯೭೯-೮೦ನೇ ಸಾಲಿನ ಕನ್ನಡ ಎಂ.ಫಿಲ್. ವಿದ್ಯಾರ್ಥಿಗಳು ಸಹಕರಿಸುವುದಾಗಿ ಮಾತುಕೊಟ್ಟು, ಆಮೇಲೂ ಸಹಕರಿಸಿದರು. (ಆಗ ನಡೆಸಿದ ಸಮೀಕ್ಷೆಯ ವಿಧಾನ, ಇತರ ವಿವರಗಳಿಗೆ ಮುಂದೆ ನೋಡಿ). ಹದಿನೈದು ಇಪ್ಪತ್ತು ಪುಟಗಳ ಚಿಕ್ಕ ಸಂಪ್ರಬಂಧ ನನ್ನ ಗುರಿಯಾಗಿದ್ದರೂ, ಸಾಮಗ್ರಿಸಂಗ್ರಹ ಬೆಳೆದಂತೆ ಒಂದು ಪುಸ್ತಿಕೆಯನ್ನೇ ಏಕೆ ಬರೆಯಬಾರದು ಎಂದು ಅನ್ನಿಸಿತು. ಅದರ ಪರಿಣಾಮ ಇದು — ಈ ಪುಸ್ತಿಕೆ (Monograph). ಇದು ಸಂಶೋಧನ ಪುಸ್ತಿಕೆಯೆಂದು ನಾನು ಕರೆಯಬಯಸಿದರೂ, ಕೃತಿಯ ಆರಂಭದಲ್ಲಿ ಸಾಕಷ್ಟು ಭಾಗ ಇತರ ಆಕರಗಳಿಂದ ಸಂಗ್ರಹಿಸಿದ ವಿಷಯಗಳೇ ಇರುವುದನ್ನು ನಾನು ಓದುಗರ ಗಮನಕ್ಕೆ ತರುತ್ತಿದ್ದೇನೆ. ಶಾಸನಗಳಿಂದ, ಕಾವ್ಯಗಳಿಂದ, ಕ್ಷೇತ್ರಕಾರ್ಯದ (Field Work) ಮೂಲಕ ಸಂಗ್ರಹಿಸಿರುವ ಸಾಮಗ್ರಿ, ವಿಶ್ಲೇಷಣೆ, ವಿವೇಚನೆಯ ಭಾಗ ನನ್ನ ಕೆಲಸದ ಫಲ, ನನ್ನ ಸಂಶೋಧನೆ, ('ನನ್ನ' ಎಂದು ಹೇಳಿಕೊಳ್ಳುವಾಗಲೂ ಈ ಕಾರ್ಯದಲ್ಲಿ ಸಹಕರಿಸಿದ ವಿದ್ಯಾರ್ಥಿಮಿತ್ರರ ಸಹಾಯವನ್ನು ಮರೆತಿಲ್ಲ. ಅವರ ಉಪಕಾರವನ್ನು ಮುಂದೆಯೂ ಸ್ಮರಿಸಲಿದ್ದೇನೆ, ಈಗಲೂ ಸ್ಮರಿಸುತ್ತೇನೆ) ಈ ಸಂಶೋಧನೆ ಯಾವ ಕ್ಷೇತ್ರದ್ದು ಎಂದು ಯಾರಾದರೂ ಕೇಳಿದರೆ ಮಾತ್ರ ಅದು, ಬಹಳ ಅನುಕೂಲಕರ ಹೆಸರಾದ ಜಾನಪದಶಾಸ್ತ್ರ ಕ್ಷೇತ್ರದ್ದು ಎಂದು ಹೇಳಿ ಕೈತೊಳೆದುಕೊಳ್ಳುತ್ತೇನೆ.

ಪುಸ್ತಿಕೆಯ ಹೆಸರು "ಪೂರ್ಣ ಸೂರ್ಯಗ್ರಹಣ: ಒಂದು ಸಮಾಜೋ-ಸಾಂಸ್ಕೃತಿಕ ಸಮೀಕ್ಷೆ". ಗ್ರಹಣದ ವಿಷಯದಲ್ಲಿ ವಿಜ್ಞಾನ ತಳೆದಿರುವ ನಿಲುವು, ಹೊರಗಡೆಹಿರುವ ಸಂಗತಿಗಳು ಈ ಪುಸ್ತಕದ ವ್ಯಾಪ್ತಿಯಿಂದ ಹೊರಗು. (ಓದುಗರ ಅನುಕೂಲಕ್ಕಾಗಿ ಅವನ್ನೂ ಪ್ರಾಸಂಗಿಕವಾಗಿ ಮಾತ್ರ ಪ್ರಸ್ತಾಪಿಸಿದ್ದೇನೆ.) ಸಾಮಾನ್ಯ ಮನುಷ್ಯ-ಅನಾಗರಿಕ, ಅವಿದ್ಯಾವಂತ, ಅಕ್ಷರವಂತ, ವಿದ್ಯಾವಂತ-ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ದೇಶಗಳಲ್ಲಿ ಗ್ರಹಣವನ್ನು ಅರ್ಥಮಾಡಿಕೊಂಡ ರೀತಿ, ಮತ್ತು ಕರ್ನಾಟಕದಲ್ಲಿ ಫೆಬ್ರವರಿ ೧೯೮೦ರಲ್ಲಿ ಗ್ರಹಣವನ್ನು, ವಿಜ್ಞಾನಿಗಳನ್ನು ಹೊರತುಪಡಿಸಿ ಉಳಿದ ಜನ ಕಂಡು ಪ್ರತಿಕ್ರಿಯಿಸಿದ ರೀತಿ, ಅವರ ಸಾಂಪ್ರದಾಯಕ ನಂಬಿಕೆ, ರಿಚುಯಲ್ಲುಗಳು ಈ ಅಧ್ಯಯನದ ವಸ್ತು, ಇಲ್ಲಿ ಮುಖ್ಯವಾಗಿ ಸಮಾಜ,

ಸಂಸ್ಕೃತಿಗಳೇ ಲಕ್ಷ್ಯದಲ್ಲಿರುವುದರಿಂದ ಸಮಾಜೋ–ಸಾಂಸ್ಕೃತಿಕ ಅಧ್ಯಯನವೆಂದು ಕರೆದಿದೆ. ಮೂಢನಂಬಿಕೆಗಳನ್ನು ನಂಬುವುದು ಮೂಢನಂಬಿಕೆಯಾಗಬಹುದು. ಆದರೆ ಅವುಗಳ ಅಧ್ಯಯನವನ್ನು ನಿರಾಕರಿಸುವುದು ಮೌಢ್ಯವಾಗಬಲ್ಲದು. ಮೂಢನಂಬಿಕೆಗಳ ಕ್ರಮಬದ್ಧ ನಿರ್ಲಿಪ್ತ ಅಧ್ಯಯನ ವೈಜ್ಞಾನಿಕವಾಗಿರಬಲ್ಲುದು ಎಂಬುದನ್ನು ಓದುಗರ ಲಕ್ಷಕ್ಕೆ ತರುತ್ತಿದ್ದೇನೆ. ಏಕೆಂದರೆ ಈ ಪುಸ್ತಕದಲ್ಲಿ ಹಲವೆಡೆ ನನ್ನ ಸಾಮಗ್ರಿಯು ನಂಬಿಕೆಗಳೋ, ಮೂಢನಂಬಿಕೆಗಳೋ ಆಗಿರಬಹುದು; ಆಗಿರಬಹುದೇನು, ಆಗಿವೆ. ಮೂಢನಂಬಿಕೆಗಳ ಉಚ್ಚಾಟನೆ ನನ್ನ ಪುಸ್ತಕದ ಉದ್ದೇಶವೆಂದೂ ಹೇಳಿಕೊಳ್ಳಲಾರೆ. ಅವುಗಳ ಪ್ರತಿಪಾದನೆಯಂತೂ ನನ್ನ ಉದ್ದೇಶವಲ್ಲ. ಕೆಲವು ಸಂಗತಿಗಳನ್ನು ಹಿಡಿದಿಡುವುದು ಮಾತ್ರ ನನ್ನ ಉದ್ದೇಶ. ಮತ್ತು ಇಂದಿನ ಭಾರತೀಯ ಮನಸ್ಸನ್ನು ಅರ್ಥಮಾಡಿಕೊಳ್ಳುವುದೂ ಆ ಉದ್ದೇಶದಲ್ಲಿ ಸೇರಿದೆ.

### ವಾಸ್ತವವಾಗಿ ಗ್ರಹಣವೆಂದರೇನು?

"ಗ್ರಹಣ" ಶಬ್ದದ ವಾಚ್ಯಾರ್ಥ ಹಿಡಿಯುವುದು ಎಂಬುದು ಸ್ಪಷ್ಟ. ಇದನ್ನು Eclipse ಎಂಬರ್ಥದಲ್ಲಿ ಬಳಸಲು, ರಾಹು ಸೂರ್ಯನನ್ನು ಹಿಡಿಯುವ ಕತೆಯ ನಂಬಿಕೆ ಕಾರಣ. ಗ್ರಹಣವನ್ನು 'ಗ್ರಹ' (ಹಿಡಿಯುವುದು), 'ಉಪರಾಗ' (ಕಪ್ಪಾಗುವಿಕೆ) ಎಂದೂ ಕರೆಯುವುದುಂಟು. ಗ್ರಹಣವನ್ನು ಆಧುನಿಕ ವಿಜ್ಞಾನ ವಿವರಿಸುವ ರೀತಿ ಹೀಗೆ: ಒಂದು ಆಕಾಶಕಾಯವು ಇನ್ನೊಂದರ ನೆರಳಿನಿಂದ ಮರೆಯಾದರೆ ಮೊದಲನೆಯದು 'ಗ್ರಹಣ'ಕ್ಕೆ ಒಳಗಾಗುತ್ತದೆ. ಅದು ನೆರಳಿನಿಂದ ಪೂರ್ತಿ ಮರೆಯಾದರೆ ಅದು ಸರ್ವಗ್ರಾಸ ಗ್ರಹಣ ಅಥವಾ ಖಗ್ರಾಸ ಗ್ರಹಣ ಅಥವಾ ಪೂರ್ಣ ಗ್ರಹಣ; ಪೂರ್ತಿ ಮರೆಯಾಗದಿದ್ದರೆ ಖಂಡ ಗ್ರಹಣ. ಸೂರ್ಯ ಮತ್ತು ಚಂದ್ರರ ನಡುವೆ ಭೂಮಿ ಬಂದಾಗ, ಭೂಮಿಯ ನೆರಳು ಚಂದ್ರನ ಮೇಲೆ ಬಿದ್ದು ಚಂದ್ರ ನಮ್ಮಿಂದ ಮರೆಯಾಗುತ್ತಾನೆ; ಅದು ಚಂದ್ರಗ್ರಹಣ. ಸೂರ್ಯ ಮತ್ತು ಭೂಮಿಯರ ನಡುವೆ ಚಂದ್ರ ಬಂದಾಗ ಸೂರ್ಯ ನಮ್ಮಿಂದ ಮರೆಯಾಗುತ್ತಾನೆ; ಅದು ಸೂರ್ಯಗ್ರಹಣ.

ಚಂದ್ರಗ್ರಹಣಗಳು ಹುಣ್ಣಿಮೆಗಳಂದು ಮಾತ್ರ ನಡೆಯುತ್ತವೆ; ಆದರೆ ಎಲ್ಲ ಹುಣ್ಣಿಮೆಗಳಲ್ಲೂ ಗ್ರಹಣಗಳಾಗುವುದಿಲ್ಲ. ಏಕೆಂದರೆ, ಚಂದ್ರ ಭೂಮಿಯ ಸುತ್ತ ತಿರುಗುವ ಪಥವು ಸೂರ್ಯನ ಸುತ್ತ ಭೂಮಿ ತಿರುಗುವ ಪಥದಿಂದ ಆರು ಡಿಗ್ರಿಗಳಷ್ಟು ಬೇರೆಯಾಗಿದೆ. ಈ ವ್ಯತ್ಯಾಸದಿಂದಾಗಿ ಬಹುಸಾರಿ ಚಂದ್ರನು ಭೂಮಿ

ಕೆಡಹುವ ನೆರಳಿನ ಮೇಲೋ ಕೆಳಗೋ ಇದ್ದು ಗ್ರಹಣದಿಂದ ತಪ್ಪಿಸಿಕೊಳ್ಳುತ್ತಾನೆ. ಪೂರ್ಣ ಚಂದ್ರಗ್ರಹಣವು ಒಂದು ಗಂಟೆ ನಲವತ್ತು ನಿಮಿಷಗಳವರೆಗೆ ನಡೆಯಬಹುದು ಮತ್ತು ಒಂದು ವರ್ಷದಲ್ಲಿ ಚಂದ್ರಗ್ರಹಣಗಳು ಹೆಚ್ಚೆಂದರೆ ಮೂರು ಬಾರಿ ನಡೆಯಬಹುದು.

ಪೂರ್ಣ ಚಂದ್ರಗ್ರಹಣದ ಸಮಯದಲ್ಲಿ ಚಂದ್ರ ಪೂರ್ತಿ ಮರೆಯಾಗಬೇಕಾಗಿಲ್ಲ. ಕೆಲವೊಮ್ಮೆ ಅದು ತಾಮ್ರವರ್ಣವನ್ನು ಪಡೆಯಬಹುದು, ಏಕೆಂದರೆ ವಾತಾವರಣದತ್ತ ಚಾಚುವ ಸೂರ್ಯನ ಬೆಳಕು ಭೂಮಿಯ ನೆರಳಿನತ್ತ ಪ್ರತಿಫಲನಗೊಳ್ಳಬಹುದು. ಆಗ ಚಂದ್ರ ಕೆಂಪಾಗಿ ಕಾಣುತ್ತಾನೆ. ಭೂಮಿಯ ವಾತಾವರಣವು ಮೋಡದಿಂದ ತುಂಬಿದ್ದರೆ, ಎಲ್ಲ ಬೆಳಕೂ ಅಲ್ಲೇ ಇಂಗಿಹೋಗಿ ಚಂದ್ರ ನಮ್ಮಿಂದ ಪೂರ್ತಿ ಮರೆಯಾಗಬಹುದು.

ಸೂರ್ಯಗ್ರಹಣಗಳು ಅಮಾವಾಸ್ಯೆಯ ದಿನ ಸಂಭವಿಸುತ್ತವೆ. ಗ್ರಹಣ ಯಾವಾಗಲೂ ಸೂರ್ಯನ ಪಶ್ಚಿಮ ಭಾಗದಿಂದ ಆರಂಭವಾಗಿ ಅದರ ಪೂರ್ವ ಭಾಗದಲ್ಲಿ ಕೊನೆಗೊಳ್ಳುತ್ತದೆ. ಪೂರ್ಣ ಸೂರ್ಯಗ್ರಹಣಕ್ಕೆ ಮೊದಲು ಚಂದ್ರನು ಸೂರ್ಯನನ್ನು ಮರೆಮಾಡುತ್ತ ಹೋಗುತ್ತಾನೆ. ಸೂರ್ಯನ ಹೊಳೆಯುವ ಭಾಗ ಕಿರಿದಾಗುತ್ತ ನಡೆದು ಬಳಿಕ ಕುಡುಗೋಲಿನ ಆಕಾರವನ್ನು ಪಡೆಯುತ್ತದೆ. ಬಳಿಕ, ಬಾಗಿದ ಕೊಂಕು ರೇಖೆಯಾಗುತ್ತದೆ. ಆ ಗೆರೆ ತುಂಡು ತುಂಡಾಗಿ ಬೆಳಕಿನ ಮಣಿಗಳಾಗಿ ಕಾಣಿಸುತ್ತದೆ. ಇವೇ 'ಬೆಯ್ಲಿ ಮಣಿಗಳು' (ಚಿತ್ರ ೨ನೋಡಿ.) ಇವು ಚಂದ್ರನ ಮೇಲಿನ ಬೆಟ್ಟ ಕಣಿವೆಗಳಿಂದಾಗಿ ಹೀಗೆ ಕಾಣಿಸುತ್ತವೆ. ಕಣಿವೆಗಳಿಂದ ಸೂಸಿದ ಬೆಳಕು ಉಂಗುರವೊಂದರ ರತ್ನದಂತೆ (Diamond ring) ಕಾಣಿಸಿ ಪೂರ್ಣಗ್ರಹಣ ಉಂಟಾಗುತ್ತದೆ (ಚಿತ್ರ ೩). ಆಗ ಸೂರ್ಯ ಒಂದು ಕೇವಲ ಬೆಳಕಿನ ಉಂಗುರವಾಗಿ–ಮಧ್ಯೆ ಎಲ್ಲ ಕಪ್ಪು–ಒಂದು ಕಡೆ ವಜ್ರದಂತೆ ಪ್ರಕಾಶವಿರುತ್ತದೆ. ಇದು ಸ್ವಲ್ಪ ಮುಂದುವರಿದು ಸೂರ್ಯನ ಮುಕುಟ (Corona) ಕಾಣಿಸುತ್ತದೆ. ಸೂರ್ಯ ಒಂದು ಕಪ್ಪು ತಟ್ಟೆಯಾಗಿ ಸುತ್ತ ಬೆಳಕಿನ ಪ್ರಭಾವಲಯವಿರುತ್ತದೆ. ಆಗ ಸೂರ್ಯನನ್ನು ಬರಿಗಣ್ಣಿಂದ ನೋಡಬಹುದು. ಮತ್ತು ಈ ಕೆಲವು ಕ್ಷಣಗಳು ಅಪೂರ್ವ ನೋಟವನ್ನು ಒದಗಿಸುತ್ತವೆ. ಈ ಕ್ಷಣಕ್ಕಾಗಿ ಖಗೋಲ ವಿಜ್ಞಾನಿಗಳು ಹೊಂಚುಹಾಕಿ ತಮ್ಮ ಅನೇಕ ಪ್ರಯೋಗ, ಪರಿವೀಕ್ಷಣೆಗಳನ್ನು ನಡೆಸುತ್ತಾರೆ. ಸೂರ್ಯಗ್ರಹಣಗಳು ಪ್ರಪಂಚದ ಕೆಲವು ಜಾಗಗಳಲ್ಲಿ ಮಾತ್ರ ಕಾಣಿಸುತ್ತವೆ. (ಚಂದ್ರಗ್ರಹಣ ಭೂಮಿಯಲ್ಲಿ ಅರ್ಧ ಭಾಗದ ಜನರಿಗೂ ಕಾಣಿಸೀತು.) ಸೂರ್ಯಗ್ರಹಣವು ಏಳು ನಿಮಿಷ ನಲವತ್ತು ಸೆಕೆಂಡುಗಳವರೆಗೆ ನಡೆಯಬಹುದು.

ವರ್ಷದಲ್ಲಿ ನಾಲ್ಕು ಸೂರ್ಯಗ್ರಹಣಗಳೂ ನಡೆಯಲು ಸಾಧ್ಯ. ತೀರ ವಿರಳವಾಗಿ ಒಂದೇ ವರ್ಷದಲ್ಲಿ ಒಟ್ಟು ಏಳು ಗ್ರಹಣಗಳು (೪ ಸೂರ್ಯ + ೩ ಚಂದ್ರ) ಆದರೂ ಆಗಬಹುದು. ವರ್ಷದಲ್ಲಿ ಬರಿಯ ಎರಡು ಸೂರ್ಯಗ್ರಹಣಗಳಾಗಿ ಚಂದ್ರಗ್ರಹಣಗಳೇ ಆಗದಿರುವುದೂ ಉಂಟು. ಒಟ್ಟಿನಲ್ಲಿ ಚಂದ್ರಗ್ರಹಣಗಳಿಗಿಂತ ಸೂರ್ಯಗ್ರಹಣಗಳ ಸಂಖ್ಯೆ ಹೆಚ್ಚು.

ಭಾರತದಲ್ಲಿ ೧೯೧೪ರಲ್ಲಿ ಮತ್ತು ೧೯೫೪ರಲ್ಲಿ ನಡೆದ ಪೂರ್ಣಸೂರ್ಯ ಗ್ರಹಣಗಳು ಇದೇ ಶತಮಾನದಲ್ಲಿ ಜರುಗಿದುವು. ಆದರೆ ಅವು ಗಗನವೀಕ್ಷಣೆಗೆ ಪ್ರಶಸ್ತವಾಗಿರಲಿಲ್ಲ. ಆದರೆ ಅದಕ್ಕೆ ಹಿಂದೆ ೧೮೯೮ರ ಜನವರಿ ೨೨ರ ಗ್ರಹಣ ಪ್ರಶಸ್ತವಾಗಿತ್ತು ಮತ್ತು ಅಷ್ಟೇ ಪ್ರಶಸ್ತವಾಗಿತ್ತು ಫೆಬ್ರವರಿ ೧೬, ೧೯೮೦ರ ಗ್ರಹಣ. ಇದನ್ನು "Extraordinary Scientific importance" ಇರುವ ಗ್ರಹಣವೆಂದು ವಿಜ್ಞಾನಿಗಳು ಭಾವಿಸಿದ್ದರು. ಏಕೆಂದರೆ ಸೂರ್ಯಗ್ರಹಣವಾದಾಗಲೇ ಕೆಲವು ಅಮೂಲ್ಯ ವೈಜ್ಞಾನಿಕ ಮಾಹಿತಿ ಖಗೋಳ ಭೌತ ವಿಜ್ಞಾನಕ್ಕೆ ಸಂಬಂಧಿಸಿದಂತೆ ದೊರಕುತ್ತದೆ. ಈ ಶತಮಾನದ ಮುಂದಿನ ಪೂರ್ಣ ಸೂರ್ಯಗ್ರಹಣಗಳು ಭಾರತದಲ್ಲಿ ೧೯೯೫ರ ಅಕ್ಟೋಬರ್ ೨೪ ಮತ್ತು ೧೯೯೯ ಆಗಸ್ಟ್ ೧೧ ಜರುಗಲಿವೆ. ಮಧ್ಯ ಮತ್ತು ಉತ್ತರ ಭಾರತಕ್ಕೆ ಕಾಣಿಸಲಿರುವ ಇವು ನಾಲ್ಕು ವರ್ಷಗಳಲ್ಲಿಯೇ ನಡೆಯಲಿರುವುದು ವಿರಳ ಘಟನೆ.[೧]

ಒಮ್ಮೆ ಕಾಣಿಸಿಕೊಂಡು ಅದೇ ಜಾಗದಲ್ಲಿ ಮತ್ತೆ ಪೂರ್ಣ ಸೂರ್ಯಗ್ರಹಣ ಕಾಣಿಸಿಕೊಳ್ಳಬೇಕಾದರೆ ಸುಮಾರು ೩೬೦ ವರ್ಷ ಬೇಕು. ಒಬ್ಬ ವ್ಯಕ್ತಿ ತನ್ನ ಜೀವಮಾನದಲ್ಲಿ ಒಂದು ಪೂರ್ಣ ಸೂರ್ಯಗ್ರಹಣ ಕಾಣುವುದೂ ಅದೃಷ್ಟವೇ. (ಬೇರೆ ಬೇರೆ ಕಡೆ ಹೋಗಿ ಸೂರ್ಯಗ್ರಹಣ ನೋಡುವ ಮಾತು ಬೇರೆ.) ಆದರೆ ಕ್ರಿ. ಶ. ೧೮೬೮ ಮತ್ತು ಕ್ರಿ. ಶ. ೧೮೭೧ರ ಪೂರ್ಣ ಸೂರ್ಯಗ್ರಹಣ ಪಥಗಳು ಎಷ್ಟು ಹತ್ತಿರವಿದ್ದುವೆಂದರೆ, ಕೆಲವು ಕಿಲೋಮೀಟರ್ ಹೋಗಿದ್ದರೆ ಸಾಕಿತ್ತು, ಮೂರು ವರ್ಷಗಳ ಅವಧಿಯಲ್ಲಿ ಎರಡು ಗ್ರಹಣಗಳನ್ನು ನೋಡಬಹುದಿತ್ತು.[೨] ಇದೊಂದು ವಿರಳ ಘಟನೆ, ಬರಲಿರುವ ೧೯೯೫ ಮತ್ತು ೧೯೯೯ರ ಗ್ರಹಣಗಳಂತೆ.

ಆಸ್ಟ್ರಿಯದ ಖಗೋಳ ವಿಜ್ಞಾನಿ ಅಪೋಲ್ಜರ್ ಕ್ರಿ. ಶ. ೧೮೮೭ರಲ್ಲಿ ಸಿದ್ಧಪಡಿಸಿದ ಕೃತಿಯೊಂದರಲ್ಲಿ ಕ್ರಿ. ಪೂ. ೧೨೦೭– ಕ್ರಿ. ಶ. ೨೧೬೧ರ ನಡುವೆ ಸಂಭವಿಸುವ ಸುಮಾರು ೮೦೦೦ ಸೂರ್ಯಗ್ರಹಣಗಳು, ೫೨೦೦ ಚಂದ್ರ ಗ್ರಹಣಗಳನ್ನು ವಿವರಿಸಿದ್ದಾನೆ.[೩] ವರ್ಷಕ್ಕೆ ಸರಾಸರಿ ಅರವತ್ತಾರು ಪೂರ್ಣ

ಸೂರ್ಯಗ್ರಹಣಗಳಾಗುತ್ತವೆ. ಅವುಗಳಲ್ಲಿ ಬಹುಪಾಲು ಜನವಿಹೀನ ಅರ್ಕ್‌ಟಿಕ್ ಪ್ರದೇಶಗಳಲ್ಲಿ ಮತ್ತು ಸಮುದ್ರಗಳ ಮೇಲೆ ನಡೆಯುತ್ತವೆ.

ಈಗ ಈ ಮಾಹಿತಿ ವಿಜ್ಞಾನ ಬಲ್ಲ ಎಲ್ಲ ವಿದ್ಯಾವಂತರಿಗೂ ಒಂದಲ್ಲ ಒಂದು ರೀತಿಯಲ್ಲಿ ತಿಳಿದಿರುವುದೇ ಆಗಿದೆಯಾದರೂ, ಗ್ರಹಣದ ಹಿನ್ನೆಲೆ ಈ ಪುಸ್ತಿಕೆಗೆ ಅಗತ್ಯವೆಂದು ತಿಳಿದು ಇಲ್ಲಿ ಸಂಗ್ರಹಿಸಿಕೊಟ್ಟಿದೆ.[೪] ಇಲ್ಲಿಯ ಉದ್ದೇಶ ಗ್ರಹಣದ ವೈಜ್ಞಾನಿಕ ಅಧ್ಯಯನ ಅಲ್ಲ, ಸಾಮಾಜಿಕ–ಸಾಂಸ್ಕೃತಿಕ ಸಮೀಕ್ಷೆಯೆಂಬುದನ್ನು ಆಗಲೇ ಸ್ಪಷ್ಟಪಡಿಸಿದೆ.

## ಅಡಿಟಿಪ್ಪಣಿಗಳು

೧. Total Solar Eclipse (16th Feb. 1980), Issued by "The Indian Meteorological Department, Bangalore, P. 1

೨. M. P. Rao : 'Total Eclipse of the Sun' (Deccan Herald, 10-2-80)

೩. Alexander Cunningham ಅವರು Book of Indian Eras ಎಂಬ ಕೃತಿಯಲಿ (Pub : Oriental Publishers, Delhi, 1971) ಕ್ರಿ. ಶ. ೧ ರಿಂದ ಕ್ರಿ. ಶ. ೨೦೦೦ – ಈ ಅವಧಿಯಲ್ಲಿ ಭಾರತದಲ್ಲಿ ಘಟಿಸಿದ ಎಲ್ಲ ಸೂರ್ಯ ಚಂದ್ರ ಗ್ರಹಣಗಳನ್ನೂ ಕೊಟ್ಟಿದ್ದಾರೆ.

೪. The World Book Encyclopaedia(1976); ಶಿವರಾಮ ಕಾರಂತ: ಈ ಜಗತ್ತು (ಐಬಿಎಚ್ ಪ್ರಕಾಶ, ೧೯೭೯) ; ಜಿ. ಟಿ. ನಾರಾಯಣರಾವ್ ; ಗ್ರಹಣಗಳು (ಐಬಿಎಚ್ ಪ್ರಕಾಶನ, ೧೯೮೦)

# ಗ್ರಹಣಗಳ ಬಗ್ಗೆ: ಪುರಾಣಗಳು, ನಂಬಿಕೆಗಳು ಮತ್ತು ರಿಚುಯಲ್ಲುಗಳು

## ಗ್ರಹಣ ಮತ್ತು ಖಗೋಳ ವಿಜ್ಞಾನದ ಉಗಮ

ಅನೇಕ ಸಹಸ್ರ ವರ್ಷಗಳ ಹಿಂದೆ ಗುಹಾವಾಸಿಗಳಾದ ಅನಾಗರಿಕ ಜನರು ಗ್ರಹಣಗಳ ಚಿತ್ರಗಳನ್ನು ಗುಹೆಗಳ ಗೋಡೆ ಮೇಲೆ ಒರಟೊರಟಾಗಿ ಬಿಡಿಸಿರುವುದನ್ನು ಪ್ರಾಕ್ತನ ಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ. ಆದರೆ ಆಕಾಶದತ್ತ ಕುತೂಹಲದಿಂದ ಕಣ್ಣು ತಿರುಗಿಸಿ, ಗ್ರಹಣಗಳ ಚಲನೆಯನ್ನು ವೀಕ್ಷಿಸಿದ ಮೊದಲಿಗರಲ್ಲಿ ಈಜಿಪ್ಟಿಯನ್ನರು (ಕ್ರಿ. ಪೂ. ೩೫೦೦) ಮತ್ತು ಮೆಸೊಪೊಟೇಮಿಯನ್ನರು (ಕ್ರಿ. ಪೂ. ೨೭೦೦) ಅಗ್ರಗಣ್ಯರು. ಸೂರ್ಯ ಪಂಚಾಂಗವನ್ನು ನಿರ್ಮಿಸಿದವರಲ್ಲಿ ಈಜಿಪ್ಟಿಯನ್ನರು ಮೊದಲಿಗರು, ಮತ್ತು ಇವರದೇ ಮೊತ್ತಮೊದಲ ಕರಾರುವಾಕ್ಕಾದ ಸೂರ್ಯ ಪಂಚಾಂಗ. ಮೆಸೊಪೊಟೇಮಿಯನ್ನರು ಇತರ ಆಕಾಶ ಕಾಯಗಳನ್ನು ಕುರಿತು ಹೆಚ್ಚು ಮಾಹಿತಿ ಸಂಗ್ರಹಿಸಿದರು. ಚಂದ್ರನ ಕ್ಷೀಣ ವೃದ್ಧಿ, ಗ್ರಹಣಗಳು, ಗ್ರಹಣಗಳ ಚಲನೆ ಇವನ್ನು ಕುರಿತಂತೆ ಮಾಹಿತಿ ಸಂಗ್ರಹಿಸಿ, ಹೆಚ್ಚು ಕಡಿಮೆ ಸರಿಯಾಗಿಯೇ ಗ್ರಹಣಗಳು ಆಗುವುದನ್ನು ಮೊದಲೇ ನಿರ್ಧರಿಸಬಲ್ಲವರಾಗಿದ್ದರು. ಅವರ ಆಸಕ್ತಿಗಳು ವೈಜ್ಞಾನಿಕ ಆಸಕ್ತಿಗಳಲ್ಲ, ಅವು ಹೆಚ್ಚು 'ಪುರೋಹಿತಸಂಬಂಧಿ ಮತ್ತು ಮಾಂತ್ರಿಕ' ವಾಗಿದ್ದುವು. ಅವರಿಗೆ ಗ್ರಹಣ ಬಹುಪಾಲು ಅನಿಷ್ಟದಾಯಕವಾಗಿದ್ದು, ನಿರೀಕ್ಷಿಸಿದ ಗ್ರಹಣವೊಂದು ನಡೆಯದಿದ್ದರೆ ಕಂಟಕ ಪರಿಹಾರವಾಯಿತೆಂದು ಸಂತೋಷಪಡುತ್ತಿದ್ದರು. ಈ ಮತೀಯಾಸಕ್ತಿಯೇ ಬ್ಯಾಬಿಲೋನಿಯನ್ನರನ್ನು (ಚಿತ್ರ ೪) ಹೆಚ್ಚಿನ ಶೋಧನೆಗಳಿಗೆ ತೊಡಗಿಸಿತು ಎಂಬುದು ಸ್ವಾರಸ್ಯವಾಗಿದೆ.

ಏಕೆಂದರೆ, ಬ್ಯಾಬಿಲೋನಿಯನ್ನರು (ಕ್ರಿ. ಪೂ. ೨೦೦೦) ಸೂರ್ಯ, ಚಂದ್ರರಲ್ಲದೆ ಕೇವಲ ಕಣ್ಣಿಗೆ ಕಾಣುವ ಸ್ಪಷ್ಟ ಐದು ಗ್ರಹಗಳ ಚಲನೆಗಳನ್ನೂ ಗುರುತಿಸಿ, ಈ ಎಲ್ಲ ಆಕಾಶಕಾಯಗಳು ಮನುಷ್ಯರ ಬದುಕನ್ನು ನಿಯಂತ್ರಿಸುತ್ತವೆ ಎಂಬುದನ್ನು ಕಂಡುಕೊಂಡರು. ಗ್ರಹಗಳು ದೈವಗಳೆಂದು ಅವರು ಭಾವಿಸಿದರು. ಇದು ಜ್ಯೋತಿಷ್ಯದ ಮೂಲವಾಗಿದೆ ಮತ್ತು ಆಧುನಿಕ ಖಗೋಳವಿಜ್ಞಾನದ ಬೇರುಗಳೂ ಈ ಶೋಧನೆಗಳಲ್ಲಿ ಮತ್ತು ಇಂತಹ ನಂಬಿಕೆಗಳಲ್ಲಿ ಹುದುಗಿವೆಯೆಂಬುದನ್ನು ಮರೆಯಬಾರದು.[೧] ಏಕೆಂದರೆ, ಈ ಎಲ್ಲ ಸಾಂಪ್ರದಾಯಕ ಜ್ಞಾನದ ಆಧಾರದ ಮೇಲೆ ಗ್ರೀಕ್ ಖಗೋಳ ವಿಜ್ಞಾನ ನಿಂತಿದೆ ಎಂಬುದು ಈಗ ಸ್ಪಷ್ಟವಾಗಿದೆ.[೨]

ಚೀನಾದ ಆಸ್ಥಾನ ಜ್ಯೋತಿಷಿಗಳಾಗಿದ್ದ ಹಿಸಿ ಮತ್ತು ರೂ ಎಂಬ ಇಬ್ಬರು ತಮ್ಮ ಚಕ್ರವರ್ತಿಗೆ ಕ್ರಿ. ಪೂ. ೨೧೩೭ ಅಕ್ಟೋಬರ್ ೨೨ರ ಸೂರ್ಯ ಗ್ರಹಣವನ್ನು ವರದಿಮಾಡಬೇಕಾಗಿತ್ತು. ಇಬ್ಬರೂ ಮದ್ಯಪಾನಮತ್ತರಾಗಿ ಮರೆತದ್ದರಿಂದ ಜನ ಸಕಾಲಕ್ಕೆ ಬಾಣಬಿಟ್ಟು, ಭೇರಿ ಶಬ್ದಮಾಡಿ ಡ್ರೇಗನ್ ಸರ್ಪವನ್ನು ಓಡಿಸಲಾಗಲಿಲ್ಲ. ಇದರಿಂದ ಕುಪಿತನಾದ ಚಕ್ರವರ್ತಿ ಅವರ ಶಿರಚ್ಛೇದನ ಮಾಡಿಸಿದನೆಂದು ಚೀನದ ಇತಿಹಾಸಕಾರ ಹುಚಿಂಗ್ ಬರೆದಿಟ್ಟಿದ್ದಾನೆ. ಇದು ವಿಶ್ವದ ಸೂರ್ಯಗ್ರಹಣದ ಪ್ರಪ್ರಾಚೀನ ದಾಖಲೆ.

## ಭಾರತೀಯ ನಂಬಿಕೆಗಳು

ಕ್ರಿಸ್ತಪೂರ್ವ ಸಾವಿರಕ್ಕಿಂತಲೂ ಹಿಂದಿನದಾದ ಋಗ್ವೇದದಲ್ಲಿ ಪೂರ್ಣ ಸೂರ್ಯಗ್ರಹಣದ ಉಲ್ಲೇಖವಿದೆ. (ಋಗ್ವೇದ V. ೪೦.೫,೬,೮) – "ಓ ಸೂರ್ಯನೇ, ಅಸುರನ ಮಗನಾದ ಸ್ವರ್ಭಾನುವು ನಿನ್ನನ್ನು ಕತ್ತಲೆಯಿಂದ ಘಾತಿಸಿದಾಗ, ಓ ಇಂದ್ರನೇ, ಸ್ವರ್ಗದ ಕೆಳಗೆ ಇದ್ದ ಸ್ವರ್ಭಾನುವಿನ ವಂಚನೆಗಳನ್ನು ನೀನು ಹೊಡೆದುರುಳಿಸಿದಾಗ, ಅತ್ರಿಯು ಅತ್ಯುನ್ನತ (ನಾಲ್ಕನೆಯ) ಮಂತ್ರದ ಪಠನದಿಂದ ಕತ್ತಲೆಯಲ್ಲಿ ಮುಚ್ಚಿ ಹೋಗಿದ್ದ ಸೂರ್ಯನನ್ನು ಬಿಡುಗಡೆ ಮಾಡಿದನು."

'ಶಾಂಖಾಯನ ಬ್ರಾಹ್ಮಣ'ದಲ್ಲಿ "ಅತ್ರಿಯರು ವಿಷುವತ್ ಕಾಲಕ್ಕೆ ಮೂರು ದಿನ ಮುಂಚೆ ಸಪ್ತದಶಸ್ತೋಮವನ್ನು ಮಾಡಿ ಕತ್ತಲೆಯಿಂದ ಸೂರ್ಯನನ್ನು ಇರಿದಿದ್ದ ಸ್ವರ್ಭಾನುವನ್ನು ಹೊಡೆದುರುಳಿಸಿದರು" ಎಂದಿದೆ. ಇದು ಸೂರ್ಯಗ್ರಹಣವನ್ನು ಸೂಚಿಸುತ್ತದೆ ಎಂದು ಯಾರು ಬೇಕಾದರೂ ಅರ್ಥಮಾಡಿಕೊಳ್ಳಬಹುದು.[೩] ವೈದಿಕ ಸಾಹಿತ್ಯದ ಸ್ವರ್ಭಾನುವನ್ನು ಮುಂದೆ

ರಾಹುವಿನ ಜೊತೆ ಸಮೀಕರಿಸಲಾಯಿತು ಮತ್ತು ಸೂರ್ಯನನ್ನು ಸ್ವರ್ಭಾನು ಸೂದನ (ಸ್ವರ್ಭಾನು ಎಂಬ ರಾಕ್ಷಸನನ್ನು ಕೊಂದವನು) ಎಂದು ಕರೆಯಲಾಗಿದೆ. ಮುಂದಿನ ಸಾಹಿತ್ಯದಲ್ಲಿ ಸೂರ್ಯ, ಚಂದ್ರ ಗ್ರಹಣಗಳು ರಾಹು, ಕೇತು ಎಂಬುವರಿಂದ ಉಂಟಾಗುತ್ತವೆ ಎಂಬ ನಂಬಿಕೆಯೂ ಬೆಳೆದು ಬಂದಿದೆ, ಮತ್ತು ಆ ನಂಬಿಕೆ ಇಂದಿಗೂ ಭಾರತೀಯ ಸಮಾಜದಲ್ಲಿ ಪ್ರಬಲವಾಗಿಯೇ ಇದೆ.

"ಅಮೃತಮಂಥನಾನಂತರ ದೇವದಾನವರು ಅಮೃತಪ್ರಾಶನಕ್ಕಾಗಿ ಕುಳಿತಿದ್ದ ಸಮಯದಲ್ಲಿ ರಾಹುವು ದೇವತೆಗಳೊಂದಿಗೆ ಕುಳಿತು ಅಮೃತಪ್ರಾಶನಮಾಡುತ್ತಿದ್ದ. ಇದನ್ನು ಕಂಡು ಸೂರ್ಯಚಂದ್ರರು ವಿಷ್ಣುವಿಗೆ ಹೇಳಲಾಗಿ ವಿಷ್ಣು ಚಕ್ರಾಯುಧದಿಂದ ಅವನ ಕೊರಳನ್ನು ಕೊಯ್ದನು. ಆದರೆ ಅಮೃತವನ್ನು ಕುಡಿದಿದ್ದನಾಗಿ ರಾಹುವಿನ ರುಂಡ ಮುಂಡಗಳೆರಡೂ ರಾಹು ಕೇತುಗಳೆಂಬ ಹೆಸರಿನಿಂದ ಸಜೀವಗಳಾದವು. ಸೂರ್ಯ ಚಂದ್ರರು ತನ್ನ ಮೇಲೆ ದೂರು ಹೇಳಿದರೆಂಬ ದ್ವೇಷದಿಂದ ರಾಹು ಆಗಾಗ್ಗೆ ಸೂರ್ಯಚಂದ್ರರನ್ನು ಪೀಡಿಸುತ್ತಾನೆ."[೪]

"ರಾಹು-ಒಬ್ಬ ರಾಕ್ಷಸ; ಸಿಂಹಿಕೆಯ ಮಗ. ನವಗ್ರಹಗಳಲ್ಲಿ ಎಂಟನೆಯವ. ರಾಹು ಕೇತುಗಳು ಮೇರುಪರ್ವತವನ್ನು ಅಪ್ರದಕ್ಷಿಣವಾಗಿ ಸುತ್ತುತ್ತಾರೆ".[೫] ಸೂರ್ಯ ಮೇರುವನ್ನು ಪ್ರದಕ್ಷಿಣಮಾಡಿದರೆ, ರಾಹು ಕೇತುಗಳು ಅದೇ ಪರ್ವತವನ್ನು ವಿರುದ್ಧ ದಿಕ್ಕಿನಲ್ಲಿ ಸುತ್ತುತ್ತಾರೆ ಎಂಬ ಕಲ್ಪನೆ ಸಹಜವಾದುದು.

ಮೋನಿಯರ್ ವಿಲಿಯಮ್ಸ್ ತಮ್ಮ 'A Sanskrit English Dictionary' ಕೋಶದಲ್ಲಿ (ಪು. ೮೭೯) ರಾಹುವಿನ ಕತೆಯನ್ನು ಹೀಗೆ ಕೊಟ್ಟಿದ್ದಾರೆ.

"ರಾಹು ('ಹಿಡಿಯುವವನು', from root ರಭ್) :

ಸೂರ್ಯಚಂದ್ರರನ್ನು ಹಿಡಿದು ಗ್ರಹಣ ಉಂಟುಮಾಡುವ ದೈತ್ಯ. ವಿಪ್ರಚಿತ್ತಿ ಸಿಂಹಿಕೆಯರ ಮಗ. ಅವನಿಗೆ ಹಾವಿನ ಬಾಲ ಉಂಟು. ಸಮುದ್ರ ಮಂಥನವಾದಾಗ, ಅವನು ವೇಷತೊಟ್ಟು ದೇವತೆಗಳ ಮಧ್ಯೆ ಕುಳಿತು ಅಮೃತ ಕುಡಿದ; ಸೂರ್ಯ ಚಂದ್ರರು ಈ ಮೋಸವನ್ನು ಗಮನಕ್ಕೆ ತಂದಾಗ ವಿಷ್ಣು ಅವನ ತಲೆಯನ್ನು ಕತ್ತರಿಸಿಬಿಟ್ಟ, ಅದು ಹೋಗಿ ಆಕಾಶಕ್ಕೆ ಸೇರಿಕೊಂಡಿತು. ಅಮೃತ ಕುಡಿದಿದ್ದರಿಂದ ಪ್ರಾಣ ಹೋಗಲಿಲ್ಲ. ಪ್ರತೀಕಾರ ಬುದ್ಧಿಯಿಂದ ರಾಹು ಆಗಾಗ್ಗೆ ಸೂರ್ಯ ಚಂದ್ರರನ್ನು ನುಂಗುತ್ತಾನೆ. ಆ ದೈತ್ಯನ ಬಾಲ 'ಕೇತು'ವಾಗಿ ಅನೇಕ ಉಲ್ಕೆ, ಧೂಮಕೇತುಗಳಿಗೆ ಕಾರಣವಾಗಿದೆ."

ರಾಹುವು ಹಾವಿನ ಆಕಾರದಲ್ಲಿರುತ್ತಾನೆಂದೂ ಸೂರ್ಯನನ್ನು ನುಂಗುತ್ತಾನೆಂದೂ ಕಲ್ಪನೆಯಿದೆ. ರನ್ನನ (೧೦ನೇ ಶತಮಾನ) 'ಗದಾಯುದ್ಧ' ಅದನ್ನು ಸೂಚಿಸುತ್ತದೆ:

ಕಂಡೆಂ ಗ್ರಹಣಮನದನಾ
ಖಂಡಲ ದಿಙ್ಮುಖದೆ ಬಂದು ಸರ್ವಗ್ರಾಸಂ
ಗೊಂಡತ್ತಪರಾದಿತ್ಯನ
ಮಂಡಲಮಂ ಬಾಹುರಾಹು ಸತ್ಯಾಶ್ರಯನಾ॥ (೧.೨೬)

ಸತ್ಯಾಶ್ರಯ ಪೂರ್ವದಿಕ್ಕಿನಿಂದ ನುಗ್ಗಿ ಅಪರಾದಿತ್ಯನೆಂಬ ದೊರೆಯನ್ನು ಹಿಡಿದ ಐತಿಹಾಸಿಕ ಸಂಗತಿಯನ್ನು ಹೇಳಲು ರಾಹುವಿನ ಪ್ರತಿಮೆಯನ್ನು ಕವಿ ಬಳಸಿದ್ದಾನೆ. "ಬಾಹುರಾಹು" ಎಂಬಲ್ಲಿ ರಾಹು ಒಂದು ಸರ್ಪ ಎಂಬುದೂ, "ಸರ್ವಗ್ರಾಸ" ಎಂಬುದರಿಂದ ಖಗ್ರಾಸ ಅಥವಾ ಪೂರ್ಣಗ್ರಹಣ ಎಂಬುದೂ ಸೂಚಿತವಾಗಿದೆ. (ಅಪರಾದಿತ್ಯ ಎಂದರೆ ಸಂಜೆಯ ಸೂರ್ಯ ಎಂದೂ ಆಗುತ್ತದೆ. ಸೂರ್ಯ ಗ್ರಹಣಗಳು ನಡೆಯುವುದು ಯಾವಾಗಲು ಮಧ್ಯಾಹ್ನದ ಬಳಿಕವೇ ಎಂಬುದನ್ನು ಗಮನಿಸಿದರೆ, ರನ್ನನ ಪ್ರತಿಮೆ ಎಷ್ಟು ಸಾರ್ಥಕವೆಂಬುದು ಇನ್ನೂ ಸ್ಪಷ್ಟವಾಗುತ್ತದೆ.)

ಬಸವಣ್ಣನವರ ಎರಡು ವಚನಗಳಲ್ಲಿ ಗ್ರಹಣ ಉಲ್ಲೇಖವಾಗಿದೆ:

ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ
ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ
ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು
ಇನ್ನೆಂದಿಗೆ ಮೋಕ್ಷವಹುದೊ ಕೂಡಲಸಂಗಮದೇವಾ ॥

ಚಂದ್ರೋದಯಕ್ಕಂಬುಧಿ ಹೆಚ್ಚುವುದಯ್ಯಾ
ಚಂದ್ರ ಕುಂದೆ ಕುಂದುವುದಯ್ಯ
ಚಂದ್ರಂಗೆ ರಾಹು ಅಡ್ಡ ಬಂದಲ್ಲಿ ಅಂಬುಧಿ ಬೊಬ್ಬಿಟ್ಟಿತೆ ಆಯ್ಯಾ
ಅಂಬುಧಿಯ ಮುನಿ ಆಪೋಶನಗೊಂಬಲ್ಲಿ
ಆ ಚಂದ್ರಮನಡ್ಡ ಬಂದನೆ ಹೇಳಾ
ಆರಿಗೆ ಆರಿಲ್ಲ ಕೆಟ್ಟವಂಗೆ ಕೆಳೆಯಿಲ್ಲ
ಜಗದ ನೆಂಟ ನೀನೆ ಅಯ್ಯಾ ಕೂಡಲಸಂಗಮದೇವಾ ॥

"ಸರ್ವಗ್ರಾಸ" ಎಂಬುದು ಪೂರ್ಣಗ್ರಹಣವನ್ನು ಹೇಳುತ್ತದೆ,

ಹಿಂದಿನಂತೆಯೇ[೧೩]. ಸೂರ್ಯಚಂದ್ರರನ್ನು ನುಂಗುವ ರಾಕ್ಷಸನೊಬ್ಬನೇ, ಅವನು ರಾಹು. ಮೇಲಿನ ಎರಡು ವಚನಗಳಿಗೆ ಬರೆದ ಈಚಿನ ಟೀಕೆಯೊಂದರಲ್ಲಿ ಮುರಾಸುರನೆಂಬ ರಾಕ್ಷಸನ ತಲೆಗಳೇ ರಾಹು ಕೇತುಗಳು ಎಂಬ ಕತೆ ದಾಖಲಾಗಿದೆ.

"ಪೌರ್ಣಮೆಯ ಚಂದ್ರನಿಗೆ ಷೋಡಶ ಕಲೆಗಳು ದೊರೆಕೊಂಡರೇನಾಯ್ತು? ಅದಕ್ಕೊಂದು ಕಂಟಕವುಂಟು. ಮುರಾಸುರನೆಂಬ ರಕ್ಕಸನ ತಲೆಗಳೇ ರಾಹುಕೇತುಗಳಾಗಿ ಬಂದು ಪೀಡೀಸುವುವು."[೬]

ರಾಹು ಒಂದು ಉರಗ ಎಂದೂ ಅಲ್ಲಿ ಹೇಳಿದೆ. ಮುರ ನರಕಾಸುರನ ಪರಿವಾರದ ಒಬ್ಬ ರಾಕ್ಷಸ ಮತ್ತು ರಾಹುವಿನಂತೆ ಶ್ರೀಕೃಷ್ಣನಿಂದ (ವಿಷ್ಣುವಿನಿಂದ) ಮಡಿದ ಎಂಬ ಕತೆ ಭಾಗವತಪುರಾಣ ಇತ್ಯಾದಿ ಕಡೆಗಳಲ್ಲಿ ದೊರಕುತ್ತದೆ. ಟೀಕಾಕಾರ ರಾಹುವನ್ನು ಮುರಾಸುರ ಎಂದು ಕರೆದಿರಲು ಕಾರಣ ಅದೇ ಎಂದು ತೋರುತ್ತದೆ.

ಪ್ರಾಚೀನ ಭಾರತದ ಖಗೋಳ ವಿಜ್ಞಾನಿಗಳು ಈ ರಾಹು ಕತೆಯನ್ನು ನಂಬಿರಲಿಲ್ಲ. ಅವರಿಗೆ ಗ್ರಹಣದ ನಿಜವಾದ ಸ್ವರೂಪ ತಿಳಿದಿತ್ತು ಮತ್ತು ಅದೊಂದು ಪ್ರಾಕೃತಿಕ ಘಟನೆ ಎಂಬುದನ್ನು ಅವರು ಅರಿತಿದ್ದರು. ಕ್ರಿ. ಶ. ೪೯೯ರಲ್ಲಿ 'ಆರ್ಯಭಟೀಯ'ವನ್ನು ರಚಿಸಿದ ಆರ್ಯಭಟ "ಛಾದಯತಿ ಶಶೀ ಸೂರ್ಯಂ ಶಶಿನಂ ಮಹತೀ ಚ ಭೂಛಾಯಾ" (ಶಶಿ ಸೂರ್ಯನನ್ನು, ಭೂಛಾಯೆ ಶಶಿಯನ್ನು ಆವರಿಸುತ್ತದೆ)[೭] ಎನ್ನುವ ಮಾತಿನಲ್ಲಿ ಗ್ರಹಣವನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಂಡಿದ್ದನೆಂದು ತಿಳಿಯುತ್ತದೆ. ಕ್ರಿಸ್ತಶಕ ಆರನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ವರಾಹಮಿಹಿರ ತನ್ನ 'ಬೃಹತ್‌ಸಂಹಿತಾ'ದಲ್ಲಿ ಹೀಗೆ ಹೇಳುತ್ತಾನೆ:

"ಚಂದ್ರಗ್ರಹಣದಲ್ಲಿ ಚಂದ್ರ ಭೂಮಿಯ ನೆರಳನ್ನು ಪ್ರವೇಶಿಸುತ್ತಾನೆ; ಸೂರ್ಯಗ್ರಹಣದಲ್ಲಿ ಚಂದ್ರ ಸೂರ್ಯನನ್ನು ಪ್ರವೇಶಿಸುತ್ತಾನೆ (ಅರ್ಥಾತ್ ಸೂರ್ಯ ಮತ್ತು ಭೂಮಿಯರ ಮಧ್ಯ ಬರುತ್ತಾನೆ.) ಇದನ್ನು ಹಿಂದಿನ ಆಚಾರ್ಯರು ಕಂಡುಕೊಂಡಿದ್ದರು, (ಗ್ರಹಣಕ್ಕೆ) ರಾಹು ಕಾರಣ ಅಲ್ಲ."[೮]

ವರಾಹಮಿಹಿರ ತನ್ನ ಕಾಲದ ಪುರಾಣವನ್ನೂ ಖಗೋಳ ವಿಜ್ಞಾನವನ್ನೂ ಸಮೀಕರಿಸುತ್ತ, "ಬ್ರಹ್ಮನು ರಾಕ್ಷಸನೊಬ್ಬನಿಗೆ ಒಂದು ವರವನ್ನು ಕೊಟ್ಟು ಗ್ರಹಣದ ದಿನ ನಿನಗೆ ಬಲಿ, ದಾನಗಳು ದೊರಕುತ್ತವೆ ಎಂದು ಹೇಳಿದ. ಆ ರಾಕ್ಷಸನೇ ರಾಹು."[೯] ವರಾಹಮಿಹಿರನಿಗೂ ತನ್ನ ಕಾಲದ ಪೌರಾಣಿಕ ಕತೆಯಿಂದ ಬಿಡುಗಡೆ

ಹೊಂದಲಾಗಲಿಲ್ಲವೆಂಬುದು ಗಮನಾರ್ಹ. ಭಾರತದಲ್ಲಂತೂ ಐತಿಹಾಸಿಕ ಸತ್ಯವಾಗಲಿ, ವೈಜ್ಞಾನಿಕ ಸತ್ಯವಾಗಲಿ ಪುರಾಣದ ಸ್ಪರ್ಶವಿಲ್ಲದೆ ಬದುಕಲಾರವು ಮತ್ತು ಪ್ರಿಯವೂ ಆಗವು ಎಂಬುದನ್ನು ನಾನು ಅನ್ಯತ್ರ ತೋರಿಸಿದ್ದೇನೆ.[೧೮]

ಒಂದು ಪ್ರಾಕೃತಿಕ ಘಟನೆ ಏನು ಶುಭ ಅಥವಾ ಅಶುಭವನ್ನು ನುಡಿಯುತ್ತದೆ ಎಂಬುದನ್ನು ಆಯಾ ಸಂಸ್ಕೃತಿಯೇ ನಿರ್ಧರಿಸುತ್ತದೆ. ಸಂಸ್ಕೃತಿಗಳನ್ನು ತೌಲನಿಕವಾಗಿ ಅಧ್ಯಯನಮಾಡಿದಾಗ ಎಷ್ಟೋ ವೇಳೆ ಸಮಾನವಾದ ಒಂದೇ ಬಗೆಯ ನಂಬಿಕೆ, ಆಚರಣೆಗಳು ಕಂಡುಬಂದಲ್ಲಿ ಆ ನಂಬಿಕೆಗಳು ಆಯಾ ಸಂಸ್ಕೃತಿಯಲ್ಲಿ ಸ್ವತಂತ್ರವಾಗಿ ಮೂಡಿಬರಬಹುದು, ಅಥವಾ ಸಾಂಸ್ಕೃತಿಕ ಪ್ರಸರಣ (Cultural diffusion) ಕಾರಣವಾಗಿ ಒಂದು ಸಂಸ್ಕೃತಿಯಿಂದ ಇನ್ನೊಂದು ಸಂಸ್ಕೃತಿಗೆ ಪ್ರವೇಶಮಾಡಿರಬಹುದೆಂಬುದು ತಿಳಿಯುತ್ತದೆ. ಗ್ರಹಣ ಭೂಕಂಪಗಳು ಎಲ್ಲ ದೇಶಗಳಲ್ಲಿ ಬರಲಿರುವ ವಿನಾಶವನ್ನು ಸೂಚಿಸುತ್ತವೆ; ಭೂಕಂಪವಾಗಿ ಮನೆಮಠಗಳು ನಾಶವಾಗುತ್ತವೆ; ಗ್ರಹಣಗಳಿಂದ ಲೋಕಕ್ಕೆ ಕತ್ತಲು ಕವಿಯುತ್ತದೆ; ಆದ್ದರಿಂದ ಅವು ಭವಿಷ್ಯದ ಅನಿಷ್ಟವನ್ನು ಸಾರುವ ಹರಿಕಾರರು–ಇದು ವಿಶ್ವವ್ಯಾಪಿ ನಂಬಿಕೆ. ಕಾಣದ ಲೋಕ ಎಷ್ಟೋ ಗೂಢಶಕ್ತಿಗಳಿಂದ ತುಂಬಿರುತ್ತದೆ, ಮತ್ತು ಕಾಣುವ ಶಕ್ತಿಗಳಿಗಿಂತ ಕಾಣದ ಶಕ್ತಿಗಳಿಗೆ ಜನ ಹೆದರುತ್ತಾರೆ. ಗ್ರಹಣ, ಭೂಕಂಪಗಳು ಆ ಕಾಣದ ಶಕ್ತಿಗಳು ಎಸಗಲಿರುವ ವಿನಾಶವನ್ನು ಹೇಳುತ್ತವೆ. ಇದಕ್ಕೆ 'ಬಸವಪುರಾಣ'ದಿಂದ (೬೨. ೧೧–೧೨) ಒಂದು ಉದಾಹರಣೆಯನ್ನು ಕೊಡಬಹುದು. ಲಿಂಗವಂತರ ಕಣ್ಣು ಕೀಳಿಸಿದ್ದರಿಂದ ದುಃಖಿತರಾಗಿ ಬಸವ ಮತ್ತು ಅವರ ಅನುಯಾಯಿಗಳು ಕಲ್ಯಾಣವನ್ನು ಬಿಟ್ಟು ತೆರಳಿದ ಬಳಿಕ ಬಿಜ್ಜಳನ ವಿನಾಶ ಸೂಚಕವಾಗಿ ಆ ಮಹಾನಗರಿಯಲ್ಲಿ ಕೆಲವು ಉತ್ಪಾತಗಳಾಗುತ್ತವೆ.

ಧರಣಿ ಕಂಪಿತವಾಯ್ತು ಕಾಗೆಗ<br>
ಳಿರುಳುಡುಗದರಚಿದುವು ಹಗಲುಂ<br>
ನರಿಗಳೂಳಿದುವುಳ್ಳು (ಳ್ಕಿ?) ಬಿದ್ದವು ಕಲ್ಲಮಳೆ ಮೇಲೆ<br>
ಸುರಿಯಿತಾದಿತ್ಯೇಂದುಗಳನಾ<br>
ವರಿಸಿತಾ ಪರಿವೇಷವತಿ ನಿ<br>
ರ್ಭರದೊಳನಿಲಂ ಬೀಸಿದನು ಕೆಂಧೂಳಿ ನೆಗೆಯಿತ್ತು॥<br>
ಹಗಲು ಮಸುಕಿತು ಮಂಜುಗತ್ತಲೆ<br>
ಗಗನದೊಳು ಭೀಕರ ಕೃತಾಂತನು

ವಿಗಡ ರೂಪಂ ತೋರಿದನು ಪಟ್ಟಣ ಸಮೀಪದಲಿ
ಜಗತಿಯೊಡೆಯನು ಶಿರಸವಿಲ್ಲದ
ಬಿಗಿದ ಹೆಣನಂ ಕಂಡನುದಯಾ
ದ್ರಿಗೆ ತರಣಿ ಬಹ ಸಮಯದಲಿ ಪ್ರತಿಯಿನನುದಯಿಸಿದನು॥

ಭೂಮಿ ನಡುಗಿತು; ರಾತ್ರಿ ಕಾಗೆಗಳು ಅರಚಿದವು; ಹಗಲು ನರಿಗಳು ಊಳಿದವು; ಸೂರ್ಯ ಚಂದ್ರರು ಗೂಡುಗಟ್ಟಿದುವು; ಹಗಲಿನಲ್ಲಿ ಮಂಜುಗತ್ತಲೆ ಕಾಣಿಸಿತು; ಬೆಳಿಗ್ಗೆ ಪ್ರತಿಸೂರ್ಯ ಉದಯಿಸಿದ–ಇವೆಲ್ಲ ಪ್ರಾಕೃತಿಕ ವೈಪರೀತ್ಯಗಳು; ನಿತ್ಯ ಘಟನೆಗಳಲ್ಲ.[೧೧] ಆ ಕಾರಣ ಅವು ಉತ್ಪಾತಗಳೇ. ಚಾವುಂಡರಾಯನ 'ಲೋಕೋಪಕಾರ'ದಲ್ಲಿ[೧೨] ಹೀಗೆ ಹೇಳಿದೆ– **"ಪಗಲೊಳ್ ಕಳ್ತಲೆ ಪೊಣ್ಮೆ.....ತಾರೆ ದಿನದೊಳ್ ತೋರೆ.....ನಾಡೆ ಪುಟ್ಟುಗುಂ ಅನ್ಯಾಯಮುಮಿಳ್ದಿಯುಂ ಕಲಹಮುಂ ದುರ್ಭಿಕ್ಷಮುಂ ಕುತ್ತಮುಂ."** ಎಂದರೆ ಹಗಲಲ್ಲಿ (ಪೂರ್ಣ ಸೂರ್ಯ ಗ್ರಹಣದ ಫಲವಾಗಿ) ಕತ್ತಲೆ ಉಂಟಾಗಿ ನಕ್ಷತ್ರಗಳು ಕಾಣಿಸಿಕೊಂಡರೆ ಅನ್ಯಾಯ, ಕ್ಷಾಮ, ಕಲಹ, ರೋಗಗಳು ಉಂಟಾಗುತ್ತವೆ. ಆ ಕಾರಣ, ಇವೆಲ್ಲ ವಾಯುವಿಕಾರ ಜನ್ಯಗಳೆಂದು ತಿಳಿದು ರಾಜರು ಭಕ್ತಿಯಿಂದ ವಾಯವ್ಯ ಮಂತ್ರಗಳಿಂದ ಚೆನ್ನಾಗಿ ಪೂಜಿಸಿ ಬ್ರಾಹ್ಮಣರಿಗೆ ಭೋಜನ ಮಾಡಿಸಿ ಸಂಪೂರ್ಣ ದಾನಗಳನ್ನು ಕೊಟ್ಟರೆ ಉತ್ಪಾತಗಳು ಶಾಂತವಾಗುವುವೆಂದು ಹೇಳಿದೆ. 'ರಟ್ಟಮತ' ಎನ್ನುವ ಮಳೆಯನ್ನು ಕುರಿತಂತಹ ಒಂದು ಪ್ರಾಚೀನ ಕನ್ನಡ ಗ್ರಂಥವಿದೆ. ಅದರಲ್ಲಿ ಹತ್ತನೆಯ 'ಗ್ರಹಣಾಧ್ಯಾಯ' ದಲ್ಲಿ ಐದು ಪದ್ಯಗಳಿದ್ದು ಅವು ಸರಿಯಾಗಿ ಅರ್ಥವಾಗುವುದಿಲ್ಲ. ಸ್ವಲ್ಪ ಅರ್ಥವಾಗುವ ಒಂದು ಪದ್ಯದಲ್ಲಿ[೧೩] ಕೆಲವು ಉತ್ಪಾತಗಳನ್ನು ಹೇಳಿದೆ.

ಶ್ರಾವಣ ಮಾಘ ಫಾಲ್ಗುಣದ ಚೈತ್ರದ (ಜೇಷ್ಠದ) ಚಂದ್ರಸೂರ್ಯರಂ
ದಾ(ತಾ)ವಗ ರಾಹು ಭಕ್ಷಿಸಲೆ ವಿಧ್ವರಮದ್ಭುತ ರಾಜಘಟ್ಟನಂ
ಕೋವರ ಚಕ್ರದಂತೆ ತಿರಿಗುಂ ಧರೆ ಪೆರ್ವಸವಿಳ್ದಿ ತಿಂಗುಮಾ
ಭೂವಳಯಾಧಿಪರ್ ಮಡಿಗು ನೆತ್ತರ ಪೆರ್ಪೊನಲಕ್ಕು ನಿಶ್ಚಯಂ ॥

ಕೆಲವು ನಿರ್ದಿಷ್ಟ ಮಾಸಗಳಲ್ಲಿ (ಶ್ರಾವಣ ಇತ್ಯಾದಿ) ಚಂದ್ರಸೂರ್ಯರನ್ನು ರಾಹು[೧೪] ಭಕ್ಷಿಸಿದರೆ ಲೋಕ ಕುಂಬಾರನ ಚಕ್ರದಂತೆ ತಿರುಗುತ್ತದೆ; ಕ್ಷಾಮ, ರಾಜರ ಸಾವು, ನೆತ್ತರ ಹೊನಲು (ಯುದ್ಧ) ಸಂಭವಿಸುತ್ತವೆ ಎಂದು ಹೇಳಿದೆ.

ಹಿಂದೆ ಹೇಳಿದ 'ಲೋಕೋಪಕಾರ' ಗ್ರಂಥದಲ್ಲಿ (೨.೫) ಗ್ರಹಣ ದಿನ ಕಾಮನ ಬಿಲ್ಲು ಮೂಡಿದರೆ ಆ ವರ್ಷ ವಿವಾಹವನ್ನು ಕೈಬಿಡಬೇಕೆಂದೂ, ಯಾವುದೇ ಗ್ರಹಣವಾಗಲಿ ಆ ಗ್ರಹಣ ನಡೆದ ಏಳು ದಿನಗಳೊಳಗೆ ವಿವಾಹವನ್ನು ಮಾಡ ಬಾರದೆಂದೂ (೨.೬) ನಿಷೇಧಿಸಿದೆ.

ಒಂದೇ ತಿಂಗಳಲ್ಲಿ ಎರಡು ಗ್ರಹಣಗಳು ಬರುವುದು ತೀರ ವಿರಳವಾದರೂ, ಅದರ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಇದರಲ್ಲಿ ಮೊದಲು ಚಂದ್ರಗ್ರಹಣ, ಬಳಿಕ ಒಂದು ತಿಂಗಳಲ್ಲಿಯೇ ಸೂರ್ಯಗ್ರಹಣ ನಡೆದರೆ ಬ್ರಾಹ್ಮಣ ಕ್ಷತ್ರಿಯರಿಗೆ ಜಗಳಗಳು, ಕ್ಷತ್ರಿಯರಲ್ಲಿ ಯುದ್ಧಗಳು, ಪ್ರಜಾನಾಶ ಆಗುತ್ತವೆಯೆಂದು 'ವಿಷ್ಣುಧರ್ಮೋತ್ತರಪುರಾಣ'ವು ಹೇಳುತ್ತದೆ. ಇದು ತಲೆಕೆಳಗಾದರೆ ಆಗ ಲೋಕ ಹಿತವಾಗುತ್ತದೆ, ಸಮೃದ್ಧಿ ಕಾಣಿಸಿಕೊಳ್ಳುತ್ತದೆ. ಕೌರವ ಪಾಂಡವರಿಗೆ ನಡೆದ ಹದಿನೆಂಟು ದಿನಗಳ ಯುದ್ಧಾರಂಭದಲ್ಲಿ ಪೂರ್ಣಿಮೆ ಬಂದು ಆ ದಿನ ಚಂದ್ರಗ್ರಹಣವೂ ಮುಂದಿನ ಹದಿನೈದು ದಿನಗಳಲ್ಲಿ ಅಮಾವಾಸ್ಯೆ ಬಂದು ಸೂರ್ಯಗ್ರಹಣವೂ ನಡೆದುದರಿಂದ ದೊಡ್ಡ ಪ್ರಜಾಕ್ಷಯವಾಯಿತೆಂದು ನಂಬಿಕೆಯಿದೆ. (ಜಯದ್ರಥನ ಸಾವಿನ ದಿನ ಸಂಜೆ ಕೃಷ್ಣ ಚಕ್ರದಿಂದ ಸೂರ್ಯನನ್ನು ಮರೆಮಾಡಿ ಕತ್ತಲುಮಾಡಿದ ಎನ್ನುವುದು ವಾಸ್ತವವಾಗಿ ಸರ್ವಗ್ರಾಸಗ್ರಹಣವನ್ನು ಸೂಚಿಸುತ್ತದೆ ಎನ್ನುವವರೂ ಇದ್ದಾರೆ.)

ಉತ್ತರ ಭಾರತದ ಗಾರೋ ಜನರು ನವಂಗ್ ಎಂಬ ರಾಕ್ಷಸ ಸೂರ್ಯ ಚಂದ್ರರನ್ನು ನುಂಗುವುದೆಂದು ತಮಟೆ ಬಡಿದು ಕೊಂಬು ಊದಿ ಓಡಿಸುತ್ತಾರೆ. ಲ್ಹೋಟನಾಗರು ಸೂರ್ಯ ಚಂದ್ರರನ್ನು ಒಂದು ನಾಯಿ ನುಂಗುವುದೆಂದು ನಂಬುತ್ತಾರೆ. ಭೊತಿಯ ಜನ ಆಕಾಶಕ್ಕೆ ಗುಂಡು ಹಾರಿಸುತ್ತಾರೆ, ಗ್ರಹಣದ ಸಮಯದಲ್ಲಿ. ರಾಹು ಜಾಡಮಾಲಿಯಾಗಿದ್ದಾಗ ಅವನಿಂದ ಸೂರ್ಯ ಚಂದ್ರರು ಹಣ ಸಾಲ ತೆಗೆದುಕೊಂಡು ವಾಪಸ್ ಕೊಡಲಿಲ್ಲ. ಆ ಕಾರಣ ಜಾಡಮಾಲಿ ಬಂದು ಅವರನ್ನು ನುಂಗಿ ಉಗುಳುವುದೇ ಗ್ರಹಣ. ಗ್ರಹಣದ ದಿನ ಜಾಡಮಾಲಿಗಳು ಭಿಕ್ಷೆ ಎತ್ತುತ್ತಾರೆ.[೧೫] ರಾಹು ಸೂರ್ಯಚಂದ್ರರನ್ನು ನುಂಗುತ್ತದೆ, ಕೇತು ರಾಹುವಿನ ಬಾಲ; ಅನೇಕ ಉಲ್ಕೆಗಳು ಕೇತುವಿನಿಂದ ಹುಟ್ಟುತ್ತವೆ ಮತ್ತು ಕೇತು ಕಾಯಿಲೆಗಳನ್ನು ತರುತ್ತದೆ ಎಂಬ ನಂಬಿಕೆಯೂ ಉಂಟು

ಕೊಂಕಣದಲ್ಲಿ ಗಿರ್ಹ ಎಂಬ ದೇವತೆ ಬಾನಲ್ಲಿ ಅಲೆಯುತ್ತ ಸೂರ್ಯಚಂದ್ರರನ್ನು ನುಂಗುತ್ತದೆ, ಅದೇ ಗ್ರಹಣ ಎಂಬ ನಂಬಿಕೆ ಕೆಲವೆಡೆ

ಇದೆ. ಕೊಂಕಣಿಗರು ರಾಹುವನ್ನು ಚಂದ್ರಗ್ರಹಣದ ದಿನ, ಕೇತುವನ್ನು ಸೂರ್ಯಗ್ರಹಣದ ದಿನ ಪೂಜಿಸುತ್ತಾರೆ.[೧]

**ನಂಬಿಕೆಗಳು, ಬೇರೆ ಸಂಸ್ಕೃತಿಗಳಲ್ಲಿ**

ಗ್ರಹಣಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಸಂಸ್ಕೃತಿಗಳಲ್ಲಿ ಇರುವ ಪುರಾಣಗಳು, ನಂಬಿಕೆಗಳು ಸ್ವಾರಸ್ಯವಾಗಿವೆ; ಮತ್ತು ಕೆಲವು ಕತೆಗಳಿಗೆ ಆಶ್ಚರ್ಯಕರ ರೀತಿಯಲ್ಲಿ ಹೋಲಿಕೆಗಳಿವೆ. ಅವುಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

(ಇನ್ನೂ ಹೆಚ್ಚಿನ ಕತೆಗಳನ್ನು ನೋಡಬಯಸುವವರು Tylor ಬರೆದಿರುವ The Origins of Culture ಪುಸ್ತಕದ ಪು. ೩೩೦–೪ ರಲ್ಲಿ Eclipse Myths ಭಾಗವನ್ನು ಗಮನಿಸಬಹುದು).

೧. ಸ್ಕಾಂಡಿನೇವಿಯದಲ್ಲಿ ಎರಡು ಮಹಾ ತೋಳಗಳು ಸೂರ್ಯ ಚಂದ್ರರನ್ನು ಬೆನ್ನಟ್ಟಿ ನುಂಗುತ್ತವೆಂದು ನಂಬಿಕೆ. ಅವನ್ನು ಓಡಿಸಲು ಜನ ದಬ್ಬೆ, ಕೋಲುಗಳನ್ನು ಬಡಿದು ಗಲಾಟೆ ಎಳಿಸುತ್ತಾರೆ.

ಚೀನೀಯರು ಡ್ರೇಗನ್ ಸರ್ಪ ಸೂರ್ಯಚಂದ್ರರನ್ನು ನುಂಗುತ್ತದೆ ಎಂದು ನಂಬಿ (ಚಿತ್ರ ೫) ಓಡಿಸುತ್ತಾರೆ. ಹೀಗೆ ಓಡಿಸುವ ಪದ್ಧತಿ ಲ್ಯಾಪ್, ಪರ್ಷಿಯನ್ನರಲ್ಲಿಯೂ ಇದೆ.

ಈಸ್ಟ್ ಇಂಡಿಯನ್ನರು "ಕಪ್ಪು ಗ್ರಿಫಿನ್" ಎಂಬ ರಾಕ್ಷಸನಿಂದ ಗ್ರಹಣವೆಂದು ಭಾವಿಸಿ ಅದನ್ನು ಓಡಿಸಲು ಯತ್ನಿಸುತ್ತಾರೆ.

ಒಜಿಬ್ವೆಗಳು (ಉತ್ತರ ಅಮೆರಿಕದ ರೆಡ್ ಇಂಡಿಯನ್ ಜನ) ಗ್ರಹಣದ ಸಮಯದಲ್ಲಿ ಸೂರ್ಯನನ್ನು ಯಾರೋ ಆರಿಸಿ ಕತ್ತಲು ಕವಿಸುತ್ತಾರೆಂದು ನಂಬಿ, ಬಾಣಗಳ ತುದಿಗೆ ಉರಿ ಹಚ್ಚಿ ಆಕಾಶಕ್ಕೆ ಬಿಟ್ಟು ಸೂರ್ಯನನ್ನು ಮತ್ತೆ ಬೆಳಗಿಸಲು ಯತ್ನಿಸುತ್ತಿದ್ದರು.

ಪೆರುವಿನ ಸೆನ್ನಿಗಳು ಉರಿಯುವ ಬಾಣಗಳನ್ನು ಬಾನಿನತ್ತ ಬಿಡುತ್ತಿದ್ದರು, ಸೂರ್ಯನನ್ನು ಬೆಳಗಿಸುವುದಕ್ಕಲ್ಲ, ಅವನನ್ನು ರಾಕ್ಷಸನ ಹಿಡಿತದಿಂದ ತಪ್ಪಿಸಲು. ಡಕೋಟ ಜನರೂ, ನೀಲಗಿರಿಯ ತೋದರೂ ಕೂಡ ಆಕಾಶಕ್ಕೆ ಗುಂಡುಹಾರಿಸಿ, ಬಾಣಬಿಟ್ಟು ರಾಕ್ಷಸನನ್ನು ಓಡಿಸಲು ಯತ್ನಿಸುತ್ತಾರೆ. ಕೆಲವು ರೆಡ್ ಇಂಡಿಯನ್ನರಲ್ಲಿ ನಾಯಿಬಾಲ ಹಿಂಡಿ ಕಿರಿಗುಟ್ಟಿಸಿ ಶಬ್ದ ಮಾಡಿಸುತ್ತಿದ್ದರು.

೨. ಒರಿನೊಕೊ ಆದಿವಾಸಿಗಳು ಚಂದ್ರಗ್ರಹಣದಲ್ಲಿ ಉರಿಯುತ್ತಿದ್ದ ಪಂಜುಗಳನ್ನು ನೆಲದಲ್ಲಿ ಹೂತಿಡುತ್ತಿದ್ದರು; ಏಕೆಂದರೆ ಚಂದ್ರ ಆರಿಹೋದರೆ

ಭೂಮಿಯ ಮೇಲಿನ ಬೆಂಕಿಯೆಲ್ಲವೂ ಆರುವುದೆಂದೂ, ಚಂದ್ರನ ಕಣ್ಣಿಗೆ ಕಾಣಿಸದೆ ಉಳಿದ ಬೆಂಕಿಯಾದರೂ ಮುಂದೆ ತಮಗೆ ಲಭ್ಯವಾಗುವುದೆಂದೂ ನಂಬಿದ್ದರು.

ಜಪಾನಿನ ಷಿಂಟೋ ಧರ್ಮದ ಪ್ರಕಾರ, ಗ್ರಹಣದ ಸಮಯದಲ್ಲಿ ಎತ್ತರವಾದ ಮರದಿಂದ ತಾಯತದ ಮೌಲ್ಯವುಳ್ಳ-ಮಂತ್ರ ಶಕ್ತಿಯ-ಕೆಲವು ಒಡವೆಗಳನ್ನು ತೂಗುಹಾಕಿದರೆ, ಅವುಗಳು ಮರೆಯಾದ ಬೆಳಕನ್ನು ಮತ್ತೆ ತರಿಸಿ ಕೊಡುತ್ತವೆ. ಜಪಾನಿನಲ್ಲಿ ಪ್ರಚಲಿತವಿರುವ ಶಾಸ್ತ್ರದಂತೆ (lore) ಗ್ರಹಣವೆನ್ನುವುದು ಯಮತೊ ಇಸುಮೊ ಎಂಬ ಪ್ರತಿಸ್ಪರ್ಧೆಯ ಲೋಕಗಳಲ್ಲಿನ ದೇವತೆಗಳ ತಿಕ್ಕಾಟ. ಕೆಲವು ಸ್ಲಾವಿಕ್ ಪುರಾಣಗಳ ರೀತಿ, ಜಪಾನಿನಲ್ಲಿಯೂ ಸೂರ್ಯ ಅಮತೆರಸು ಎಂಬ ಹೆಸರಿನ ಸ್ತ್ರೀ ದೇವತೆ. ಅವಳು ದೇವತೆಗಳಿಗೆ ಬಟ್ಟೆ ನೇದುಕೊಡುವ ಯಮತೊ ಪ್ರಾಂತದ ಮಹಾಪುರೋಹಿತೆಯೂ ಹೌದು; ಜಪಾನ್ ಚಕ್ರವರ್ತಿಯ ಪೂರ್ವಜಳೂ ಹೌದು. ಅವಳ ಸೋದರ ಸುಸನೋ ಎಂಬಾತ ಇಸುಮೋ ಪ್ರಾಂತದವನು. ಒಂದು ದಿನ ಅಮತೆರಸು ಒಂದು ಪವಿತ್ರ ಸ್ಥಳದಲ್ಲಿ ಬಟ್ಟೆ ನೇಯುತ್ತಿರುವಾಗ, ಸುಸನೋ ಅಂಡಬಂಡ ಬಣ್ಣದ ಕುದುರೆಯನ್ನು ಮೇಲ್ಛಾವಣಿಯ ತೂತಿನಿಂದ ಹಾಕಿಬಿಟ್ಟ. ಹೆದರಿದ ಅಮತೆರಸು ಸ್ವರ್ಗದ ಗುಹೆಯೊಂದರ ಬಾಗಿಲಿಗೆ ಬಂಡೆ ಇಟ್ಟು ಒಳಗೆ ಅಡಗಿ ಕೂತುಬಿಟ್ಟಳು. ಜಗತ್ತು ಕತ್ತಲೆಯಿಂದ ತುಂಬಿ ಹೋಯಿತು. ಮುಂದೆ ಅಸಂಖ್ಯಾತ ಸಾತ್ವಿಕ ದೇವತೆಗಳು ಸೇರಿ ಆ ಗುಹೆಯಿಂದ ಅಮತೆರಸು ಬರುವ ಹಾಗೆ ಮಾಡುತ್ತಾರೆ.[೧೭]

ಕಮ್ಚಟ್ಕನ್ ಜನ ಗ್ರಹಣದ ಸಮಯದಲ್ಲಿ ತಮ್ಮ ಗುಡಿಸಲುಗಳಿಂದ ಬೆಂಕಿಯನ್ನು ಹೊರತಂದು ಮರೆಯಾದ ಸೂರ್ಯ ಮತ್ತೆ ಬೆಳಗಲಿ ಎಂದು ಪ್ರಾರ್ಥಿಸುತ್ತಿದ್ದರು.

೩. ಎಸ್ಕಿಮೋ ಜನ ಗ್ರಹಣದ ವೇಳೆ ಅಶುದ್ಧವೂ ಕೆಟ್ಟ ಪರಿಣಾಮದ್ದೂ ಆದ ಸೂಕ್ಷ್ಮವಸ್ತು ಇಳಿದು ಬಂದು ತಮ್ಮ ಅಡುಗೆಯ ಪಾತ್ರೆಗಳಿಗೆ ಸೇರಿದರೆ ರೋಗಗಳು ಬರುತ್ತವೆಂದು ಹೆದರಿ, ಅವರ ಹೆಂಗಸರು ತಮ್ಮ ಪಾತ್ರೆಗಳನ್ನೆಲ್ಲ ತಲೆಕೆಳಗು ಮಾಡಿ ಬೋರಲು ಹಾಕುತ್ತಾರೆ.

ಈ ನಂಬಿಕೆ ಭಾರತದಲ್ಲೂ ಉಂಟು. ಗ್ರಹಣ ಮುಗಿದ ಮೇಲೆ ಮನೆಯನ್ನು ಸಾರಿಸಿ, ಹೊಸ ನೀರು ತಂದು ಪಾತ್ರೆಗಳನ್ನು ತೊಳೆದು ಹೊಸದಾಗಿ ಅಡುಗೆ ಮಾಡಿದ ಮೇಲೆಯೇ ಊಟ. ದಕ್ಷಿಣ ಕನ್ನಡ ಜಿಲ್ಲೆ, ಬೆಂಗಳೂರು ಜಿಲ್ಲೆ ಇತ್ಯಾದಿ ಕಡೆ ಗ್ರಹಣಗಳ ಸಂದರ್ಭಗಳಲ್ಲಿ ಕೊಡಗಳನ್ನು ತಲೆಕೆಳಗು ಮಾಡಿ ಬೋರಲು ಹಾಕುತ್ತಾರೆ. ಮೊಸರ ಹಾಲನ್ನು ಚೆಲ್ಲಲು ಸಾಧ್ಯವಿಲ್ಲವಾದ್ದರಿಂದ ಗ್ರಹಣದ

ಸಂದರ್ಭದಲ್ಲಿ ಅವಕ್ಕೆ ದರ್ಭೆಹಾಕಿ ಅವುಗಳನ್ನು ಶುದ್ಧವಾಗಿಡುತ್ತಾರೆ. ಧಾರವಾಡ ಜಿಲ್ಲೆ ಹಾನಗಲ್ ತಾಲೂಕಿನಲ್ಲಿ ಧಾನ್ಯದ ಕಣಜ ಪಾತ್ರೆಗಳಿಗೆ ಬೇವಿನ ಸೊಪ್ಪು, ಬಿಲ್ವಪತ್ರೆ, ಬನ್ನಿಪತ್ರೆ, ಕರುಕೆಗಳನ್ನು ಹಾಕಿಡುತ್ತಾರೆ. (ಮುಂದೆ ನೋಡಿ)

ಹದಿನೆಂಟನೆಯ ಶತಮಾನದಲ್ಲಿ ಇಂಗ್ಲೆಂಡಿನ ಒಬ್ಬ ವೈದ್ಯ ಸೂರ್ಯಗ್ರಹಣದ ಸಂದರ್ಭದಲ್ಲಿ ವಿಷಾನಿಲ ಸುರಿಯುತ್ತದೆಂದು ತನ್ನ ಊರಿನ ಸುತ್ತಮುತ್ತಣ ಬಾವಿಗಳನ್ನು ಹಲಗೆಗಳಿಂದ ಮುಚ್ಚಿಸಿದ ಒಂದು ದಾಖಲೆಯಿದೆ. (ಕರ್ನಾಟಕದಲ್ಲೂ ಕೆಲವಡೆ ಇಂತಹ ಕಾರ್ಯ ಉಂಟು. (ಮುಂದೆ ನೋಡಿ.)

ಟ್ಲಿಂಗಿಟ್ ಜನ ಮೇಲಕ್ಕೆ ಉಸಿರನ್ನು ಊದಿ ಗ್ರಹಣದಿಂದ ಇಳಿದು ಬರುವ ಕಾಯಿಲೆಗಳನ್ನು ಓಡಿಸುತ್ತಾರೆ.

೪. ಕೆಲವು ಜನಾಂಗಗಳಲ್ಲಿ, ಗ್ರಹಣ ಮುಗಿಯುವವರೆಗೆ ಪ್ರಯಾಣಮಾಡುವವರಂತೆ ಬಟ್ಟೆ ಎತ್ತಿ ಕಟ್ಟಿಕೊಂಡು, ತಲೆ ಮೇಲೆ ಭಾರ ಹೊತ್ತಿರುವವರಂತೆ ಬಾಗಿ, ಕೋಲೂರಿ ದುಂಡಗೆ ತಿರುಗುತ್ತಾರೆ. ನಡೆಯಲು ಕಷ್ಟಪಡುತ್ತಿರುವ ಸೂರ್ಯನಿಗೆ ಬೆಂಬಲವಾಗಿ ನಿಲ್ಲಲು ಇದು. ಹಾಗೆಯೇ ಪ್ರಾಚೀನ ಈಜಿಪ್ಟಿನಲ್ಲಿ 'ರಾ' ಸೂರ್ಯದೇವತೆ. ಅವನಿಗೆ ಸಂಬಂಧಿಸಿದ ಕತೆಗಳೂ ಇವೆ. ಅವನು 'ಖೆಪ್ರಿ' ಎಂಬ ದೊಡ್ಡ ರೆಕ್ಕೆಯುಳ್ಳ ಕೀಟದ ರೂಪ ಧರಿಸಿ, ಚಿನ್ನದ ದೋಣಿಯಲ್ಲಿ ಕುಳಿತು ತನ್ನ ಅನುಯಾಯಿಗಳ ರಕ್ಷಣೆಗಾಗಿ ನಿರ್ದಿಷ್ಟಗತಿಯ ಯಾತ್ರೆಯನ್ನು ಕೈಗೊಳ್ಳುತ್ತಾನೆ. ಮಹಾಸರ್ಪ 'ಅಪೆಪ್' ನಿಂದ ಅವನನ್ನು ಸದಾ ರಕ್ಷಿಸಬೇಕಿತ್ತು. ಅಪೆಪ್ ದುಷ್ಟಶಕ್ತಿಯ ಸಂಕೇತ ಮತ್ತು ಅದು ಚಿನ್ನದ ದೋಣಿಯನ್ನು ನುಂಗುವುದರಲ್ಲಿ ಒಮ್ಮೊಮ್ಮೆ ಯಶಸ್ವಿಯಾಗುತ್ತಿದ್ದುದುಂಟು. ಆಗ 'ರಾ'ನ ಅನುಯಾಯಿಗಳು ಅದನ್ನು ಸೋಲಿಸಿ ಓಡಿಸಿಬಿಡುತ್ತಿದ್ದರು.[೧೫] ಸೂರ್ಯನ ಪ್ರತಿನಿಧಿಯಾದ ರಾಜನು ದೇವಾಲಯದ ಸುತ್ತ ಗಂಭೀರವಾಗಿ ಪ್ರದಕ್ಷಿಣೆ ಹಾಕಿ, ಅಂತೆಯೇ ಸೂರ್ಯ ಆಕಾಶದಲ್ಲಿ ಗ್ರಹಣ ಅಥವಾ ಇತರ ಪೀಡೆಗಳ ಅಡೆತಡೆಗಳಿಲ್ಲದೆ ಸಂಚರಿಸಬೇಕೆನ್ನುವ ಆಶಯವನ್ನು ವ್ಯಕ್ತಪಡಿಸುತ್ತಿದ್ದ.

5. ಪ್ರಾಚೀನ ಮೆಕ್ಸಿಕನ್ನರು, ಚಂದ್ರಸೂರ್ಯರು ಹೊಡೆದಾಡಿ ಅವರಲ್ಲೊಬ್ಬ ಏಟು ತಿಂದು ಕಪ್ಪಾಗುತ್ತಾನೆ, ಅದೇ ಗ್ರಹಣ ಎಂದು ನಂಬಿದ್ದರು.

6. ಸಂಬೇಸಿಯ ನೀಗ್ರೋಗಳಲ್ಲಿ ಒಂದು ಸೊಗಸಾದ ಕತೆಯಿದೆ. ಸೂರ್ಯ ಭೂಮಿಯ ಇನ್ನೊಂದು ಕಡೆ ನೋಡುತ್ತಿರುವಾಗ ಚಂದ್ರ ಅಸೂಯೆ ಯಿಂದ ಅವನ ಬೆಂಕಿಯ ಪುಕ್ಕಗಳನ್ನುಕದ್ದುಬಿಟ್ಟ. ಸೂರ್ಯನಿಗೆ ಕೋಪಬಂದು ಅವನ ಮೇಲೆ ಕೆಸರು ಎರಚಿದ: ಅದು ಶಾಶ್ವತವಾಗಿ ಅಂಟಿಬಿಟ್ಟಿತು. ಚಂದ್ರ

ಪ್ರತೀಕಾರ ತೀರಿಸಿಕೊಳ್ಳಲು ಹೊಂಚು ಹಾಕುತ್ತಿರುತ್ತಾನೆ; ಹತ್ತು ವರ್ಷಗಳಿಗೊಮ್ಮೆ ತಾನೂ ಸೂರ್ಯನತ್ತ ಕೆಸರು ಎರಚುತ್ತಾನೆ. ಆಗ ಸೂರ್ಯನಲ್ಲಿ ದೊಡ್ಡ ಕಪ್ಪು ಕಲೆಗಳಾಗುತ್ತವೆ. ಕೆಲವು ಗಂಟೆ ಮಂಕಾಗಿಬಿಡುತ್ತಾನೆ; ಅವನನ್ನು ನೋಡಿ ನಲಿಯುತ್ತಿದ್ದ ಇಡೀ ಮನುಷ್ಯವರ್ಗ, ಪ್ರಾಣಿವರ್ಗದಲ್ಲಿ ಮುಂಕುಕವಿದು ದುಃಖಿತವಾಗುತ್ತವೆ. ಇದು ಕತೆ. ಒಮ್ಮೆ ಆಫ್ರಿಕನ್ನರು ನೆಲದ ಮೇಲೆ ಬಿದ್ದು ಹೊರಳಾಡುತ್ತಾ ನರಳಿದರು. ನಾಲ್ಕು ನಿಮಿಷಗಳ ಬಳಿಕ ಗ್ರಹಣ ಬಿಟ್ಟಿತ್ತು. ಅವರೂ ಹಿಂದಿನಂತಾದರು. ಅವರ ನಡವಳಿಕೆಗೆ ಮೇಲಿನ ಕತೆ ಮತ್ತು ನಂಬಿಕೆ ಕಾರಣವೆಂದು ತೋರುತ್ತದೆ.

ರೋಮನ್ನರು ಚಂದ್ರಗ್ರಹಣದ ದಿನ ಸಾರ್ವಜನಿಕ ಸಭೆಗಳನ್ನು ಮಾಡುತ್ತಿರಲಿಲ್ಲ. ಸ್ತ್ರೀಯಾದ ಚಂದ್ರ ಎಂಡಿಮಿಯೋನ್ ಎಂಬ ಪ್ರಿಯನ ಹತ್ತಿರ 'ಮಧುಚಂದ್ರ'ಕ್ಕೆ ಹೋಗುತ್ತಾಳೆ, ಅದೇ ಗ್ರಹಣವೆಂದು ನಂಬಿದ್ದರು.[೯]

## ಗ್ರಹಣದ ಕೆಲವು ಐತಿಹಾಸಿಕ ಸ್ವಾರಸ್ಯಗಳು

ಪೈಥಾಗೊರಸ್, ಅರಿಸ್ಟಾಟಲ್, ಪ್ಲಿನಿ, ಆರ್ಯಭಟ, ವರಾಹಮಿಹಿರ ಮೊದಲಾದ ಖಗೋಳ ವಿಜ್ಞಾನಿಗಳು ಗ್ರಹಣ ಒಂದು ಸ್ವಾಭಾವಿಕ ನೈಸರ್ಗಿಕ ಘಟನೆ ಎಂದು ಹೇಳಿದ್ದರೂ, ಗ್ರಹಣಗಳು ಉದ್ದಕ್ಕೂ ಜನರಲ್ಲಿ ಭೀತಿಯನ್ನುಂಟುಮಾಡಿವೆ. ಆ ಭೀತಿಯಿಂದ ಕೆಡುಕುಗಳು ಆಗಿರಬಹುದು; ವಿರಳವಾಗಿ ಒಳ್ಳೆಯದೂ ಆಗಿದೆ.

ಮೀಡರ ರಾಜನಾದ ಕ್ಯಾಕ್ಸೆರಸ್ ಎಂಬಾತ ಲಿಡಿಯಾ ಮೇಲೆ ಯುದ್ಧಕ್ಕೆ ಬಂದಾಗ ಆ ಸಮಯಕ್ಕೆ ಸರಿಯಗಿ ಸೂರ್ಯಗ್ರಹಣ ಹಿಡಿಯಿತು (ಕ್ರಿ.ಪೂ. ೫೮೫, ಮೇ ೨೮). ಇಕ್ಕಡೆಯ ಸೈನಿಕರಿಗೂ ಭಯವಾಗಿ ರಣಭೂಮಿಯಿಂದ ಓಡಿಹೋದರು; ಯುದ್ಧ ನಿಂತಿತು.

ಕ್ರಿ. ಪೂ. ೪೧೩ರಲ್ಲಿ ಅಥೆನಿಯನ್ನರ ದಂಡನಾಯಕ ನಿಕಿಯಸ್ ವಿಜಯ ಯಾತ್ರೆಗಾಗಿ ಸಿಸಿಲಿಗೆ ಹೋಗಿ ಹಿಂದಿರುಗುವಾಗ ಚಂದ್ರಗ್ರಹಣ ಕಂಡು ತನ್ನ ಪ್ರಯಾಣವನ್ನು ಮುಂದೆ ಹಾಕಿದ್ದೇ ಅವನಿಗೆ ಮೃತ್ಯುವಾಯಿತು; ಅಥೆನ್ಸಿನ ಕ್ಷೀಣದೆಸೆಗೂ ಕಾರಣವಾಯ್ತು.

ಕ್ರಿ. ಪೂ. ೩೩೧ರಲ್ಲಿ ಚಂದ್ರಗ್ರಹಣವನ್ನು ಕಂಡು ಹೆದರಿದ ಸೈನಿಕರಿಗೆ ಅಲೆಕ್ಸಾಂಡರ್ ಧೈರ್ಯ ತುಂಬಬೇಕಾದರೆ ಸಾಕುಸಾಕಾಗಿಹೋಯ್ತು.

ಕ್ರಿ. ಶ. ೧೫೦೪ ಮಾರ್ಚ್ ೧ರಂದು ನಡೆದ ಚಂದ್ರಗ್ರಹಣ ಕ್ರಿಸ್ಟೋಫರ್

ಕೊಲಂಬಸನನ್ನು ಬದುಕಿಸಿದ ಕತೆ ರೋಚಕವಾಗಿದೆ. ವೆಸ್ಟ್ ಇಂಡೀಸ್ ದ್ವೀಪ ಶ್ರೇಣಿಯ ಜಮೈಕದ ಜನ ಅವನಿಗೆ ಆಹಾರವನ್ನು ಕೊಡಲು ಒಪ್ಪದೆ ಅವನು ಬವಣೆ ಪಡಬೇಕಾಯ್ತು. ಅವನಿಗೆ ಗ್ರಹಣದ ದಿನ ಮೊದಲೇ ಗೊತ್ತಿದ್ದುದರಿಂದ, 'ನೀವು ಆಹಾರ ಕೊಡದಿದ್ದರೆ ಚಂದ್ರನನ್ನು ಕಿತ್ತುಕೊಳ್ಳುತ್ತೇನೆ' ಎಂದು ಹೆದರಿಸಿದ. ಗ್ರಹಣ ಹಿಡಿದು ಚಂದ್ರ ಮರೆಯಾದಾಗ ಜನ ಹೆದರಿ ಅವನಿಗೆ ಊಟಕ್ಕೆ ಕೊಟ್ಟರು.

ಕ್ರಿ. ಶ. ೧೫೬೦ರ ಆಗಸ್ಟ್ ೨೧ರಂದು ಗ್ರಹಣಕ್ಕೆ ಫ್ರೆಂಚ್ ಜನ ತೀರ ಹೆದರಿ, ಪ್ರಳಯವಾಗುವುದೆಂದು ನಂಬಿದ ಅವರು ಕಿಟಕಿ ಬಾಗಿಲು ಮುಚ್ಚಿ ನೆಲಮಾಳಿಗೆಯಲ್ಲಿ ಅವಿತಿಟ್ಟುಕೊಂಡಿದ್ದರು. ಕೆಲವರು ತಮ್ಮ ಪಾಪಗಳ ನಿವೇದನೆಗೆ ಪಾದ್ರಿಗಳ ಬಳಿಗೂ ಹೋಗಿದ್ದರು, ಇನ್ನು ತಾವು ಸಾಯುವುದು ಖಂಡಿತವೆಂದು.

ಕ್ರಿ.ಶ. ೧೮೭೭ರಷ್ಟು ಈಚೆಗೆ ರಷಿಯ ತುರ್ಕಿಗಳಿಗೆ ಯುದ್ಧವಾಗುತ್ತಿರುವಾಗ ಮಾರ್ಚ್ ೧೫ರಂದು ಸೂರ್ಯಗ್ರಹಣವಾಗಿ ಎರಡು ಕಡೆಯ ಸೈನಿಕರೂ ಹೆದರಿ ಯುದ್ಧವನ್ನೇ ಮರೆತು ಸೂರ್ಯನನ್ನು ಬಿಡಿಸಲು ಆಕಾಶದತ್ತ ಗುಂಡು ಹಾರಿಸಿದರು. ಕ್ರಿ.ಶ. ೧೮೮೮ರ ಡಿಸೆಂಬರ್ ೧೬ರಂದು ರಷಿಯಾದ ತಾಷ್ಕೆಂಟಿನಲ್ಲಿ ಚಂದ್ರನನ್ನು ನುಂಗುತ್ತಿದ್ದ ಸೈತಾನನನ್ನು ಓಡಿಸಲು ಜನ ತಟ್ಟೆ ಪಾತ್ರೆ ಬಡಿದು ಗಲಭೆ ಎಬ್ಬಿಸಿದರು.

ಆಫ್ರಿಕದ ನೇಟಾಲ್ ಪ್ರಾಂತದ ವಜ್ರದ ಗಣಿಗಳ ಯಜಮಾನ, "ಸೂರ್ಯ ಸದ್ಯದಲ್ಲೇ ಸಾಯಲಿದ್ದಾನೆ; ದೊಡ್ಡ ವಜ್ರವನ್ನು ಹುಡುಕಿ ತಂದು ಕೊಟ್ಟರೆ ಅವನನ್ನು ಉಳಿಸಬಹುದು" ಎಂದ. ಗ್ರಹಣವಾಗಿ ಕತ್ತಲಾಯಿತು. ಜನ ಹೆದರಿ, ತೀವ್ರವಾಗಿ ಹುಡುಕಿದ್ದರಿಂದ ಗಣಿಯಲ್ಲಿ ೪೫೦ ಕ್ಯಾರಟ್ ವಜ್ರ ಸಿಕ್ಕಿತು; ಯಜಮಾನ ವಜ್ರವನ್ನು ಸೂರ್ಯನಿಗೆ ತೋರಿ ಪ್ರಾರ್ಥನೆ ಸಲ್ಲಿಸುತ್ತಿದ್ದಂತೆ ಸೂರ್ಯ ಹಾಜರಾದ. ಅದೇ ನೇಟಾಲ್ ಪ್ರಾಂತದ ಗಣಿ ಕೆಲಸಗಾರರು ಗ್ರಹಣದ ದಿನ ಕತ್ತಲಾದ್ದರಿಂದ, ಒಂದು ದಿನವನ್ನು ಎರಡು ದಿನಗಳೆಂದು ಭಾವಿಸಿ ಕೂಲಿ ಕೊಡಬೇಕೆಂದು ಹಠಹಿಡಿದ ಇನ್ನೊಂದು ಸ್ವಾರಸ್ಯ ಸಂಗತಿಯಿದೆ.[೨೦]

**ಉಪಶಾಂತಿ**

ಈ ಎಲ್ಲ ಕತೆಗಳು ಗ್ರಹಣಗಳು ಜನರನ್ನು ಉದ್ದಕ್ಕೂ ವಿಸ್ಮಯ, ಅದಕ್ಕಿಂತ ಹೆಚ್ಚಾಗಿ ಭೀತರನ್ನಾಗಿ ಮಾಡಿದ್ದಕ್ಕೆ ನಿದರ್ಶನಗಳಾಗಿವೆ. ಕಾಣದ ಶಕ್ತಿಯ ಮುಂದೆ ತನ್ನ ಆಟ ಏನೂ ನಡೆಯದಾದಾಗ ಮನುಷ್ಯನಿಗೆ ಇರುವ ಒಂದೇ ದಾರಿ,

ಅದಕ್ಕೆ ಶರಣಾಗುವುದು, ಅದರ ಕೋಪದ ಉಪಶಮನಕ್ಕೆ ತೊಡಗುವುದು. ಗ್ರಹಣದ ಸಂದರ್ಭಗಳಲ್ಲಿ ನಡೆಯುವ ಪೂಜೆ, ಹೋಮ, ಉತ್ಸವಗಳಿಗೆಲ್ಲಾ ಇದೇ ಮೂಲ. ಚೀನದ ಜ್ಯೋತಿಷ್ಕರ ಪ್ರಕಾರ ದೈವದ ಆಜ್ಞೆಯನ್ನು ಜನ ಭಂಗಗೊಳಿಸಿದ್ದುದರ ಫಲ ಗ್ರಹಣಗಳು. ರಾಜ್ಯಭಾರ ಕ್ರಮದಲ್ಲಿ ಏನೋ ಅನ್ಯಾಯ ನಡೆದಿದೆಯೆಂಬುದರ ಸೂಚಕವೂ ಹೌದು. ಹೀಗಾಗಿ, ಅನ್ಯಾಯ ಹೆಚ್ಚಿ, ದೈವ ಮುನಿದು ಅನೇಕ ಉತ್ಪಾತಗಳು ಕಾಣಿಸಿಕೊಳ್ಳುತ್ತವೆ. ಅನ್ಯಾಯವನ್ನು ತಿದ್ದಿ ಲೋಕಕ್ಕೆ ಹಿತವುಂಟು ಮಾಡುವ ಪ್ರವಾದಿಪುರುಷನೊಬ್ಬನ ಉದಯದ ಸೂಚನೆಗಳಲ್ಲಿ ಗ್ರಹಣಗಳೂ ಒಂದೆಂದು ಯಹೂದ್ಯರು ನಂಬುತ್ತಾರೆ. ಗ್ರಹಣ ಏನೋ ಭಯಾನಕ ವಿಪತ್ತನ್ನು ತರುವುದೆಂದು ಹೆದರಿ ಸಿಲೋನಿಯರು ಆ ದಿನ ಶಾಂತ್ಯುತ್ಸವದ ಹಬ್ಬ ಆಚರಿಸುತ್ತಾರೆ.

ಭಾರತೀಯ ಧರ್ಮಶಾಸ್ತ್ರಗ್ರಂಥಗಳಲ್ಲಿ ಈ ಬಗ್ಗೆ ಅನೇಕ ವಿಧಿ, ನಿಷೇಧಗಳನ್ನು ನಿಯಮಿಸಲಾಗಿದೆ. 'ವಿಷ್ಣುಧರ್ಮಸೂತ್ರ'ದ ಪ್ರಕಾರ ಚಂದ್ರ ಸೂರ್ಯಗ್ರಹಣದ ಸಮಯದಲ್ಲಿ ಏನೂ ತಿನ್ನಕೂಡದು. ಊಟವೇನಿದ್ದರೂ ಗ್ರಹಣಗಳು ಮುಗಿದ ಮೇಲೆಯೇ. ಗ್ರಹಣ ಹಿಡಿದ ಸೂರ್ಯ ಚಂದ್ರರು ಗ್ರಹಣಮೋಕ್ಷಕ್ಕೆ ಮುನ್ನವೇ ಮುಳುಗಿದರೆ (ಎಂದರೆ 'ಗ್ರಸ್ತಾಸ್ತ'ವಾದರೆ) ಮಾರನೆಯ ದಿನ ಸ್ನಾನಮಾಡಿ ಸೂರ್ಯೋದಯವನ್ನು ದರ್ಶಿಸಿಯೇ ಊಟಮಾಡಬೇಕು. ಗ್ರಹಣವನ್ನು ನೋಡಿದ ಮೇಲೆ ಎಲ್ಲರೂ ಮಾಡಬೇಕಾದ ಮೊದಲ ಕಾರ್ಯವೆಂದರೆ ಸ್ನಾನ. "ರಾಹು ನೋಡಿದಾಗ ಎಲ್ಲ ವರ್ಣದವರೂ ಅಪವಿತ್ರರಾಗುತ್ತಾರೆ" — ಆದ್ದರಿಂದ ಎಲ್ಲರೂ ಸ್ನಾನ ಮಾಡಬೇಕು. ಗ್ರಹಣ ನೋಡಿ ಸ್ನಾನಮಾಡದಿದ್ದರೆ ಮುಂದಿನ ಏಳು ಜನ್ಮ ಅಪಸ್ಮಾರ ಕಾಯಿಲೆಯಿಂದ ನರಳಬೇಕು. ಸ್ನಾನಕ್ಕೆ ಗಂಗೆ, ಪ್ರಯಾಗೆಯ ತ್ರಿವೇಣಿ ಸಂಗಮ, ಗೋದಾವರಿ ನದಿಗಳು ಶ್ರೇಷ್ಠ. ಇಲ್ಲದಿದ್ದರೆ ಯಾವುದೇ ಪವಿತ್ರ ನದಿಯೂ ಆಗಬಹುದು. 'ಕಾಲನಿರ್ಣಯ' ಎನ್ನುವ ಧರ್ಮಗ್ರಂಥದ ಪ್ರಕಾರ ಚಂದ್ರಗ್ರಹಣಕ್ಕೆ ಗೋದಾವರಿ ಸ್ನಾನ, ಸೂರ್ಯಗ್ರಹಣಕ್ಕೆ ನರ್ಮದಾ ಸ್ನಾನ ಉತ್ತಮ. ಆದರೆ, ಕಡ್ಡಾಯವಾಗಿ ಎಲ್ಲರೂ ತಣ್ಣೀರಿನಲ್ಲಿ ಸ್ನಾನ ಮಾಡಬೇಕು. ಮಕ್ಕಳು, ಮುದುಕರು, ರೋಗಿಗಳಿಗೆ ಮಾತ್ರ ಬಿಸಿನೀರಿನ ಸ್ನಾನ ಮಾಡುವ ರಿಯಾಯಿತಿ ಉಂಟು. ಗ್ರಹಣ ಆರಂಭವಾದಾಗ ಸ್ನಾನಮಾಡಿ ಹೋಮ, ದೇವತಾಪೂಜೆ, ಶ್ರಾದ್ಧಗಳನ್ನು ಮಾಡಬೇಕು. ಗ್ರಹಣ ಮುಗಿಯುತ್ತಿದ್ದಂತೆ ದಾನಗಳು; ಮುಗಿದಾದ ಮೇಲೆ ಮತ್ತೆ ಸ್ನಾನ. ಸಾಮಾನ್ಯವಾಗಿ ರಾತ್ರಿ ಕಾಲದಲ್ಲಿ ಶ್ರಾದ್ಧ, ದಾನಗಳು ನಿಷಿದ್ಧವಾದರೂ ಗ್ರಹಣದ ದಿನಗಳಂದು ಅವಕ್ಕೆ ವಿನಾಯ್ತಿ ಉಂಟು.

ಗ್ರಹಣದ ದಿನ ಸ್ನಾನ, ದಾನ, ತಪಸ್ಸು, ಶ್ರಾದ್ಧಾದಿಗಳಿಂದ ಅಮಿತಪುಣ್ಯ ಬರುತ್ತದೆ — ಎಂದು 'ಶಾತಾತಪ' ಗ್ರಂಥವು ಹೇಳುತ್ತದೆ. ಜಪ, ದೀಕ್ಷಾದಿ ಕಾರ್ಯಗಳಿಗೆ ಗ್ರಹಣಗಳು ಉತ್ತಮ ದಿನಗಳು. ದಾನದಂತಹ ಪುಣ್ಯಕಾರ್ಯಗಳಿಗೆ ಸಂಬಂಧಿಸಿದಂತೆ ವ್ಯಾಸ ಹೇಳುತ್ತಾರೆ—

"ಚಂದ್ರಗ್ರಹಣದ ದಿನ ದಾನವು ಸಾಮಾನ್ಯ ದಿನಕ್ಕಿಂತ ಒಂದು ನೂರು ಸಾವಿರದಷ್ಟು ಹೆಚ್ಚು ಪುಣ್ಯಕಾರಿ; ಸೂರ್ಯಗ್ರಹಣ ಅದಕ್ಕಿಂತ ಹತ್ತುಪಟ್ಟು ಹೆಚ್ಚು. ಗಂಗೆ ಹತ್ತಿರವಿದ್ದರಂತೂ ಇನ್ನೂ ಎಷ್ಟೋ ಹೆಚ್ಚು ಪುಣ್ಯಕಾರಿ."


ಸೂರ್ಯ ಚಂದ್ರ ಗ್ರಹಣಗಳು ನಡೆಯುವ ನಕ್ಷತ್ರಗಳಂದು ಹುಟ್ಟಿದವರು ಶಾಂತಿಕಾರ್ಯ ಮಾಡಿಸದಿದ್ದರೆ ಅನರ್ಥಗಳಿಗೆ ಒಳಗಾಗಬೇಕಾಗುತ್ತದೆಂದು 'ವಿಷ್ಣು ಧರ್ಮೋತ್ತರ ಪುರಾಣ'ವು ಹೇಳುತ್ತದೆ.[೨೧] ಕೆಳಗಿನ ಶ್ಲೋಕ ಇದೇ ಅರ್ಥವನ್ನು ಒಳಗೊಂಡಿದೆ.

ಯಸ್ಮಿನ್ ತಜ್ಜನ್ಮ ನಕ್ಷತ್ರೇ
ಗ್ರಸ್ಯೇತೇ ಶಶಿಭಾಸ್ಕರೌ
ತಜ್ಜಾತಾನಾಂ ಭವೇತ್ಪೀಡಾ
ಯೇ ನರಾಃಶಾಂತಿವರ್ಜಿತಾ: ॥[೨೨]


ತರ್ಪಣದ ವಿಷಯದಲ್ಲಿ ಹೇಳುವುದಾದರೆ ಸೂರ್ಯಗ್ರಹಣ ಹಿಡಿದ ಕೂಡಲೇ ತರ್ಪಣಾರಂಭ; ಚಂದ್ರಗ್ರಹಣ ಬಿಡಲು ಶುರುವಾದಾಗ ತರ್ಪಣವನ್ನು ಕೊಡುವುದನ್ನು ಆರಂಭಿಸಬೇಕು.

'ಗಗನ ತಾರಾವಳಿ' ಎಂಬ ಕನ್ನಡ ಗ್ರಂಥ (೪.೭೯) ಶೈವರಾದವರು ಸೋಮಗ್ರಹಣ ಸೂರ್ಯಗ್ರಹಣಗಳಲ್ಲಿ ಪಂಚಾಕ್ಷರಿ ಮಂತ್ರವನ್ನು ಜಪಿಸಬೇಕು ಎಂದು ಹೇಳುತ್ತದೆ. ಪಂಚಾಕ್ಷರೀಮಂತ್ರ ಸರ್ವದೋಷಗಳಿಗೆ ಪರಿಹಾರವೆಂದು ಶೈವರು ನಂಬುತ್ತಾರೆ.


ಈ ಧರ್ಮಶಾಸ್ತ್ರೋಕ್ತ ವಿಧಿಗಳು ಇಂದಿಗೂ ಉಳಿದುಕೊಂಡು ಬಂದಿವೆ. ಮುಂದಿನ ಅಧ್ಯಾಯದಲ್ಲಿ ನಾವು ನೋಡಲಿರುವ ಕರ್ನಾಟಕದ ನೂರಾರು ಶಾಸನಗಳು, ೧೯೮೦ರ ಫೆಬ್ರವರಿ ೧೬ರಂದು ಬೆಂಗಳೂರಲ್ಲಿ ನಡೆದ "ಅದ್ಭುತ ಮಹಾಶಾಂತಿ ಮಹೋತ್ಸವ" ಮತ್ತು ಜನರಿಂದ ಸಂಗ್ರಹಿಸಿದ ಮಾಹಿತಿ ಎಲ್ಲವೂ ಅದನ್ನು ಸಮರ್ಥಿಸುತ್ತವೆ.




ಚಿತ್ರ 1. ಪೂರ್ಣ ಸೂರ್ಯಗ್ರಹಣ (ಕೃಪೆ: ಡಾ॥ ಎಂ. ಎನ್. ಆನಂದರಾಮ್)



ಚಿತ್ರ 2. ಬೆಯ್ಲಿ ಮಣಿಗಳು



ಚಿತ್ರ 3. ವಜ್ರದುಂಗುರ (ಕೃಪೆ: ಡಾ॥ ಎಂ. ಎನ್. ಆನಂದರಾಮ್)



ಚಿತ್ರ 5. ಸುರ್ಯನನ್ನು ನುಂಗುತ್ತಿರುವ ಚೀನಾದ ಡ್ರೇಗನ್‌ಸರ್ಪ



n look at ancient eclipses

f the Sun will be visible from Canada, but historical observations of es are also of surprising importance in modern astronomy

storically observed ack at least as far Claudius Ptolemy. this noted astrono- dria investigated a pses of the Moon n long before his sed these observa- numental treatise the *Almagest*), in bylonians appear to ds of astronomical t 750 BC. Whether ta is impossible to However, what is ates of the eclipses orded, the earliest spite much current stronomical texts, University, Rhode the most ancient ation of any kind. nainly of the Sun nd remains much

*Babylonian tablet recording timed observations of lunar eclipses between the years 323 and 319 BC*

directly linked to the Earth's loss of speed by tidal friction. Conservation of angular momentum is a well-known principle in physics and this applies to the Earth-Moon system.

ಚಿತ್ರ 4. 'New Scientist' ಪತ್ರಿಕೆಯಲ್ಲಿ (ಫೆಬ್ರವರಿ 22, 1979) ಬಂದಿದ್ದ "A Modern look at ancient eclipses" ಎಂಬ ಲೇಖನದ ಒಂದು ಭಾಗ





ಚಿತ್ರ 7. ಬೊಪ್ಪನ ಆತ್ಮಬಲಿ (ಮೇಲೆ, ಎಡಗಡೆ, ಸರ್ಪಾಕಾರದ ರಾಹು ಸೂರ್ಯನನ್ನು ನುಂಗುತ್ತಿದೆ) ಧಾರವಾಡ ಜಿಲ್ಲೆ ಹಾನಗಲ್ ತಾಲೂಕಿನ ತಿಳಿವಳ್ಳಿ ಗ್ರಾಮದ ಶಾಸನ (ಕೃಪೆ: ಕನ್ನಡ ಸಂಶೋಧನೆ ಸಂಸ್ಥೆ, ಧಾರವಾಡ)

ಚಿತ್ರ 6. ಚಂಡನ ಅತ್ಮಬಲಿ (ಮೇಲೆ, ಬಲಗಡೆ, ರಾಹು ಹಾವಿನರೂಪದಲ್ಲಿ ಸೂರ್ಯನನ್ನು ನುಂಗುತ್ತಿದೆ). ಧಾರವಾಡ ಜಿಲ್ಲೆ ಹಾನಗಲ್ ತಾಲೂಕಿನ ಬಾಳೂರು ಗ್ರಾಮ. (ಕೃಪೆ: ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ)



ಚಿತ್ರ 8. ಚಿತ್ರ 7ರ ಮೇಲಿನ ಹಂತದ ವಿಸ್ತೃತ ರೂಪ




ಚಿತ್ರ 9. ಒನಕೆ ಹಿಗೆ ನಿಲ್ಲುವುದೆಂಬ ನಂಬಿಕೆ (ಈಚೆಗೆ ತೆಗೆದ ಚಿತ್ರ)



ಚಿತ್ರ 10. ಬೆಸುಗೆ ಮುಖವಾಡದ ಮೂಲಕ ಗ್ರಹಣವೀಕ್ಷಣೆ



ಚಿತ್ರ 12. ಗ್ರಹಣದ ದಿನ ಕಾಯಿ ಹಣ್ಣಿನ ಮರಗಳಿಗೆ ಬಿಳಿ, ಕೆಂಪು ಪಟ್ಟೆ.



ಚಿತ್ರ 11. ಮರಕ್ಕೆ ಹೀಗೆ ಮೊಳೆ ಹೊಡೆಯಬೇಕಂತೆ (ಅಮೇಲೆ ತೆಗೆದದ್ದು)



ಚಿತ್ರ 13. ಗೋಕರ್ಣದಲ್ಲಿ ಸಮುದ್ರಸ್ನಾನ



ಚಿತ್ರ 14. ಗೋಕರ್ಣದ ಸಮುದ್ರದಲ್ಲಿ ತರ್ಪಣ ಕೊಡುತ್ತಿರುವುದು



ಚಿತ್ರ 15. ಗೋಕರ್ಣ ಸಮುದ್ರ ತೀರದಲ್ಲಿ ಜಪ

'ಗ್ರಹಣ' ಎಂಬ ಸಂಸ್ಕೃತ ಮಾತಿಗೆ ಹಿಡಿಯುವುದು ಎಂದರ್ಥವೆಂದೂ ರಾಹು ಬಂದು ಸೂರ್ಯಚಂದ್ರರನ್ನು ಗ್ರಹಿಸುವುದು ಅಥವಾ ಹಿಡಿಯುವುದು ಗ್ರಹಣ ಎಂಬ ಮಾತಿನಿಂದ ಸೂಚಿತವಾಗುತ್ತದೆಯೆಂಬುದನ್ನೂ ಆಗಲೇ ನೋಡಿದ್ದೇವೆ. ಕನ್ನಡದಲ್ಲಿ 'ಗ್ರಹಣ ಹಿಡಿ' ಎಂಬ ಮಾತು ಕರ್ನಾಟಕಾದ್ಯಂತ ಇದೆ; ಕೊಳ್ಳೇಗಾಲದ ಕಡೆ 'ಗ್ರಹಣ ಕಚ್ಚು' ಎಂಬ ಮಾತು ಇದೆ–ಇವುಗಳಿಗೆ ಗ್ರಹಣವಾಗುವುದು ಎಂಬರ್ಥ. 'ಹಿಡಿ' ಅಥವಾ 'ಕಚ್ಚು' ಪದಗಳು ರಾಹು ಸರ್ಪಾಕಾರದಲ್ಲಿ ಬಂದು ಸೂರ್ಯ ಅಥವಾ ಚಂದ್ರನನ್ನು ಬಾಯಲ್ಲಿ ನುಂಗುವ ಅಥವಾ ಕಚ್ಚುವ ಕ್ರಿಯೆಯನ್ನು ಸೂಚಿಸುತ್ತವೆ. 'ಗ್ರಹಣ ಬಿಡು' ಎಂಬ ಮಾತು, ಗ್ರಹಣದಲ್ಲಿ ಮರೆಯಾದ ಸೂರ್ಯ ಚಂದ್ರರು ಕಾಣಿಸಲಾರಂಭವಾಗುವ ಕ್ರಿಯೆಯನ್ನು ಸೂಚಿಸುವ ಅರ್ಥದಲ್ಲಿ ಕರ್ನಾಟಕದ ಎಲ್ಲ ಕಡೆಗೂ ಇದೆ. 'ಗ್ರಹಣ ಬಿಡು' ಎಂಬ ಮಾತು ರಾಹುವಿನ ಹಿಡಿತ ಕಡಮೆಯಾಗುತ್ತ ಬಂದು ಕೊನೆಗೆ ಇಲ್ಲವಾಗುವುದನ್ನು ಸೂಚಿಸುತ್ತದೆ.

## ಅಡಿಟಿಪ್ಪಣಿಗಳು

೧. A.L. Kroeber: Anthropology (Oxford and IBH Publishing Company. 1972) P. 485/.

೨. ಅದೇ. ಪು : ೭೧೧.

೩. P.V. Kane: History of Dharmashaastra. v.i. Poona. 1958. Pp. 241-2 ಸ್ವರ್ಭಾನು ಬಂದು ಚಂದ್ರನನ್ನು ನುಂಗುವ ಮಾತು ಮಧುರನ ಧರ್ಮನಾಥ ಪುರಾಣದಲ್ಲಿ (೫.೭೬) ಬಂದಿದೆ.

೪. ಬೆನಗಲ್ ರಾಮರಾವ್ ಮತ್ತು ಪಾನ್ಯಂ ಸುಂದರ ಶಾಸ್ತ್ರಿ : ಪುರಾಣನಾಮ ಚೂಡಾಮಣಿ (ಮೈಸೂರು ವಿಶ್ವವಿದ್ಯಾನಿಲಯ. ೧೯೭೭), ಪು. ೧೯೩

೫. ಅದೇ. ಪು. ೫೦೨.

೫a. ಕರ್ನಾಟಕದಲ್ಲಿ ಹಿಂದೆ ಖಗ್ರಾಸ ಎಂಬುದು ಬಳಕೆಯಲ್ಲಿರಲಿಲ್ಲ. ಆ ಅರ್ಥದಲ್ಲಿದ್ದುದು 'ಸರ್ವಗ್ರಾಸ' ಎಂಬ ಶಬ್ದ.

೬. ಬಸವಣ್ಣನವರ ಟೀಕಿನ ವಚನಗಳು (ಸಂ: ಎಂ. ಎಂ. ಕಲಬುರ್ಗಿ. ಕರ್ನಾಟಕ ವಿಶ್ವವಿದ್ಯಾಲಯ. ೧೯೭೭) ಪುಟ. ೨೧, ೨೨

೭. ಆರ್ಯಭಟೀಯ (ಕನ್ನಡ ಅನು: ಎನ್.ಕೆ. ನರಸಿಂಹಮೂರ್ತಿ. ಬೆಂಗಳೂರು ವಿಶ್ವವಿದ್ಯಾಲಯ, ೧೯೭೮) ಪು. ೯೭

೮. ಪಿ.ವಿ. ಕಾಣೆ. ಪೂರ್ವೋಕ್ತ, ಪು. ೨೪೨.

೯. ಅದೇ

೧೦. ಗ್ರಾಮೀಣ (ಬಾಪ್ಕೊ ಪ್ರಕಾಶನ, ೧೯೭೭) ಪುಟ.೧೧೬-೭.

೧೧. ಮೇಲಿನ ಪದ್ಯಗಳನ್ನೇ ಗೂಳೂರು ಸಿದ್ಧವೀರಣ್ಣೊಡೆಯ (೧೬ನೇ ಶ.) ತನ್ನ ಶೂನ್ಯ ಸಂಪಾದನೆಯಲ್ಲಿ (ಸಂ : ಎಸ್.ಎಸ್. ಭೂಸನೂರಮಠ. ೧೯೫೮. ಪು. ೪೫೮) ಗದ್ಯಾನುವಾದ ಮಾಡಿದ್ದಾನೆ – "ಬಸವರಾಜದೇವರು....... ಸಕಲ ಶರಣರು ಕೂಡಿ ಕಟಕಮಂ ಪೊರಮಟ್ಟು ಕಪ್ಪಡಿಯ ಸಂಗಮೇಶ್ವರಂಗೆ ಎಯ್ದಿಪೋಗಲು, ಆಗಳೆ ಬಿಜ್ಜಳನೈಶ್ವರ್ಯ ಹಾನಿಯಾಗಿ ಕಟಕದ ಭಾಗ್ಯವಳಿಯಿತ್ತು, ಧರಣಿ ನಡುಗಿತ್ತು, ಕಾಗೆಗಳಿರುಳರಚಿದುವು, ಹಗಲು ನರಿಗಳೂಳಿದುವು, ನಕ್ಷತ್ರ ಬಿದ್ದವು, ಕಲ್ಲಮಳೆ ಸುರಿದವು. ಚಂಡವಾಯು ಬೀಸಿ ಕೆಂದೂಳೆದ್ದು ಹಗಲು ಮುಸುಕಿ ಮಂಜಿನ ಕತ್ತಲೆಯಾಗಿ ಗಗನದೊಳು ಭೀಕರವಾಗೆ. ಬಿಜ್ಜಳನು ಶಿರವಿಲ್ಲದ ಬಿಗಿದ ಹೆಣನ ಕಂಡ. ಪ್ರತಿಸೂರ್ಯನುದಯಿಸಿದನಿದರ ಮೇಲೇನಿಹುದೋ ಎನ್ನುತ್ತ ಜನರುಗಳು ಹೆದರಿ ಸಂವಾದಿಸುತಿರೆ..."

ಪ್ರಾತಃಕಾಲ ಸೂರ್ಯೋದಯದ ಸಂದರ್ಭದಲ್ಲಿ ಗಗನದಲ್ಲಿ ವಿಲಕ್ಷಣ ಬೆಳಕಿನ ರೇಖೆಗಳನ್ನೂ ಹಲವು ಸೂರ್ಯರನ್ನೂ ನಾನು ಬಾಲ್ಯದಲ್ಲಿ ಕಂಡಿದ್ದೇನೆ. ಅವು ಆಕಾಶ ಕಾಯಗಳ ಪ್ರಾಕೃತಿಕ ವೈಪರೀತ್ಯವೆಂಬಲ್ಲಿ ಅನುಮಾನವಿಲ್ಲ. ಆ ದಿನ ನನ್ನ ಊರಿನ ಜನ ಬಹಳ ಹೆದರಿದ್ದುದು ಜ್ಞಾಪಕವಿದೆ.

೧೨. (ಸಂ) ಎಚ್. ಶೇಷಯ್ಯಂಗಾರ್ (ಮದ್ರಾಸ್ ವಿಶ್ವವಿದ್ಯಾಲಯ. ೧೯೫೦), ೪. ೧೦.

೧೩. ರಟ್ಟಮತಂ (ಸಂ. ಎಚ್. ಶೇಷಯ್ಯಂಗಾರ್, ಮದ್ರಾಸ್ ವಿಶ್ವವಿದ್ಯಾಲಯ. ೧೯೫೦)

೧೪. ಚಂದ್ರಸೂರ್ಯರನ್ನು ನುಂಗುವ ರಾಕ್ಷಸ ರಾಹುವೇ. (ಹಿಂದೆ, ಬಸವಣ್ಣನವರ ಟೀಕಿನ ವಚನಗಳನ್ನು ನೋಡಿ). ಮಂಗರಾಜನ ನಿಘಂಟಿನಲ್ಲಿಯೂ ಕೇತು ಎಂದರೆ ರಾಹು ಎಂದೇ ಅರ್ಥ ಹೇಳಿದೆ. (ಕನ್ನಡ ನಿಘಂಟು, II. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪು. ೨೧೦೪). ಕೇತು ಎಂಬುದು ಅನಿಷ್ಟ ಸೂಚಕವಾದ ಬಾಲಚಿಕ್ಕೆ, ಧೂಮಕೇತು ಎಂಬರ್ಥದಲ್ಲಿ ಪಂಪಭಾರತ. ಗದಾಯುದ್ಧಗಳಲ್ಲಿ ಬಳಕೆಯಾಗಿದೆ (ಅದೇ)

೧೫. William Crooke: Religion and Folklore of Northern India. (New Delhi. 1925) pp. 39-41.

೧೬. R.E. Enthoven : Folklore of the Konkan (Delhi 1976) p. 8

೧೭. Maithili S. Rao: 'Eclipses in Mythology (Science Today. Feb 1980. P. 35)

೧೮. ಅದೇ.

೧೯. ಈ ಎಲ್ಲ ಕತೆಗಳಿಗೆ ಆಕರಗಳು : ಕೆ. ಶಿವರಾಮ ಕಾರಂತ: ಈ ಜಗತ್ತು (ಐಬಿಎಚ್ ಪ್ರಕಾಶನ. 1979); James George Frazer: The Golden Bough (Macmillan Paper Backs. 1978); Encyclopaedia of Religion and Ethics ("Prodigies and Portents" ನೋಡಿ); Brewer's Dictionary of Phrase and Fable; Gertrude Jobes : Dictionary of Mythology. Folklore and Symbols.

೨೦. ಇಲ್ಲಿಯ ಘಟನೆಗಳನ್ನು ಹಿಂದೆ ಹೇಳಿದ ಆಕರಗಳಿಂದಲೂ, ನಂ. ವೆಂಕಟೇಶ ಅಯ್ಯಂಗಾರ್ಯರ "ಜ್ಯೋತಿರ್ವಿನೋದಿನಿ" ಎಂಬ ಗ್ರಂಥದಿಂದಲೂ (ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು. ೧೯೩೧) ಪಡೆದಿದ್ದೇನೆ.

೨೧. ಈ ವಿವರಗಳು ಕಾಣೆಯವರ ಪೂರ್ವೋಕ್ತ ಗ್ರಂಥದಿಂದ.

೨೨. ಆಕರ ತಿಳಿಯದ ಈ ಶ್ಲೋಕವನ್ನು ಶ್ರೀ ನಾರಾಯಣಶಾಸ್ತ್ರಿಗಳು ಒದಗಿಸಿದ್ದಾರೆ.

# ಗ್ರಹಣಗಳು: ಪ್ರಾಚೀನ ಕನ್ನಡಿಗರು ಕಂಡಂತೆ

## ಗ್ರಹಣದಂದು ಆತ್ಮಬಲಿ

ಆತ್ಮಹತ್ಯೆ (Suicide) ಯಾವಾಗಲೂ ನಿಷಿದ್ಧ ಮತ್ತು ಕಾನೂನು ಬಾಹಿರ. ಅತ್ಮಬಲಿ (Self-immolation) ಆತ್ಮಹತ್ಯೆಗಿಂತ ಭಿನ್ನ. ಆತ್ಮಹತ್ಯೆ ವ್ಯಕ್ತಿಯ ವೈಯಕ್ತಿಕ ನಿರ್ಧಾರ ಮತ್ತು ಅದು ಅವನಿಗೆ ಮಾತ್ರ ಗೊತ್ತಿರುತ್ತದೆ. ಯಾವುದೋ ಸಂದರ್ಭದಲ್ಲಿ, ಅಥವಾ ಉತ್ಕಟ ಪರಿಸ್ಥಿತಿಯಲ್ಲಿ ವ್ಯಕ್ತಿ ಇದ್ದಕ್ಕಿದ್ದಂತೆ ನಿರ್ಣಯಿಸಿ ತನ್ನ ಪ್ರಾಣವನ್ನು ತಾನು ತೆಗೆದುಕೊಳ್ಳುವುದು ಆತ್ಮಹತ್ಯೆ. ಆ ಗಳಿಗೆ ದಾಟಿದರೆ ಅವನು ಮತ್ತೆ ಆತ್ಮಹತ್ಯೆಗೆ ಯತ್ನಿಸುವುದು ಅಸಂಭವ. ಏಕೆಂದರೆ ಆತ್ಮಹತ್ಯೆಗೆ ಪೂರ್ವಭಾವಿಯಾದ ದೀರ್ಘಾಲೋಚನೆಯಿರುವುದಿಲ್ಲ (ಇದಕ್ಕೆ ಅಪವಾದಗಳಿರ ಬಹುದು). ಆತ್ಮಹತ್ಯೆಗೆ ತನ್ನನ್ನು ತಾನು ಕೊಂದುಕೊಳ್ಳುವುದಕ್ಕಿಂತ ಹೆಚ್ಚಿನ ಗಂಭೀರ ಉದ್ದೇಶ ಅಥವಾ ಆದರ್ಶ ಇರುವುದಿಲ್ಲ. ಆದರೆ ಆತ್ಮಬಲಿ ಪೂರ್ವನಿಯೋಜಿತವಾದುದು. ಅದು ಪೂರ್ವಭಾವಿ ಯೋಚನೆಯ ಫಲ ಮತ್ತು ಅದು ಸಾರ್ವಜನಿಕ ಒಪ್ಪಿಗೆ ಪಡೆದಿರುತ್ತದೆ. ತನ್ನನ್ನು ತಾನು ಕೊಂದುಕೊಳ್ಳುವ ಅಥವಾ ಬಲಿಕೊಟ್ಟುಕೊಳ್ಳುವ ವ್ಯಕ್ತಿಯ ಮುಂದೆ ಒಂದು ಘನೋದ್ದೇಶ ಇರುತ್ತದೆ. ಆ ಘನೋದ್ದೇಶ ಕಾಲದಿಂದ ಕಾಲಕ್ಕೆ ಬೇರೆಯಾಗಬಹುದು. ಆದರೆ, ಆ ಆದರ್ಶದ ಹಿಂದೆ ವ್ಯಕ್ತಿಯ ದೃಢ ನಿರ್ಧಾರವಿರುತ್ತದೆ. ಸಹಗಮನ, ಗರುಡಪದ್ಧತಿ (ರಾಜ ಸತ್ತಾಗ ಅವನ ಜೊತೆ ಅವನ ಅನುಯಾಯಿಗಳು ತಮ್ಮನ್ನು ತಾವು ಕೊಂದುಕೊಳ್ಳುವುದು), ಜೈನರ ಸಮಾಧಿಮರಣ (ಆಹಾರಾದಿಗಳನ್ನು ತ್ಯಜಿಸಿ ಪ್ರಾಣ ಬಿಡುವುದು) – ಇವು ಆತ್ಮಹತ್ಯೆಗಳಲ್ಲ, ಆತ್ಮಬಲಿಗಳು. ಆತ್ಮಹತ್ಯೆ, ಅತ್ಮಬಲಿಗಳ

ಸ್ಪಷ್ಟ ವ್ಯತ್ಯಾಸವನ್ನು ಗುರುತಿಸಿಕೊಳ್ಳದಿದ್ದರೆ ನಾವು ದೊಡ್ಡ ತಪ್ಪನ್ನು ಮಾಡಿದಂತಾಗುತ್ತದೆ.

ಆತ್ಮಬಲಿಗೆ ಭಾರತೀಯ ಧಾರ್ಮಿಕ ಗ್ರಂಥಗಳು ಅವಕಾಶ ಕೊಟ್ಟಿವೆ. ಮಹಾರೋಗ ಪೀಡಿತ, ಮಹಾಪಾಪಿ, ವೃದ್ಧ, ತೀವ್ರವೈರಾಗ್ಯಪರ, ವಿಧವೆ ಇವರು ಬಯಸಿದರೆ ತಮ್ಮನ್ನು ತಾವು ಕೊಂದುಕೊಳ್ಳಲು ಅವಕಾಶ ಕಲ್ಪಿಸಿವೆ. ಪ್ರಾಯಶ್ಚಿತ್ತ, ತೀವ್ರ ಪಶ್ಚಾತ್ತಾಪ, ಮೋಕ್ಷೇಚ್ಛೆ, ಪತಿಭಕ್ತಿಗಳಿಂದ ಪ್ರಚೋದಿತರಾದವರಿಗೆ ಮಾತ್ರ ಆತ್ಮಬಲಿಗೆ ಅವಕಾಶ. ಸ್ಮೃತಿಗಳಲ್ಲಿ ಈ ಬಗ್ಗೆ ಹಾಕಿರುವ ನಿಯಮಗಳು ಸಾಕಷ್ಟು ಕಠಿಣವಾಗಿಯೇ ಇವೆ.

ಆತ್ಮಬಲಿಗಳಲ್ಲಿ ಜೈನರ ಸಮಾಧಿಮರಣವನ್ನು ಧಾರ್ಮಿಕ ಆತ್ಮಬಲಿ ಎಂದು ಕರೆಯಬಹುದು. ಹಿಂದೂಗಳಲ್ಲಿಯೂ ಇವೂ ಉಂಟು. ವಾರಣಾಸಿ, ಪ್ರಯಾಗಗಳಲ್ಲಿ ನೀರಲ್ಲಿ ಮುಳುಗಿ ಸಾಯುವುದು, ಗ್ರಹಣದಂತಹ ದಿನಗಳಲ್ಲಿ ತನ್ನನ್ನು ತನ್ನು ಕೊನೆಗಾಣಿಸಿಕೊಳ್ಳುವುದು ಇವೂ ಧಾರ್ಮಿಕ ಆತ್ಮಬಲಿಗಳೇ.[೮] ಅಲ್ಬೆರೂನಿ ಎಂಬ ಹನ್ನೊಂದನೆಯ ಶತಮಾನದ ಪ್ರವಾಸಿ "ಬ್ರಾಹ್ಮಣರೂ ಕ್ಷತ್ರಿಯರೂ ಅತ್ಮಹತ್ಯೆಮಾಡಿಕೊಳ್ಳುತ್ತಾರೆ"[೨] ಎಂದು ತನ್ನ ಪ್ರವಾಸ ಕಥನದಲ್ಲಿ ಹೇಳಿದ್ದಾನೆ. ಬ್ರಹ್ಮಶಿವ ತನ್ನ 'ಸಮಯಪರೀಕ್ಷೆ'ಯಲ್ಲಿ (ಸಂ.ಬಿ.ಎಸ್. ಕುಲಕರ್ಣಿ. ಪು. ೩೮೦) ಸೂರ್ಯಗ್ರಹಣಗಳಂದು ಅಗ್ನಿಪ್ರವೇಶಮಾಡಿ ಆತ್ಮಹತ್ಯೆ ಮಾಡಿಕೊಳ್ಳುವ ಪದ್ಧತಿಯನ್ನು ಪ್ರಸ್ತಾಪಿಸಿದ್ದಾನೆ.

ರವಿಯ ವಿಮಾನಕೆ ರಾಹುವಿ
ನ ವಿಮಾನವಡ್ಡಮಾಗೆ ತತ್ಪತಿಯಂ ರಾ
ಹುವೆ ನುಂಗಿತೆಂದು ತಡದಿರ
ದೆ ವಹ್ನಿಯ ಪೊಕ್ಕು ಮುರುಟಿ ಸಾವಮೂರ್ಢರ್॥

ಕಿಚ್ಚಂ ಪೊಕ್ಕಡೆ ತೊನ್ನಂ
ಚಚ್ಚರಮಾ ಕ್ಷಣದೆ ದೇವನಾಗಿರ್ಪನದೇ
ನಚ್ಚರಿಯೋ ಪುಗುವುದೆಂದಾ
ಕಿಚ್ಚಂ ಪೊಕ್ಕಲ್ಲಿ ಮುರುಟಿ ಸಾವಮೂರ್ಢರ್॥

ಹಾಗೆ ಕಿಚ್ಚನ್ನು ಹೊಗುವವರು ತಮಗೆ ಗ್ರಹಣದಂತಹ ದಿನ ಸತ್ತರೆ

ಮೋಕ್ಷಸಿಗಬಹುದೆಂಬ ನಿರೀಕ್ಷೆ ಹೊಂದಿರಬೇಕು. ಅಥವಾ ಮೇಲಿನ ಎರಡನೆಯ ಪದ್ಯದಲ್ಲಿರುವಂತೆ ತೊನ್ನು ರೋಗ ಪೀಡಿತರು ಗ್ರಹಣದ ದಿನ ಕಿಚ್ಚುಹೊಕ್ಕು ಸತ್ತರೆ ತಾವು ದೇವತೆಗಳಾಗಬಹುದೆಂಬ ಆಸೆಯಿಟ್ಟುಕೊಂಡಿರಲೂ ಸಾಧ್ಯ. ಮೊದಲ ಪದ್ಯದಿಂದ, ರಾಹು ಸೂರ್ಯನನ್ನು ನುಂಗಿತೆಂಬ ಕಳವಳದಿಂದ ಜನರು ಅಗ್ನಿಪ್ರವೇಶ ಮಾಡುವರೆಂಬ ಬ್ರಹ್ಮಶಿವನ ವಿವರಣೆಯನ್ನು ಸ್ವಲ್ಪ ಸಂದೇಹದಿಂದ ನೋಡಬೇಕು. (ಪ್ರಾಕ್ತನ ಮನುಷ್ಯ ಸೂರ್ಯನನ್ನು ಉಳಿಸಲಿಕ್ಕಾಗಿ ತನ್ನನ್ನು ತಾನು ಬಲಿ ಕೊಟ್ಟುಕೊಳ್ಳುತ್ತಿದ್ದ ಆಚರಣೆ ಕ್ರಮೇಣ ಮೋಕ್ಷಕ್ಕಾಗಿ ಬಲಿ ಎಂಬ ಬಣ್ಣವನ್ನು ಪಡೆದಿರಬೇಕು ಎಂಬ ಊಹೆಯನ್ನು ಮಾಡಲು ಸಾಧ್ಯವಾದರೆ ಬ್ರಹ್ಮಶಿವನ ಹೇಳಿಕೆ ಒಂದು ವಾಸ್ತವ ಸಂಗತಿಯನ್ನೇ ಹೇಳುತ್ತದೆ ಎಂದು ಭಾವಿಸಬೇಕಾಗುತ್ತದೆ.)

ಕರ್ನಾಟಕದಲ್ಲಿ ಒಟ್ಟು ಇಂತಹ ಆರು ಆತ್ಮಬಲಿಗಳನ್ನು ಹೇಳುವ ಶಾಸನಗಳು ದೊರಕಿವೆ. ಗ್ರಹಣಗಳು ಆತ್ಮಬಲಿಯಂತಹ ಕಾರ್ಯಗಳಿಗೆ ಶುಭದಿನಗಳೆಂದೂ, ಅಂದು ಮಡಿದವರಿಗೆ ಸೂರ್ಯಲೋಕವು ಲಭಿಸುವುದೆಂದೂ ಸ್ಪಷ್ಟವಾಗಿ ಶಾಸನಗಳಲ್ಲಿ ಹೇಳಲಾಗಿದೆ. ಆ ಶಾಸನಗಳು ಹೀಗಿವೆ.

೧) ಶಿವಮೊಗ್ಗ ಜಿಲ್ಲೆ, ಸೊರಬತಾಲೂಕಿನ ಮೂಗೂರಿನ ಶಾಸನ (ಕಾಲ : ಸು. ಕ್ರಿ. ಶ. ೧೧೨೯)

"ಶ್ರೀಮತು ಭೂಲೋಕಮಲ್ಲ ವರ್ಷದ ೯ನೆಯ ಸೌಮ್ಯ ಸಂವತ್ಸರ ಮಾಘ ಬ ಅಮಾವಾ ಸೂರ್ಯಗ್ರಹಣದಲು ಕಲಿ... ತಳೆದ ರಾಚೆಯಜೀಯ....ಭಟ್ಟ ಅಗ್ನಿಪ್ರವೇಶ ಮಾಡಿ...ಕ ಪ್ರಾಪ್ತನಾದ ಅವರಣ್ಣ ನಾ. ಸಿಂಹ ಕಾಳೆಯ ಕಲಕಟ್ಟ"[೩]

(ಬ=ಬಹುಳ, ಅಮಾವಾ = ಅಮಾವಾಸ್ಯೆ)

ಅಗ್ನಿಪ್ರವೇಶ ಮಾಡಿದಾತ ರಾಚೆಯಜೀಯ...ಭಟ್ಟ; ಅವನ ಹೆಸರಲ್ಲಿ ಕಲ್ಲು ನಿಲ್ಲಿಸಿದಾತ ಅವನ ಅಣ್ಣ ಬಹುಶಃ ನಾರಸಿಂಹ. "...ಕ ಪ್ರಾಪ್ತನಾದ" ಎಂಬುದು "ಸೂರ್ಯಲೋಕ ಪ್ರಾಪ್ತನಾದ" ಎಂದಿರಬಹುದು.

೨) ಧಾರವಾಡ ಜಿಲ್ಲೆ ಹಾನುಗಲ್ ತಾಲೂಕಿನ ಬಾಳೂರು ಗ್ರಾಮದ ಶಾಸನ (ಕಾಲ : ಶನಿವಾರ, ಅಕ್ಟೋಬರ್ ೪, ೧೧೩೦)[೪]

"ಸ್ವಸ್ತಿಶ್ರೀಮತು ಸಖಿವರ್ಷದ ೧೦೫೩ರನೆಯ ಸಾಧಾರಣ ಸಂವತ್ಸರದ ಆಶ್ವಯುಜ ಬಹುಳ ದೀಪಾವಳಿ ಅಮಮಾ. ವಡ್ಡವಾರದಂದು ಶ್ರೀಮತು ಬಾಳೆವೂರ ಬಮ್ಮಗಾವುಡನ ಮಗ ಕಾಳಗಾವುಡ ಕೊಟ್ಟ ಕಲು ೧ ಸಾಹಣಿ ಮೊಲ್ಲೆಯನ ಮಗಂ ಚ್ಚಂಡ ಸೂರಿಯ

(ವಡ್ಡವಾರ = ಶನಿವಾರ)

ಅಗ್ನಿಪ್ರವೇಶ ಮಾಡಿದಾತ ಚಂಡ ಎಂಬಾತ; ಶಾಸನ ಹಾಕಿಸಿದವನು ಕಾಳಗಾವುಡ. (ಚಿತ್ರ ೬ ನೋಡಿ.) ಕೆಳಗಿನ ಹಂತದಲ್ಲಿ ಬಲಗಡೆ ಬೆಂಕಿ ಇದೆ; ಪಕ್ಕದ ಕಂಬದ ಮೇಲೆ ಚಂಡ ನಿಂತು ಕೈಯಿಂದ ಬೆಂಕಿಗೆ ಏನೋ (ಬಹುಶಃ ಎಣ್ಣೆ ತುಪ್ಪದಂತಹ ದ್ರವವನ್ನೋ ಹೂಗಳಂತಹ ಪೂಜಾವಸ್ತುಗಳನ್ನೋ) ಸುರಿಯುತ್ತಿದ್ದಾನೆ. ಮಧ್ಯದಲ್ಲಿ ದೇವತಾಸ್ತ್ರೀಯರು ಮೇಲಕ್ಕೆ ಕೊಂಡೊಯ್ಯುತ್ತಿದ್ದಾರೆ. ಮೇಲಿನ ಹಂತದಲ್ಲಿ ಚಂಡ ಸ್ವರ್ಗ ಅಥವಾ ಸೂರ್ಯ ಲೋಕದಲ್ಲಿ ಕೈಮುಗಿದು ಕುಳಿತಿದ್ದಾನೆ. ಬಲಗಡೆ–ಚಂಡನ ಎಡಕ್ಕೆ–ಸರ್ಪಾಕಾರದ ರಾಹುವು ಸೂರ್ಯನನ್ನು ಹಿಡಿರುವುದನ್ನು ಅಸ್ಪಷ್ಟವಾಗಿ ಕಾಣಬಹುದು.

೩) ಧಾರವಾಡ ಜಿಲ್ಲೆ ಹಾನುಗಲ್ ತಾಲೂಕಿನ ತಿಳಿವಳ್ಳಿ ಗ್ರಾಮದ ಶಾಸನ[೭] (ಕಾಲ : ಸೋಮವಾರ, ಮಾರ್ಚ್ ೧೦, ೧೧೪೧)

"ಸ್ವಸ್ತಿ ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣ ಮೌನಾನುಷ್ಠಾಣ ಜಪಸಮಾಧಿ ಶೀಲಗುಣಸಂಪನ್ನರಪ್ಪ ಶ್ರೀಮದನಾದಿ ಅಗ್ರಹಾರಂ ತಿಳಿವಳ್ಳಿಯಶೇಷ ಮಹಾಜನಂಗಳು ಕಲ್ಲಂ ಕೊಟ್ಟರು ಅಯಿನೂರ್ವರ ಪುತ್ರಂ ಕೋಣವತ್ತಿಯ ಕೇತವೆಯ ಮಗ ದೇವಿಸೆಟ್ಟಿಯ ತಮ್ಮ ಬೊಪ್ಪ ರೌದ್ರ ಸಂವತ್ಸರದ ತಳಿರಮವಾಸೆ ಸೋಮವಾರ ಸೂರ್ಯಗ್ರಹಣ ನಿಮಿತ್ತವಾಗಿ ಪ್ರಾಣಮಂ ತ್ಯಾಗಮಾಡಿ ಸೂರ್ಯಲೋಕ ಪ್ರಾಪ್ತನಾದ॥ ಇಂತೀ ಕಲ್ಲಂ ಬಂಟ್ಟ ಸಾಸಿರ್ವರ ಧರ್ಮವಂ ಶ್ರೀ ಬಂಟೇಶ್ವರ ದೇವರಲ್ಲಿ ನಿಲ್ಲಿಸಿ [ಪ]...ರು॥ ದ್ವಾವಿಮೌ ಪುರುಷೋ ಲೋಕೇ ಸೂರ್ಯಮಂಡಲ ಭೇದಿನಃ ।.......ಯೋಗಯುಕ್ತಾಶ್ಚ । ರಣೇಚಾಭಿಮುಖೇ ಹತಾ."

ಅಗ್ನಿಪ್ರವೇಶ ಮಾಡಿದಾತ ಬೊಪ್ಪ ; ಶಾಸನವನ್ನು ಬಂಟ ಜಾತಿಯ ಸಾಸಿರ್ವರು ನಿಲ್ಲಿಸಿದರು. ("ದ್ವಾವಿಮೌ........" ಎಂದು ಆರಂಭವಾಗುವ ಶ್ಲೋಕದ ಸರಿಯಾದ ಪಾಠ ಮತ್ತು ಅರ್ಥಗಳಿಗೆ ಮುಂದೆ ನೋಡಿ). ಈ ಶಾಸನ ಚಿತ್ರವನ್ನು ನೋಡಿ (ಚಿತ್ರ, ೭ ಮತ್ತು ೮). ಕೆಳಗಿನ ಹಂತದಲ್ಲಿ ಬೊಪ್ಪ ಉರಿಯುವ ಬೆಂಕಿಗೆ ಹಾರುತ್ತಿದ್ದಾನೆ. ಬಲಗಡೆ ಕಮಂಡಲು ಇದೆ. ಎಡಗಡೆ ಏನೋ ಮಂಗಳ ಚಿಹ್ನೆಯಿದೆ. ಮಧ್ಯದ ಹಂತದ ಸೂರ್ಯಲೋಕದಲ್ಲಿ ಬೊಪ್ಪ ಕುಳಿತಿದ್ದಾನೆ. ಮೇಲೆ ಸೂರ್ಯ ಚಂದ್ರರಲ್ಲಿ ಸೂರ್ಯನನ್ನು ಸರ್ಪಾಕಾರದ ರಾಹು ನುಂಗುತ್ತಿದೆ. ಸೂರ್ಯ ಚಂದ್ರರ ಚಿತ್ರಗಳು ಎಲ್ಲಾ ಶಾಸನಗಳ ಮೇಲೂ ಇರುತ್ತವೆ. ಸೂರ್ಯ ಚಂದ್ರರಿರುವವರೆಗೆ ದತ್ತಿ ಉಳಿದು ಬರಬೇಕೆಂಬ ದಾನಿಯ ಆಶಯದ ಸಂಕೇತ ಅವು. ಈ ಶಾಸನದಲ್ಲಿ ಮಾತ್ರ ಉದ್ದೇಶಪೂರ್ವಕವಾಗಿ ಸೂರ್ಯನನ್ನು ರಾಹು ಬಂದು ನುಂಗುತ್ತಿರುವಂತೆ ಶಿಲ್ಪಿ ಕಲ್ಪಿಸಿಕೊಂಡಿದ್ದಾನೆ.

೪) ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲೂಕಿನ ಮುಗಳಗೆರೆ ಗ್ರಾಮದ

"ಸ್ವಸ್ತಿಶ್ರೀಮತು ಜಗದೇಕಮ......ನೆಯ ದುರ್ಮತಿ ಸಂವತ್ಸರದ ಚೈತ್ರ ಶುದ್ಧ ೧ ಸೋಮವಾರದಂದು ತೆಲುಂಗ ನಾಡೊಳಗಣ ಮಾದವಿಯ ಕೆರೆಯ ಕೇತಿಸೆಟ್ಟಿಯ ಬಾಗಣಬ್ಬೆಯ ಪುತ್ರ ಗೋತ್ರಪವಿತ್ರಂ ಮಲ್ಲೆಯಂ ಶ್ರೀಮತು ಮುಗುಳಗೆರಿಯ ಮರಡೆಯ ಸೋವಿಮಯ್ಯ ಊರದ....ದ್ರಯ್ಯ ಪ್ರಮುಖ ಸಮಸ್ತ ಪ್ರಜಂಗಳು ವಿಳ್ಟು.... ಕುಡಲು ಮತ್ತ॥ಸುರಳುರು ಬಯೆ..ಯತ್ತಿರೆ ನರರೆಲ್ಲ ಜೀಯೆನಲ್ಕೆ ಸೂರ್ಯಗ್ರಹಣ ದೊರೆಕೊಳೆ ತೆಲುಂಗದ ಮಲ್ಲಂ ಸುರಗಣಿಕೆಯರುಯ್ಯೆ ಸೂರ್ಯಲೋಕಕ್ಕೋದ॥ ಸೂರ್ಯಾಯ ನಮ॥ ರೂವಾರಿರಾಮೋಜನ ಕೆಲಸ"

ದೂರದ ತೆಲುಗುನಾಡಿನ ಮಲ್ಲೆಯ ಆತ್ಮಬಲಿಯಾದವನು; ಊರಿನ ಜನ ಶಾಸನ ಕೊಟ್ಟರು; ಶಾಸನ ಕೆತ್ತಿದವನು ರಾಮೋಜ.

೫) ಅದೇ ಊರಿನ ಶಾಸನ. ಕಾಲ : ಕ್ರಿ. ಶ. ೧೪೩೨.[೬]

"...೫೭ನೆಯ ವಿರೋಧಿಕ್ರಿ ಸಂವತ್ಸರದ ಅಕ್ಷಯ ತ್ರಿತೀಯದಲ್ ವಸೆಯದು ಚಟ್ಟನ ಹಳ್ಳಿಯ ಮಲ್ಲದಳಾರತರಾ ಬಮ್ಮ ಮುಗುಳಗೆರಿಯಲು ಕಲ ಹಿಡಿದು ಸೂರ್ಯಗ್ರಹಣದಲು ಸುರಲೋಕಪ್ರಾಪ್ತನಾದ"

ಆತ್ಮಬಲಿಯಾದವನು ಬಮ್ಮ. "ಮುಗುಳಗೇರಿಯಲ್ಲಿ ಕಲ್ಲನ್ನು (?) ಹಿಡಿದು" ಸತ್ತ ಎಂಬ ಮಾತು ಅರ್ಥವಾಗುವುದಿಲ್ಲ.

೬) ಧಾರವಾಡ ಜಿಲ್ಲೆ ಹಿರೇಕೆರೂರು ತಾಲೂಕಿನ ನಾಗವಂದ ಗ್ರಾಮದ ಶಾಸನದಲ್ಲಿ (Karnataka Inscriptions, Vol.vi.Ed: B.R. Gopal. No. 19. P. 45-6) ಬೀಚಿಗ ಎಂಬಾತ ಕ್ರಿ.ಶ. ೧೧೨೦ರ ಆಕ್ಟೋಬರ್ ೨೧ರಂದು ಅಮವಾಸ್ಯೆ ಸೂರ್ಯಗ್ರಹಣದ ಸಮಯದಲ್ಲಿ ಆತ್ಮಬಲಿಯಾದ ವಿಷಯವಿದೆ. ಆತನ ಗುರುಗಳಾದ ನಾಗರಾಸಿ ಪಂಡಿತರು ಶಾಸನವನ್ನು ಹಾಕಿಸಿದಂತೆ ಹೇಳಿದೆ. ಶಾಸನ ಭಾಗ ಹೀಗಿದೆ:[೭]

"ಸ್ವಸ್ತಿ ಶ್ರೀಮಚ್ಚಾಳುಕ್ಯ ವಿಕ್ರಮವರಿಷ ೪೫ನೆಯ ಸಾರ್ವರಿ ಸಂವತ್ಸರದ ಕಾರ್ತಿಕದ ಮಾವಾಸೆ ಆದಿವಾರದಂದು ಉದೆಯುವುಗೊಂಡನೂರ ನಾಗಾರ್ಜುನದಲ್ಲಿ ಸೂರ್ಯಗ್ರಹಣದಲು ದೇವರ ಬಂಟ ಬೀಚಿಗಂ ಸೂರ್ಯಲೋಕಪ್ರಾಪ್ತನಾದನಾತನ ಗುರುಗಳು ನಾಗರಾಸಿಪಂಡಿತರು ಕಲ್ಲಕಂಭಮಂ ನಿಲಿಸಿ ಪಡಿಸಲಿಸುತ್ತವಿರ್ಪರು॥ ಮಂಗಳ ಮಹಾ ಶ್ರೀ ಶ್ರೀ"

ಬೀಚಿಗ ದೈವಭಕ್ತನಾಗಿದ್ದು, ಮೋಕ್ಷಾರ್ಥಿಯಾಗಿ ಆತ್ಮಬಲಿಮಾಡಿ ಕೊಂಡಿರುವಂತೆ ಕಾಣುತ್ತದೆ. ಅವನ ಆತ್ಮಬಲಿಗೆ ಅವನ ಗುರುಗಳು ನಾಗರಾಶಿ ಪಂಡಿತರ ಒಪ್ಪಿಗೆ ಆಶೀರ್ವಾದಗಳು ಇದ್ದುವು.

ಮೇಲಿನ ಆರೂ ಶಾಸನಗಳು ಶಿಕಾರಿಪುರ, ಸೊರಬ, ಹಾನಗಲ್, ಹಿರೇಕೆರೂರು ತಾಲೂಕುಗಳಲ್ಲಿ ದೊರಕಿದ್ದು ಇವು ಹೆಚ್ಚು ಕಡಿಮೆ ಪಕ್ಕಪಕ್ಕದ ತೀರ ಸಮಿಪದ ತಾಲೂಕುಗಳಾಗಿವೆ. ಕರ್ನಾಟಕದ ಉಳಿದ ಭಾಗಗಳಿಗಿಂತ ಶಿವಮೊಗ್ಗ ಜಿಲ್ಲೆಯ ಉತ್ತರಭಾಗ, ಧಾರವಾಡ ಜಿಲ್ಲೆಯ ಪಶ್ಚಿಮಭಾಗಗಳ ಕೂಡು ಪ್ರದೇಶದಲ್ಲಿ, ಅಂದಿನ ಬನವಾಸಿ ೧೨.೦೦೦ ಎಂಬ ಹೆಸರಿನ ನಾಡಿನಲ್ಲಿ ಸೂರ್ಯಗ್ರಹಣದ ದಿನ ಆತ್ಮಬಲಿ ಮಾಡಿಕೊಳ್ಳುವ ಪದ್ಧತಿ ಹೆಚ್ಚಾಗಿದ್ದಂತೆ ಕಾಣುತ್ತದೆ. ಚಂದ್ರಗ್ರಹಣದ ದಿನ ಯಾರೂ ಆತ್ಮಬಲಿ ಮಾಡಿಕೊಳ್ಳುವ ಪದ್ಧತಿ ಇರಲಿಲ್ಲ. ಎರಡು ಶಾಸನಗಳಲ್ಲಿ (ನಂ. ೧, ೨) ಸ್ಪಷ್ಟವಾಗಿ ಬೆಂಕಿ ಹೊಕ್ಕು ಎಂದಿರುವುದರಿಂದ ಬಹುಶಃ ಎಲ್ಲರೂ ಅಗ್ನಿಪ್ರವೇಶದ ಮೂಲಕವೇ ಆತ್ಮಬಲಿ ಮಾಡಿಕೊಳ್ಳುತ್ತಿದ್ದರು. ಮಕರಮಾಸ ದಿವಸದಲ್ಲಿ ಎಂದರೆ ಮಕರಸಂಕ್ರಮಣದ ದಿನ, ಉತ್ತರಾಯಣದ ಆರಂಭದ ದಿನ ಆಂಧ್ರದ ಚಿತ್ತೂರು ಜಿಲ್ಲೆಯಲ್ಲಿ ಒಬ್ಬಾತ ಅಗ್ನಿಪ್ರವೇಶವಾಡಿ ಸುರಲೋಕಕ್ಕೆ ಹೋದ ಎಂಬ ಇನ್ನೊಂದು ಶಾಸನವೂ ಆದನ್ನೇ ಸಮರ್ಥಿಸುತ್ತದೆ. (ಬೆಂಕಿಗೂ ಸೂರ್ಯನಿಗೂ ಹತ್ತಿರದ ಸಂಬಂಧವಿದೆ). ಶಾಸನಗಳು ಆತ್ಮಬಲಿಗೆ ಜನರು ಏಕೆ ಸೂರ್ಯಗ್ರಹಣವನ್ನು ಆರಿಸಿಕೊಂಡರು ಎಂಬುದನ್ನು ಸ್ಪಷ್ಟವಾಗಿ ಹೇಳದಿದ್ದರೂ, ಮುಂದೆ ನಾವು ನೋಡುವಂತೆ ಸೂರ್ಯಗ್ರಹಣವು 'ಪುಣ್ಯಕಾಲ' ವೆಂದು ಭಾವಿಸಲ್ಪಡುತ್ತಿತ್ತು, ಮತ್ತು ಆ ದಿನ ಸತ್ತವರು ಸೂರ್ಯಲೋಕಕ್ಕೆ ಹೋದರೆಂದು ಮೇಲಿನ ಶಾಸನಗಳಲ್ಲೇ ಹೇಳಿರುವುದರಿಂದ (ನಂ. ೩, ೪,೬) ಸುರಲೋಕಕ್ಕೆ ಹೋದರೆಂದು ಎರಡು ಶಾಸನಗಳು (ನಂ. ೨, ೫) ಹೇಳಿರುವುದರಿಂದ, ಮೋಕ್ಷವು ಆತ್ಮಬಲಿ ಮಾಡಿಕೊಂಡವರ ಉದ್ದೇಶವೆಂದು ಕಾಣುತ್ತದೆ. ಬದುಕಿನಲ್ಲಿ ಅವರು ಆಸಕ್ತಿಯನ್ನು ಕಳೆದುಕೊಂಡಿದ್ದರೆಂಬುದಕ್ಕೆ ಏನೂ ಸೂಚನೆಗಳು ಸಿಗದಿದ್ದರೂ ಹಾಗೆ ಅನುಮಾನಿಸುವುದು ಅತಾರ್ಕಿಕವೇನಲ್ಲ. ಬ್ರಹ್ಮಶಿವ ಗ್ರಹಣದಿನಗಳಲ್ಲಿ ತೊನ್ನು ರೋಗದವರು ಆತ್ಮಬಲಿಯಾಗಿ ತಮ್ಮನ್ನು ತಾವು ಕೊಂದುಕೊಳ್ಳುತ್ತಿದ್ದರೆಂದು ಹೇಳಿರುವುದರಿಂದ ಮೇಲಿನ ಆರು ಜನರಲ್ಲಿ ಒಂದಿಬ್ಬರಾದರೂ ಅಂಥವರಿರಬಹುದೆಂದು ಊಹಿಸಲು ಮನಸ್ಸಾದರೂ, ಶಾಸನಗಳಲ್ಲಂತೂ ಅಂತಹ ಊಹೆಗೆ ಎಳ್ಳಷ್ಟು ಅವಕಾಶವಿಲ್ಲ. ಅವರ ಸ್ಮಾರಕವಾಗಿ ಕಲ್ಲುಗಳನ್ನು ನಿಲ್ಲಿಸಲು ಊರಿನ ಜನ ಅಥವಾ ಇತರರು ಆಸಕ್ತರಾಗಿರುವಂತೆ, ಅವರ ಮಕ್ಕಳಿಗೆ ಅಥವಾ ಬಂಧುಗಳಿಗೆ ದತ್ತಿಗಳನ್ನು ಕೊಡುವಲ್ಲಿ ಆಸಕ್ತಿ ತೋರಿಲ್ಲ. ವೀರ ಸಾಯುವುದು

ತನಗಾಗಿ ಅಲ್ಲ, ಊರಿಗಾಗಿ ದೇಶಕ್ಕಾಗಿ; ಆದ್ದರಿಂದ ವೀರರ ಸಂತಾನಕ್ಕೆ ದತ್ತಿಗಳನ್ನು ಕೊಡುವುದು ಸಮಾಜದ ಹೊಣೆಯಾಗಿದ್ದಿತು. ಸೂರ್ಯಗ್ರಹಣದ ದಿನ ಅಗ್ನಿಪ್ರವೇಶ ಮಾಡುವುದು ವ್ಯಕ್ತಿಯ ಮೋಕ್ಷಾಪೇಕ್ಷೆ ಅಥವಾ ಸದ್ಗತಿ ಬಯಕೆ ಅಗಿರುವುದರಿಂದ ಅಂಥವರ ವಂಶದವರಿಗೆ ದತ್ತಿ ಕೊಡುವುದು ಸಮಾಜದ ಕರ್ತವ್ಯವಾಗಿರಲಿಲ್ಲವೆಂದು ಊಹಿಸಬಹುದು. ಅತ್ಮಬಲಿ ಮಾಡಿಕೊಂಡವರಲ್ಲಿ ಎಲ್ಲರೂ ಲೌಕಿಕರು; ಧಾರ್ಮಿಕಮುಖಂಡರು ಯಾರೂ ಇಲ್ಲ.

"ದ್ವಾವಿಮೌ..." ಎಂಬ ಶ್ಲೋಕ (ನಂ. ೩) ವಾಸ್ತವವಾಗಿ ಮೂಲತಃ ಸಂಸ್ಕೃತ ಮಹಾಭಾರತದ್ದು. ಅದರ ಸರಿಯಾದ ಪಾಠ ಹೀಗಿದೆ:

ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲಭೇದಿನೌ
ಪರಿವ್ರಾಡ್ ಯೋಗಯುಕ್ತಶ್ಚ ರಣೇಚಾಭಿಮುಖೇ ಹತಃ॥

ಇದರ ಅರ್ಥ: "ಲೋಕದಲ್ಲಿ ಸೂರ್ಯಮಂಡಲವನ್ನು ಭೇದಿಸಬಲ್ಲ ಇಬ್ಬರು ಪುರುಷರು ಮಾತ್ರ ಇದ್ದಾರೆ. ಒಬ್ಬ ಪರಿವ್ರಾಜಕನಾದ ಯೋಗಿ; ಮತ್ತೊಬ್ಬ ರಣರಂಗದಲ್ಲಿ ಮುಂಚೂಣಿಯಲ್ಲಿ ಹತನಾದ ಶೂರ". ಈ ಶ್ಲೋಕ ಅನೇಕ ವೀರಗಲ್ಲುಗಳ ಅಂತ್ಯದಲ್ಲಿ ದೊರಕುತ್ತಿದ್ದು ಇಲ್ಲಿ, ಆತ್ಮಬಲಿ ಶಾಸನದಲ್ಲಿ ದೊರಕಿರುವುದು ಸ್ವಾರಸ್ಯ. ಬೊಪ್ಪ ಯುದ್ಧದಲ್ಲಿ ಮಡಿದ ವೀರ ಅಲ್ಲದಿದ್ದರೂ. ಸೂರ್ಯಗ್ರಹಣದಲ್ಲಿ ಅಗ್ನಿ ಪ್ರವೇಶಮಾಡಿದ್ದರಿಂದ ಅವನು ಯೋಗಿಯೇ ಸರಿ. ಅಥವಾ ಕೊನೆಯ ಪಕ್ಷ ಯೋಗಿಗೆ ಸಮಾನ. ಬೊಪ್ಪನ ಶಾಸನ ವೀರಗಲ್ಲಿನ ಮಾದರಿಯ ಶಿಲ್ಪವನ್ನು ಹೊಂದಿರುವುದನ್ನು ಗಮನಿಸಬೇದು (ಚಿತ್ರ. ೫). ಬ್ರಹ್ಮಲೋಕಕ್ಕೆ ಹೋಗುವವರು ಸೂರ್ಯಮಂಡಲವನ್ನು ಮೊದಲು ಭೇದಿಸಿಕೊಂಡು ಹೋಗುತ್ತಾರೆಂಬ ನಂಬಿಕೆ ಇತ್ತು.

ಲೋಕಕ್ಕೆ ಒಡೆಯನಾದ ಸೂರ್ಯನಿಗೆ ವಿಪತ್ತು ಒದಗಿದುದನ್ನು ತಪ್ಪಿಸಲು ಶಾಂತ್ಯರ್ಥವಾಗಿಯೋ, ಸೂರ್ಯನ ಜೊತೆ ತಾವೂ ಸಾಯುವುದು ಕರ್ತವ್ಯ ವೆಂದೋ, ಸೂರ್ಯನ ನಾಶದಿಂದ ಉಂಟಾದ ದುಃಖದಿಂದಲೋ ಮೂಲತಃ ಆದಿಮಾನವರಲ್ಲಿ ಇದ್ದಿರಬಹುದಾದ ಆತ್ಮಬಲಿ ಮುಂದೆ ಧಾರ್ಮಿಕ ಆಯಾಮಗಳನ್ನು ಪಡೆದುಕೊಂಡು, ಆತ್ಮಬಲಿಯ ಉದ್ದೇಶ ಮೋಕ್ಷಸಾಧನೆ ಎಂಬ ಕಲ್ಪನೆ ಪ್ರಬಲವಾಗಿರಬಹುದು. ಐತಿಹಾಸಿಕಯುಗದಲ್ಲಿ ಇದೇ ಮೂಲ

ಪ್ರಚೋದನೆಂತಾದರೂ ಅದು ಆದಿಕಾಲದ ರಿಚುಂಯಲ್ಲೊಂದರ ಅವಶೇಷವಾಗಿರುವ ಸಾಧ್ಯತೆ ಹೆಚ್ಚು.

ಸೂರ್ಯನನ್ನು ಆರಾಧಿಸುತ್ತಿದ್ದ "ಸೌರ" ಎಂಬ ಹೆಸರಿನ ತಾಂತ್ರಿಕ ಮತ ಕರ್ನಾಟಕದಲ್ಲಿತ್ತೆಂದು ಹೇಳಲು ಆಧಾರಗಳಿವೆ. ಸಮಯಪರೀಕ್ಷೆಯ ಬ್ರಹ್ಮ ಶಿವ (ಸು. ೧೧೫೦) ಸೌರಮತವನ್ನು ಚೆನ್ನಾಗಿ ಅಭ್ಯಸಿಸಿದ್ದ ಮತ್ತು ಸೌರರ ಸೂರ್ಯಾರಾಧನೆಯ ಬಗ್ಗೆ ಅನೇಕ ವಿವರಗಳನ್ನು ತನ್ನ 'ಸಮಯಪರೀಕ್ಷೆ'ಯಲ್ಲಿ ಒದಗಿಸಿದ್ದಾನೆ. ಮೇಲಿನ ಆರು ಜನರೂ ಸೌರ ಸಾಧಕರಲ್ಲದಿದ್ದರೂ ಸೌರಪಂಥದ ಪ್ರಭಾವ ಅವರ ಮೇಲೆ ಸ್ವಲ್ಪವಾದರೂ ಇರಬಹುದು.[೧೦]

**ದತ್ತಿಗಳು**

ಕುಮಾರವ್ಯಾಸ ಭಾರತದಲ್ಲಿನ (ವಿರಾಟಪರ್ವ. ೭-೧೩) ವಿರಾಟನ ಗೋಗ್ರಹಣ ಪ್ರಸಂಗದಲ್ಲಿ ಕರ್ಣನು ಬ್ರಾಹ್ಮಣನಾದ ದ್ರೋಣನನ್ನು ಹೀಯಾಳಿಸುತ್ತಾನೆ.

ಇಂದು ಪಿತೃದಿನವಿಂದು ಸಂಕ್ರಮ
ಣೆ(ಣೇ?)ಂದು ಸೂರ್ಯಗ್ರಹಣ ಹರಿದಿನ
ಎಂದು ಯಜ್ಞಾರಂಭದಿನ ವರ್ಧಂತಿ ಲೇಸೆಂದು
ಬಂದು ನಾನಾ ಮುಖದ ದಾನಕೆ
ತಂದ ವಸ್ತುವ ಬಾಚಿ ಹೊಳ್ಳಿಸಿ
ತಿಂದು ಕೊಬ್ಬಿದ ನಿಮಗೆ ಸುಭಟರ ಮಾತದೇಕೆಂದ॥

ಪಿತೃದಿನ, ಸಂಕ್ರಮಣ, ಚಂದ್ರಸೂರ್ಯಗ್ರಹಣಗಳು, ಹರಿದಿನ, ಯಜ್ಞ ವರ್ಧಂತಿ ದಿನಗಳಲ್ಲಿ ದಾನ ತೆಗೆದುಕೊಂಡು ಊಟಹೊಡೆಯುವವರು ಬ್ರಾಹ್ಮಣರು ಎಂದು ಕರ್ಣ ಹಾಸ್ಯಮಾಡಿದರೆ, ಅಶ್ವತ್ಥಾಮ ಅವನಿಗೆ ಉತ್ತರ ಕೊಡುತ್ತ, "ಜಗವ ರಕ್ಷಿಸಲಾವು ಕೊಂಬೆವು" ಎನ್ನುತ್ತಾನೆ. ಬ್ರಾಹ್ಮಣರು ದಾನವನ್ನು ಸ್ವೀಕರಿಸಿ ಜಗತ್ತನ್ನು ರಕ್ಷಿಸುತ್ತಾರೆ. ಅವರಿಗೆ ಮಾತ್ರ ದಾನ, ಪರಿಗ್ರಹದ ಅರ್ಹತೆಗಳುಂಟು. ಉಳಿದವರಿಗೆ ಪರಿಗ್ರಹದ (ದಾನ ಸ್ವೀಕಾರ) ಅರ್ಹತೆ ಇಲ್ಲ. ಬಸವಣ್ಣ ಗ್ರಹಣ, ಸಂಕ್ರಾಂತಿಗಳು ಪವಿತ್ರ ದಿನಗಳೆಂದು ಭಾವಿಸಬೇಕಾಗಿಲ್ಲವೆಂದೂ, ಶಿವನನ್ನು ನೆನೆದ ದಿನವೇ ಗ್ರಹಣ ಸಂಕ್ರಾಂತಿಗಳಿಗಿಂತ ಶ್ರೇಷ್ಠವೆನ್ನುತ್ತಾನೆ. ("ಗ್ರಹಣ, ಸಂಕ್ರಾಂತಿಯಿಂದ ವೆಗ್ಗಳ.....ದೇವಾ ನಿಮ್ಮ ಮಾಣದೆ ನೆನೆವಂಗೆ".) ಇದು

ವೀರಶೈವರಲ್ಲಿ ಹನ್ನೆರಡನೆಯ ಶತಮಾನದಲ್ಲಿದ್ದ ಭಾವನೆಯಾದರೂ ಗ್ರಹಣ ಒಂದು ವಿಶೇಷ ದಿನವೆಂಬ ಪರಿಕಲ್ಪನೆ ಉದ್ದಕ್ಕೂ ಮುಂದುವರಿದುಕೊಂಡು ಬಂದಿದೆ. ಚಂದ್ರ, ಸೂರ್ಯಗ್ರಹಣಗಳ ದಿನ ದಾನಗಳನ್ನು ಕೊಡುವ ಪದ್ಧತಿ ಕರ್ನಾಟಕದಲ್ಲಿ ವಿಶೇಷವಾಗಿದ್ದು ಅದರ ಉಲ್ಲೇಖ ಕರ್ನಾಟಕದ ಕಾವ್ಯಗಳಲ್ಲಿ ನೂರಾರು ಶಾಸನಗಳಲ್ಲಿ ಬಂದಿದೆ. ಶ್ರೀಪಾದರಾಜರು[೧೧] ತಮ್ಮ ಮಧ್ವನಾಮ ಕೀರ್ತನೆಯನ್ನು ಬರೆದು ಓದಿದವರಿಗೆ 'ಸೋಮಸೂರ್ಯೋಪರಾಗದಿ ಗೋಸಹಸ್ರ'ಗಳನ್ನು ಬ್ರಾಹ್ಮಣರಿಗೆ ದಾನಮಾಡಿದ ಪುಣ್ಯಬರುವುದೆಂದು ಹೇಳುತ್ತಾರೆ. ಗ್ರಹಣಗಳ ಉಲ್ಲೇಖ, ಗ್ರಹಣಗಳ ದಿನ, ಕೊಟ್ಟ ದಾನಗಳ ಉಲ್ಲೇಖವಿರುವ ಶಾಸನಗಳಲ್ಲಿ ಮುಖ್ಯವಾದ ಕೆಲವನ್ನು ಕೊಡುತ್ತೇನೆ. (ಕಾಲಾನುಕ್ರಮವಾಗಿ ಶಾಸನಗಳನ್ನು ಪಟ್ಟಿಮಾಡಿಲ್ಲ)

(೧) ಭಾನುವಾರ, ಆಗಸ್ಟ್ ೧, ೧೦೮೭[೧೨]

— "ಪ್ರಭವ ಸಂವತ್ಸರ ಶ್ರಾವಣದಮಾವಾಸ್ಯೆ ಆದಿತ್ಯವಾರದಂದಿನ ಸರ್ವಗ್ರಾಸಿ ಸೂರ್ಯಗ್ರಹಣ"

— ಆ ದಿನ ಅಂಕೇಶ್ವರ ದೇವರಿಗೆ ಮಹಾಮಂಡಳೇಶ್ವರ ಕಾರ್ತವೀರ್ಯನು ದತ್ತಿ ಬಿಡುತ್ತಾನೆ. ಪೂರ್ಣಗ್ರಹಣಕ್ಕೆ ಕರ್ನಾಟಕದಲ್ಲಿದ್ದ ಹೆಸರು. "ಸರ್ವಗ್ರಾಸಿ ಸೂರ್ಯಗ್ರಹಣ"

(೨) ಆಗಸ್ಟ್ ೨, ೧೪೨೨[೧೩] – "ಸೋಮವಾರ ಸೋಮಗ್ರಹಣಪುಣ್ಯಾ ಕಾಲದಲ್ಲು"–ವೀರ ಹರಿಹರರಾಯ ತನ್ನ ತಂದೆ ದೇವರಾಯ ಮಹಾರಾಯನು ಶಾಶ್ವತ ಪುಣ್ಯಲೋಕವನ್ನು ಪಡೆಯಲೆಂದು ನಂಜುಂಡೇಶ್ವರ ದೇವರಿಗೆ ಮತ್ತು ಹನ್ನೊಂದು ಬ್ರಾಹ್ಮಣರಿಗೆ ಸೋಮಹಳ್ಳಿ ಎಂಬ ಗ್ರಾಮವನ್ನು ದೇವರಾಜಪುರವೆನ್ನುವ ಅಗ್ರಹಾರವನ್ನಾಗಿ ಮಾಡಿ ಹಂಚುತ್ತಾನೆ,

ಮೇಲಿನ ಎರಡು ಶಾಸನಗಳ ಗ್ರಹಣಗಳನ್ನು ಗಮನಿಸಿ : ಸೂರ್ಯಗ್ರಹಣ ಭಾನುವಾರವೂ, ಸೋಮಗ್ರಹಣ ಸೋಮವಾರವೂ ನಡೆದಿವೆ. (ಭಾನು=ಸೂರ್ಯ) ಆಯಾ ಗ್ರಹಣದ ಆದೇ ಹೆಸರಿನ ದಿನದಲ್ಲಿ ನಡೆದರೆ ಆ ಯೋಗವನ್ನು 'ಚೂಡಾಮಣಿ' ಎಂದು ಕರೆಯುತ್ತಿದ್ದರು.

("ಚಂದ್ರಗ್ರಹಃ ಚಂದ್ರವಾರೇ ಸೂರ್ಯೇ ಸೂರ್ಯಗ್ರಹಃ ತಥಾ । ಚೂಡಾಮಣಿರಯಂ ಯೋಗಃ ತತ್ರಾನಂತ ಫಲಂ ಸ್ಮೃತಂ॥ ಅನ್ಯಸ್ಮಾತ್ ಕೋಟಿಗುಣಮತ್ರ ಫಲಂ ಲಭೇತ್")

ಚೂಡಾಮಣಿ ಯೋಗದಲ್ಲಿ ಕೊಟ್ಟ ದಾನಗಳು ಇತರ ಗ್ರಹಣಗಳ ದಾನ

ಗಳಿಗಿಂತ ಒಂದು ಕೋಟಿಯಷ್ಟು ಹೆಚ್ಚು ಪುಣ್ಯವೆಂದು ಹೇಳಿದೆ.

(೩) ಸೊರಬ ತಾಲ್ಲೂಕಿನ ಓಟೂರಿನ ಕ್ರಿ.ಶ. ೯೩೯ ರ ಶಾಸನದಲ್ಲಿ 'ವಳಯ ಗ್ರಹಣ' ಎಂಬ ಮಾತಿದೆ.[೧೪]

"ಸ್ವಸ್ತಿ ಶಕ ನೃಪಕಾಳಾಕ್ರಾಂತ ಸಂವತ್ಸರಂಗಳೆಂಟು ನೂರ ಆರುವತ್ತೊಂದನೆಯ ವಿಳಂಬಿ ಸಂವತ್ಸರದ ಚೈತ್ರವಾಸ ಸುದ್ಧಪಕ್ಷದ ಪಾಡಿವದ ಬುಧವಾರ ವಳೆಯಗ್ರಹಣ ದೊಳೆಲ್ಲವೀಶ್ವರಯ್ಯಗೆ ಕೊಟ್ಟರ್ ಇದಂ ಬರೆದೊಂ ಸೇನಬೋವನ್ನಾಕಯ್ಯ ಬಿಯಳ ಮಾಡಿದ ಮಂಗಳಂ"

ಇಲ್ಲಿಯದು ಸೂರ್ಯಗ್ರಹಣವೆಂಬಲ್ಲಿ ಅನುಮಾನವಿಲ್ಲ. 'ವಳಯ ಗ್ರಹಣ' (ವಳಯ = ಕಂಕಣ, ಬಳೆ) ಎಂಬುದು ಕಂಕಣ ಗ್ರಹಣವಾಗಿರುವ ಸಾಧ್ಯತೆಗಳು ಹೆಚ್ಚು. ಭೂಮಿ ಸೂರ್ಯರ ಮಧ್ಯೆ ಚಂದ್ರ ಬಂದು, ಆ ಚಂದ್ರಬಿಂಬದ ಸುತ್ತ ಸೂರ್ಯಬಿಂಬವು ಕಾಂತಿ ವಲಯದಂತೆ ಕಾಣಿಸಿದರೆ ಅದಕ್ಕೆ 'ಕಂಕಣಗ್ರಹಣ' ಎಂದು ಹೆಸರು (Annular Eclipse). ಚಂದ್ರಬಿಂಬ ಸೂರ್ಯನನ್ನು ಮರೆಮಾಡಿದಾಗ, ಚಂದ್ರಬಿಂಬ ಕಪ್ಪಾಗಿ ಕಾಣಿಸುತ್ತಾನೆ. (೧೯೭೩ರಲ್ಲಿ ಪ್ರಕಟವಾಗಿರುವ 'ಖಗೋಳಶಾಸ್ತ್ರ' ಗ್ರಂಥದಲ್ಲಿ – ಪ್ರಕಟಣೆ ಮೈಸೂರು ವಿ.ವಿ.ಪು. ೨೮೧–ಶ್ರೀಚಕ್ರವರ್ತಿ ಮತ್ತು ಷಣ್ಮುಗಂ ಅವರು Annular Eclipse ಎಂಬರ್ಥದಲ್ಲಿ 'ವಲಯ ಗ್ರಹಣ'ವನ್ನು ಬಳಸಿರುವುದು ಗಮನಾರ್ಹ ಸಂಗತಿ.)

(೪) ಗ್ರಹಣದ ದಿನಗಳಲ್ಲಿ ನಡೆಯುತ್ತಿದ್ದ ಹೋಮಗಳಿಗಾಗಿ ಮೈಸೂರು ಜಿಲ್ಲೆ ಸೋಮನಾಥಪುರದ ದೇವಾಲಯಕ್ಕೆ ಹನ್ನೆರಡು ಕೊಳಗ ತುಪ್ಪದ ದತ್ತಿ ಕೊಟ್ಟಿದೆ.[೧೫]

(೫) ಗ್ರಹಣಗಳ ದಿನ ಸಹಸ್ರನಾಮಾರ್ಚನೆ ದೇವಾಲಯಗಳಲ್ಲಿ ನಡೆಯುತ್ತಿದ್ದಿತು.[೧೬] ಅಂದು ವಿಶೇಷ ಪೂಜಾದಿಗಳು ನೆರವೇರುತ್ತಿದ್ದುವು.

(೬) ಜೈನನಾಗಿದ್ದ ('ಜಿನೇಂದ್ರ ಪಾದಾರಾಧಕ') ಹೊಯ್ಸಳ ಗೊಯ್ದಿಸೆಟ್ಟಿ ಎಂಬ ಶ್ರೀಮಂತ ವರ್ತಕ ಶಿವಧರ್ಮಕಥನವನ್ನು ಕೇಳಿ, ಉತ್ತರಾಯಣ ಸಂಕ್ರಾಂತಿ ಸೂರ್ಯಗ್ರಹಣ ವ್ಯತೀಪಾತ ಇಷ್ಟೂ ಒಟ್ಟಿಗೆ ಸೇರಿದ ದಿನ ಶಿವಮೊಗ್ಗ ಜಿಲ್ಲೆ ಹಿರಿಯೂರಿನ ಸಿದ್ಧೇಶ್ವರ ದೇವರ ಅಂಗಭೋಗ (ಅಭಿಷೇಕ, ಪೂಜೆ, ಆರತಿ), ನೈವೇದ್ಯಗಳಿಗಾಗಿ ದತ್ತಿ ಬಿಟ್ಟು ಕೊಟ್ಟ.[೧೭]

(೭) ಸೂರ್ಯಗ್ರಹಣದಂದು ಆರು ಗ್ರಹಗಳು ಕೂಡಿದ ಪುಣ್ಯಕಾಲ ದಾನಗಳಿಗೆ ಪ್ರಶಸ್ತ ಸಮಯವೆಂದು ಒಂದು ಶಾಸನ ಹೇಳುತ್ತದೆ. ಅಂತಹ

ಸೂರ್ಯಗ್ರಹಣ ನಡೆದದ್ದು ಜನವರಿ ೬, ೧೬೬೫[೧೮] (ಕನ್ನಿಂಗ್ ಹ್ಯಾಮ್ ಅವರ ಪಟ್ಟಿ ಪ್ರಕಾರ ಗ್ರಹಣ ಜನವರಿ ೧೬)

".....ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೫೮೬ ಸಂದ ಕ್ರೋಧಿ ಸಂವತ್ಸರದ ಪುಷ್ಯ ಬಹುಳ ೩೦ ಶುಕ್ರವಾರ ಸೂರ್ಯೋಪರಾಗ ಷಡ್ಗ್ರಹಯೋಗ ಪುಣ್ಯಕಾಲದಲ್ಲಿ."

ದೇವರಾಜ ಒಡೆಯರು ಲಕ್ಕೂರು ಗ್ರಾಮವನ್ನು ಲಖಿಪ್ಪ ಜೋಯಿಸರಿಗೆ ಹಿರಣ್ಯೋದಕದಾನಧಾರಾಪೂರ್ವಕವಾಗಿ, ಕೃಷ್ಣಾರ್ಪಿತವೆಂದು ಕೊಟ್ಟರು. ಅವರಿಗೆ ಅಂದೇ 'ಸುವರ್ಣತುಲಾ' ದಾನವನ್ನೂ ಕೊಡಲಾಯ್ತು. (=ತುಲಾಪುರುಷದಾನ; ದಾನಿಯ ತೂಕದಷ್ಟು ಚಿನ್ನದ ದಾನ). ಸೂರ್ಯ, ಚಂದ್ರ, ಕುಜ(ಮಂಗಳ), ಬೃಹಸ್ಪತಿ, ಜ್ಞ(ಬುಧ), ಕೇತು ಇವೇ ಆ ಆರು ಗ್ರಹಗಳು.

(೮) ಹಿಂದೂ ದೇವಾಲಯಗಳಂತೆಯೇ ಬಸದಿಗಳಲ್ಲೂ ಗ್ರಹಣಗಳಂದು ಅಷ್ಟವಿಧಾರ್ಚನೆ ನಡೆಯುತ್ತಿದ್ದಿತು. ಕ್ರಿ.ಶ. ೧೧೭೩ ರಲ್ಲಿ ಸೋಮವಾರ ಸೋಮಗ್ರಹಣವಾದಾಗ ಲಕ್ಕುಂಡಿಯಲ್ಲಿ ಬಸದಿಯ ದೇವರ ಅಷ್ಟವಿಧಾರ್ಚನೆಗಾಗಿ (ಜಲ, ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ) ತವನಿಧಿ ಕೇಶವ ಎಂಬಾತ ಅಲ್ಲಿಯ ಆಚಾರ್ಯ ಶ್ರೀ ಷುಷೇನ ಪಂಡಿತರ ಕಾಲ ತೊಳೆದು ದತ್ತಿ ಕೊಡುತ್ತಾನೆ.[೧೯]

(೯) ಗ್ರಹಣದಂದು ಸೂರ್ಯದೇವರಿಗೆ ಧಾರವಾಡ ಜಿಲ್ಲೆ ಕುರಹಟ್ಟಿಯಲ್ಲಿ ದತ್ತಿ ಕೊಡಲಾಗಿದೆ.[೨೦] ಕರ್ನಾಟಕದಲ್ಲಿ ಇಂತಹ ಅನೇಕ ಸೂರ್ಯದೇವಾಲಯವಿದ್ದುವು.

(೧೦)ಗ್ರಹಣಗಳಂದು ಚಕ್ರವರ್ತಿಗಳು 'ಮಹಾದಾನ'ಗಳನ್ನು ಮಾಡುತ್ತಿದ್ದರು. ಗೊಜ್ಜಿ ವಲ್ಲಭನು ಚಂದ್ರಗ್ರಹಣದ ದಿನ ತುಲಾಪುರುಷ, ಭೂ, ಕಲ್ಪವೃಕ್ಷ, ಆಹಾರ, ಭೈಷಜ್ಯ (ಔಷಧಿ) ದಾನಗಳನ್ನೂ,[೨೧] ಚಾಳುಕ್ಯ ತ್ರಿಭುವನಮಲ್ಲನು ಸೂರ್ಯಗ್ರಹಣದ ದಿನ ಗೋದಾವರಿ ತೀರದ ಕೋಟಿತೀರ್ಥದಲ್ಲಿ ಸ್ನಾನಮಾಡಿ 'ತುಲಾಪುರುಷ' ದಾನ ಕೊಟ್ಟು, ಪುರಾಣೋಕ್ತಿಯಂತೆ ಅನೇಕ 'ತುಷ್ಟಿದಾನ'ಗಳನ್ನೂ ಮಾಡಿದನು. ದಾನಿ ತನ್ನ ತೂಕ ಚಿನ್ನ ಕೊಡುವುದೇ ತುಲಾಪುರುಷ ದಾನ; ಚಿನ್ನದ ಕಲ್ಪವೃಕ್ಷ, ಅದರ ಸುತ್ತ ಮತ್ತೆ ನಾಲ್ಕು ಚಿನ್ನದ ಮರ, ಮಧ್ಯೆ ಕಾಮದೇವ ಅವನ ನಾಲ್ವರು ಪತ್ನಿಯರನ್ನು ಪ್ರತಿಷ್ಠಿಸಿ ಪೂಜಿಸಿ ಎಲ್ಲವನ್ನೂ ದಾನಮಾಡುವುದೇ ಕಲ್ಪವೃಕ್ಷ[೨೨] ಎಂಬ ದಾನ. ಅಮೋಘವರ್ಷ ನೃಪತುಂಗನು ಕ್ರಿ.ಶ. ೮೬೨ (ಆಗಸ್ಟ್ ೨೮) ಗೋಲೆಯ ಭಟ್ಟ ಎಂಬ "ಜೋತಿಷ ಶಕುನ ನಿಮಿತ್ತ" ಗಳನ್ನು ಬಲ್ಲ

ಮಹಾವಿದ್ವಾಂಸನಿಗೆ ('ಬಲ್ಲಹ') ವಿಜಾಪುರ ಜಿಲ್ಲೆಯ ಹೂವಿನ ಹಿಪ್ಪರಗಿಯನ್ನು ಸೂರ್ಯಗ್ರಹಣದಂದು ತುಲಾಪುರುಷ ದಾನ ಸಮೇತ ಕೊಟ್ಟಂತೆ ಎರಡು ಶಾಸನಗಳು ಹೇಳುತ್ತವೆ.[೨೫] (ಈ ಸೂರ್ಯ ಗ್ರಹಣ ಕನ್ನಿಂಗ್ ಹ್ಯಾಮ್ ಪಟ್ಟಿ ಪ್ರಕಾರ ಆಗಸ್ಟ್ ೨೯ ನಡೆಯಿತು.) ಗೋಲೆಯ ಭಟ್ಟ ರಾಜನಿಗೆ ಸೂರ್ಯಗ್ರಹಣದ ಮುಂದಿನ ಉತ್ಪಾತಗಳನ್ನು ಭವಿಷ್ಯ ಹೇಳಿದ್ದಂತೆ ತೋರುತ್ತದೆ. ಬಹುಶಃ ಅವುಗಳ ಉಪಶಾಂತಿಗಾಗಿ ಗೋಲೆಯ ಭಟ್ಟನಿಗೇ ದತ್ತಿಗಳನ್ನು ಕೊಡಲಾಯಿತು.

(೧೧) ಕೆಲವು ಶಾಸನಗಳು ಗ್ರಹಣದಂದು ದೇವಾಲಯಗಳಲ್ಲಿ ನಡೆಯುತ್ತಿದ್ದ ವಿಶೇಷ ಪೂಜೆಗಳ ವಿವರಗಳನ್ನು ಕೊಟ್ಟಿವೆ. ಅವುಗಳಲ್ಲಿ ತಾಳಗುಂದ ಪ್ರಣವೇಶ್ವರ ದೇವಾಲಯದ ಕ್ರಿ.ಶ. ೧೧೫೮ರ ಶಾಸನ ನಿಶ್ಚಿತವಾಗಿಯೂ ಅಗ್ರಗಣ್ಯವಾದುದು.[೨೬] ಅದು ಅಲ್ಲಿನ ಬ್ರಾಹ್ಮಣರಿಗೆ, ದೇವಾಲಯದಲ್ಲಿ ನಡೆಯುವ ಉತ್ಸವಾದಿಗಳಿಗೆ ಸಂಬಂಧಿಸಿದ ದತ್ತಿ ಶಾಸನ. ಅದರ ಸಾರಾಂಶವಿದು.

"ಪ್ರತಿವರ್ಷ ಬರುವ ದೊಡ್ಡ ಹಬ್ಬಗಳು ಎಂದರೆ ಎರಡು ಅಯನ (ಉತ್ತರಾಯನ, ದಕ್ಷಿಣಾಯನ), ಎರಡು ವಿಷುವ, ಸೂರ್ಯ ಚಂದ್ರ ಗ್ರಹಣಗಳು, ಆಷಾಢ ಕಾರ್ತಿಕ ಮಾಘ ವೈಶಾಖದ ಹುಣ್ಣಿಮೆಗಳು–ಆ ದಿನಗಳಲ್ಲಿ ಮಾಡುವ ಒಂದೊಂದು ಪೂಜೆಯೂ ಆರಾರು ತಿಂಗಳ ಪೂಜೆಯ ಫಲವನ್ನು ಕೊಡುತ್ತದೆ. ಆ ಹಬ್ಬಗಳಲ್ಲಿ ದೇವರಿಗೆ 'ಸಹಸ್ರಗಡ್ಡುಗೆ' ಆರಂಭಿಸಬೇಕು. (ಗಡ್ಡುಗೆ=ಗಡಿಗೆ ನೀರಿನ ಅಭಿಷೇಕ).

ಪುಣ್ಯಾಹ ವಾಚನ ಮಾಡಿದ ಬಳಿಕ ಶಾಸ್ತ್ರ ಖಂಡಿಕದವರು ದೇವಾಲಯದ ರಂಗದಲ್ಲಿ ವಿದ್ಯಾಮಂಡಳ ಗುರುಮಂಡಳ ಶಿವಮಂಡಳ ಎನ್ನುವ ಮಂಡಳತ್ರಯವನ್ನು ಬರೆದು ಅರ್ಚಿಸಿ ಶಾಂತ್ಯಧ್ಯಾಯವನ್ನು ಜಪಿಸುವರು. ವೇದಖಂಡಿಕದ ನಾಲ್ವರು ನಾಲ್ಕು ಕಳಶಗಳಲ್ಲಿ ನೀರು ತುಂಬಿ ಸರ್ವೌಷಧಿ, ಗೋರೋಚನ, ಸಿದ್ಧಾರ್ಥ, ಪಂಚಪತ್ರೆ, (ಮಾವು, ಬಿಲ್ವ, ನೆಲ್ಲಿ, ದರ್ಭೆ, ಉತ್ತರಾಣಿ), ಪಂಚಭಲ್ಲಿ, (ಆಲ, ಅತ್ತಿ, ಅರಳಿ, ಬಸರಿ, ಬೆತ್ತಗಳ ತೊಗಟೆ), ಪಂಚಗವ್ಯ (ಗೋಮೂತ್ರ, ಗೋಮಯ, ಹಾಲು, ಮೊಸರು, ತುಪ್ಪ), ವಿಲಕ್ಕಿ, ಚಂದನ ಮೊದಲಾದ ಮಂಗಳದ್ರವ್ಯಗಳನ್ನು ಹಾಕಿ ನಾಲ್ಕು ದಿಕ್ಕಿನಲ್ಲಿದ್ದು ನಾಲ್ಕೂ ವೇದಗಳಲ್ಲಿನ ರುದ್ರಸೂಕ್ತಗಳನ್ನು ಜಪಿಸಬೇಕು. ಆಷ್ಟರಲ್ಲಿ 'ಗಡ್ಡುಗೆ' ಮುಗಿಯಲು (ಅಭಿಷೇಕ ಕೊನೆಯಾಗಲು) ದೇವರಿಗೆ (ಶಿವಲಿಂಗಕ್ಕೆ) ಎಂಟು ರೀತಿಯ ಅರ್ಘ್ಯ. ( = ಅರ್ಘ್ಯಗಂಧ. ಶಿವಪರವಾದ ಅರ್ಘ್ಯಗಂಧಗಳು– ಚಂದನ, ಅಗರು, ಕರ್ಪೂರ, ತಮಾಲ, ಜಲ, ಕುಂಕುಮ, ಉಶೀರು, ಕುಷ್ಠ), ಪಂಚಗವ್ಯ, ಪಂಚಾಮೃತಗಳನ್ನು (ತೆಂಗು, ಮಾವು, ಹಲಸು, ಬಾಳೆ ಇವುಗಳಲ್ಲಿ ಮೂರು ಮತ್ತು ಸಕ್ಕರೆ, ಜೇನುತುಪ್ಪ)ಸಿದ್ಧಪಡಿಸಿ ಯವೆ, ಗೋಧಿ, ಅಕ್ಕಿಯ ಹಿಟ್ಟುಗಳಿಂದ, ಬಿಸಿನೀರಿನಿಂದ, ನೆಲ್ಲಿ ಅರಿಸಿನಗಳಿಂದ ಅಭಿಷೇಕ ಮಾಡಿಸಿ ಕುಶೋದಕ,

ಗಂಧೋದಕ, ಪುಷ್ಪೋದಕ, ಫಳೋದಕ, ಸುಮನೋದಕ, ರತ್ನೋದಕದಿಂದ ಸ್ನಾನಮಾಡಿಸಿ, ಬಳಿಕ ಆ ನಾಲ್ಕು ಕಳಶಹಿಡಿದು ಸಮುದ್ರ ಪರವಾದ ಋಚೆಗಳನ್ನು ಹೇಳಿ ಮಂಗಳಾಭಿಷೇಕ ಮಾಡಿ ಪಂಚ ಸುಗಂಧಗಳಿಂದ ವಸ್ತ್ರಾಲಂಕಾರ, ಉಪವೀತ, ಮಧುಪರ್ಕ, ಆಚಮನಗಳನ್ನು ಕೊಟ್ಟು, ಹೂವಿನಿಂದ ಪೂಜಿಸಿ, ಪುಷ್ಪ, ಫಲ, ಪಕ್ವಾನ್ನ, ಮಂಟಪ, ಧೂಪ, ತುಪ್ಪದಾರತಿಗಳನ್ನು ಕೊಟ್ಟು ನಾಲ್ಕು ತಟ್ಟೆಗಳಲ್ಲಿ ಐದು ಬಣ್ಣದ ಅಕ್ಕಿಯನ್ನು ಹಾಕಿ ಅದರಲ್ಲಿ ಹಿಟ್ಟಿನ ದೀಪವನ್ನು, ಮೊಸರು, ದರ್ಭೆ ಸಮೇತ ಅರತಿ ಬೆಳಗಿ ನಿವಾಳಿಸಬೇಕು. ಆಗ ಮಂಗಳಗೀತ ವಾದ್ಯಗಳು ಮೊಳಗಬೇಕು. ಪಾಯಸ, ತುಪ್ಪ, ಭಕ್ಷ್ಯ, ಭೋಜ್ಯಾನ್ನದಾನಾದಿಗಳಿಂದ ನೈವೇದ್ಯ ಆಚಮನಗಳನ್ನು ಕೊಟ್ಟು, ಗಂಧ ತಾಂಬೂಲಗಳನ್ನು ಕೊಡಬೇಕು. ಆ ಹಬ್ಬಗಳಲ್ಲಿ ಹೋಮವನ್ನೂ, ಸಮೀಪದ ಬಳ್ಳಿಗಾವೆಯ ಎಲ್ಲ ದೇವರ ಪೂಜೆಗಳನ್ನೂ ನಡೆಸಬೇಕು."

ಈ ಎಲ್ಲ ವಿವರಗಳನ್ನು ಗ್ರಹಣಗಳ ದಿನ ನಡೆಸುತ್ತಿದ್ದರೆಂದು ಊಹಿಸ ಬಹುದು. ಏಕೆಂದರೆ, ತಾಳಗುಂದ ಬಹುಸಂಖ್ಯೆಯ ಬ್ರಾಹ್ಮಣ ವಿದ್ವಾಂಸರಿಂದ ಕೂಡಿದ್ದ ಮಹಾಗ್ರಹಾರವಾಗಿದ್ದು, ಅಲ್ಲಿಯ ಪ್ರಣವೇಶ್ವರವು ಬನವಾಸಿ ನಾಡಿನ ಅತ್ಯಂತ ಪ್ರಖ್ಯಾತ ದೇವಾಲಯವಾಗಿತ್ತು.

(೧೨)ಇಷ್ಟೇ ಸ್ವಾರಸ್ಯವಾದುದು, ಆದರೆ ಕಡಮೆ ವಿವರಗಳಿರುವ ಶಾಸನ ಮೈಸೂರು ಜಿಲ್ಲೆ ಮಳವಳ್ಳಿ ತಾಲೂಕಿನ ಹುಳ್ಳಂಬಳ್ಳಿಯ ಶಾಸನ. [೨೫] ೧೬೭೪ರ ಆಗಸ್ಟ್ ೨ರಂದು ನಡೆದ (ಕನ್ನಿಂಗ್‌ಹ್ಯಾಂ ಪಟ್ಟಿ ಪ್ರಕಾರ ಗ್ರಹಣ ಆಗಸ್ಟ್ ೧೨ರಂದು) ಸೂರ್ಯಗ್ರಹಣ ಸಮಯದಲ್ಲಿ ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ಚಿಕ್ಕದೇವರಾಜ ಒಡೆಯರು ಹುಳ್ಳಂಬಳ್ಳಿಯ ರೇವಣಾರಾಧ್ಯರ ಮಠದ ರುದ್ರಮುನಿದೇವಾರಾಧ್ಯರಿಗೆ ಬರೆಯಿಸಿಕೊಟ್ಟಂತಹ ಶಾಸನ ಇದು. ಮಠಾಧಿಪತಿಗಳು ಶ್ರೀ ಶೈಲಕ್ಕೆ ಯಾತ್ರೆ ಬೆಳಸಿ ಪ್ರಸಾದ ತಂದುಕೊಟ್ಟುದರ ಪರಿಣಾಮವಾಗಿ ಆ ಹಿಂದೆ ಕೈತಪ್ಪಿ ಹೋದ ತನ್ನ ರಾಜ್ಯದ ಎಲ್ಲ ಭಾಗಗಳು ವಶವಾದರೆ ಮುಂದೆ ಅವರ ಯಾತ್ರೆಗೆ ಎಲ್ಲ ಏರ್ಪಾಡುಗಳನ್ನೂ ಮಾಡಿ ಶ್ರೀಶೈಲದಲ್ಲಿ ಪೂಜಾದಿಗಳಿಗೆ ವ್ಯವಸ್ಥೆಮಾಡುವುದಾಗಿ ಚಿಕ್ಕದೇವರಾಜ ಒಡೆಯರು ಹರಕೆ ಹೊರುತ್ತಾರೆ. ಶ್ರೀಶೈಲದಿಂದ ಪ್ರಸಾದ ಬಂತು, ರಾಜರ ಮನೋಭೀಷ್ಟ ಈಡೇರಿತು. ಹಿಂದೆ ಮಾತು ಕೊಟ್ಟ ಪ್ರಕಾರ ಗ್ರಹಣದ ಪರ್ವಕಾಲದಲ್ಲಿ ಪ್ರತಿವರ್ಷ ೨೧೨ ವರಹಗಳನ್ನು ಈಶ್ವರಾರ್ಪಿತವಾಗಿ ಕೊಟ್ಟು ಮಠಕ್ಕೆ ಇನ್ನೂ ಅನೇಕ ಗೌರವಗಳನ್ನು ಅರ್ಪಿಸಿದರು. ಶ್ರೀಶೈಲದಲ್ಲಿರುವ ಅವದುಂಬರ ಕಟ್ಟೆ (=ಅತ್ತಿಮರದ ಕಟ್ಟೆ) ಮಲ್ಲಿಕಾರ್ಜುನ ದೇವರ ಗುಡಿಯಲ್ಲಿ ತಮ್ಮ ರಾಶಿ ಹೇಳಿ "ಅಮೃತ

ಮೃತ್ಯುಂಜಯ ಜಪ" ಮಾಡಲು ಬ್ರಾಹ್ಮಣರಿಗೆ ಇಷ್ಟು ಕೊಡಬೇಕು ಇತ್ಯಾದಿ ನಿಯಮಗಳನ್ನು ರಾಜ ಹಾಕಿದ್ದಾನೆ. ನಮ್ಮ ದೇವಾಲಯ ಮಠಗಳಿಗೆ ಹರಕೆ ಹೊತ್ತವರು ಗ್ರಹಣಗಳ ದಿನ ಅವನ್ನು ನೆರವೇರಿಸುತ್ತಿದ್ದ ಒಂದು ಪೂರ್ಣಚಿತ್ರ ಈ ಶಾಸನದಲ್ಲಿದೆ.

(೧೩)ಎಷ್ಟೋ ಶಾಸನಗಳು ತಮ್ಮ ಫಲಶ್ರುತಿ ವಾಕ್ಯಗಳಲ್ಲಿ (ದಾನವನ್ನು ಕಾಪಾಡಿದರೆ ಇಂತಹ ಪುಣ್ಯ, ಕಿತ್ತುಕೊಂಡರೆ ಇಂತಹ ಪಾಪ ಎಂದು ಹೇಳುವ ಭಾಗ), ದಾನವನ್ನು ಕಾಪಾಡಿದವರಿಗೆ ವಾರಣಾಸಿ ಕುರುಕ್ಷೇತ್ರಗಳಲ್ಲಿ ಸೂರ್ಯಗ್ರಹಣದಂದು ಮಾಡಿದ ದಾನದ ಪುಣ್ಯ ಬರುವುದೆಂಬ ಆಸೆಯನ್ನೂ, ಕಿತ್ತು ಕೊಂಡರೆ ಅಂದಿನ ದಿನ ಅದೇ ಜಾಗಗಳಲ್ಲಿ ಗೈದ ಪಾಪದ ಫಲ ಬರುವುದೆಂಬ ಭಯವನ್ನೂ ಒಡ್ಡಿವೆ..

"ಇಂತೀ ಧರ್ಮಮಂ ಪ್ರತಿಪಾಳಿಸಿದವರ್ಗೆ ವಾರಣಾಸಿ ಕುರುಕ್ಷೇತ್ರಾದಿ ತೀರ್ಥಂಗಳೊಳ್ ಸಾಸಿರ ಕವಿಲೆಯಂ ಕೋಡುಂ ಕೊಳಗುಮಂ (=ಗೊರಸು) ಪೊನ್ನಿಂ ರನ್ನದಿಂ ಕಟ್ಟಿಸಿ ಚತುರ್ವೇದ ಪಾರಗರಪ್ಪ ಬ್ರಾಹ್ಮಣರ್ಗೆ ಕೊಟ್ಟ ಫಳಮಕ್ಕುಂ; ಇದನಳಿದನಾ ದಿವ್ಯ ತೀರ್ಥಂಗಳೊಳಾ ಕವಿಲೆಗಳ್ಗೆ ಆ ಬ್ರಾಹ್ಮಣರ್ಗೆ ಆ ಸೂರ್ಯಗ್ರಹಣ ಸಮಯದೊಳಪಾಯಮಂ ಮಾಡಿದಾತನಪ್ಪ."[೨೧] "ಪುಣ್ಯತೀರ್ಥಂಗಳೊಳ್ ಸಾಸಿರ ಕವಿಲೆಯ ಕೋಡುಂ ಕೊಳಗಮಂ ಪಂಚರತ್ನದೊಳ್ ಕಟ್ಟಿಸಿ.......ಸೂರ್ಯಗ್ರಹಣದಂದು- ಭಯಮುಖಿಗೊಟ್ಟ ಫಳ"[೨೨]

> "ಇಂತೀ...ಸ್ಥಾನಮಂ ಪ್ರತಿಪಾಳಿಸಿದರ್ಗೆ ವಾರಣಾಸಿ ಕುರುಕ್ಷೇತ್ರವರ್ಘ್ಯ ತೀರ್ಥಮೆಂಬ ದಿವ್ಯತೀರ್ಥಂಗಳೊಳು ಸೂರ್ಯಗ್ರಹಣದಂದು ದಿವ್ಯ ತಪೋಧನರ್ಗಂ ವೇದಪಾರಗರಪ್ಪ ಬ್ರಾಹ್ಮಣರ್ಗಂ ಸಹಸ್ರ ಕವಿಲೆಗಳನಳಂಕಾರ ಸಹಿತಂ ಕೊಟ್ಟ ಪುಣ್ಯ ಫಳಮಕ್ಕು; ಇದನಳಿದಾತನಾ ತೀರ್ಥಂಗಳೊಳಾ ತಪೋಧರುಮನಾ ಬ್ರಾಹ್ಮಣರುಮನಾ ಕವಿಲೆಗಳನಳಿದ ಮಹಾಪಾತಕನಕ್ಕು."[೨೩]

ಈಚೆಗೆ ನಡೆದ ಗ್ರಹಣದಲ್ಲಿ ಕುರುಕ್ಷೇತ್ರ ವಾರಣಾಸಿಗಳಿಗೆ ಜನ ಬಹು ಸಂಖ್ಯೆಯಲ್ಲಿ ಭೇಟಿಕೊಟ್ಟ ಸಂಗತಿಯನ್ನು ಪತ್ರಿಕೆಗಳು ವರದಿಮಾಡಿದುದನ್ನು ಮುಂದೆ ನೋಡಲಿದ್ದೇವೆ.

(೧೪)ದೂರದ ರಾಜಧಾನಿಯಲ್ಲಿ ಆಳುತ್ತಿರುವ ರಾಜನಿಗೆ ಒಳ್ಳೆಯ ದಾಗಬೇಕೆಂದು ಕೆಳಗಿನ ಅಧಿಕಾರಿಗಳು ಗ್ರಹಣದ ಸಮಯದಲ್ಲಿ ದೈವಕ್ಕೂ ಬ್ರಾಹ್ಮಣರಿಗೂ ದತ್ತಿಗಳನ್ನು ಕೊಡುತ್ತಿದ್ದುದುಂಟು.[೨೪]

(೧೫) ದೇವಾಲಯಗಳಲ್ಲಿ ನಂದಾದೀವಿಗೆಗಳು ಸದಾ ಉರಿಯಲು, ಪ್ರತಿನಿತ್ಯ ಪುರಾಣ ಪಠನವಾಗಲು,[೩೦] ಸತ್ರದಲ್ಲಿ ಪ್ರಯಾಣಿಕರಿಗೆ ಭೋಜನ ವ್ಯವಸ್ಥೆಗೆ[೩೧] ಗ್ರಹಣ ದಿನಗಳಂದು ಬ್ರಾಹ್ಮಣರಿಗೆ ಭೂಮಿಯನ್ನು ಬಿಟ್ಟುಕೊಟ್ಟಿದ್ದಾರೆ; ಬೇರೆ ಬೇರೆ ತೆರಿಗೆಗಳನ್ನು ದತ್ತಿಯಾಗಿ ಕೊಟ್ಟಿದ್ದಾರೆ. ಶಾಸನಗಳಲ್ಲಿ ಗ್ರಹಣಗಳನ್ನು ಕುರಿತಂತೆ ಕಳವಳ, ಭಯಗಳೇನೂ ವ್ಯಕ್ತವಾಗಿಲ್ಲ; ಆದರೆ ಬಹುಸಂಖ್ಯೆಯ ದತ್ತಿಗಳಲ್ಲಿ ಕೆಲವಾದರೂ ಒದಗಲಿರುವ ವಿಪತ್ತಿನ ನಿವಾರಣೆಗಾಗಿ ಮಾಡಿದ ಶಾಂತಿಕ್ರಿಯೆಯ ಅಂಗವಾಗಿರಬಹುದು. ಗ್ರಹಣಗಳು 'ಪುಣ್ಯದಿನ'ಗಳೆಂದೂ 'ಪರ್ವಕಾಲ'ಗಳೆಂದೂ (ಪರ್ವ=ಹಬ್ಬ)ಅಲ್ಲಿ ಉಲ್ಲೇಖಗೊಂಡಿದೆ. ಗ್ರಹಣಗಳಂದು ದಾನಕೊಡುವ ಸಂಗತಿಗೇ ಹೆಚ್ಚು ಒತ್ತು ಬಿದ್ದಿರುವುದರಿಂದ ಆ ದಾನಗಳನ್ನು ಹೇಳುವ ಶಾಸನಗಳು ಸಾಮಾನ್ಯರ ಭಯದ ಭಾವನೆಗಳನ್ನು ವ್ಯಕ್ತಪಡಿಸುವ ಗೋಜಿಗೆ ಹೋಗಿಲ್ಲ.

(೧೬) ಹಿಂದೆ, ಯುದ್ಧಗಳಲ್ಲಿ ಸತ್ತ ವೀರರಿಗೆ ಸ್ಮಾರಕ ಶಿಲೆಗಳನ್ನು ಸ್ಥಾಪಿಸುವಂತಹ ಘಟನೆಗಳು ಸೂರ್ಯಗ್ರಹಣಗಳಂದು ನಡೆಯುತ್ತಿದ್ದುವು (South Indian Inscriptions, Vol. XVIII, No. 33)

ಗೋಲೆಯ ಭಟ್ಟ ಎಂಬಾತ ಜ್ಯೋತಿಷ್ಯ, ಶಕುನ, ನಿಮಿತ್ತಗಳಲ್ಲಿ 'ಬಲ್ಲಹ' (=ವಲ್ಲಭ) ನಾಗಿದ್ದನೆಂಬ ಸಂಗತಿಯನ್ನು ನೋಡಿದ್ದೇವೆ. ಜ್ಯೋತಿಷ್ಯವು ಪ್ರಾಚೀನ ಕರ್ನಾಟಕದ ವಿದ್ಯಾಭ್ಯಾಸದ ಒಂದು ಬಹುಮುಖ್ಯಭಾಗವೆನ್ನಿಸಿತ್ತು. 'ವಡ್ಡಾರಾಧನೆ', 'ಪಂಪಭಾರತ'ಗಳಲ್ಲಿ ಉಲ್ಲೇಖವಾಗಿರುವಂತೆ ಅಧ್ಯಯನದ ವಿಷಯವಾಗಿ ಜ್ಯೋತಿಷ್ಯವೂ ಒಂದಾಗಿತ್ತು. ಪಾಂಡವರು ಉಳಿದ ವಿದ್ಯೆಯ ಜೊತೆಗೆ ಪಂಚಾಂಗ, ಗ್ರಹಗಣಿತಗಳನ್ನೂ ಕಲಿತರೆಂದು ಪಂಪ ಹೇಳುತ್ತಾನೆ. ಶ್ರೀಧರಾಚಾರ್ಯ ತನ್ನ 'ಜಾತಕತಿಲಕ'ವನ್ನು ಒಂದು ಜೋಯಿಸಗಬ್ಬವೆಂದಿದ್ದಾನೆ. ಜೋಯಿಸರು ಲೆಕ್ಕಹಾಕಿ ಸೂರ್ಯಗ್ರಹಣಗಳನ್ನು ಮುಂದಾಗಿ ಜನರಿಗೆ ತಿಳಿಸುತ್ತಿದ್ದುದನ್ನು ನಯಸೇನ (ಕ್ರಿ.ಶ. ೧೧೧೨) ತನ್ನ 'ಧರ್ಮಾಮೃತ'ದಲ್ಲಿ (೯,೬೮)ಹೇಳಿದ್ದಾನೆ.[೩೨] ಕನ್ನಡ ಶಾಸನಗಳಲ್ಲಿ ಬಂದಿರುವ ನೂರಾರು ಸೂರ್ಯಗ್ರಹಣ ಚಂದ್ರಗ್ರಹಣಗಳ ಉಲ್ಲೇಖ ಕನ್ನಡಿಗರ (ಭಾರತೀಯರ) ಖಗೋಳ ವಿಜ್ಞಾನದ ಜ್ಞಾನಕ್ಕೆ ಸೂಚನೆಯಾಗಿದೆ. ಶಾಸನಗಳನ್ನು ಗ್ರಹಣಗಳಾದ ಮೇಲೆ ಬರೆದಿದ್ದರೂ ಗ್ರಹಣದ ದಿನ ದಾನಿಗಳು ದತ್ತಿಗಳನ್ನು ಕೊಡಬೇಕಾದರೆ ಅವು ನಡೆಯುವುದನ್ನು ಮುಂಚೆಯೇ ಕಂಡುಕೊಂಡಿರಬೇಕಲ್ಲವೇ?

## ಕನ್ನಡ ಕಾವ್ಯವೊಂದರಲ್ಲಿ ಗ್ರಹಣದ ವರ್ಣನೆ

ಹಿಂದಿನ ಕನ್ನಡ ಕಾವ್ಯಗಳಲ್ಲಿ ಗ್ರಹಣಗಳ ಉಲ್ಲೇಖ ಉತ್ಪಾತಗಳ ಪಟ್ಟಿಯಲ್ಲಿ ಬರುತ್ತದೆ.[೩೩] ಸೂರ್ಯೋದಯ, ವರ್ಣನೆಗಳಿಗೂ ಕೊರತೆ ಇಲ್ಲ. ಆದರೆ ಗ್ರಹಣದ ವರ್ಣನೆ ಮಾತ್ರ ವಿರಳ. ಬಾಹುಬಲಿ ಪಂಡಿತನ (ಕ್ರಿ.ಶ. ೧೩೫೨) 'ಧರ್ಮನಾಥಪುರಾಣ'ದಲ್ಲಿ ಮಾತ್ರ ಚಂದ್ರಗ್ರಹಣವು ವೈರಾಗ್ಯ ಪ್ರಚೋದಕವಾದ ಬಗೆಯನ್ನು ಸ್ವಲ್ಪ ವಿಸ್ತಾರವಾಗಿಯೇ ಬಣ್ಣಿಸಲಾಗಿದೆ.[೩೪] ಪೂರ್ಣಚಂದ್ರನನ್ನು ರಾಜ ನೋಡಿ ಸಂತೋಷಿಸುತ್ತಿದ್ದ. ಅಷ್ಟರಲ್ಲಿ ರಾಹು ಬಂದು ಹಿಡಿಯಿತು:

> ಕ್ರೂರಾಕಾರಮನೆಯ್ದೆ ತಾಳ್ದಿ ತಮಮಂ ಚೆಲ್ಲುತ್ತಮಿರ್ದೆಲ್ಲಿಯುಂ
> ಘೋರಂ ಕಷ್ಟತರಂ ಭಯಂಕರಮುಖಂ ಪೀಡಾಕರಂ ರಾಹು ಬಂ
> ದಾ ರಾಜದ್ವಿಧುಬಿಂಬಮಂ ಬಿಡದೆ ಮೇಲ್ವೊರ್ದುತ್ತುಮಿರ್ದತ್ತು ಮ
> ತ್ತೋರಂತುಗ್ರ ವಿಷದಿಂ ಮಹಾಮೃತಮನೆಯ್ತುಂದು ಸಾರ್ವಂದದಿಂ॥

ಕ್ರೂರಾಕಾರವನ್ನು ತಾಳಿ, ಕತ್ತಲನ್ನು ಚಲುತ್ತ ಭಯಂಕರ ಮುಖದ ರಾಹು ಬಂದು ಬೆಳಗುವ ಪೂರ್ಣಬಿಂಬವನ್ನು ಹಿಡಿಯಿತು; ಆಗ "ಸುಧಾಕರಬಿಂಬಮಾ ಕ್ಷಣಂ ಆರುಣತ್ವಮಂ ತಳೆದು ಮುನ್ನಿನ ಶೋಭೆಯನೊಕ್ಕುದೆಲ್ಲಮಂ". ಬಿಳಿಯ ಚಂದ್ರಬಿಂಬ ಮೊದಲು ಸ್ವಲ್ಪ ಕೆಂಪುಬಣ್ಣಕ್ಕೆ ತಿರುಗಿತು.

> ಸುರಕರಿ ಸೊಕ್ಕಿ ಪೊಕ್ಕು ಸುರಗಂಗೆಯನೆಯ್ದೆ ಕಲಂಕಿ ಪಂಕಜೋ
> ತ್ಕರಮನದೆತ್ತಿ ಕಿಳ್ತು ಪಿಡಿದಿರ್ದೊಡೆ ತೋರುವ ಪಂಕಕಂದಮೋ
> ತ್ವರಿತದ ತುಂಬಿಗಳ್ ಮುಸುರಿಕೊಂಡ ವಿಕಾಸಿತ ಕೈರವಾಸ್ಯಮೋ
> ಸುರುಚಿರ ನೀಳ ಕುಂತಳ ಸಮಾವೃತ ಪೂರ್ವದಿಗಂಗನಾಸ್ಯಮೋ॥

ಸೊಕ್ಕಿದ ಐರಾವತವು ಸುರಗಂಗೆಯ ನೀರನ್ನು ಕದಡಿ ರಾಡಿಮಾಡಿ ಆಲ್ಲಿದ್ದ ಕಮಲಗಳನ್ನು ಕಿತ್ತು ಎತ್ತಿ ಹಿಡಿದ ಕೆಸರು ತುಂಬಿದ ಗೆಡ್ಡೆಯೋ, ದುಂಬಿಗಳು ಪೂರ್ತಿಮುಸುರಿದ ಕೈರವ ಪುಷ್ಪವೋ ಎನ್ನುವಂತೆ ಕ್ರಮೇಣ ಚಂದ್ರ ಪೂರ್ತಿ ಕಪ್ಪಾದ. ಇದು ಏನು ಎಂದು ಕ್ಷಣಮಾತ್ರ ಗೊತ್ತಾಗದೆ ದಿಗ್ಭ್ರಾಂತನಾದರೂ ಚಂದ್ರ ಗ್ರಹಣವೆಂದು ಆ ರಾಜನು ನಿಶ್ಚಯಿಸುತ್ತಿರುವಷ್ಟರಲ್ಲಿ,

"ಸರ್ವಗ್ರಾಸಿಂ ರಾಗಲಾಗಳೆ ಕತ್ತಲಂಯು ಮೊತ್ತವೆತ್ತಲುಂ ಬಿತ್ತರಿಸೆ ತಾರಗೆಗಳಿನಿಮಿನಿಯೆನುತ್ತುಂ ಪೊಳೆಯಲ್" – ಸರ್ವಗ್ರಾಸಿಗ್ರಹಣದಿಂದಾಗಿ ಕತ್ತಲೆ ದಟ್ಟವಾಗಿ ನಕ್ಷತ್ರಗಳು ಬೆಳಗಲಾರಂಭಿಸಿದುವು. ರಾಜನಿಗೆ ಬದುಕಿನ ನಶ್ವರತೆ ಗೋಚರವಾಯಿತು. ಚಂದ್ರನು ಶಕ್ತ, ಸುಂದರ, ಕಲ್ಪತರುವಿನ ಸೋದರ, ಲಕ್ಷ್ಮಿಯ ಅಣ್ಣ, ಸಮುದ್ರ ಪುತ್ರ; ಅಂತಹ ಅವನನ್ನೇ ರಾಹು ಹಿಡಿಯಿತು. ವಿಧಿಯಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಚಂದ್ರನಿಗೇ ಹೀಗಾದ ಮೇಲೆ ಸಾಮಾನ್ಯ ಮನುಷ್ಯರೂ ಒಂದಲ್ಲ ಒಂದು ಸಾರಿ ತಮ್ಮ ಅಂತ್ಯವನ್ನು ಕಾಣಲೇಬೇಕು. ಸಾವು ಯಾರಿಗೂ ತಪ್ಪಿದ್ದಲ್ಲ ಎಂದು ಅವನು ಜೀವನ ನಿಸ್ಸಾರತೆಯನ್ನು ಕುರಿತು ಚಿಂತಿಸಿ ವೈರಾಗ್ಯಪರನಾದ. ಅವನೇ ಮುಂದೆ ಧರ್ಮನಾಥ ತೀರ್ಥಂಕರನೆಂಬ ಮಹಾತ್ಮನಾದನು.

ಮಧುರನ ಧರ್ಮನಾಥಪುರಾಣದ (ಕ್ರಿ.ಶ. ೧೩೮೫)ವಸ್ತುವು ಅದೇ ಹದಿನೈದನೇ ತೀರ್ಥಂಕರನಾದ ಧರ್ಮನಾಥನ ಕತೆ. ಧರ್ಮನಾಥನ ವೈರಾಗ್ಯೋದಯ ಸಂದರ್ಭದಲ್ಲಿ ಚಂದ್ರಗ್ರಹಣದ ವರ್ಣನೆ ಬಂದಿದೆ. (೫.೭೬–೮೨). ರಾಹುವನ್ನು .'ಸ್ವರ್ಭಾನು' ಎಂದು ಕರೆದಿರುವುದು ಗಮನಿಸಬೇಕಾದ ಸಂಗತಿ. "ಭೋಂಕನಂದೌಂಕಿ ಕೊಂಡುದು ಕಂಡಾ ಸಿತಭಾನುವಂ ಬಗೆಗಿಡಲ್ ಸ್ವರ್ಭಾನು ಬಂದಾಕ್ಷಣಂ" (ಸ್ವರ್ಭಾನು ವೈದಿಕ ಸಾಹಿತ್ಯದಲ್ಲಿ ರಾಹುವಿನ ಜಾಗದಲ್ಲಿ ಬರುವ ರಾಕ್ಷಸನೆಂಬುದನ್ನು ಹಿಂದೆ ನೋಡಿದ್ದೇವೆ.) ಅಮೃತದ ತುತ್ತನ್ನು ಬಲವಂತದಿಂದ ಕಿತ್ತುಕೊಂಡು ತಿನ್ನಲು ಯಮನು ಚಾಚಿದ ಹಸ್ತವೆಂಬಂತೆ ರಾಹು ಕಾಣಿಸಿತು. ರಾಹುವಿಗೆ ಒಳಗಾದ ಚಂದ್ರಬಿಂಬ ಕೆಂಪಾದ ಬೆಂಕಿಗೆ ತಾಕಿದ ಬೆಳ್ದಾವರೆಯಂತೆ ಮಸುಳಿದ. ನೀರಿನಲ್ಲಿ ಮುಳುಗಿಹೋದ ಬೆಳ್ಳಿಯ ಗಳಿಗೆ ಬಟ್ಟಲನ್ನು ನೆನಪಿಗೆ ತಂದಿತು ಚಂದ್ರ. (ಗಳಿಗೆವಟ್ಟಲು=ಕಾಲವನ್ನು ಅಳೆಯುವ ಹಿಂದಿನ ಕಾಲದ ಮಾಪಕ. ನಿರ್ದಿಷ್ಟ ಅವಧಿಯಲ್ಲಿ ಬಟ್ಟಲು ನೀರಿನಿಂದ ತುಂಬಿ ಮುಳುಗುತ್ತಿತ್ತು.) ಪರಿಪೂರ್ಣೇಂದುವಿಗೇ ಈ ಪರಿಭವ! ಭಾಪುರೇ ವಿಧಿ! ಎಂದು ರಾಜ ಆಶ್ಚರ್ಯಪಟ್ಟ. ತಾರಾಪತಿಯಾದ ಚಂದ್ರ ನುಗ್ಗಿ ಬಂದ ರಾಹುವಿಗೆ ಸುಲಭವಾಗಿ ಸೆರೆಸಿಕ್ಕು ಅವನಿಂದ ಸೋತು ಹೋದ; ತಾರೆಗಳನ್ನೂ ಅವನು ದುಃಖಕ್ಕೀಡುಮಾಡಿದ. ಹೀಗಿರುವಾಗ ಜನ ಚಂದ್ರಬಲ ತಾರಾಬಲಗಳನ್ನು ಕೇಳಿಸಿದರೆ ಅವರನ್ನು ಹುಚ್ಚರೆಂದು ಕರೆಯಬೇಕು ಎಂದು ರಾಜ ಉದ್ಗಾರ ತೆಗೆದ.

ತಳ್ವದೆ ತವಕಿಪ ರಾಹುಗೆ
ಬಳ್ವಳ ಬಳಸಿರ್ದ ತಾರೆ ಮಸುಳಿಸೆ ಚಂದ್ರಂ ।
ಕೇ[ಕೋ] ಳ್ವೋದನೆಂದೊಡಿಳೆಯೊಳ್
ಕೇಳ್ವರ್ ಮರುಳಲ್ತೆ ಚಂದ್ರತಾರಾಬಲಮಂ॥

ಜೀವನದ ಅನಿಶ್ಚತತೆಯ ಅರಿವಾಗಿ ರಾಜ ವೈರಾಗ್ಯ ಪರನಾದ. (ಕೋಳ್ಪೋಗು=ವಶವಾಗು).

## ಅಡಿಟಿಪ್ಪಣಿಗಳು

೧. ವಿವರಗಳಿಗೆ ನೋಡಿ ಎಂ. ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಮೈಸೂರು ವಿಶ್ವವಿದ್ಯಾನಿಲಯ.೧೯೮೦) ಪು. ೨೯೯-೩೦೦.

೨. Sachau: Alberuni's India, II. P. 170.

೩. Epigraphia Carnatica, VII (Rice). Sorab, 310

೪. Karnatak Inscriptions, vol. v (Ed. B.R. Gopal) No. 96

೫. ಆದೇ. ನಂ. ೯೭

೬. EP. Carn. VII(Rice). Shikaripur, 290.

೭. ಆದೇ. ಶಿಕಾರಿಪುರ. ೨೮೯

೮. ಈ ಶಾಸನದ ಕಡೆ ನನ್ನ ಗಮನ ಸೆಳೆದುದು ಡಾ॥ ಎಂ. ಕಲಬುರ್ಗಿಯವರ "ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು" (ಐಬಿಎಚ್ ಪ್ರಕಾಶನ. ಬೆಂಗಳೂರು, ೧೯೮೦) ಎಂಬ ಪುಸ್ತಕ (ಪು. ೨೨). ಆದರೆ ಬೆಳಗುತ್ತಿಯ ಬೀರಯ್ಯನೂ (MAR. 1942, P. 200) ಸೂರ್ಯಗ್ರಹಣದಂದು ಮಡಿದನೆಂಬ ಅವರ ಹೇಳಿಕೆ ಸರಿಯಲ್ಲ. ಆ ಶಾಸನ ಹೀಗಿದೆ: "ಪರಿಧಾವಿ ಸಂವತ್ಸರದ ಮಾಘಬಹುಳ ಅಮಾವಾಸ್ಯೆ ಮಂಗಳವಾರದಂದು ಅಗ್ರಹಾರಂ ಸೊರಡಿಯ ಹೊನ್ನಯ ಮಗ ಬೀರಯ್ಯ ದೇವವೆಸ ಕಾಯಾವಾಚಿಕಂ ಸರತ್ಥಿಪ್ರಮಾಣ ನಿಮಿತ್ತಮಾಗಿ ಅಗ್ನಿಪ್ರವೇಶಂಗೆಯ್ದು ಶಿವಲೋಕ ಪ್ರಾಪ್ತನಾದ". ಬೀರಯ್ಯ ಅಮವಾಸ್ಯೆಯ ದಿನ ದೇವರಿಗೆ ತಾನು ತೊಟ್ಟ ಹರಕೆ ಅಥವಾ ಪ್ರತಿಜ್ಞೆ ('ಸರತ್ಥಿ' = ಷರತ್ತು?) ಗಾಗಿ ಅಗ್ನಿಪ್ರವೇಶ ಮಾಡಿದಂತೆ ಅಲ್ಲಿ ಹೇಳಿದೆ. ಆ ದಿನ ಸೂರ್ಯಗ್ರಹಣವೆಂಬುದಕ್ಕೆ ಏನೂ ಸೂಚನೆಯಿಲ್ಲ.

೯. South Indian Inscriptions. ix. 1. No. 9- "....ದ....ಸುರಾ ಬಲಿ ಬಾಣರಸ

ಪ್ರಿಥುವೀ(ರಾಜ್ಯಂಗೆ)ಯೆ ಜಯುನಾಗನ್ ಮಕರಮಾಸದಿವಸದೊಳ್ ಕೊಂಡದೊಳ್ ಕಿಚ್ಚಂ ಪುಗುವೆನೆನ್ದೊಗುಗೊಂಡು ಕಿಚ್ಚು ಪೊಕ್ಕು ಸುರಲೋಕಮೇರಿದೊನವನ..........ಕಲ್ನಡಿಸಿದ." ಮಕರಸಂಕ್ರಮಣ ಅಥವಾ ಉತ್ತರಾಯಣ ದಿನದಂದು ಸಾಯುವುದು ಶ್ರೇಯಸ್ಕರವೆಂಬ ನಂಬಿಕೆ ಬಹುದಿನದಿಂದಲೂ ಇದೆ. ಭೀಷ್ಮ ಇಚ್ಛಾ ಮರಣಿಯಾದುದರಿಂದ ಉತ್ತರಾಯಣ ಪುಣ್ಯಕಾಲ ಬರುವವರೆಗೆ ಬದುಕಿದ್ದು ಬಳಿಕ ಸತ್ತುದನ್ನು ಜ್ಞಾಪಿಸಿಕೊಳ್ಳಬಹುದು. (ನೋಡಿ: "........ಆದರೆ ಭೀಷ್ಮನು ಕೂಡಲೆ ಸಾಯಲಿಲ್ಲ. ಆಗ ದಕ್ಷಿಣಾಯನವಾಗಿದ್ದದ್ದರಿಂದ ಉತ್ತರಾಯಣವನ್ನು ಎದುರುನೋಡುತ್ತ ಆ ಶರಶಯ್ಯೆಯ ಮೇಲೆಯೇ ಮಲಗಿದ್ದನು. ಉತ್ತರಾಯಣದಲ್ಲಿ ಸತ್ತವರಿಗೆ ಸದ್ಗತಿ. ಸ್ವೇಚ್ಛಾಮರಣಿಯಾಗಿದ್ದದ್ದರಿಂದ ಅವನು ಯಾವಾಗ ಬೇಕಾದರೆ ಆವಾಗ ಸಾಯಬಹುದಿತ್ತು" (ಎ.ಆರ್. ಕೃಷ್ಣಶಾಸ್ತ್ರೀ: ವಚನ ಭಾರತ. ಬೆಂಗಳೂರು, ೧೯೫೩ ಪು ೨೭೫): ಜಯನಾಗನ್ ಮಕರಮಾಸದ ದಿನ ಅಗ್ನಿಪ್ರವೇಶ ಮಾಡಿದ್ದಕ್ಕೆ ಕಾರಣ ಸ್ಪಷ್ಟವಾಗಿದೆ.

ಮಕರ ಸಂಕ್ರಮಣದಂದು ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ತಿರುಗುತ್ತಾನೆ. ಮಾರ್ಗಶೀರ್ಷ ಅಥವಾ ಪೌಷ್ಯಮಾಸದಲ್ಲಿ ಜನವರಿ ಮಧ್ಯಭಾಗದಲ್ಲಿ ಮಕರಸಂಕ್ರಮಣ ಬರುತ್ತದೆ. ಮಂಗಳವಾರ ಮಕರಸಂಕ್ರಮಣ ಬಂದರೆ ಹೆಚ್ಚು ಪ್ರಶಸ್ತ. ಮಕರ ಸಂಕ್ರಮಣದಂದು ಎಳ್ಳು ಹಚ್ಚಿಕೊಂಡು ಸ್ನಾನಮಾಡುತ್ತಾರೆ. ಬಂಧುಗಳಿಗೆ ಗೆಳೆಯರಿಗೆ ಎಳ್ಳು ಬೆಲ್ಲ ಕೊಟ್ಟು "ಒಳ್ಳೆಯವರಾಗಿರೋಣ" ಎಂದು ಹಾರೈಸುತ್ತಾರೆ. ಈ ಹಬ್ಬವನ್ನು ಪೊಂಗಲ್ ಎಂದು ಕರೆಯುತ್ತಾರೆ. ಭೋಗಿ ಪೊಂಗಲ್ ಮೊದಲ ದಿನ; ಎರಡನೆಯ ದಿನವಾದ ಸೂರ್ಯ ಪೊಂಗಲಂದು ಸೂರ್ಯಪೂಜೆ ಮುಖ್ಯ ಆಚರಣೆಯಾಗಿರುತ್ತದೆ. ಮೂರನೆಯ ದಿನ ಪಶುಗಳಿಗೆ ಅಲಂಕಾರಮಾಡಿ ಆ ದಿನ 'ಕರೆಹರಿ'ಯುವುದುಂಟು. 'ಕರೆಹರಿ'ಯುವ ಬಗ್ಗೆ ವಿವರಗಳಿಗೆ ನೋಡಿ, ಎಂ. ಚಿದಾನಂದಮೂರ್ತಿ: 'ಹಗರಣ-ಜಾನಪದಕಲೆಯ ಇನ್ನೊಂದು ಅವಶೇಷ, ದಕ್ಷಿಣ ಕರ್ನಾಟಕದಲ್ಲಿ' (ಸಾಧನೆ, ೭.೪. ಪು. ೧೨೨-೩)

೧೦. V.C. Srivastava ಅವರ Sun Worship in Ancient India (Indological Publications, Allahabad), L.P. Pandey ಅವರ Sun Worship in Ancient India (Motilal Banarsidas, Benares) – ಈ ಗ್ರಂಥಗಳಲ್ಲಿ ಸೂರ್ಯಗ್ರಹಣಗಳ

ವಿಷಯವಿಲ್ಲದಿರುವುದು ಹಾಗಿರಲಿ, ಸೂರ್ಯಗ್ರಹಣದಂದು ಆತ್ಮಬಲಿಯಾಗುವಂತಹ ಪ್ರಮುಖ ಸಂಗತಿಗಳ ಉಲ್ಲೇಖವೂ ಇಲ್ಲ.

೧೧. ಶ್ರೀಪಾದರಾಜರ ಕೃತಿಗಳು (ಸಂ.ಜಿ. ವರದರಾಜರಾವ್. ಮೈಸೂರು, ೧೯೭೩) ಪು. ೬೪.

೧೨. Karnataka Inscriptions, Vol. V.P. 270.ಬೆಳಗಾಂ ಜಿಲ್ಲೆ ಸೌದತ್ತಿಯ ಶಾಸನ.

೧೩. Ep. Carn. III(Mys)Gundlupet. 41(Mysಎಂಬುದು ಮೈಸೂರು, ಅವೃತ್ತಿಯನ್ನೂ Rice ಎಂಬುದು ರೈಸರ ಅವೃತ್ತಿಯನ್ನೂ ಹೇಳುತ್ತದೆ)

೧೪. Ep. Carn. VIII(Rice), Sorab. 71

೧೫. Ep. Carn. V(Mys), T.Narasipura. 96,1276 A.D

೧೬. Ep. Carn. VII (Rice), Shimoga. 40

೧೭. Ep. Carn. V (Mys). Mysore. 100

೧೮. Ep. Carn. V (Rice). Sorab. 265.

೧೯. South Indian Inscriptions. XV. No. 119

೨೦. ಅದೇ, ನಂ.೧೫. ಫೆಬ್ರವರಿ ೧೨. ೧೧೪೨ (ಕನ್ನಿಂಗ್ ಹ್ಯಾಮ್ ಅವರ ಗ್ರಹಣಗಳ ಪಟ್ಟಿ ಪ್ರಕಾರ (Book of Indian Eras, P. 214.) ಈ ದಿನ ನಡೆದುದು ಚಂದ್ರಗ್ರಹಣ.

೨೧. Ep. Indica. XIII.P.329, 925 A.D.

೨೨. ವಿವರಗಳಿಗೆ ನೋಡಿ – ಎಂ. ಚಿದಾನಂದಮೂರ್ತಿ: 'ಶಾಸನೋಕ್ತ ಕೆಲವು ಮಹಾದಾನಗಳು'. ಸಂಶೋಧನತರಂಗ. II . (ಬೆಂಗಳೂರು ವಿಶ್ವವಿದ್ಯಾಲಯ. ೧೯೭೦)ಪುಟ. ೨೮೪–೯೩.

೨೩. BKI. I. I, No. 8 and 9.

೨೪. Ep. Carn. VII(Rice). Shikaripur. 185 – ಈ ಶಾಸನದಲ್ಲಿ ಬರುವ ಕೆಲಮಾತುಗಳನ್ನು ಅರ್ಥೈಸುವಲ್ಲಿ ಟಿ.ವಿ. ವೆಂಕಟಾಚಲಶಾಸ್ತ್ರಿಯವರ 'ಶ್ರೀವತ್ಸನಿಘಂಟು'ವಿನ ಸಹಾಯ ಪಡೆದಿದ್ದೇನೆ.

೨೫. Ep. Carn. VII(Mys). Malavalli. 124.

೨೬. Ep. Carn. VII(Rice). Shikaripur. 103.

೨೭. South Indian Inscriptions. Vol XX. 74-38, 1112 A.D. [ಕೊಳಗು=ಗೊರಸು, 'ಉಭಯಮುಖಿ' ಎಂದರೆ ಗರ್ಭವಾಗಿರುವ ಹಸು ಅಥವಾ ಕರು ಸಮೇತ ಹಸು.]

೨೮. South Indian Inscriptions, XV. No. 28, 1148 A.D.

೨೯. Ep. Carn. III(Mys)Malavalli. 108, 1530. ಗ್ರಹಣ ನಡೆದದ್ದು ಅಕ್ಟೋಬರ್ 6, 1530. ಇದು ಮಳವಳ್ಳಿ ತಾಲ್ಲೂಕು ಕೊಡಗಹಳ್ಳಿಯ ಶಾಸನ.

೩೦. Karnatak Inscriptions, V.P 92, 1138 A.D.

೩೧. South Indian Inscriptions, XV. No. 1, 1059 A. D.: Karnatak Inscriptions, V. Page 86, 1129 A.D.

೩೨. ಬಿ.ವ್ಹಿ. ಮಲ್ಲಾಪೂರ: ನಯಸೇನ ಮತ್ತು ಅವನ ಕೃತಿಗಳು (ಕರ್ನಾಟಕ ವಿಶ್ವವಿದ್ಯಾಲಯ. 1978), ಪು. 292

೩೩. ಉದಾ.ಗೆ ಕುಮಾರವ್ಯಾಸನ ಭಾರತದಲ್ಲಿ (ಗದಾಪರ್ವ ೮.೨-೫) ಭೀಮನ ಗದಾಘಾತದಿಂದ ಧರೆಗುರುಳಿದ ಚಕ್ರವರ್ತಿ ದುರ್ಯೋಧನನ ಸಾವನ್ನು ಅನೇಕ ನಿಮಿತ್ತಗಳು ಸೂಚಿಸಿದುವು. ಭೂಕಂಪ, ಬರಸಿಡಿಲು, ಬಿರುಗಾಳಿ, ಹಗಲುಗತ್ತಲೆ, ಸೂರ್ಯನ ಜೊತೆ ಏಳುಗ್ರಹಗಳ ಕೂಟ (ಅಷ್ಟಗ್ರಹಕೂಟವನ್ನು ಜ್ಞಾಪಿಸಿಕೊಳ್ಳಿ), ಉಲ್ಕಾಪಾತ, ಸೂರ್ಯನ ಪ್ರಭೆ ಕುಂದಿದ್ದು ಮುಂತಾದುವು.

೩೪. ಧರ್ಮನಾಥಪುರಾಣ(ಸಂ: ಎನ್. ಬಸವಾರಾಧ್ಯ, ಮೈಸೂರು ವಿಶ್ವವಿದ್ಯಾನಿಲಯ, ೧೯೭೫), ೫. ೧೧ ವ - ೨೧ವ.

# ಫೆಬ್ರವರಿ ಹದಿನಾರು: ನನ್ನ ಅನುಭವ

ಕನ್ನಡ ಎಂ. ಎ. ವಿದ್ಯಾರ್ಥಿಗಳನ್ನು ನಾನು ಶೈಕ್ಷಣಿಕ ಪ್ರವಾಸಕ್ಕೆ ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳ ಬಳ್ಳಿಗಾವೆ – ಬನವಾಸಿ ಪ್ರದೇಶಕ್ಕೆ ಕರೆದೊಯ್ಯಬೇಕಿತ್ತು. ಪ್ರವಾಸ ಕಾರಣಾಂತರದಿಂದ ಮುಂದೆ ಹೋಗುತ್ತ ಬಂದು, ಹೇಗೋ ಫೆಬ್ರವರಿ ಮಧ್ಯದ ಹೊತ್ತಿಗೆ ಅದು ಆಗುವ ನಿಶ್ಚಯವಾಯ್ತು. ಗ್ರಹಣಪ್ರದೇಶಕ್ಕೆ ಸಮೀಪವಾದರೂ ಇರಬೇಕು, ಸಾಧ್ಯವಾದರೆ ಹೊನ್ನಾವರ, ಅಂಕೋಲಗಳಿಗೆ ಹೋಗಿ ಬರಬೇಕೆಂಬ ಉದ್ದೇಶದಿಂದ ಆ ಹೊತ್ತಿಗೆ ಪ್ರವಾಸವನ್ನು ಏರ್ಪಡಿಸಿಯಾಯ್ತು. ಸ್ನೇಹಪರ ಸಹೋದ್ಯೋಗಿ (ಡಾ. ಎಸ್. ವಿದ್ಯಾಶಂಕರ್), ಉತ್ಸಾಹ ಚಿಮ್ಮುತ್ತಿರುವ ಹುಡುಗ ಹುಡುಗಿಯರು ಇದ್ದ ಆ ಪ್ರವಾಸ ಬಹಳ ಸಂತೋಷವನ್ನು ಕೊಟ್ಟಿತು. ಮಹಾದೇವಿಯಕ್ಕನ ಹುಟ್ಟೂರು ಉಡುಗಣಿ, ದೇವಾಲಯಗಳ ತೌರೂರು ಬಳ್ಳಿಗಾವೆ, ಮಯೂರ ಶರ್ಮನ ಶಾಸನದ ತಾಳಗುಂದಗಳನ್ನು ನೋಡಿದ್ದಾಯ್ತು; ಅಲ್ಲಿನ ಕೆರೆಗಳಲ್ಲಿ ಬೆಳೆದ ಪದ್ಮಗಳನ್ನು ಕಿತ್ತು ಹಾರ ಮಾಡಿದ್ದಾಯ್ತು. ಇಡೀ ಪ್ರದೇಶ ಸೌಮ್ಯ, ಸುಂದರ; ದಿವಂಗತ ಭೀಮಪ್ಪ ಮೇಷ್ಟ್ರ ಮಡದಿ, ಮಕ್ಕಳ ಆತಿಥ್ಯ ನಮಗೆ ಮರೆಯಲಾಗದ ಅನುಭವ. ಹದಿನಾರನೇ ತಾರೀಕು ಬೆಳಿಗ್ಗೆ ಸೂರ್ಯೋದಯದ ಹೊತ್ತಿಗೆ ಬನವಾಸಿ ತಲುಪಿದೆವು. ಆಗಲೇ ಎಲ್ಲೆಲ್ಲೂ ಗ್ರಹಣದ ಮಾತೇ ಮಾತು. ಅಲ್ಲಿ ಹೋಟೆಲೊಂದರಲ್ಲಿ ಉಪಾಹಾರ ಮುಗಿಸಿ ನಮ್ಮ ಲಗೇಜನ್ನೆಲ್ಲ ಅಲ್ಲೇ ಹಾಕಿ ಮಧುಕೇಶ್ವರ ದೇವಾಲಯಕ್ಕೆ ಹೋಗಿದ್ದಾಯ್ತು. ಆ ದಿನ ನಾವು ಹೋದಾಗ ಗರ್ಭಗುಡಿಯ ಬೃಹತ್ತಾದ ಲಿಂಗಕ್ಕೆ ಅಭಿಷೇಕ ಮತ್ತು ವಿಶೇಷ ಪೂಜೆ ನಡೆದಿದ್ದುವು. ದೇವಾಲಯದ ಅರ್ಚಕರೊಬ್ಬರಿಗೆ ನಮ್ಮ ಆಸಕ್ತಿಗಳನ್ನು ತಿಳಿದು ಅಲ್ಲಿನ ದೇವಾನುದೇವತೆಗಳ ಮತ್ತು ಪೂಜಾದಿಗಳ ಎಲ್ಲ ವಿವರಗಳನ್ನೂ ಮೇಷ್ಟರಂತೆ

ಹೇಳಿ ಬರಸುವ ಬಯಕೆ. ನಮಗೆ ಆ ದಿನ ಮಧ್ಯಾಹ್ನದೊಳಗೆ ಏನಾದರೂ ಮಾಡಿ ಸಿರಸಿಗೆ ಹೋಗಿ ಸೇರುವ ಆತುರ. ಆ ಮುದುಕರ ಉತ್ಸಾಹ ನಮಗೆ ಅರ್ಥವಾಯಿತು; ನಮ್ಮ ಕಳವಳ ಅವರಿಗೆ ಅರ್ಥವಾಗಲಿಲ್ಲ. "ಸ್ವಾಮಿ, ಇನ್ನೊಮ್ಮೆ ಬರುತ್ತೇವೆ. ಬಸ್ ತಪ್ಪಿದರೆ ಕಷ್ಟ. ಹನ್ನೆರಡು ಗಂಟೆ ಮೇಲೆ ಸರ್ಕಾರವೇ ಎಲ್ಲ ಬಸ್ಸುಗಳನ್ನು ರದ್ದುಪಡಿಸಿದೆ" ಎಂದರೂ "ಮಧುಕೇಶ್ವರ ನಿಮಗೆ ತೊಂದರೆ ಕೊಡುವುದಿಲ್ಲ. ನಾನು ಹೇಳಿದ್ದನ್ನೆಲ್ಲ ಬರೆದುಕೊಳ್ಳಿ" ಎಂದು 'ಆಜ್ಞೆ' ಮಾಡಿದರು. ಚಡಪಡಿಸುತ್ತಲೇ ಅವರ ಮುಂದೆ ಕುಳಿತಿದ್ದಾಯ್ತು. ಸಮಯವಿದ್ದಿದ್ದರೆ ಆ ಅರ್ಚಕರಿಂದ ಮಧುಕೇಶ್ವರನ ದೇವಾಲಯದ ಸಮಗ್ರ ಮಾಹಿತಿಯನ್ನು ಹೀರುವ ಬಯಕೆ; ಆದರೆ ಬೆಳಗಿನ ೯-೩೦ರ ಬಸ್ಸು ತಪ್ಪಿದರೆ ಸಿರಸಿಗೆ ಹೋಗಿ ತಲಪುವ ಆಸೆಯನ್ನು ಕೈ ಬೈಡಬೇಕಾಗಿತ್ತು. ಬನವಾಸಿಯಲ್ಲೇ ಉಳಿಯಲು ಅಲ್ಲೇನು ಲಾಡ್ಜಿಂಗೇ, ಪ್ರವಾಸಿ ಮಂದಿರವೇ? ಅಂತೂ ಕೊನೆಗೊಮ್ಮೆ ಬಿಡಿಸಿಕೊಂಡು, ವರದಾನದಿಯನ್ನೊಮ್ಮೆ ಕಣ್ಣಾರೆ ಕಂಡು ಓಡಿ ಬರುವ ಹೊತ್ತಿಗೆ ಸಿರಸಿ ಬಸ್ ಹೋಗಿ ಬಿಟ್ಟಿತ್ತು. ತಲೆ ಮೇಲೆ ಕೈಹೊತ್ತು ಕುಳಿತೆವು. ಮಧ್ಯಾಹ್ನ ಗ್ರಹಣದ ಸಮಯದಲ್ಲಿ ಬಯಲಲ್ಲಿ ಎಲ್ಲರೂ ಕಾಲ ಕಳೆಯುವ ಸ್ಥಿತಿಯನ್ನು ಊಹಿಸಿ ಹೆದರಿದೆವು. ನಮ್ಮ ಜೊತೆ ಬಂದವರಲ್ಲಿ ಕೆಲವರು ಗ್ರಹಣದ ಸಮಯದಲ್ಲಿ ಒಳಗೆ ಇರುವ ಮನಸ್ಸು ಮಾಡಿದರು; ಅಪ್ಪ ಅಮ್ಮಂದಿರಿಗೆ, ನನ್ನಂತೆ ಹೆಂಡತಿಗೆ "ಗ್ರಹಣವನ್ನು ಖಂಡಿತ ನೋಡುವುದಿಲ್ಲ" ಎಂದು ಮಾತು ಕೊಟ್ಟೊ ಬಂದವರು. ಈ ಮಧ್ಯೆ ೧೧ಗಂಟೆಗೆ ಒಂದು ಮೇಲ್ (mail) ಬಸ್ ಸಿರಸಿಯಿಂದ ಬಂದು ಹಿಂದಿರುಗಬೇಕಿತ್ತು. ಅಂಚೆ ಕಚೇರಿಯಲ್ಲಿ ವಿಚಾರಿಸಿದಾಗ ಅದು ಬರುವ ಗ್ಯಾರಂಟೀಯಿಲ್ಲ ಎಂಬ ಮಾತು ನಮ್ಮನ್ನು ದಿಕ್ಕುಗೆಡಿಸಿತು. 'ಮಧುಕೇಶ್ವರ ನೀನೇ ಗತಿ; ಚೆನ್ನಾಗಿ ಕೈಕೊಟ್ಟೆ' ಎಂದು ಮನಸ್ಸಿನಲ್ಲಿಯೇ ಹಾಡಿ ಹರಸುತ್ತ, ಸಿರಸಿಯಿಂದ ವ್ಯಾನ್ ತರಿಸಿ ಡಬಲ್ ಚಾರ್ಜ್ ಆದರೂ ಸರಿಯೇ ಅದರಲ್ಲೇ ಹೋದರಾಯ್ತು ಎಂದು ಸಿರಸಿಗೆ ಫೋನ್ ಮಾಡಿಸಿದಾಗ, ಅಲ್ಲಿನ ಬಸ್ ಸ್ಟ್ಯಾಂಡಿನಲ್ಲಿದ್ದ ಅಧಿಕಾರಿ "ಬನವಾಸಿಗೆ ಮೇಲ್ ಬಸ್ ಇದೇ ಹೊರಟಿದೆ" ಎಂಬ ಆತ್ಮಾನಂದದ ಸುದ್ದಿ ತಿಳಿಸಿ ಜೀವ ಬರಿಸಿದರು. ಕೆಂಪುಬಸ್ ಬಂತು; ನಮ್ಮನ್ನು ಸಿರಸಿಗೆ ಹನ್ನೆರಡು ಗಂಟೆಗೆ ಹೊತ್ತು ಹಾಕಿತು.

ಅಡಕೆಯ ತವರೂರು; ವ್ಯಾಪಾರದ ಸ್ಥಳ; ಹವ್ಯಕ ಬ್ರಾಹ್ಮಣರ ಶಕ್ತಿ ಕೇಂದ್ರ; ಮಾರಿಕಾಂಬಾಳ ಮಹಿಮೆಯ ಭೂಮಿ ಸಿರಸಿ, ಬಿಕೋ ಎನ್ನುತ್ತಿದೆ. ಬಸ್ ಸ್ಟ್ಯಾಂಡ್ ಖಾಲಿ; ಆಟೋ, ಕಾರು, ಟ್ಯಾಕ್ಸಿ ಏನೂ ಇಲ್ಲ, ಎಲ್ಲ ಮನೆಗಳ

ಬಾಗಿಲು ಹಾಕಿದೆ. ತೀರ ವಿರಳ ಜನಸಂಚಾರ; ರಾಹು ಬಡಿದವರಂತೆ ಪಟ್ಟಣ ಮಲಗಿದೆ. ಸ್ಟ್ಯಾಂಡಿನಿಂದ ಹೋಟೆಲ್ ಸಾಮ್ರಾಟಿಗೆ ಫೋನ್ ಮಾಡಿದೆವು. "ಒಂದು ದೊಡ್ಡ ರೂಮು ಖಾಲಿ ಇದೆ; ಬೇಗಬನ್ನಿ, ಬಂದರೆ ಊಟವೂ ಉಂಟು" ಎಂದು ಒಂದು ಧ್ವನಿ ಹೇಳಿತು. "ಮಧುಕೇಶ್ವರ ನೀನು ಕೈ ಬಿಡಲಿಲ್ಲ. ಇನ್ನೂ ಹಿಡಿದುಕೊಂಡೇ ಇದೀಯ" ಎನ್ನುತ್ತ, ನಮ್ಮ ಅದೃಷ್ಟಕ್ಕೆ ಎಲ್ಲೋ ಹೋಗುತ್ತಿದ್ದ ಹಳೆಯ ಅಂಬಾಸಿಡರ್ ಟ್ಯಾಕ್ಸಿ ನಿಲ್ಲಿಸಿ ಅವನು ಕೇಳಿದಷ್ಟು ದುಡ್ಡೂ ಕೊಟ್ಟು ಅದರಲ್ಲಿ ಹತ್ತು ಜನವೂ ಹತ್ತಿ ಹೋಟೆಲಿಗೆ ಹೋಗಿ ಊಟ ಮಾಡಿ ಸಂಸ್ಥಾಪಿತರಾದೆವು. ನಮ್ಮ ಊಟ ಮುಗಿಯುತ್ತಿದ್ದಂತೆ ಊಟದ ಮನೆಯ ಬಾಗಿಲು ಮುಚ್ಚಿ ಕೆಲಸಗಾರರು ಹೊರ ಬಂದರು. ಆಗ ಸುಮಾರು ಒಂದು ಗಂಟೆ. ಗ್ರಹಣ ನೋಡಲು ಏನು ವ್ಯವಸ್ಥೆ ಮಾಡಿಕೊಂಡಿದ್ದೀರಿ ಎಂದು ಹೋಟೆಲ್ ಕೆಲಸಗಾರರನ್ನು ವಿಚಾರಿಸಿದೆವು. ಅವರಿಗೆ ಆಶ್ಚರ್ಯ. ಗ್ರಹಣ ನೋಡುವುದು! ಗ್ರಹಣ ನೋಡಬಾರದು ಎಂದು ಎಲ್ಲೆಲ್ಲೊ ಬೊಬ್ಬೆ ಹಾಕುತ್ತಿರುವಾಗ! ಆದರೆ ನಾವು ನಾಲ್ಕೈದು ಜನ ಅವರಿಂದ ರಟ್ಟು ಮತ್ತು ಅಂಟು ಪಡೆದು ಕನ್ನಡಿಗೆ ಹಚ್ಚಿ ಅದರ ಪ್ರತಿಫಲನ ಬಿಡುವ ತಯಾರಿ ನಡೆಸಿದೆವು. ನಿಮ್ಮ ಹತ್ತಿರ ಫಿಲಮ್ ಇದೆಯೇ ಎಂದು ವಿಚಾರಿಸಿದೆವು. ಸೂರ್ಯಗ್ರಹಣವನ್ನು ನೋಡಲು ಇದ್ದ ನಮ್ಮ ತರಾತುರಿಯನ್ನು ನೋಡಿ ಇಡೀ ಹೋಟೆಲಿನ ಕೆಲಸಗಾರ ವರ್ಗ ಇದ್ದಕ್ಕಿದ್ದಂತೆ ಉತ್ಸಾಹ ತೋರಿಸಿತು. ಬೆಂಗಳೂರಿನವರೇ ಮುಂದೆ ಇರುವಾಗ, ನಮ್ಮ ಕಣ್ಣೆಲ್ಲಿ ಹೋಗುತ್ತವೆ ಎಂಬ ಕುರುಡು ಧೈರ್ಯ. ಈ ಮಧ್ಯೆ ನಮ್ಮಂತೆಯೇ ಹೋಟೆಲಲ್ಲಿ ಉಳಿದಿದ್ದ ಒಬ್ಬಿಬ್ಬರು ಎಕ್ಸರೇ ಫಿಲಂ ಹಿಡಿದು ಬಂದಿದ್ದರು. ನಾಲ್ಕನೇ ಮಹಡಿಯ ಬಿಸಿಲು ಮಚ್ಚಿನ ಮೇಲೆ ಸಂಭ್ರಮವೋ ಸಂಭ್ರಮ ! ನಮ್ಮ ಜೊತೆ ಬಂದಿದ್ದ ಮೂವರು, ನಾಲ್ವರು ಗ್ರಹಣ ನೋಡುವುದಿಲ್ಲವೆಂದು ಮಾತು ಕೊಟ್ಟು ಬಂದಿದ್ದರಿಂದ ಒಳಗೆ ಹಾಸಿಗೆ ಹಿಡಿದು ಮಲಗಿದರು. ಬಿಸಿಲು ಮಚ್ಚಿನ ಮೇಲೆ ನಮ್ಮ ಕಾಲಡಿ ತಾರಸಿ; ನಾಲ್ಕು ಮಹಡಿ ಕೆಳಗೆ ಇಡೀ ಸಿರಸಿ ಪಟ್ಟಣ—ಮೇಲೆ ವಿಶಾಲವಾದ ನಿರಭ್ರ ಆಕಾಶ, ಸಮಗ್ರ ಊರು ನಿಶ್ಶಬ್ದ. ಎಲ್ಲೋ ಕೆಲವು ಕಾಗೆಗಳು; ಹೋಟೆಲ್ ಹಿಂದೆ ನಾವು ತಿಂದು ಉಳಿಸಿದ್ದಕ್ಕೆ ಜಗಳ ಕಾಯುತ್ತಿದ್ದ ಬೀದಿ ನಾಯಿಗಳು. ಇಡೀ ನಗರ ಸ್ತಬ್ಧ; ಬಿಸಿಲು ಮಚ್ಚಿನ ಮೇಲೆ ಹೋಟೆಲ್ ಚಿಳ್ಳೆಪಿಳ್ಳೆಗಳ ಸರ್ವರುಗಳ ಸಂಭ್ರಮ; ನಮ್ಮ ಪ್ರಯೋಗಗಳು. ಕನ್ನಡಿಗೆ ಕಾಗದ ಅಂಟಿಸಿ ಮಧ್ಯದ ರಂಧ್ರದಿಂದ ಗೋಡೆ ಮೇಲೆ ಪ್ರತಿಫಲನ ಹಾಯಿಸಿದೆವು. ಸಗಣಿಯ ರಾಡಿ ನೀರು ಒಂದು ಬಕೆಟ್‌ನಲ್ಲಿ ಸಿದ್ಧವಾಗಿ ಬಂತು.

ಮಸಿಹಿಡಿದ ಗಾಜು ಬಂತು; ಎಕ್ಸ್‌ರೇ ಫಿಲಂ ಅಂತೂ ಇತ್ತು. ಮಧ್ಯಾಹ್ನ ೧-೩೦ರ ಹೊತ್ತಿಗೆ ಹಾಜರಾದ ನಾವು ೪-೦೦ರವರೆಗೆ ಆ ಚುರುಕು ಬಿಸಿಲಲ್ಲಿ ಬೆಂದೆವು. ಬಿಸಿಲಿನ ಪರಿವೆ ಮಾತ್ರ ನಮಗಿಲ್ಲ. ಮಧ್ಯಾಹ್ನ ಸುಮಾರು ೨ ಗಂಟೆ ೨೦ ನಿಮಿಷಕ್ಕೆ ಗ್ರಹಣಸ್ಪರ್ಶವಾದಂತೆ ತೋರಿಸಿತು ಗೋಡೆಯ ಮೇಲಿನ ಪ್ರತಿಫಲನ. ನಮ್ಮ ಉತ್ಸಾಹದ ಕಾವು ಮೇಲೇರಿತು. ಸರದಿ ಪ್ರಕಾರ ಎಕ್ಸ್‌ರೇ ಫಿಲಂ ಹಿಡಿದು ಗಗನವನ್ನು ವೀಕ್ಷಿಸಿದೆವು. ತಲೆಯೆತ್ತಿ ಬರಿಗಣ್ಣಲ್ಲಿ ನೋಡುವ ಸಾಹಸ ಯಾರಿಗೂ ಇಲ್ಲದಿದ್ದರೂ, ಹೋಟೆಲ್ ಹುಡುಗರು ಮಾತ್ರ ಆ ಪರಿವೆಯಿಲ್ಲದೆ ದಿಟ್ಟಿಸಿ ನೋಡಿದಾಗ ಅವರನ್ನು ನಾವು ಎಚ್ಚರಿಸಬೇಕಾಯ್ತು. ಅವರಿಗೆ ಅದೊಂದು ಆಟ ಆಗಿತ್ತು. ಸೂರ್ಯನ ಬಿಂಬ ಕ್ರಮೇಣ ಮರೆಯಾಗುತ್ತ ಬಂದಿತು. ನಮ್ಮ ಕುತೂಹಲ, ಸಿರಸಿಗೆ ಕಾಣಿಸುವುದು ಪೂರ್ಣ ಗ್ರಹಣವೋ ಬಹುತೇಕ ಪೂರ್ಣವೋ ಅಥವಾ ಪಾರ್ಶ್ವವೋ? ತಿಳಿಯದು. ಪೂರ್ಣ ಗ್ರಹಣದ ಪಥದಲ್ಲಿ ಸಿರಸಿಯಿರಲಿಲ್ಲ; ಆ ಪಥಕ್ಕಿಂತ ಇಪ್ಪತ್ತು ಮೂವತ್ತು ಮೈಲು ಕೆಳಗಿತ್ತು. ಅಂಕೋಲೆಗೇ ಹೋಗಬಹುದಿತ್ತಲ್ಲ ಎಂಬ ಚಡಪಡಿಕೆ ಬೇರೆ; ಹಾಗೆ ವಿದ್ಯಾರ್ಥಿಗಳಿಗೆ ಒಮ್ಮೆ ಸೂಚನೆಯನ್ನೂ ಕೊಟ್ಟಿದ್ದೆ. ಸರಿ, ಅದೃಷ್ಟ ಪರೀಕ್ಷಿಸಿದರಾಯ್ತು ಎಂದು ಸಮಾಧಾನಪಡಿಸಿಕೊಂಡೆ. ನನ್ನ ಹೆಂಡತಿ ತಾನಲ್ಲದಿದ್ದರೂ ಮಗನಾದರೂ ಸೂರ್ಯಗ್ರಹಣ ನೋಡಲಿ ಎಂದು ಚಿರಂಜೀವಿಯನ್ನು ಕಳುಹಿಸಿದ್ದಳು. ನಾನು ನೋಡುವುದಲ್ಲದೆ ಮಗನನ್ನೂ ಗ್ರಹಣ ನೋಡಲು ಕರೆದೊಯ್ದದ್ದು ಹಲವರಿಗೆ ಆಶ್ಚರ್ಯವಾಗಿತ್ತು. ಅವನೂ ಅತ್ತಿಂದಿತ್ತ ಇತ್ತಿಂದತ್ತ ಚಿನಕುರುಳಿಯಂತೆ ಓಡಾಡುತ್ತಿದ್ದ. ಮೂರು ಗಂಟೆಯಾದಂತೆ ಮೌನ ಹೆಚ್ಚಿತು. ಇಡೀ ಸಿರಸಿ ನಗರ ಒಳಗೆ ಸೇರಿ ಸೂರ್ಯಗ್ರಹಣ ಹಾದು ಹೋಗುವುದನ್ನು ಉಸಿರು ಹಿಡಿದು ಕಾಯುತ್ತಿತ್ತು. ಸಾಮ್ರಾಟ್ ಹೋಟೆಲಿನ ತಾರಸಿ ಮೇಲೆ ಮಾತ್ರ ಅಸಾಧ್ಯ ಚಟುವಟಿಕೆ; ಇನ್ನಾವುದೋ ಮನೆ ತುದಿ ಮೇಲೆ ಕೆಲವರು ಕಾಣಿಸಿದರು. ಮೂರು ಗಂಟೆ ಆಗುತ್ತಿದ್ದಂತೆ ಬಿಸಿಲಿನ ಚುರುಕು ಕ್ರಮೇಣ ಇಳಿಯುತ್ತ ಬಂದು, ಚಿನ್ನದ ತಿಳಿ ಹೊಂಬೆಳಕು ಎಲ್ಲೆಡೆ ಆವರಿಸುತ್ತಿತ್ತು. (ಇಂಗ್ಲಿಷ್ ಕಲರ್ ಮೂವಿಗಳಲ್ಲಿನ ಅರಿಜೋನದ ಮರುಭೂಮಿಯ ಬಣ್ಣ ಅದು). ಹಕ್ಕಿಗಳ ಚಿಲಿಪಿಲಿ ಕೇಳಿಸಿತು; ಅವಕ್ಕೂ ಸಂಜೆ ಎನ್ನುವ ಭ್ರಮೆ ಬಂದಿರಬೇಕು. ನಾಯಿಗಳೂ ಸ್ತಬ್ಧವಾದುವು. ನಡುಹಗಲಿನ ಆ ಮೌನದ ಮಧ್ಯೆ ನಮ್ಮ ಮಾತುಕತೆ ಕೂಗುಗಳಷ್ಟೇ ಗದ್ದಲದ ದ್ವೀಪವಾಗಿತ್ತು. ಬೆಳಕು ಕಡಿಮೆಯಾದಂತೆ, ಎಕ್ಸ್‌ರೇ ಫಿಲಂಗೆ ಬೇಡಿಕೆ ಹೆಚ್ಚಾಯ್ತು. ಗೋಡೆಯ ಮೇಲಿನ ಸೂರ್ಯ

ಕಿರಿದಾಗುತ್ತಿದ್ದ. ಆಗ ೩-೨೦ ಇರಬಹುದು. ಯಾರೋ ಕೂಗಿದರು ಅಥವಾ ಕಿರಿಚಿದರು – 'ಚಿಕ್ಕಿ', 'ನಕ್ಷತ್ರ'. ತಲೆಯೆತ್ತಿ ನೋಡಿದರೆ ಅನಿರೀಕ್ಷಿತ ಅದ್ಭುತ-ಪತ್ರಿಕೆಗಳಲ್ಲಿ ಓದಿದ್ದು ನಿಜವಾಗಿತ್ತು; ಹಾಡು ಹಗಲಿನಲ್ಲಿ ಬುಧ ತಣ್ಣಗೆ ಮಿಣಿಗುಟ್ಟುತ್ತಿದೆ. ನೆತ್ತಿ ಮೇಲೆ ಒಂದು, ಆಚೆ ಇನ್ನೊಂದು; ಅದೋ ಶುಕ್ರ; ಇನ್ನಾಚೆ ಇನ್ನೊಂದು; ಆ ಕಡೆ ಮತ್ತೊಂದು. ಆ ಉದ್ರೇಕವನ್ನು ವರ್ಣಿಸುವುದು ಕಷ್ಟ. ವಯಸ್ಸು, ಗಾಂಭೀರ್ಯ, ಸ್ಥಾನ, ಮಾನ ಎಲ್ಲ ಕಳಚಿ ಹೋದುವು. ಎಲ್ಲರೂ ಹುಡುಗರಾಗಿದ್ದರು. ಈ ಶತಮಾನದ ಅದ್ಭುತದ ನಾಟಕಕ್ಕೆ ತೆರೆ ಎದ್ದಿತ್ತು. ಬೆಳಕು ಕ್ಷೀಣವಾಯಿತು, ಕ್ಷೀಣವಾಯಿತು; ಗೋಡೆಯ ಮೇಲಿನ ಸೂರ್ಯ ಇದ್ದ ಅಥವಾ ಇರಲಿಲ್ಲ, ಅಷ್ಟು ದುರ್ಬಲವಾಗಿತ್ತು. ಸೂರ್ಯನ ಒಂದು ಅಂಚು ಮಾತ್ರ ಫಿಲಂನಲ್ಲಿ ಕಾಣಿಸುತ್ತಿತ್ತು. (ಆಗ ಸುತ್ತ 'ನೆರಳಿನ ಪಟ್ಟಿಗಳು'– Shadow bands – ಕಾಣಿಸಿದುವೆಂದು ಮುಂದೆ ಯಾರೋ ಹೇಳಿದರು). ಮರುನಿಮಿಷ ನನ್ನಿಂದ ವೀಕ್ಷಣಸಾಧನ ಕಿತ್ತುಕೊಂಡ ಅದರ ಯಜಮಾನ ನೋಡಿದವನೇ ಕೂಗಿಕೊಂಡ – 'ಡೈಮಂಡ್ ರಿಂಗ್'. ನಾನೂ ಕಿತ್ತುಕೊಂಡು ನೋಡಿದೆ; ಕಪ್ಪನೆಯ ಸೂರ್ಯಬಿಂಬ; ಸುತ್ತಲೂ ಬೆಳಕಿನ ಅಂಚು, ಉಂಗುರದಂತೆ ಮೇಲ್ಭಾಗದಲ್ಲಿ ಉಜ್ವಲವಾಗಿ ವಜ್ರದ ಮಣಿ ಹೊಳೆಯುತ್ತಿದೆ. ಎಲ್ಲರೂ ಕೂಗಿದರು, ಕಿರುಚಿದರು. ಅಷ್ಟರಲ್ಲೇ ಯಾವುದೋ ಅದೃಶ್ಯ ವ್ಯಕ್ತಿ ದೊಡ್ಡ ಕೊಕ್ಕೆ ಹಾಕಿ ಇಡೀ ಬೆಳಕನ್ನು ಎಳೆದುಬಿಟ್ಟ; ಬಿಸಿಲು ಹೋಯ್ತು, ಕರೋನ ಕಾಣಿಸಿತು. ಫಿಲಂ ಬೇಡ ಎಂದು ಎಲ್ಲರೂ ಬರಿಗಣ್ಣಲ್ಲಿ ನೋಡಿದೆವು. ಅಚ್ಚ ಕರಿಯ ಬಿಂಬ; ಹಿಂದೆ ಅಪಾರವಾದ ಬೆಳಕಿನ ರಾಶಿ (ಚಿತ್ರ ೧). ಆ ಅನುಭವ ಮಾತಿಗೆ ಮೀರಿದ್ದು; ಹುಡುಗರು ಕುಣಿದರು; ನಾವು ಮನಸ್ಸಿನಲ್ಲೇ ಕುಣಿದೆವು. 'ಅದ್ಭುತ', 'ಹೋ', 'ಅಯ್ಯೋ', – 'ಹಾ ಹಾ', 'ನೋಡ್ರಿ' ಎಂದು ಕಿರುಚಿಕೊಂಡಿದ್ದಕ್ಕೆ ರೂಮಿನಲ್ಲಿ ಮಲಗಿದ್ದ ಇಬ್ಬರು ವಿದ್ಯಾರ್ಥಿನಿಯರು ಹೊರಬಂದು ಮೆಟ್ಟಿಲು ಹತ್ತಿ ನಮ್ಮೊಡನೆ ಸೇರಿಕೊಂಡರು. ಅವರಿಗೆ ಆ ಅದ್ಭುತ ನೋಡಿ ಸಂತೋಷವಾಯಿತೆಂದರೆ ಸಾಲದು, ಅಷ್ಟು ಹೊತ್ತೂ ಒಳಗಿದ್ದುದಕ್ಕೆ ನಾಚಿಕೆಯಾಯಿತು. ಜಗತ್ತನ್ನು ಮಬ್ಬು ಪೂರ್ತಿ ಆವರಿಸಿತು. ಅನೇಕ ನಕ್ಷತ್ರಗಳು ಉಜ್ವಲವಾಗಿ ಬೆಳಗುತಿದ್ದವು. ಈ ಉದ್ರೇಕದಲ್ಲಿ ಸುಮಾರು ಎರಡು ಎರಡೂವರೆ ನಿಮಿಷಗಳು ಕಳೆದುವು. ಸೆರೆಹಾಕಿದ್ದ ಬೆಳಕಿನ ಕೋಡಿಯನ್ನು ಯಾರೋ ಎತ್ತಿದರು; ದಿಢೀರನೆ ಬೆಳಕು ಹರಿದು ಬಂದಿತು. ಬೆಳಕು ಮರೆಯಾದದ್ದು ಎಷ್ಟು ಅನಿರೀಕ್ಷಿತವೋ ಅದಕ್ಕಿಂತ ಬೆಳಕು ಹರಿದು ಬಂದದ್ದು ಅನಿರೀಕ್ಷಿತವಾಗಿತ್ತು. ಬೆಳಕು ಕಡಮೆ ಕಡಮೆ ಆಗುತ್ತ

ಮರೆಯಾಗಿತ್ತು. ಆದರೆ ಈ ಎರಡು ನಿಮಿಷ ನಮ್ಮನ್ನು ನಾವು ಮರೆತಿರುವಂತೆಯೇ ಬೆಳಕು ಬಂದಾಗ, ಯಾರೋ ಆಕಾಶದಿಂದ ಬೆಳಕನ್ನು ಬಕೆಟ್ಟಿನಿಂದ ದಿಢೀರನೆ ಚೆಲ್ಲಿದಂತೆ ಅನುಭವ ಆಯಿತು. ಸೂರ್ಯ ಮತ್ತೆ ಇಣುಕಿದ್ದ. ಆಗ ಸುಮಾರು ಮೂರೂ ಮುಕ್ಕಾಲು; ಗ್ರಹಣ ಬಿಡುಗಡೆಯಾಗುವ ದೃಶ್ಯ ನಮ್ಮ ಉತ್ಸಾಹವನ್ನು ಹಿಡಿದಿಡಲು ಅಸಮರ್ಥವಾಯಿತು. ಸ್ವಲ್ಪ ಹೊತ್ತು ನೋಡುತ್ತಿದ್ದಂತೆ ಬೆಳಕು ಹೆಚ್ಚುತ್ತ ಬಂದಿತ್ತು; ನಕ್ಷತ್ರಗಳೂ ಮಬ್ಬಾಗುತ್ತಿದ್ದುವು. ಸಿನಿಮಾ ಮುಗಿದ ಮೇಲೆ ಅಥವಾ ಮುಗಿಯುತ್ತಿದ್ದಂತೆ ಜನ ಏಳುತ್ತಾರೆ; ನಟರ, ದಿಗ್ದರ್ಶಕರ ಹೆಸರುಗಳನ್ನು ಕೆಲವು ಕಡೆ ತೋರಿಸುತ್ತಾರೆ. ಅದೆಲ್ಲ ಯಾರಿಗೆ ಬೇಕು! ಮೆಟ್ಟಲು ಇಳಿದು ನೇರವಾಗಿ ರೂಮಿಗೆ ಬಂದರೆ ಮಾತು ಕೊಟ್ಟದ್ದನ್ನು ಪ್ರಾಮಾಣಿಕವಾಗಿ ಉಳಿಸಿಕೊಂಡ ಇಬ್ಬರು ಬಾಗಿಲ ಮೂಲಕವೇ ಎಲ್ಲ ನೋಡಿದೆವು ಎಂದರು– ಬೆಳಕು ಕಡಿಮೆಯಾದದ್ದು, ಬಂದದ್ದು ಇತ್ಯಾದಿ. ಹೆಂಡತಿಗೂ ಸುಳ್ಳು ಹೇಳದ, ದೂರದಲ್ಲೂ ಹೆಂಡತಿಯ ಮಾತಿಗೆ ಗೌರವ ಕೊಡುವ ನನ್ನ ಮಿತ್ರರ ಬಗ್ಗೆ ಮೆಚ್ಚುಗೆಯಾಯಿತು. (ಅವರು ಗ್ರಹಣದ ಅವಧಿಯಲ್ಲಿ ರೂಮಿನ ಒಳಗಿದ್ದರು)

ಮನಸ್ಸು ಕಾಫಿಯ ಕಡೆ ಹರಿಯಿತು. ಎಲ್ಲಿಯ ಕಾಫಿ! ಆ ರಾತ್ರಿ ನಾವು ಜೋಗವನ್ನು ತಲಪಬೇಕಾಗಿತ್ತು. ಬೇಗ ಬೇಗ ಮುಖ ತೊಳೆದು, ಸಾಮಾನುಗಳನ್ನೆಲ್ಲ ಚೀಲಗಳಿಗೆ ಸೇರಿಸಿ, ಹೋಟೆಲಿನವರಿಗೆ ವಂದನೆಗಳನ್ನು ಹೇಳಿ, ಹೊರ ಬಂದೆವು. ಜನಸಂಚಾರ ಆಗಲೇ ಆರಂಭವಾಗಿತ್ತು. ನಮಗೆ ಸಂಜೆ; ಸಿರಸಿಯ ಜನಕ್ಕೆ ಪ್ರಾತಃಕಾಲ. ಅದೇ ಎದ್ದು ಮನೆಯಿಂದ ಹೊರ ಬಂದಿದ್ದರು. ಟ್ಯಾಕ್ಸಿಯಲ್ಲಿ ನಾವೆಲ್ಲ ತುರುಕಿಕೊಂಡು ನೇರವಾಗಿ ಸುಪ್ರಸಿದ್ಧ ಮಾರಿಕಾಂಬಾ ದೇವಾಲಯಕ್ಕೆ ಬಂದೆವು; ಭಕ್ತನಾಗಿ ಅಲ್ಲ, ಬಾಗಿಲಲ್ಲಿ ಎಲ್ಲ ಚೀಲಗಳ ಕಾವಲುಗಾರನಾಗಿ ಕುಳಿತು ಎಲ್ಲರನ್ನೂ ದೇವರ ದರ್ಶನಕ್ಕೆ ಕಳಿಸಿದೆ. ನನ್ನ ಕೈಲಿದ್ದ ಕ್ಯಾಮರಾ ನೋಡುತ್ತಾ ನಿಂತಿದ್ದ ಒಬ್ಬ ಚೂಟಿ ಬ್ರಾಹ್ಮಣ ಮಾಣಿಯನ್ನು, ಸುಮ್ಮನೆ 'ಗ್ರಹಣ ನೋಡಿದೆಯಾ?' ಎಂದೆ. ಅವನು ಅಷ್ಟಕ್ಕೇ ಉಬ್ಬಿ, ತಾನು ಇನ್ನೊಂದು ಬೀದಿಗೆ ಹೋಗಿ ಬರಿಗಣ್ಣಲ್ಲಿ ನೋಡಿದುದಾಗಿ ಕೊಚ್ಚಿಕೊಂಡಾಗ ಆ ಹುಡುಗನ ಬಗ್ಗೆ ವ್ಯಥೆಯಾಯಿತು. ಅವನ ಕಣ್ಣಿಗೆ ಏನೂ ಆಗದಿರಲಿ ಎಂದು ಹಾರೈಸಿದೆ.

ಗ್ರಹಣದ ಬಳಿಕ ಎಲ್ಲರೂ ದೇವರ ದರ್ಶನ ಮಾಡಬೇಕು; ನಾವು ಉದ್ದೇಶಿಸಿರದಿದ್ದರೂ ದೇವರು ತನ್ನ ಬಳಿಗೇ ಬರಮಾಡಿಕೊಂಡ, ದೈವ ಮಹಿಮೆ (?) ಅಚಿಂತನೀಯ ತಾನೇ! ನಾವು ಯಾರೂ ಸ್ನಾನ ಮಾಡಿರಲಿಲ್ಲ (ಅಥವಾ

ನಮ್ಮಲ್ಲಿ ಕೆಲವರು ಮಾಡಿದ್ದರೆಂದು ತೋರುತ್ತದೆ). ಅದನ್ನೆಲ್ಲ ಮಾರಿಕಾಂಬೆ ಕ್ಷಮಿಸಬೇಕು. ಆ ದೇವಾಲಯದಿಂದ ನಮ್ಮ ಕೈಯಲ್ಲಿ ಚೀಲ ಹಿಡಿದು ನಡೆದು ಹೊರಟರೆ, ಜನಸಂದಣಿ ಇತ್ತು. ಎಷ್ಟೋ ಮನೆ ಮುಂದೆ ನೆಲ ಬಳಿದು ಸಾರಿಸಿ ರಂಗೋಲೆ ಇಡುತ್ತಿದ್ದರು. ಆದರೆ ಚಹಾದ ಅಂಗಡಿ ಒಂದೂ ಬಾಗಿಲು ತೆರೆದಿರಲಿಲ್ಲ. ಒಂದರ ಬಾಗಿಲು ತೆರೆದಿತ್ತು. ಅಲ್ಲಿ ಹಾಲಿನವನು ಬಾರದೆ ಚಹಾ ಇರಲಿಲ್ಲ. ಇನ್ನೊಂದು ಚಹಾದ ಸಣ್ಣ ಹೋಟೆಲಲ್ಲಿ ಬಿಸಿನೀರು ಸಿಕ್ಕಿತು; ಅದನ್ನೇ ಚಹಾ ಎಂದು ಮಂತ್ರಿಸಿ ಚಪ್ಪರಿಸಿದೆವು. ಬಸ್‌ಸ್ಟ್ಯಾಂಡಿನಲ್ಲಿ ಆಗಲೇ ಜನಜಂಗುಳಿ, ಗಿಜಿಗಿಜಿ. ಬೆಳಿಗ್ಗೆ ಹನ್ನೊಂದರಿಂದ ಬಸ್‌ಗಳಿಲ್ಲ. ಸಂಜೆ ನಾಲ್ಕೂವರೆ ಐದು ಗಂಟೆ ಬಳಿಕ ಹೊರಡುವ ಬಸ್ಸುಗಳು ಹೊರಟುವು; ಬೇರೆ ಊರಿಂದ ಬರಬೇಕಾದ ಬಸ್ಸುಗಳು ಯಾವಾಗ ಬರುತ್ತವೋ ಅಧಿಕಾರಿಗಳಿಗೇ ತಿಳಿಯದು. ಅಲ್ಲೆ ಸ್ಟ್ಯಾಂಡಿನಲ್ಲಿದ್ದ ಹೋಟೆಲ್ ಊಟ, ತಿಂಡಿ, ಕಾಫಿ ಬಹಳ ರುಚಿಸಿತು. ಸಂಜೆ ೫–೬ರ ಜೋಗ್ ಬಸ್ಸು ರಾತ್ರಿ ಹತ್ತು ಗಂಟೆಗೆ ಬಂತು. ಅಂಕೋಲಾ ಕಡೆಯಿಂದ ಬಂದ ಆ ಬಸ್ಸಿನಲ್ಲಿ ಅಂಕೋಲದಲ್ಲಿ ಸೂರ್ಯಗ್ರಹಣ ನೋಡಿಕೊಂಡು ಬಂದ ಉತ್ತರಭಾರತದ ನಾಲ್ವರು ಬಹಳ ಖುಷಿಯಾಗಿ ಹೇಳಿಕೊಳ್ಳುತ್ತಿದ್ದರು. ರಾತ್ರಿ ೧೨ ಗಂಟೆ ಹೊತ್ತಿನಲ್ಲಿ ಡ್ರೈವರ್ ರಸ್ತೆಯಲ್ಲಿ ಎದುರಾದ ಎರಡು ಮೊಲಗಳ ಮೇಲೆ ಬಸ್ ಬಿಟ್ಟು ಕೊಲ್ಲಲು ನೋಡಿದ. ಒಂದು ತಪ್ಪಿಸಿಕೊಂಡಿತು; ಇನ್ನೊಂದು ಬಸ್ಸಿಗೆ ಸಿಕ್ಕಿ ಹಾಕಿಕೊಂಡಿತು ಎಂದು ನನಗೂ ತೋರಿತು; ಡ್ರೈವರ್ ಬಸ್ಸನ್ನು ರಸ್ತೆ ಪಕ್ಕಕ್ಕೆ ನಿಲ್ಲಿಸಿ, ಜೊಲ್ಲು ಸುರಿಸುತ್ತ ಬಹಳ ಹುಡುಕಿದ. ಅದೂ ತಪ್ಪಿಸಿಕೊಂಡಿತ್ತು; ಅಥವಾ ಗಾಯಗೊಂಡು ಎಲ್ಲೋ ನರಳುತ್ತಿತ್ತು. ಡ್ರೈವರನ ಒಗ್ಗರಣೆ ಪಾತ್ರೆಯಲ್ಲಿ ಬೇಯುವ ಭಾಗ್ಯ ಅದಕ್ಕೆ ತಪ್ಪಿತ್ತು.

ರಾತ್ರಿ ಒಂದು ಗಂಟೆಗೆ ಜೋಗದ ಯುವಜನ ಹಾಸ್ಟಲಿನಲ್ಲಿ ವಾಚ್‌ಮನ್ ಏಳಿಸಿ, ರೂಮ್ ಹಿಡಿದು ಮಲಗಿದಾಗ, ಒಂದು ಸಾರ್ಥಕ ದಿನ ಕಳೆಯಿತು ಎಂದು ಅನ್ನಿಸಿತ್ತು. ೧೯೮೦ ಫೆಬ್ರವರಿ ಹದಿನಾರು ಒಂದು ಅವಿಸ್ಮರಣೀಯ ದಿನವಾಯಿತು.

# ಗ್ರಹಣದ ಸಾಮಾಜಿಕ ಸಮೀಕ್ಷೆ

## ಪೀಠಿಕೆ

ನನ್ನ ಸಿರಸಿ ಭೇಟಿಯ ಸಂದರ್ಭದಲ್ಲಿ ಗ್ರಹಣವನ್ನು ಅನುಭವದ ದೃಷ್ಟಿಯಿಂದ ಕಾಣಬೇಕೆಂಬ ತವಕವಿತ್ತೇ ಹೊರತು ಆಗ ನನಗೆ ಸಂಶೋಧನ ದೃಷ್ಟಿಯಿಂದ ನೋಡುವ ಉದ್ದೇಶವಿರಲಿಲ್ಲ. ಗ್ರಹಣದ ಪ್ರತಿಕ್ರಿಯೆಗಳ ಸಮೀಕ್ಷೆಯ ಯೋಜನೆ ಆಗ ಹೊಳೆದಿದ್ದರೆ ಆ ಹೊಸದರಲ್ಲೇ ಎಷ್ಟೋ ಅಂಶಗಳನ್ನೂ ಇನ್ನೂ ಸೂಕ್ಷ್ಮಗಳನ್ನೂ ಗುರುತಿಸಬಹುದಿತ್ತು. ಗ್ರಹಣ ಕಳೆದ ಒಂದೆರಡು ವಾರಗಳ ಬಳಿಕ ಯೋಜನೆ ಹೊಳೆಯಿತು. ಗ್ರಹಣವನ್ನು ಕುರಿತಂತೆ ಬೇರೆ ಬೇರೆ ಜನ ಸ್ಪಂದಿಸಿದ ವಿವಿಧ ರೀತಿಗಳನ್ನು ಹಿಡಿದಿಡುವುದು ಅಗತ್ಯವೆನ್ನಿಸಿ ಈ ಪುಟ್ಟ ಯೋಜನೆಯನ್ನು ಕೈಗೊಳ್ಳಲಾಯಿತು.

ಮುಖ್ಯವಾಗಿ ನನ್ನ ಎಂ. ಫಿಲ್. ವಿದ್ಯಾರ್ಥಿಗಳು ಸಹಕರಿಸುವ ಒತ್ತಾಸೆ ನೀಡಿದ್ದು ನನಗೆ ಪ್ರಚೋದನೆ ನೀಡಿತು. ತರಗತಿಯಲ್ಲಿ ಅವರ ಜೊತೆ ಚರ್ಚಿಸಿ ಪ್ರಶ್ನಾವಳಿಯನ್ನು ಸಿದ್ಧಪಡಿಸಿದೆ (ಅನುಬಂಧ ೯ ನೋಡಿ). ಶ್ರೀ ಮೊರಬದ ಮಲ್ಲಿಕಾರ್ಜುನ, ಮುನಿಕೃಷ್ಣಪ್ಪ, ಶ್ರೀಮತಿಯರಾದ ಅಮೀನ, ಪ್ರೀತಿ ಶುಭಚಂದ್ರ, ವಿಜಯ ಇವರು ಪ್ರಶ್ನಾವಳಿಯಿಂದ ಮಾಹಿತಿ ಸಂಗ್ರಹಿಸಲು ಸಹಕರಿಸಿದರು. ನಮ್ಮ ಉದ್ದೇಶದಲ್ಲಿ ಅವಿದ್ಯಾವಂತರಿಂದ ಹಿಡಿದು ವಿದ್ಯಾವಂತರವರೆಗೆ (ವಿಜ್ಞಾನಿಗಳವರೆಗೆ), ಮಕ್ಕಳಿಂದ ಹಿಡಿದು ದೊಡ್ಡವರವರೆಗೆ, ಹಿಂದೂ ಮುಸ್ಲಿಂ– ಹೀಗೆ ಎಲ್ಲ ವರ್ಗದ ಜನಗಳಿಂದಲೂ ಮಾಹಿತಿ ಸಂಗ್ರಹಿಸಲು ಯೋಜಿಸಿದೆವು. ಶ್ರೀಮತಿ ಪ್ರೀತಿ ಹಿಂದೂ ಮಹಿಳೆಯರಿಂದ, ಶ್ರೀಮತಿ ಅಮೀನ ಮುಸ್ಲಿಂ ಮಹಿಳೆಯರಿಂದ ಸಂಗ್ರಹಿಸಿದ್ದರೆ, ಶ್ರೀಮತಿ ವಿಜಯ ಬೆಂಗಳೂರಿನ ಕಾಲೇಜ್ ವಿದ್ಯಾರ್ಥಿನಿಯರಿಂದ ಮಾತ್ರವಲ್ಲದೆ, ಭದ್ರಾವತಿಯಿಂದಲೂ ಹಲವು

ಪ್ರತಿಕ್ರಿಯೆಗಳನ್ನು ದೊರಕಿಸಿಕೊಟ್ಟರು. ಬೆಂಗಳೂರು ವಿಶ್ವವಿದ್ಯಾಲಯದ ಸಮೀಪದ ಮಲ್ಲತ್ತಹಳ್ಳಿ, ಸೌತ್‌ಎಂಡ್ ಸರ್ಕಲ್ ಬಳಿಯ ಕೊಳೆಗೇರಿ ಪ್ರದೇಶ, ಚಿಕ್ಕಪೇಟೆಯ ವೆಂಕಟರಮಣಸ್ವಾಮಿ ದೇವಾಲಯಗಳಿಗೆ ನಾನು ಹೋದಾಗ ನನ್ನ ಜೊತೆ ಮೊರಬದ ಮಲ್ಲಿಕಾರ್ಜುನ, ಮುನಿಕೃಷ್ಣಪ್ಪ ಇದ್ದು ಉತ್ಸಾಹದಿಂದ ಮಾಹಿತಿ ಸಂಗ್ರಹಿಸಿದರು. ಇವರೆಲ್ಲರ ಶ್ರಮವನ್ನು ಸಂತೋಷದಿಂದ ಸ್ಮರಿಸುತ್ತೇನೆ.

ಇದಲ್ಲದೆ, ನಾನು ಹೋದ ಕಡೆಯೆಲ್ಲ ಗ್ರಹಣದ ಪ್ರತಿಕ್ರಿಯೆಗಳನ್ನು ಕುತೂಹಲದಿಂದ ಪ್ರಶ್ನಿಸಿ ಪಡೆದಿದ್ದೇನೆ. ಒಟ್ಟು ಐವತ್ತು ಜನರನ್ನು ಪ್ರಶ್ನಾವಳಿ ಸಮೇತ ಭೇಟಿ ಮಾಡಿದ್ದರೆ, ಪ್ರಶ್ನಾವಳಿ ಇಲ್ಲದೆ ಸುಮ್ಮನೆ ಪ್ರಶ್ನಿಸಿ ವಿಷಯ ಸಂಗ್ರಹಿಸಿದ್ದು ನೂರೈವತ್ತಕ್ಕೂ ಮೇಲ್ಪಟ್ಟು ಜನ ಆಗಬಹುದು. ಈ ಸುಮಾರು ಇನ್ನೂರು ಜನ ಒಟ್ಟು ನಮ್ಮ ಜನಸಮೂಹವು ಸೂರ್ಯಗ್ರಹಣಕ್ಕೆ ಪ್ರತಿಕ್ರಿಯಿಸಿದ ರೀತಿಯನ್ನು ಸರಿಯಾಗಿ ಸಮಗ್ರವಾಗಿ ಪ್ರತಿನಿಧಿಸುತ್ತದೆಯೆಂದು ನಾನು ಭಾವಿಸಿದ್ದೇನೆ. ನನ್ನ ಉದ್ದೇಶ ಮೊದಲು ಚಿಕ್ಕ ಲೇಖನವಾಗಿದ್ದು, ಇನ್ನೂ ದೂರದ ಹಳ್ಳಿಗಳಿಗೆ ಹೋಗುವುದು, ಇನ್ನೂ ಹೆಚ್ಚು ಜನರನ್ನು ಭೇಟಿ ಮಾಡುವುದು ನನ್ನ ಮನಸ್ಸಿನಲ್ಲಿರಲಿಲ್ಲ. ಈ ಕ್ಷೇತ್ರ ಕಾರ್ಯದಲ್ಲಿ ಕೆಲವು ಕೊರತೆಗಳಿದ್ದರೆ ಅದಕ್ಕೆ ಮುಖ್ಯ ಕಾರಣ ನನ್ನ ಮೂಲೋದ್ದೇಶದ ವ್ಯಾಪ್ತಿಯೇ ಸೀಮಿತವಾಗಿದ್ದುದು. (ಆದರೂ ಮಧ್ಯ ಕರ್ನಾಟಕ, ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಜನರನ್ನು ಭೇಟಿ ಮಾಡಿ ನನ್ನ ಕೊರತೆಗಳನ್ನು ಕಡಿಮೆ ಮಾಡಿಕೊಂಡಿದ್ದೇನೆ).

**ಪ್ರಶ್ನಾವಳಿ:**

ಇಡೀ ಪ್ರಶ್ನಾವಳಿಯನ್ನು ಪುಸ್ತಿಕೆಯ ಕೊನೆಯಲ್ಲಿ ಅನುಬಂಧವಾಗಿ ಕೊಟ್ಟಿದೆ (ಅನುಬಂಧ ೯ ನೋಡಿ) ತೀರ ಚಿಕ್ಕ ಪ್ರಶ್ನಾವಳಿ ಇದು–ಇದನ್ನು ಉಪಯೋಗಿಸಲು ಹದಿನೈದು ನಿಮಿಷಗಳಿಗಿಂತ ಹೆಚ್ಚು ಬೇಕಾಗಿಲ್ಲ. ವ್ಯಕ್ತಿಗಳು ತಾವೇ ಓದಿ ಭರ್ತಿ ಮಾಡುವುದಾದರೆ ಐದು ನಿಮಿಷಕ್ಕೂ ಹೆಚ್ಚು ಬೇಕಾಗುವುದಿಲ್ಲ. ಪ್ರಶ್ನಾವಳಿಯನ್ನು ರೂಪಿಸುವಾಗ ಮನಸ್ಸಿನ ಮುಂದೆ ಮುಖ್ಯವಾಗಿದ್ದ ಪ್ರಶ್ನೆಗಳಿವು:

೧. ಗ್ರಹಣದ ಬಗ್ಗೆ ಸಾಂಪ್ರದಾಯಕ ನಂಬಿಕೆಗಳು ಯಾವುವು? ಅವು ಎಷ್ಟು ಉಳಿದಿವೆ?

೨. ವೈಜ್ಞಾನಿಕ ಅರಿವು ಜನರಲ್ಲಿದ್ದರೂ ಸಾಂಪ್ರದಾಯಕ ನಂಬಿಕೆಗಳು ನಿಜವಾಗಿಯೂ ಪೂರ್ತಿ ಮಾಯವಾಗಿವೆಯೆ? ಆ ನಂಬಿಕೆಗಳಿಂದ ಮೂಡಿ ಬಂದ ರಿಚುಯಲ್ಲುಗಳು ಎಷ್ಟು ಬಗೆಯಾಗಿವೆ?

೩. ಸಂಪ್ರದಾಯದ ಹಿಡಿತ ಜನರ ಮೇಲೆ ಎಷ್ಟರಮಟ್ಟಿಗಿದೆ?

೪. ಗ್ರಹಣವನ್ನು ಕುರಿತಂತೆ ನಡೆದ ಅಭೂತಪೂರ್ವ ಪ್ರಚಾರದಲ್ಲಿ ಸಾಮೂಹಿಕ ಮಾಧ್ಯಮಗಳು ಜನಸಾಮಾನ್ಯರನ್ನು ತಲುಪುವಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾದುವು?

೫. ನಮ್ಮಲ್ಲಿ ಪ್ರಯೋಗಶೀಲತೆ ಎಷ್ಟರಮಟ್ಟಿಗೆ ಬೆಳೆದಿದೆ?

೬. ದೇಶದ ಭವಿಷ್ಯದ ಮೇಲೆ ಗ್ರಹಣ ಬೀರಬಹುದಾದ ಪರಿಣಾಮಗಳ ಬಗ್ಗೆ ಜನಸಾಮಾನ್ಯರ ಅನ್ನಿಸಿಕೆ ಏನು?

ಪ್ರಶ್ನಾವಳಿಗಳಿಂದ ಮಾಹಿತಿ ಸಂಗ್ರಹಿಸುವಾಗ ವಕ್ತಾರರು ಏನಾದರೂ ಹೆಚ್ಚಿನ ವಿಷಯ ಹೇಳಿದರೆ ಅದನ್ನೂ ಸಂಗ್ರಹಿಸಿದೆ. ಪ್ರಶ್ನಾವಳಿ ಇನ್ನೂ ಕೆಲವು ವಿವರಗಳನ್ನು ಒಳಗೊಳ್ಳಬಹುದಿತ್ತು. ಉದಾಹರಣೆಗೆ: ಹದಿನಾರನೇ ಪ್ರಶ್ನೆ "ನೀವು (ಗ್ರಹಣ) ನೋಡಿದರೂ ಬೇರೆ ಯಾರಿಗಾದರೂ ಅವಕಾಶ ಕೊಡಲಿಲ್ಲವೆ?" ಎಂಬ ಪ್ರಶ್ನೆಯ ಜೊತೆ "ಏಕೆ ಅವಕಾಶ ಕೊಡಲಿಲ್ಲ" ಎಂಬ ಪ್ರಶ್ನೆಯೂ ಇದ್ದಿದ್ದರೆ, ಆ ಪ್ರಶ್ನೆಯ ೨, ೩, ೪, ೫ ನೇ ಭಾಗಗಳಿಗೆ ಕೆಲವರಿಂದಲಾದರೂ ಸ್ವಾರಸ್ಯ ಉತ್ತರಗಳು ದೊರಕುತ್ತಿದುವು.

ಆದರೂ ಈಗಿರುವಂತೆ, ಪ್ರಶ್ನಾವಳಿಯ ಸಹಾಯದಿಂದ ದೊರಕಿರುವ ಮಾಹಿತಿ ಖಂಡಿತ ನಿರಾಸೆ ಹುಟ್ಟಿಸುವಂತಹುದೇನೂ ಅಲ್ಲ. ಪ್ರತಿಕ್ರಿಯೆಗಳಲ್ಲಿ ನಿರ್ದಿಷ್ಟ ಮಾದರಿಗಳು (Patterns) ಕಾಣಿಸಿರುವುದರಿಂದ, ಗ್ರಹಣದ ಬಗ್ಗೆ ಜನ ತೋರಿದ ಪ್ರತಿಕ್ರಿಯೆಗಳಲ್ಲಿ ಕೆಲವು ಸಾಮಾನ್ಯ ನಿಯಮಗಳನ್ನು ರೂಪಿಸುವುದರಲ್ಲಿ ಕಷ್ಟವಾಗುವುದಿಲ್ಲ. ಮಾಹಿತಿಯನ್ನು ವಿಶ್ಲೇಷಿಸಿ ಸಮೀಕ್ಷೆಯಿಂದ ಹೊರಡುವ ಕೆಲವು ಫಲಿತಾಂಶರೂಪದ ತೀರ್ಮಾನಗಳನ್ನು ಕೆಳಗೆ ಕೊಡುತ್ತೇನೆ.

ಇಲ್ಲಿ ಪ್ರತಿಕ್ರಿಯೆ ತೋರಿರುವಲ್ಲಿ ಒಂದೆರಡು ಕಡೆಯಾದರೂ ಸಂಶಯಗಳು ಏಳುವಂತಿವೆ. ಆದರೆ ಬಹುತೇಕ ಕಡೆ ಪ್ರತಿಕ್ರಿಯೆಗಳು ವಿಶ್ವಾಸಾರ್ಹವಾಗಿದ್ದು ಅವು ತಾವು ಒದಗಿಸುವ ಮಾಹಿತಿಯನ್ನು ಗಟ್ಟಿ ನೆಲದ ಮೇಲೆ ನಿಲ್ಲಿಸಿವೆ.

**ವಿಶ್ಲೇಷಣೆ :**

ಇಲ್ಲಿ ಪಡೆದಿರುವ ಉತ್ತರಗಳು ಲಿಖಿತರೂಪದವು, ಎಂದರೆ ಪ್ರಶ್ನಾವಳಿಯಿಂದ ಪಡೆದಂಥವು ಸುಮಾರು ಐವತ್ತು. (ಅವುಗಳಲ್ಲಿ ೪೧ನ್ನು ಮಾತ್ರ ಅಂಕಿ ಅಂಶಕ್ಕೆ ಬಳಸಿಕೊಂಡಿದೆ. ಒಂಬತ್ತು ಪ್ರಶ್ನಾವಳಿಗಳು ತಡವಾಗಿ ನನ್ನ ಕೈಗೆ ಬಂದವು. ಅವುಗಳ ಸ್ವಾರಸ್ಯ ಭಾಗಗಳನ್ನು ಅಲ್ಲಲ್ಲಿ ಸೇರಿಸಿದ್ದೇನೆ).

ಜೊತೆಗೆ ಕೊನೆಯ ಪಕ್ಷ ನೂರು ಜನರ ಮೌಖಿಕ ಪ್ರತಿಕ್ರಿಯೆಗಳು ಅಲ್ಲಲ್ಲಿ ಸೇರಿವೆ. ಮಹಾಶಾಂತಿಯಜ್ಞದ ವರದಿಯೂ ನಮ್ಮ ಕ್ಷೇತ್ರಕಾರ್ಯದ ಭಾಗವೇ. ಅದಕ್ಕೆ ಸಂಬಂಧಿಸಿದಂತೆ ಒಂದು ಭೇಟಿಯಲ್ಲಿ ಆರು ಜನ, ಇನ್ನೊಂದು ಭೇಟಿಯಲ್ಲಿ ನಾಲ್ಕು ಜನರನ್ನು ಸಂದರ್ಶಿಸಲಾಯಿತು.

ನಲವತ್ತೊಂದು ಪ್ರತಿಕ್ರಿಯೆಗಳನ್ನು ಒಟ್ಟು ನಾಲ್ಕು ಭಾಗಗಳನ್ನಾಗಿ ಮಾಡಿಕೊಂಡೀದ್ದೇನೆ.

೧. ಕಿಶೋರರು : ೧೦-೧೨ ವಯಸ್ಸಿನವರು

೨. ವಿದ್ಯಾರ್ಥಿಗಳು : ಹೈಸ್ಕೂಲ್, ಪ್ರಿಯೂನಿವರ್ಸಿಟಿ ಮಟ್ಟದವರು

೩. ವಿದ್ಯಾವಂತರು : ಬಿ. ಎ. ಮತ್ತು ಅದಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದವರು

೪. ಅವಿದ್ಯಾವಂತರು : (ರೈತರು, ಬೀದಿ ವ್ಯಾಪಾರಿಗಳು, ಗೃಹಿಣಿಯರು, ಕಾರ್ಮಿಕರು, ಇತ್ಯಾದಿ)

(೧) **ಕಿಶೋರರು** : ನಾಲ್ಕು, ಏಳನೇ ತರಗತಿಗಳಲ್ಲಿ ಓದುವ ಮಕ್ಕಳು (ಒಬ್ಬ ಹುಡುಗಿ, ಒಬ್ಬ ಹುಡುಗ) ಇಬ್ಬರಿಗೂ ಗ್ರಹಣವೇನೆಂದರೆ ಸರಿಯಾಗಿ ಗೊತ್ತು ಮತ್ತು ಆ ಸಂಗತಿ ಅವರಿಗೆ ಪುಸ್ತಕಗಳಿಂದ ತಿಳಿದಿದೆ. ಹುಡುಗಿಗೆ ಗ್ರಹಣದಿಂದ ಭಯವೇನೂ ಆಗಿಲ್ಲ. "ನನ್ನ ಅಜ್ಜಿ ತಟ್ಟೆಯಲ್ಲಿ ನೀರಿಟ್ಟು ಒನಕೆಯನ್ನು ಅದರಲ್ಲಿ ನಿಲ್ಲಿಸಿದ್ದರು. ಗ್ರಹಣ ಹಿಡಿದಾಗ ಒನಕೆ ನಿಂತಿರುತ್ತದೆ, ಗ್ರಹಣ ಹೊರಟು ಹೋದಾಗ ಒನಕೆ ಬಿದ್ದು ಹೋಗುತ್ತದೆ". ಇದು ಹುಡುಗಿಯ ಮುಂದೆ ನಡೆದ ಜನಪ್ರಿಯ ಪ್ರಯೋಗ. ಸ್ವಾರಸ್ಯವೆಂದರೆ, ಈ ಪ್ರಯೋಗವನ್ನು (ಚಿತ್ರ ೯) ಬಹಳ ಜನ ಪ್ರಸ್ತಾಪಿಸಿದ್ದಾರೆ. ಕೆಲವರು ಆ ಪ್ರಯೋಗದ ಬಗ್ಗೆ ನಂಬಿಕೆ ಬರಲಿಲ್ಲವೆಂದಿದ್ದಾರೆ, ಕೆಲವರು ನಿಜ ಎಂದು ಒಪ್ಪಿಕೊಂಡಿದ್ದಾರೆ. ಗ್ರಹಣದ ಸಮಯದಲ್ಲಿ ಹೊಟ್ಟೆ ಖಾಲಿಯಿರಬೇಕು, ಇಲ್ಲದಿದ್ದರೆ ಆಹಾರ ಗಡ್ಡೆ ಕಟ್ಟುತ್ತದೆ ಅಥವಾ ಆರೋಗ್ಯ ಕೆಡುತ್ತದೆ ಎಂಬುದು ಒಂದು ಜನಪ್ರಿಯ ನಂಬಿಕೆ. ಇದನ್ನು ಹುಡುಗಿ ಹೇಳಿದ್ದಾಳೆ. ಹುಡುಗ ರೇಡಿಯೋ ವಾರ್ತೆಗಳು ಕಣ್ಣು ಹೋಗುತ್ತವೆಂದು ಭಯ ಹುಟ್ಟಿಸಿದ್ದರೂ ಗ್ರಹಣ ಹಿಡಿದಿದ್ದನ್ನು ಕಪ್ಪು ಗಾಜು, ಫಿಲ್ಮ್, ಕನ್ನಡಿ ಪ್ರತಿಫಲನ, ಸಗಣಿ ರಾಡಿಗಳ ಮೂಲಕ ನೋಡಿದಾಗ ಭಯ ಬಿಟ್ಟುಹೋಯ್ತು ಎಂದಿದ್ದಾನೆ. ಹುಡುಗ ಸಂಜೆಮಲ್ಲಿಗೆ ಗ್ರಹಣದ ವೇಳೆ ಅರಳಿತು ಎಂದಿದ್ದಾನೆ. ಗ್ರಹಣದ ಬಗ್ಗೆ ಇಬ್ಬರು ಮಕ್ಕಳೂ ಸೂಕ್ಷ್ಮ (Sensitive) ಪ್ರತಿಕ್ರಿಯೆ ತೋರಿರುವುದು ಈಗಿನ ಪೀಳಿಗೆಯ ಮಕ್ಕಳ ಭವಿಷ್ಯದತ್ತ ಚಾಚುಗೈಯಾಗಿದೆ.

(೨) **ವಿದ್ಯಾರ್ಥಿಗಳು :** ಒಂಬತ್ತು ಜನ. (ಇದರಲ್ಲಿ ಎಸ್.ಎಸ್.ಎಲ್.ಸಿ. ಓದಿದ ಮೂವರು ಹಿರಿಯರೂ ಸೇರಿದ್ದಾರೆ). ಗ್ರಹಣ ಹೇಗೆ ನಡೆಯುತ್ತದೆಯೆಂಬಲ್ಲಿ ಅನುಮಾನವಿಲ್ಲ. ಕೆಲವರಿಗೆ ರೇಡಿಯೋ ಮತ್ತು ಪತ್ರಿಕೆಗಳ ಪ್ರಚಾರಗಳಿಂದ ಭಯವಾಗಿದೆ. ಆದರೂ ಬೇಕೆಂದೇ ಬರಿಗಣ್ಣಲ್ಲಿ ನೋಡಿದ ಒಂದಿಬ್ಬರೂ ಇದ್ದಾರೆ. ಗ್ರಹಣದ ಸಮಯದಲ್ಲಿ ಕೆಲವರು ಪ್ರಕೃತಿಯನ್ನು ವೀಕ್ಷಿಸಿದ್ದಾರೆ; ಸಂಜೆಯಾಯಿತೆಂದು ದನಗಳೆಲ್ಲ ಹಿಂದಕ್ಕೆ ಬಂದವು, ಇತ್ಯಾದಿ. ಒನಕೆ ಪ್ರಯೋಗ ನಿಜವೆಂದು ಒಪ್ಪಿಕೊಂಡಿರುವವರೂ ಇದ್ದಾರೆ. ನಂಬಿಕೆ ಬಾರದ ವ್ಯಕ್ತಿಯೂ ಇದ್ದಾನೆ. ಇರಾನ್, ಅಮೆರಿಕಾ ಘರ್ಷಣೆ, ಒಲಿಂಪಿಕ್ಸ್‌ನಲ್ಲಿ ಅಮೆರಿಕ ಭಾಗವಹಿಸಲು ನಿರಾಕರಣೆ ಇತ್ಯಾದಿ, ಮತ್ತೊಂದು ಮಹಾಯುದ್ಧದ ಕಡೆ ಪ್ರಪಂಚ ಸಾಗುತ್ತಿರುವುದು ಗ್ರಹಣದ ಪರಿಣಾಮವೆಂದು ಒಬ್ಬ ವಿದ್ಯಾರ್ಥಿ ಸಾರಿದ್ದಾನೆ. ಅನೇಕರು ಈ ವರ್ಷದ ಬೇಸಿಗೆ ಸೆಕೆ ಗ್ರಹಣದ ಪರಿಣಾಮವೆಂದಿದ್ದರಾದರೂ ಇದೇ ವಿದ್ಯಾರ್ಥಿ ಅದನ್ನು ನಂಬಿಲ್ಲ. ಆದರೆ ಇನ್ನೊಬ್ಬ ವಿದ್ಯಾರ್ಥಿ ಅದು ಗ್ರಹಣದ ಪರಿಣಾಮವೇ ಎಂದಿದ್ದಾನೆ.

(೩) **ವಿದ್ಯಾವಂತರು** (ಪ್ರೌಢ ವಿದ್ಯಾರ್ಥಿಗಳೂ ಸೇರಿದ್ದಾರೆ) : ಒಟ್ಟು ಇಪ್ಪತ್ತೊಂದು ಜನ. ಒಬ್ಬರು ಬರಿಗಣ್ಣಿನಿಂದ ಧಾರವಾಡದಲ್ಲಿ ನೋಡಿದುದಾಗಿ ಒತ್ತಿ ಹೇಳಿದ್ದಾರೆ. "ಪ್ರಕೃತಿಯಲ್ಲಿ ಆಲ್ಫಾ ಕಿರಣಗಳ ಸೂಕ್ಷ್ಮ ವೀಕ್ಷಣೆ ಮಾಡಿದೆ" ಎಂದಿದ್ದಾರೆ. ಇವರೂ ಗ್ರಹಣಾನಂತರ ಸ್ನಾನಮಾಡಿದ್ದಾರೆ ಮತ್ತು ಇವರ ಸಂಸಾರದಲ್ಲಿ ಮನೆ, ಪಾತ್ರೆ, ದೇವತಾಮೂರ್ತಿಗಳ ಶುದ್ಧಿಕಾರ್ಯ ಪೂಜೆಗಳು ನಡೆದುದನ್ನು ನೋಡಿದರೆ ಸ್ನಾನ ಮಾಡಿದ್ದು ಮನೆಯ ಇತರರನ್ನು ಅನುಕರಿಸಿ ಎಂದು ಕಾಣುತ್ತದೆ. ಅನೇಕರು 'ಕಣ್ಣು ಹೋಗುತ್ತದೆ' ಎಂಬ ಭಯದಿಂದ ಪೀಡಿತರಾಗಿದ್ದರೂ, ಅವರಲ್ಲಿ ಒಬ್ಬರು 'ಗ್ರಹಣದ ಬೆಳಕಿನಲ್ಲಿ ನಡೆದಾಡಿದರೆ ಕೂದಲು ಕಪ್ಪಾಗುತ್ತದೆಯೇ' ಎನ್ನುವ ಪ್ರಯೋಗ ಮಾಡಿದುದಾಗಿ ತಿಳಿಸಿದ್ದಾರೆ. ಮೂವರು ವಿಜ್ಞಾನಿಗಳು (ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ಗೆ ಸೇರಿದವರು) ಮತ್ತು ಒಬ್ಬಿಬ್ಬರು ಬುದ್ಧಿಜೀವಿಗಳನ್ನು ಬಿಟ್ಟರೆ ಉಳಿದವರೆಲ್ಲರೂ ಗ್ರಹಣಾನಂತರ ಸ್ನಾನ ಮಾಡಿದ್ದಾರೆ ಮತ್ತು ಇಬ್ಬರು ವಿಜ್ಞಾನಿಗಳನ್ನು ಬಿಟ್ಟರೆ ಉಳಿದವರು ಯಾರೂ ಗ್ರಹಣಾವಧಿಯಲ್ಲಿ ಆಹಾರ ತೆಗೆದುಕೊಂಡಿಲ್ಲ. ಒಬ್ಬ ಬಿ. ಎ. ಪದವೀಧರ ಗ್ರಹಣವು 'ವ್ಯವಸಾಯೋತ್ಪನ್ನಗಳು, ಹವಾಮಾನ, ಜನಸಾಮಾನ್ಯರ ಮನೋಭಾವನೆ ಮೇಲೆ ಪ್ರಭಾವ ಬೀರಬಹುದು' ಎಂದಿದ್ದಾನೆ. ಒಬ್ಬ ಬಿ. ಎಸ್‌ಸಿ. ಪದವೀಧರೆ, ಗ್ರಹಣಾನಂತರ 'ಭೂಪ್ರಳಯ ಆಗಬೇಕಾಗಿದ್ದು ಇನ್ನೂ ಆಗಿಲ್ಲ'ದಿರುವುದರ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ್ದಾಳೆ. ಒಬ್ಬ ಎಂ. ಎಸ್‌ಸಿ. ಪದವೀಧರ "ಇಲಿ, ಏಡಿ, ಮೀನುಗಳ ಮೇಲೆ...Enzyne

rates, harmonal control" ಇತ್ಯಾದಿ ಪ್ರಯೋಗಗಳನ್ನು ನಡೆಸಿರುವರಾದರೂ, ಹಿಂದಿನಂತೆ ಈ ಗ್ರಹಣದಲ್ಲೂ ಒನಕೆ ಪ್ರಯೋಗವನ್ನು ಯಶಸ್ವಿಯಾಗಿ ಮಾಡಿರುವುದಾಗಿ ಹೇಳಿಕೊಂಡಿದ್ದಾನೆ. ಬಿ. ಎ. ಫೈನಲ್ ವಿದ್ಯಾರ್ಥಿನಿ, ದೊಡ್ಡವರ ಹೇಳಿಕೆಯಿಂದ ಸೂರ್ಯನನ್ನು ರಾಹು ನುಂಗುವುದೇ ಗ್ರಹಣ ಎಂದು ನಂಬಿದ್ದಾಳೆ. ಈ ಬಾರಿಯ ಬಿಸಿಲು ಗ್ರಹಣದ ಪರಿಣಾಮವೆಂದು ಆಕೆಯ ಖಚಿತ ಅಭಿಪ್ರಾಯ. ಬಿ. ಎ. ಎರಡನೇ ವರ್ಷದ ವಿದ್ಯಾರ್ಥಿನಿಗೆ 'ಪ್ರಳಯವಾಗುವುದೆಂದು ಭಯ' ಸ್ವಾಭಾವಿಕವಾಗಿ ಆಗಿತ್ತು, ಆದರೆ ಗ್ರಹಣ ಕಾಲದಲ್ಲಿ ಅದು ಸುಳ್ಳೆಂದು ರುಜುವಾಯಿತು. ಆದರೆ ಒನಕೆ ನೀರಿನಲ್ಲಿ ನಿಂತಿತು. 'ಭೂಕಂಪ' ಆಗುವ ಸಾಧ್ಯತೆ ಇದೆ ಎಂದಿದ್ದಾಳೆ ಫೈನಲ್ ಬಿ. ಎ. ವಿದ್ಯಾರ್ಥಿನಿ, ವಿಜ್ಞಾನಿಗಳಲ್ಲೊಬ್ಬರು 'Shadow Bands' ಅವಲೋಕಿಸಿದುದನ್ನು, ಗ್ರಹಣ ಹಿಡಿದಾಗ 'ವಿಸ್ಮಯಕಾರಕ ಆನಂದ, ಸಂತೋಷ' ಅನುಭವಿಸಿದುದನ್ನು ಹೇಳಿಕೊಂಡಿದ್ದಾರೆ. ಒಬ್ಬ ವಿಜ್ಞಾನಿಯಂತೂ ಬೆಳಿಗ್ಗೆ, ರಾತ್ರಿ ಊಟ ಮಾಡಿದುದನ್ನು ಹೇಳದಿದ್ದರೂ, ಮಧ್ಯಾಹ್ನ ಗ್ರಹಣದ ಸಮಯದಲ್ಲಿ ಊಟ ಮಾಡಿದುದನ್ನು ಒತ್ತಿ ಹೇಳಿದ್ದಾರೆ.

(೪) ಅವಿದ್ಯಾವಂತರು : (ಒಂಬತ್ತು ಜನ) ಇವರಲ್ಲಿ ಬಹುಪಾಲು ಜನ ರಾಹುವೋ ಸರ್ಪನೋ ಸೂರ್ಯನನ್ನು ನುಂಗಿದ್ದೇ ಗ್ರಹಣ ಎಂದು ನಂಬಿದ್ದಾರೆ. ಎಲ್ಲರಿಗೂ ಗ್ರಹಣ ನಡೆಯುವ ವಿಷಯ ಗೊತ್ತಿತ್ತು. ರೇಡಿಯೋ ಸುದ್ದಿ ಜನ ಮಾತಾಡಿದ್ದು ಎಲ್ಲ ಸೇರಿ ಅವರಿಗೆ ಭಯ ಹುಟ್ಟಿಸಿದುವು. ಪೇಪರಿನಲ್ಲಿ ಸುದ್ದಿ ಬಂದ ವಿಷಯವೂ ತಿಳಿದಿದೆ. ಇವರು ಯಾರೂ ಸರಿಯಾಗಿ ಗ್ರಹಣವನ್ನು ನೋಡಿಲ್ಲ. ಮೂವರು ಗ್ರಹಣವನ್ನು ನೋಡಿದುದಾಗಿ ಹೇಳಿದ್ದರೂ, ಯಾರೋ ಹಿಡಿದಿದ್ದ ಸಾಧನವನ್ನು ತೆಗೆದುಕೊಂಡು ನೋಡಿದಂತೆ ಮಾಡಿ ಕೈ ಬಿಟ್ಟವರು, ಎಲ್ಲರೂ ಮನೆಯಲ್ಲೇ ಇದ್ದರು. ಕ್ಷತ್ರಿಯವಂಶದ ಒಬ್ಬ ಮಹಿಳೆಗೆ ತನ್ನ ಜಾತಿಯ ಬಗ್ಗೆ ಹೆಮ್ಮೆ; 'ನಮಗೆ ಭಯ ಎಲ್ಲಿಯದು' ಎನ್ನುತ್ತಾಳೆ. ಅವಳೂ ಗ್ರಹಣ ನೋಡಲಿಲ್ಲ. ಒಬ್ಬ ಮುಸ್ಲಿಂ ಮಹಿಳೆಗೆ, "ಪ್ರಪಂಚದ ಅಂತ್ಯ ಕಾಲ ಸಮೀಪಿಸುತ್ತಿದೆ." ಒಬ್ಬರು "ಚಂದ್ರನ ನೆರಳು ಭೂಮಿಯ ಮೇಲೆ ಬೀಳುತ್ತದೆ" ಎಂಬುದನ್ನು ಒಪ್ಪುವರಾದರೂ ರಾಹು ಕೇತುಗಳು ಸೂರ್ಯನನ್ನು ನುಂಗುತ್ತವೆಯೆಂದು ಹಿಂದೂಧರ್ಮ ಹೇಳುವುದೇ ಸರಿ ಎಂದು ಹೇಳುತ್ತಾರೆ. ಒಬ್ಬ ಕೊಳೆಗೇರಿನಿವಾಸಿ–ಕಾರ್ಪೊರೇಷನ್ನಿನಲ್ಲಿ ಗ್ಯಾಂಗ್‌ಮನ್, ಧೈರ್ಯ ಮಾಡಿ ಕಪ್ಪು ಮಸಿಯ ಗಾಜಿನ ಮೂಲಕ ಗ್ರಹಣ ನೋಡಿದ್ದಾನೆ. ಅವನಿಗೆ 'ಶಿವನೇ ಗತಿ' ಎಂಬ ಪ್ರಾರ್ಥನೆ ಧೈರ್ಯ ಕೊಟ್ಟಿತು ಗ್ರಹಣಾನಂತರ ಸ್ನಾನ, ಮನೆ ಶುದ್ಧಿ, ದೇವತಾ ಪೂಜೆ ಎಲ್ಲರಿಗೂ ಸಮಾನ. ಅವಿದ್ಯಾವಂತರ ಪ್ರತಿಕ್ರಿಯೆಗಳೆಲ್ಲ ಬಹುತೇಕ ಒಂದೇ.

ಇವು ಪ್ರಶ್ನಾವಳಿಯಲ್ಲಿನ ಉತ್ತರಗಳ ಕೆಲವು ಆರಿಸಿದ ಭಾಗಗಳು. ಈಗ ಪ್ರಶ್ನಾವಳಿಯ ಒಂದೊಂದೇ ಪ್ರಶ್ನೆಗೆ ಬೇರೆ ಬೇರೆ ಗುಂಪಿನವರು ಕೊಟ್ಟ ಉತ್ತರಗಳ ಅಂಕಿ ಅಂಶಗಳನ್ನು ನೋಡೋಣ. (ಅನುಬಂಧದ ಪ್ರಶ್ನಾವಳಿಯನ್ನು ಒಮ್ಮೆ ಪರಿಶೀಲಿಸಿ. ಕೆಳಗಿನ ಪ್ರಶ್ನೆಗಳ ಸಂಖ್ಯೆ ಅಲ್ಲಿಯವು.)

ಮ = ಮಕ್ಕಳು (೨)
ವಿರ್ಥಿ = ವಿದ್ಯಾರ್ಥಿಗಳು (೯)
ವಂತ = ವಿದ್ಯಾವಂತರು (೨೧)
ಅವಿಂತ = ಅವಿದ್ಯಾವಂತರು (೯)

೬. ಗ್ರಹಣವೆಂದರೆ ನೀವು ಏನೆಂದುಕೊಂಡಿದ್ದೀರಿ ?

(೧) ಸೂರ್ಯನನ್ನು ಸರ್ಪವೊಂದು ನುಂಗುತ್ತದೆ

| [ಮ.] | [ವಿರ್ಥಿ] | [ವಂತ] | [ಅವಿಂತ] |
|---|---|---|---|
| ೦ | ೦ | ೦ | ೭ |

(೨) ಚಂದ್ರನ ನೆರಳು ಭೂಮಿಯ ಮೇಲೆ ಬೀಳುತ್ತದೆ
[ಅವಿಂತ]ರನ್ನು ಬಿಟ್ಟು ಉಳಿದ ಎಲ್ಲರು

(೩) ಗೊತ್ತಿಲ್ಲ
[ಅವಿಂತ.] ೨

(ಟಿಪ್ಪಣಿ : ಒಬ್ಬ ಎಂ. ಎ. ವಿದ್ಯಾರ್ಥಿ ೧ನೆಯದು ಹಿರಿಯರಿಂದ, ೨ನೆಯದು ವಿಜ್ಞಾನದಿಂದ ತಿಳಿದಿದ್ದರೂ ಯಾವುದನ್ನೂ ತೆಗೆದು ಹಾಕದೆ ಎರಡನ್ನೂ ನಂಬುತ್ತಾನೆ.)

೭. ಮೇಲಿನ ಮಾಹಿತಿ ನಿಮಗೆ ಎಲ್ಲಿ ದೊರಕಿತು ?

| | [ಮ] | [ವಿರ್ಥಿ.] | [ವಂತ.] | [ಅವಿಂತ.] |
|---|---|---|---|---|
| (೧) ಜನರ ಬಾಯಿಂದ | ೦ | ೦ | ೦ | ೮ |

(೨) ಪುಸ್ತಕದ ಮೂಲಕ
[ಅವಿಂತ]ರನ್ನು ಬಿಟ್ಟು ಉಳಿದ ಎಲ್ಲರು

(೩) ಪತ್ರಿಕೆ ಮೂಲಕ
ಯಾರೂ ಇಲ್ಲ

(೪) ಗೊತ್ತಿಲ್ಲ
ಯಾರೂ ಇಲ್ಲ

೮. (ಈ ಪ್ರಶ್ನೆಗೆ ಬಗೆಬಗೆಯಾಗಿ ನೆನಪಿನಿಂದ ಉತ್ತರಿಸಿದ್ದಾರೆ, ಪ್ರತಿಕ್ರಿಯೆಗಳ ಸಂಖ್ಯೆಯನ್ನು ಅನಗತ್ಯವೆಂದು ಇಲ್ಲಿ ಕೊಟ್ಟಿಲ್ಲ)

೯. **ರೇಡಿಯೋ, ಪತ್ರಿಕೆಗಳ ಮೂಲಕ ನಡೆದ ಪ್ರಚಾರದಿಂದ ನಿಮಗೆ ಭಯ ವಾಗಿತ್ತೆ ?**

| | [ಮ] | [ವಿರ್ಥಿ.] | [ವಂತ.] | [ಅವಿಂತ.] |
|---|---|---|---|---|
| (೧) ಹೌದು | ೧ | ೫ | ೪ | ೩ |
| (೨) ಇಲ್ಲ | ೧ | ೪ | ೧೭ | ೬ |

(ಟಿಪ್ಪಣಿ : ತಮಗೆ ಭಯವಾಯ್ತು ಎಂದು ಹೇಳಿಕೊಳ್ಳಲು ಕೆಲವರಾದರೂ ಸಂಕೋಚಪಟ್ಟಿರುವಂತಿದೆ).

೧೦. **ಭಯವಾಗಿದ್ದರೆ ಏಕೆ ?**

**ಪತ್ರಿಕೆ, ರೇಡಿಯೋಗಳಲ್ಲಿ ಕಣ್ಣು ಹೋಗುತ್ತದೆ ಎಂದು ಹೆದರಿಸಿದ್ದರು**

[ಮ.] ೧

[ವಿರ್ಥಿ.] ಭಯ ೬

ಜನ ಹೆದರಿಸಿದ್ದುದು
ಮತ್ತು ಭಾಷಣ, ಯಾಗ
ಏರ್ಪಡಿಸಿದ್ದುದು.[೧] } ೧

ಗ್ರಹಣದಿಂದ ತಮಗೆ ಭಯವಲ್ಲದಿದ್ದರೂ, ಕಣ್ಣು ಹಾಳಾಗುವುದೆಂದು ಭಯ ಪಟ್ಟುದಾಗಿ ಹಲವರು ಹೇಳಿಕೊಂಡಿದ್ದಾರೆ.

| | | |
|---|---|---|
| [ವಂತ.] | ೪ | (ಕಣ್ಣು ಹೋಗುವುದೆಂಬ ಭಯ) |
| | ೧ | (ಪ್ರಳಯ ಆಗುತ್ತದೆ ಎಂದು ಭಯ) |
| | | (ಗ್ರಹಣದ ವೇಳೆ ಪ್ರಳಯ ಆಗಲಿಲ್ಲ) |
| | ೧ | (ಏನಾಗುತ್ತೋ ಏನೋ ಆತಂಕ) |
| [ಅವಿಂತ] | ೨ | (ಕಣ್ಣು ಹೋಗುವ ಭಯ) |
| | ೧ | (ಕಣ್ಣು ಹೋಗುವುದರ ಜೊತೆ ಲಕ್ವಾ) |

(ಟಿಪ್ಪಣಿ : ಆಮೇಲೆ ಬಂದ ಕೆಲವು ಪ್ರತಿಕ್ರಿಯೆಗಳಲ್ಲಿ ಮೊವರು ಅವಿದ್ಯಾವಂತರು ಹಿಂದೆ ತಾವು ಗ್ರಹಣ ನೋಡಿದ್ದರೂ ಭಯವಾಗಿರಲಿಲ್ಲ, ಈ ಬಾರಿ "ರೇಡಿಯೋ, ಪಂಡಿತರು" ಹೇಳಿದ್ದರಿಂದ ಮಾತ್ರ ಹೆದರಬೇಕಾಯ್ತೆಂದು ತಿಳಿಸಿದ್ದಾರೆ. ಒಬ್ಬನು ದನ ಹುಡುಕಲು ಬೆಟ್ಟಕ್ಕೆ ಹೋಗಿದ್ದರೂ ತಲೆ ಎತ್ತಿ ಗ್ರಹಣ ನೋಡಲಿಲ್ಲವಂತೆ).

೧೧. **ಗ್ರಹಣ ನೋಡಿದವರು**

| [ಮ.] | [ವಿರ್ಥಿ.] | [ವಂತ.] | [ಅವಿಂತ.] |
|---|---|---|---|
| ೧ | ೪ | ೧೫ | ೩ (ಇವರು ಸರಿಯಾಗಿ ನೋಡಿಲ್ಲ) |

೧೨. ಹೌದು ಎಂದಾದರೆ ಹೇಗೆ ನೋಡಿದಿರಿ ?

ಕಪ್ಪು ಮಸಿಯ ಗಾಜಿನ ಮೂಲಕ, ಫಿಲ್ಮ್ ಮೂಲಕ, ಸಗಣಿ ರಾಡಿಯಲ್ಲಿ, ಕನ್ನಡಿ ಪ್ರತಿಫಲನದಲ್ಲಿ ಮಾತ್ರವಲ್ಲದೆ, ನಾಲ್ಕೈದು ಜನ ಬರಿಗಣ್ಣಿನಿಂದಲೂ ನೋಡಿದ್ದಾರೆ. ಬರಿಗಣ್ಣಿನ ಮೂಲಕ ತನ್ನ ತಂಗಿ ನೋಡಿದಳೆಂದು ಒಬ್ಬ ಯುವಕ ಹೇಳಿದ್ದಾನೆ. ಒಬ್ಬ ಗೃಹಿಣಿ ತನ್ನ ಗಂಡ ಬರಿಗಣ್ಣಲ್ಲಿ ನೋಡಿದಾಗ ಅವರ ಕಣ್ಣು ಐದು ನಿಮಿಷ ಮಂಜಾಗಿ ಕಣ್ಣೀರು ಬಂದು ಬಳಿಕ ಸರಿಹೋಯಿತೆಂದೂ, ಸೀಸ ಕಾಯಿಸಿದ ದ್ರವವನ್ನು ಬಿಸಿಲಲ್ಲಿ ಹಿಡಿದರೆ ಹೇಗೋ ಹಾಗೆ ಸೂರ್ಯ ಕಾಣಿಸಿದನೆಂದೂ ಹೇಳಿದ್ದಾಳೆ. ಬೈನಾಕ್ಯುಲರ್ ಮೂಲಕ, ಫೋಟೋಗ್ರಾಫಿಕ್ ಪ್ಲೇಟ್, Mylar sheet ಮೂಲಕ, ಬೆಸುಗೆಯವರ ಮುಖವಾಡ (welders' mask) ಮೂಲಕ (ಚಿತ್ರ ೧೦) ಕೂಡ ನೋಡಿದ್ದಾರೆ. ಬರಿಗಣ್ಣಿನಲ್ಲಿ ನೋಡಿದ ತನಗೆ ಏನೂ ಆಗದಿದ್ದರೂ ಹಾಗೆ ನೋಡಿ ಕಣ್ಣು ಕಳೆದುಕೊಂಡ ಒಬ್ಬ ವಿಜ್ಞಾನಿಯನ್ನು ಇಳಕಲ್ಲಿನಲ್ಲಿ ಕಂಡಂತೆ ಒಬ್ಬ ಯುವಕ ಹೇಳಿದ್ದಾನೆ. ನೀರಿನಲ್ಲಿ ಕೆಲವರು ನೋಡಿದ್ದಾರೆ. ಒಬ್ಬ ಹಳ್ಳಿಯವ ಕಪ್ಪು ಮಸಿಯ ಗಾಜಿನಲ್ಲಿ ನೋಡಿದ್ದರೆ, ಅವಿದ್ಯಾವಂತ ಗೃಹಿಣಿ ಬರಿಗಣ್ಣಲ್ಲಿ ನೋಡಿದ್ದಾಳೆ. ಪಿನ್-ಹೋಲ್ ಕ್ಯಾಮರಾ ಮೂಲಕ ಕೂಡ ನೋಡಿದ್ದಾರೆ.

೧೩. ನಿಮ್ಮ ಮನೆಯಲ್ಲಿ ಎಲ್ಲರೂ ನೋಡಿದರಾ?

| | [ಮ] | [ವಿರ್ಥಿ.] | [ವಂತ.] | [ಅವಿಂತ.] |
|---|---|---|---|---|
| ಹೌದು | ೨ | ೩ | ೧೧ | ೪ |
| ಇಲ್ಲ | – | ೬ | ೧೦ | ೫ |

೧೪. ನೀವು ಗ್ರಹಣ ನೋಡದಿದ್ದರೆ, ಗ್ರಹಣದ ಸಮಯದಲ್ಲಿ ಏನು ಮಾಡುತ್ತಿದ್ದಿರಿ ?

| | [ಮ] | [ವಿರ್ಥಿ.] | [ವಂತ.] | [ಅವಿಂತ.] |
|---|---|---|---|---|
| ಪೂಜೆ/ಜಪ | – | ೧ | ೧ | ೧ |
| | | | (ಗಂಡನ ರುದ್ರಾಭಿಷೇಕಕ್ಕೆ ಸಹಾಯ) | ೧ |
| ಸುಮ್ಮನೆ | – | ೨ | ೫ | ೬ |
| ಇತರೆ | ೧ | ೨ | ೪ | – |

೧೫. ಗ್ರಹಣವನ್ನು ಏಕೆ ನೋಡಲಿಲ್ಲ?

| | [ವಿರ್ಥಿ.] | [ವಂತ.] | [ಅವಿಂತ.] |
|---|---|---|---|
| ೧. ಕಣ್ಣಿಗೆ ಅಪಾಯ | ೫ | ೩ | ೪ |

| | | | | |
|---|---|---|---|---|
| ೨. | ಬರೀ ಹೆದರಿಕೆ | – | ೧ | ೨ |
| ೩. | ಹಿರಿಯರು ಬೇಡ ಎಂದರು | ೨ | ೧ | ೨ |
| ೪. | ಪತ್ರಿಕೆಗಳ ಪ್ರಚಾರ | ೧ | ೩ | – |

೧೬. ನೀವು ನೋಡಿದರೂ ಬೇರೆ ಯಾರಿಗಾದರೂ ಅವಕಾಶ ಕೊಡಲಿಲ್ಲವೇ ?

| | | | |
|---|---|---|---|
| ಚಿಕ್ಕ ಮಕ್ಕಳಿಗೆ ಅವಕಾಶ ನೀಡದವರು | | ... | ೨೧ |
| ಹೊಸ ದಂಪತಿಗಳಿಗೆ | " | ... | ೧೧ |
| ಗರ್ಭಿಣಿಯರಿಗೆ | " | ... | ೧೨ |
| ಬಾಣಂತಿಯರಿಗೆ | " | ... | ೧೧ |
| ಮನೋವಿಕಲರಿಗೆ | " | ... | ೧೨ |
| ಇತರ (ಮದುವೆಯಿಲ್ಲದ ತರುಣ ತರುಣಿಯರಿಗೆ, ದನಗಳಿಗೆ ಇತ್ಯಾದಿ) | | ... | ೧೧ |

(ಟಿಪ್ಪಣಿ : ಇದರಲ್ಲಿ ವಾಸ್ತವವಾಗಿ ಅವಕಾಶ ಕೊಡದವರು ಇದ್ದಾರೆ, ಅವಕಾಶ ಕೊಡಬಾರದು ಎಂದು ಹೇಳುವವರೂ ಇದ್ದಾರೆ.)

೧೭. ಗ್ರಹಣ ಯಾವುದೇ ಆಗಿರಲಿ ಜನ ಎಲ್ಲೇ ಇರಲಿ ಎಲ್ಲ ಕಡೆಯೂ ಪ್ರತಿಕ್ರಿಯೆ ಒಂದೇ ಆದ ಕಾರಣ ಈ ಪ್ರಶ್ನೆಯ ಮಾಹಿತಿಯನ್ನು ಇಲ್ಲಿ ಬಿಟ್ಟಿದೆ.

೧೮–೧೯ ವೈಜ್ಞಾನಿಕ ಪ್ರಯೋಗ :– (ಗ್ರಹಣದ ಸಮಯದಲ್ಲಿ)

ಒಬ್ಬ ಹುಡುಗ ಸಂಜೆಮಲ್ಲಿಗೆ ಗಿಡ ತೆಗೆದುಕೊಂಡು ಗಮನಿಸಿದ ; ಗ್ರಹಣದ ಸಮಯದಲ್ಲಿ ಸಂಜೆ ಎಂದು ಹೂವು ಅರಳಿದುವಂತೆ.

ಒಬ್ಬ ವಿಜ್ಞಾನಿ Shadow Bands ಗಮನಿಸಿದರು.

ಒಬ್ಬರು ಬಿಳಿಯ ಕೂದಲು ಕಪ್ಪಾಗಬಹುದೇನೋ ಎಂದು ಹೊರಗೆ ಓಡಾಡಿದರು.

ಒಬ್ಬ ಎಂ.ಎಸ್‌ಸಿ. ಪದವೀಧರ–"ಇಲಿ, ಏಡಿ, ಮೀನು ಮುಂತಾದ ಜೀವಿಗಳ ಮೇಲೆ ಪ್ರಯೋಗ ಮಾಡಿದ್ದಾರೆ. ಇವುಗಳಲ್ಲಿ Enzyme rates, hrarmonal control, pregnancy, natural behaviour ಎನ್ನುವ ಅಂಶಗಳ ಮೇಲೆ ಪ್ರಯೋಗ ನಡಿಸಿದರೂ ಫಲಿತಾಂಶ ಇನ್ನೂ ನಿರ್ಧಾರವಾಗಿಲ್ಲ" ಎನ್ನುತ್ತಾರೆ.

ಒಬ್ಬ ನಾಯಿಯ ಮೇಲೆ ಪ್ರಯೋಗ ಮಾಡಿದ್ದರಿಂದ ಅದರ ಕಣ್ಣು ಕುರುಡಾದುವಂತೆ.

**೨೦–೨೧ ಜನಪ್ರಿಯ ಪ್ರಯೋಗ :–** ಗ್ರಹಣದ ಸಮಯದಲ್ಲಿ ಜನಪ್ರಿಯ ಪ್ರಯೋಗಗಳಲ್ಲಿ ಮುಖ್ಯವಾದುದು ಒನಕೆ ಪ್ರಯೋಗ (ಚಿತ್ರ : ೭). ಒಂದು ಅಗಲವಾದ ಮತ್ತು ಸಮತಲದ ಪಾತ್ರೆಯಲ್ಲಿ ನೀರು ತುಂಬಿ, ಅದರಲ್ಲಿ ಒನಕೆಯ ಕುಟ್ಟುವ ಭಾಗವನ್ನು (ಅದು ಗುಂಡಗಿರುತ್ತದೆ) ನಿಲ್ಲಿಸಿದರೆ ಗ್ರಹಣ ಹಿಡಿಯುವ ಹೊತ್ತಿಗೆ ಸರಿಯಾಗಿ ಅದು ನಿಲ್ಲುವುದೆಂದೂ ಗ್ರಹಣ ಬಿಟ್ಟ ಕೂಡಲೇ ಅದು ಬಿದ್ದು ಹೋಗುವುದೆಂದೂ ನಂಬಿಕೆ. (ತಟ್ಟೆ ಕಂಚಿನ ತಟ್ಟೆಯೇ ಆಗಬೇಕೆಂದು ಒಬ್ಬರು). ಕೆಲವೆಡೆ ಒನಕೆಗೆ ಅರಿಸಿನ ಪಟ್ಟೆಗಳನ್ನು ಹಚ್ಚುವುದುಂಟು. ಒನಕೆ ಪ್ರಯೋಗ ಮಾಡಿ ನಂಬಿಕೆ ಹುಟ್ಟಿದುದಾಗಿ ಒಬ್ಬ ಹುಡುಗ ಹೇಳಿದ್ದಾನೆ. ದೊಡ್ಡವರಲ್ಲಿ ಇಬ್ಬರು ವಿದ್ಯಾವಂತರೂ ಒನಕೆ ಪ್ರಯೋಗ ನಿಜವೆಂದಿದ್ದಾರೆ. ಅದರಲ್ಲೂ ಇಲಿ, ಏಡಿಗಳ ಮೇಲೆ ಪ್ರಯೋಗ ನಡೆಸಿದ ಮೇಲಿನ ಒಬ್ಬ ವ್ಯಕ್ತಿ ಈಚಿನ ಮತ್ತು ಹಿಂದಿನ ಗ್ರಹಣಗಳಲ್ಲಿ ಆ ಪ್ರಯೋಗ ನಡೆಸಿ ನಿಜವೆಂದು ಖಚಿತಪಡಿಸಿಕೊಂಡಿದ್ದಾನೆ. ಇಬ್ಬರು ವಿದ್ಯಾರ್ಥಿಗಳು ಪ್ರಯೋಗದಲ್ಲಿ ನಂಬಿಕೆ ಬರಲಿಲ್ಲವೆಂದಿದ್ದಾರೆ. ಅವಿದ್ಯಾವಂತರಲ್ಲಿ, ಹಿಂದೆ ಪ್ರಯೋಗ ಮಾಡಿದ್ದೆವು, ನಿಜವಾಗಿತ್ತು; ಈ ಬಾರಿ ಭಯ, ಮಾಡಲಿಲ್ಲವೆಂದು ಒಬ್ಬರು ಹೇಳಿದ್ದಾರೆ. ಹಲವರು ನಿಜವೆಂದು ನಂಬಿದ್ದಾರೆ. ಕೆಲವೆಡೆ ಒನಕೆಯನ್ನು ಕಣ್ಣಿಗೆ ಸ್ವಲ್ಪ ಮರೆಮಾಡಿಕೊಂಡು ನೋಡುತ್ತಾರಂತೆ. ಒಬ್ಬರು ಒರಳಿನಲ್ಲಿ ನೀರು ಹಾಕಿ ಒನಕೆ ನಿಲ್ಲಿಸಿದ್ದರು. (ಬಿ. ಎ. ವಿದ್ಯಾರ್ಥಿ).

**೨೨–೨೩ ವಿಶೇಷ ಪರಿಶೀಲನೆ :–** ಒಬ್ಬ ಹುಡುಗ ಸೂರ್ಯನ ಫೋಟೋ ತೆಗೆದ. ಇಬ್ಬರು ವಿದ್ಯಾರ್ಥಿಗಳು ತಮ್ಮ ಹಳ್ಳಿಗಳಲ್ಲಿ ಸಂಜೆಯೆಂದು ಹಕ್ಕಿಗಳು ಗೂಡಿಗೆ, ದನಗಳು ಮನೆಗೆ ಬಂದುವು ಎಂದೂ ಕೋಳಿಗಳು ಕೂಗಿದುವೆಂದೂ ಹೇಳಿದರೆ, ಒಬ್ಬ ದನಗಳನ್ನು ಆ ದಿನ ಹೊರಗೆ ಬಿಡಲಿಲ್ಲವೆಂದಿದ್ದಾನೆ. ಹಸು ಮನೆಗೆ ವಾಪಸಾದುದನ್ನು ಇನ್ನೂ ಇಬ್ಬರು ಗಮನಿಸಿದ್ದಾರೆ. ಧಾರವಾಡದಲ್ಲಿ ಒಬ್ಬರು ಪ್ರಕೃತಿಯಲ್ಲಿ ಆಲ್ಫಾಕಿರಣಗಳ ತರಂಗಗಳ ಸೂಕ್ಷ್ಮ ವೀಕ್ಷಣೆ ಮಾಡಿದ್ದಾರೆ. ಇಲಿ, ಏಡಿಗಳ ಮೇಲೆ ಪ್ರಯೋಗ ನಡೆಸಿದವರು Caesalpharia pulcharima, Delonix regia (ಗುಲ್ ಮೊಹರ್) ಮೊದಲಾದ ಮರಗಳು ರಾತ್ರಿ ಕಾಲದಲ್ಲಿನಂತೆ ಮಲಗುವ ಚಿಹ್ನೆ ತೋರಿದುವು ಎಂದಿದ್ದಾರೆ. ಇನ್ನೊಬ್ಬ "ಪ್ರಕೃತಿ ಶಾಂತವಾಗಿತ್ತು. ಕೋಳಿ, ನಾಯಿಗಳು ಬಗುಳಿದವು. ಮನೆಯ ಹಿತ್ತಲ ಗಿಡಗಳೆಲ್ಲ ತಮ್ಮ ಎಲೆಗಳನ್ನು ಕೆಳಮುಖವಾಗಿ ಬಾಗಿಸಿ ಸಪ್ಪಗಿದ್ದುವು. ಬಿಸಿಲಲ್ಲಿ ಕಾದಿದ್ದ ತಮ್ಮ ಕಾರು ತಣ್ಣಗಾಗಿತ್ತು" ಎಂದಿದ್ದಾರೆ.

೨೪. ಪೂರ್ಣ ಅಥವಾ ಬಹುತೇಕ ಪೂರ್ಣ ಗ್ರಹಣವಾದಾಗ ನಿಮಗೆ ಏನನ್ನಿಸಿತು?

| | [ಮ] | [ವಿರ್ಥಿ.] | [ವಂತ.] | [ಅವಿಂತ.] |
|---|---|---|---|---|
| ಭಯ | – | – | – | ೧ |
| ಕುತೂಹಲ | ೧ | ೭ | ೧೫ | ೧ |
| ಉದ್ರೇಕ | – | ೧ | ೩ | – |
| ಏನೂ ಇಲ್ಲ | ೧ | ೧ | ೧ | ೬ |

೨೫. ಗ್ರಹಣ ಬಿಟ್ಟ ಮೇಲೆ ಏನು ಮಾಡಿದಿರಿ?

| | [ಮ] | [ವಿರ್ಥಿ.] | [ವಂತ.] | [ಅವಿಂತ.] |
|---|---|---|---|---|
| ಸ್ನಾನ | ೧ | ೭ | ೧೪ | ೯ |
| ಜಪ / ಪೂಜೆ | ೧ | ೩ | ೯ | ೬ |
| ಗುಡಿಗೆ ಭೇಟಿ | – | ೧ | ೩ | ೫ |
| ಶಾಂತಿಕಾರ್ಯ | – | – | – | – |
| ಏನೂ ಇಲ್ಲ | – | ೧ | ೭ | ೨ |

(ಟಿಪ್ಪಣಿ : ಸ್ನಾನ ಮಾಡಿದವರಲ್ಲಿ ಪೂಜೆಯನ್ನು ಕೆಲವರು ಮಾಡಿದ್ದಾರೆ, ಗುಡಿಗೆ ಭೇಟಿ ಕೂಡ ಕೊಟ್ಟಿದ್ದಾರೆ.)

೨೭. ಆ ದಿನ ಊಟ ಮಾಡಿದ್ದರೆ ಯಾವಾಗ ?

| | ಬೆಳಿಗ್ಗೆ (ಪೂರ್ವಾಹ್ನ) | ಮಧ್ಯಾಹ್ನ (ಗ್ರಹಣ ಸಂದರ್ಭದಲ್ಲಿ) | ರಾತ್ರಿ |
|---|---|---|---|
| [ಮ.] | ೨ | – | – |
| [ವಿರ್ಥಿ.] | ೯ | – | ೬ |
| [ವಂತ.] | ೧೬ | ೨೬೨ (ನೀರು ಮಾತ್ರ) | |
| [ಅವಿಂತ.] | ೬ (ಒಬ್ಬರು ಮುಸ್ಲಿಂ) ಒಬ್ಬರು ತಿಂಡಿ ಮಾತ್ರ | ೧ (ಮುಸ್ಲಿಂ) | ೯ |

೨೮. ಇಡೀ ದಿವಸದಲ್ಲಿ

ಬೆಳಿಗ್ಗೆ ಮಧ್ಯಾಹ್ನ ಉಪವಾಸ; ರಾತ್ರಿ ಕೇವಲ ಉಪಾಹಾರ ೧ [ವಿರ್ಥಿ]

ಬೆಳಿಗ್ಗೆ ಊಟ ; ಮಧ್ಯಾಹ್ನ, ರಾತ್ರಿ ಉಪವಾಸ ೧ [ವಿರ್ಥಿ]

೨೯. ಗ್ರಹಣಾನಂತರ ಶುದ್ಧಿ ಕಾರ್ಯ

| | [ಮ] | [ವಿರ್ಥಿ.] | [ವಂತ.] | [ಅವಿಂತ.] |
|---|---|---|---|---|
| ಮನೆ | ೧ | ೭ | ೧೦ | ೯ |

| | | | | |
|---|---|---|---|---|
| ಪಾತ್ರೆ | ೧ | ೬ | ೧೦ | ೮ |
| ದೇವತಾ ಮೂರ್ತಿಗಳು | ೧ | ೫ | ೭ | ೩ |

೩೦. **ಗ್ರಹಣವು ನಮ್ಮ (ಪರಿಸರ) ಹಾಗೂ ದೇಶದ ಅಥವಾ ವಿಶ್ವದ ಪರಿಸ್ಥಿತಿಯ ಮೇಲೆ ಪ್ರಭಾವ ಬೀರುತ್ತದೆ ಎಂದು ನಂಬುವಿರಾ?**

| | [ಮ] | [ವಿರ್ಥಿ.] | [ವಂತ.] | [ಅವಿಂತ.] |
|---|---|---|---|---|
| ಹೌದು | ೧ | ೮ | ೧೩ | ೫ |
| ಇಲ್ಲ | ೧ | ೧ | ೭ | – |
| ಗೊತ್ತಿಲ್ಲ | – | – | ೧ | ೧ |

೩೧. **ಹೌದು ಎಂದಾದರೆ, ಅದು ಬಹುಶ: ಎಂತಹುದು?**

ಇದರ ಬಗ್ಗೆ ಉತ್ತರಗಳು ಬಗೆ ಬಗೆಯಾಗಿವೆ. ಅವನ್ನು ಕೆಳಗೆ ಕೊಟ್ಟಿದೆ.

೧. ಅನೇಕರಿಗೆ–ಕಣ್ಣು ಹೋಗುತ್ತದೆ, ಆ ಕಾರಣ ಬಹು ಕೆಟ್ಟ ಗ್ರಹಣ.

| [ಮ.] | [ವಿರ್ಥಿ.] | [ಅವಿಂತ.] |
|---|---|---|
| ೧ | ೧ | ೧ |

೨. ಈ ಬಾರಿ ಧಗೆ/ಸೆಕೆ ಹೆಚ್ಚು ; ಇದು ಗ್ರಹಣದ ಪರಿಣಾಮ.

[ವಂತ.] ೩

೩. ಸೆಕೆ ಮತ್ತು ಕಾಯಿಲೆಗಳು, ಸಾವು ನೋವು ಹೆಚ್ಚಾಗಿರುವುದೂ ಗ್ರಹಣ ಪ್ರಭಾವದಿಂದಲೇ.

[ವಂತ.] ೧ [ಅವಿಂತ.] ೧

೪. ಮಳೆ ಇಲ್ಲದಿರುವುದೂ ಅದರಿಂದಲೇ; ಬೆಳೆ ಆಗುವುದಿಲ್ಲ; ಪ್ರಕೃತಿ ಏರುಪೇರು.

[ವಂತ.] ೨ ವಂತ. ೧ (ಹಳ್ಳಿಗರು ಹೀಗೆ ಹೇಳುತ್ತಾರೆ; ಈತ ನಂಬಿಲ್ಲ)

[ಅವಿಂತ.] ೧ (ಹಿಂದೆ ಬಾಲಚುಕ್ಕಿ ಮೂಡಿದಾಗ, ರೇಷನ್ ಕೂಪನ್

[ಅವಿಂತ.] ೧ ಬಂದುವು. ಆಗ ಯಾವುದೂ ಸುಲಭವಾಗಿ ಸಿಕ್ಕುತ್ತಿರಲಿಲ್ಲ).

೫. ಏನೋ ಮುಂದೆ ಕೆಟ್ಟದ್ದು ಆಗಲಿದೆ ; ನಿಧಾನವಾಗಿ ಗೋಚರ.

[ವಿರ್ಥಿ.] ೧

೬ ಈ ಬಾರಿ ಮಾವಿನ ಫಲ ಚೆನ್ನಾಗಿದೆ; ಆದರೆ ರುಚಿ ಇಲ್ಲ, ಗ್ರಹಣದ ಪ್ರಭಾವ.

[ವಂತ.] ೧

೭ ಯುಗ ಬದಲಾವಣೆ ಆಗಲಿದೆ; ಜನರ ಮನೋಭಾವ ಬೇರೆ ಆಗುತ್ತದೆ.

[ವಂತ] ೧ (ಅಗ್ರಿಕಲ್ಚರ್ ಎಂ. ಎಸ್‌ಸಿ. ವಿದ್ಯಾರ್ಥಿ)

[ವಂತ.] ೧

೮. ಭೂಕಂಪ ಆಗಲಿದೆ

[ವಿರ್ಥಿ.] ೧ (ಬಿ. ಎ. ವಿದ್ಯಾರ್ಥಿ)

[ವಂತ.] ೧

೯. ಪ್ರಳಯ ಆಗಲಿದೆ.

[ವಿರ್ಥಿ.] ೧ (ಇರಾನ್ ಅಮೆರಿಕ ದ್ವೇಷ, ಒಲಿಂಪಿಕ್ಸ್‌ನಲ್ಲಿ ಅಮೆರಿಕ ಭಾಗ ವಹಿಸಿದ್ದು, ಸ್ಕೈಲ್ಯಾಬ್ ಪತನ ಇವೆಲ್ಲ ಕೆಟ್ಟ ಸೂಚನೆಗಳು)[?]

[ವಂತ.] ೧ (ಬಿ. ಎಸ್‌ಸಿ. ಪದವೀಧರೆ: "ಪ್ರಳಯ ಆಗಬೇಕಾಗಿದ್ದು ಇನ್ನೂ ಆಗಿಲ್ಲ. ಈಗಾಗಲೇ ರಾಜಕೀಯ ಪ್ರಳಯ ಆಗಿದೆ. ಬಡಬಗ್ಗರಿಗೆ ಕಷ್ಟ. ಪ್ರಳಯ ಆಗಿದ್ದರೆ ಎಲ್ಲರೂ ಒಟ್ಟಿಗೆ ಸಾಯಬಹುದಿತ್ತು.")

[ವಂತ.] ೧ (ಎಂ.ಎ. ಪದವೀಧರ:– "ಭೂಮಿಯ ಓಟದ ಗತಿ, ಗ್ರಹಗಳ ಚಲನೆ ಬೇರೆಯಾಗಲಿದೆ.")

[ಅವಿಂತ.] ೧ (ಮುಸ್ಲಿಂ ಮಹಿಳೆ:– "ದಾರಿದ್ರ್ಯ ಬರ್ತಾ ಇದೆ. ಅಂತ್ಯಕಾಲ ಖಚಿತ")

೧೦. ಏನೋ ಆಗುತ್ತದೆ ಎಂದುಕೊಂಡಿದ್ದೆವು; ಏನೂ ಆಗಲಿಲ್ಲ. (ಆದ್ದರಿಂದ ಏನೋ ಆಗುತ್ತದೆ ಎಂದು ಹೇಳಿದ್ದೆಲ್ಲಾ ಸುಳ್ಳು)

[ಅವಿಂತ.] ೧ (ಇದೇ ಪ್ರತಿಕ್ರಿಯೆಯನ್ನು ತುಂಬ ಸೂಚ್ಯವಾಗಿ ಕೆಲವು ವಿದ್ಯಾವಂತರು ವ್ಯಕ್ತಪಡಿಸಿದ್ದಾರೆ).

ಒಬ್ಬ ಹಾಲಿನ ವ್ಯಾಪಾರಿ, ಗ್ರಹಣದ ದಿನ ರೈತರು ಹೆದರಿ ಸರಿಯಾಗಿ ಹಾಲು ಕರೆಯದ್ದಕ್ಕೆ ತನ್ನ 'ವರ್ತನೆ' ಮನೆಗಳವರಿಗೆ (ದಿನವೂ ಹಾಲು ಸರಬರಾಜಾಗುವ ಮನೆ) ಕಷ್ಟವಾಗಬಹುದಿತ್ತು; ಸದ್ಯ ಡೈರಿ ಹಾಲು ಸಿಕ್ಕಿದ್ದರಿಂದ ಬಚಾವಾದೆನೆಂದೂ ಮತ್ತು ಹೋಟೆಲಿನವರು ಗ್ರಹಣ ಬಿಟ್ಟ ಮೇಲೆ ಹಾಲು ಕೊಂಡದ್ದರಿಂದ ತನಗೆ ಅಷ್ಟು ಕಷ್ಟವಾಗಲಿಲ್ಲವೆಂದೂ ಸಮಾಧಾನಪಟ್ಟುಕೊಂಡಿದ್ದಾನೆ.

**ವ್ಯಾಖ್ಯಾನ**

**(೧) ಸಾಂಪ್ರದಾಯಕ ನಂಬಿಕೆಗಳು ; ಅವು ಹೊಂದಿರುವ ನಿಯಂತ್ರಣ**

ಸೂರ್ಯನನ್ನು ಸರ್ಪ ನುಂಗುತ್ತದೆ ಎಂಬ ನಂಬಿಕೆ ಅವಿದ್ಯಾವಂತರಲ್ಲಿ ಮಾತ್ರ ಉಳಿದಿದೆ. ಒಬ್ಬ ಎಂ.ಎ. ವಿದ್ಯಾರ್ಥಿ ಮಾತ್ರ ಹಿರಿಯರಿಂದ ಆ ನಂಬಿಕೆ ಬಂದಿರುವುದರಿಂದ ಅದನ್ನೂ ನಂಬುವುದಾಗಿ ಹೇಳಿದ್ದಾನೆ (ಮೇಲೆ ೬ ನೋಡಿ).

ಸಮೀಕ್ಷೆ ನಡೆದಮೇಲೆ ಸಂಗ್ರಹಣದ ಮಾಹಿತಿಯ ಪ್ರಕಾರ, ಕೊನೆಯ ಪಕ್ಷ ನಾಲ್ವರು (ಎಲ್ಲರೂ ತುಮಕೂರು ಜಿಲ್ಲೆಯವರು. ಒಬ್ಬರು ಸಂಸ್ಕೃತ ಅಧ್ಯಾಪಕರು, ಮೂವರು ಅವಿದ್ಯಾವಂತರು) ಗ್ರಹಣವೆಂದರೆ ಸೂರ್ಯನಿಗೆ ಕಷ್ಟ ಬಂದಂತೆ; ಪ್ರಪಂಚಕ್ಕೇ ಬೆಳಕು ಕೊಡುವ, ನಮಗೆಲ್ಲ ಚೈತನ್ಯ ಕೊಡುವ ಸ್ವಾಮಿಗೆ ಕಷ್ಟ ಬಂದಾಗ ನಾವು ಊಟ ಮಾಡಬಾರದು ; ಅವನ ಕಷ್ಟ ನಿವಾರಣೆಗಾಗಿ ನಾವು ಪೂಜಾದಿಗಳನ್ನು ಮಾಡಬೇಕು. ಸ್ನಾನ, ಪೂಜೆ ನಮ್ಮ ದೋಷ ಪರಿಹಾರಕ್ಕಲ್ಲ, ಸೂರ್ಯನ ಕಷ್ಟಪರಿಹಾರಕ್ಕೆ. ಇವರೆಲ್ಲ ರಾಹುವಿನ ಕತೆಯನ್ನು ನಂಬುತ್ತಾರೆ. ಕೆಲವರ ಪ್ರಕಾರ ಸೂರ್ಯನಿಗೂ 'ಗ್ರಹಚಾರ ತಪ್ಪಿಲ್ಲ', ಆದ್ದರಿಂದಲೇ ಅವನ ಕ್ಷೇಮಕ್ಕಾಗಿ ಅವನಿಗಿಂತ ದೊಡ್ಡ ದೇವರನ್ನು ಧ್ಯಾನಿಸಬೇಕು.

ಅದೇ ತುಮಕೂರು ಜಿಲ್ಲೆಗೆ ಸೇರಿದ್ದ ಈಗ ದಾವಣಗೆರೆಯಲ್ಲಿ ನೆಲೆಸಿರುವ ಒಬ್ಬ ಅಜ್ಜಿ ಶನಿಯಿಂದ ಸೂರ್ಯನಿಗೆ ಕೇಡು ಎಂದು ಹೇಳಿದ್ದರು. ತುಮಕೂರು ಜಿಲ್ಲೆಯಲ್ಲಿ ಈ ಕತೆ ವ್ಯಾಪಕವಾಗಿರುವಂತೆ ತೋರುತ್ತದೆ. ಸೂರ್ಯನ ಮಗ ಶನಿ; ತಂದೆ ಮಕ್ಕಳಿಬ್ಬರಿಗೂ ಮನಸ್ತಾಪ ಬಂದು, ಶನಿ ಸರ್ಪರೂಪದಲ್ಲಿ ಬಂದು ತಂದೆಗೆ ಕಾಟ ಕೊಡುತ್ತಾನೆ ಎಂದು ಒಂದು ಕತೆ ಹೇಳಿದರೆ, ಸೂರ್ಯನಿಗಿಂತ ದೊಡ್ಡ ದೈವವಿಲ್ಲ ಎಂದ ಯಾರೋ ಹೇಳಿದಾಗ ಶನಿಗೆ ಕೋಪ ಬಂದು ತಾನು ದೊಡ್ಡವನೆಂದು ತೋರಿಸಲು ತಂದೆಗೇ ಸರ್ಪರೂಪದಲ್ಲಿ ಕಾಟ ಕೊಡಲು ಆರಂಭಿಸಿದನೆಂದು ಇನ್ನೊಂದು ಕತೆ ಹೇಳುತ್ತದೆ. ಅದೇ ಜಿಲ್ಲೆಯಲ್ಲಿ ಇನ್ನೊಂದು ಕತೆ ಇದೆ. ಒಬ್ಬ ಹೆಂಗಸು ಮಕ್ಕಳ ಫಲವನ್ನು ಅಪೇಕ್ಷಿಸಿ ಸರ್ಪನಲ್ಲಿ ಹರಕೆ ಮಾಡಿಕೊಂಡು, ಮಗಳಾದರೆ ಸರ್ಪಕ್ಕೆ ಮದುವೆ ಮಾಡಿಕೊಡುತ್ತೇನೆ ಎಂದು ಮಾತು ಕೊಟ್ಟಿರುತ್ತಾಳೆ. ಮುಂದೆ ಮಗಳು ಹುಟ್ಟಿ ದೊಡ್ಡವಳಾಗಿ ಮದುವೆಯೂ ಆಗುತ್ತದೆ. ಆ ಮಗಳು ಸರ್ಪಕ್ಕೆ ಹೆದರಿ ಓಡಿ ಹೋಗಿ ಸೂರ್ಯನನ್ನು ಮರೆ ಹೊಕ್ಕಾಗ, ಸರ್ಪ ಹೆಡೆ ಎತ್ತಿ ನಿಲ್ಲುತ್ತದೆ, ಸೂರ್ಯನನ್ನು ನುಂಗಲು ಯತ್ನಿಸುತ್ತದೆ– ಇದೇ ಗ್ರಹಣ.

ಅದೇ ತುಮಕೂರು ಜಿಲ್ಲೆಯಲ್ಲಿ ಮಕ್ಕಳ ಕಾಲು ಯಾವುದೇ ಕಾರಣದಿಂದಲೇ

ಇರಲಿ ಸೊಟ್ಟಗಾಗಿದ್ದರೆ ಅದನ್ನು 'ಗರಣಕಾಲು' ಎಂದು ಕರೆಯುತ್ತಾರೆ. (ಗರಣ<ಗ್ರಹಣ)

ಗ್ರಹಣದ ಸಮಯದಲ್ಲಿ ಪೂಜೆ/ಜಪ ಮಾಡುತ್ತಿದ್ದವರಲ್ಲಿ ಅವಿದ್ಯಾವಂತರ ಜೊತೆ ವಿದ್ಯಾರ್ಥಿ, ವಿದ್ಯಾವಂತರೂ (ಒಬ್ಬೊಬ್ಬರು) ಇದ್ದಾರೆ. (ಮೇಲೆ ೧೪ ನೋಡಿ).

ಯಾರು ಯಾರು ಗ್ರಹಣ ನೋಡಬಾರದು ಎಂಬುದರ ನಿಷೇಧದಲ್ಲಿ ಗರ್ಭಿಣಿಯರು ನೋಡಲೇ ಕೂಡದು ಎಂಬುದು ಪ್ರಬಲವೂ ವ್ಯಾಪಕವೂ ಆಗಿದೆ. (ಇದಕ್ಕೆ ಕಾರಣ ಹೊಟ್ಟೆಯಲ್ಲಿನ ಮಕ್ಕಳು ಅಂಗವಿಕಲರಾಗಿ ಹುಟ್ಟುವರೆಂಬ ಭಯ). ಹಾಗೆಯೇ ಮಕ್ಕಳ ಬಗ್ಗೆಯೂ (ಮೇಲೆ ೧೬ನೋಡಿ). ಮಕ್ಕಳಿಗೆ ಗ್ರಹಣ ತೋರಿಸಬೇಡಿ, ಏಕೆಂದರೆ ಅವರು ತಪ್ಪಿ ಬರಿಗಣ್ಣಿನಿಂದ ನೋಡಬಹುದು ಎಂದೂ, ಗರ್ಭಿಣಿಯರು ನೋಡಿದರೆ ಅಪಾಯವಿಲ್ಲವೆಂದೂ ವಿಜ್ಞಾನಿಗಳು ಹೇಳಿದ್ದಾರೆ.

ಒನಕೆ ಪ್ರಯೋಗ ಬಹುತೇಕ ಎಲ್ಲ ಕಡೆ ಇದ್ದು ಒಂದು ಕಾಲಕ್ಕೆ ಎಲ್ಲರೂ ಒಪ್ಪಿಕೊಂಡಿದ್ದ ಸಂಗತಿಯಾಗಿತ್ತು. ಈಗಲೂ ಅದನ್ನು ನಡೆಸುತ್ತಿದ್ದಾರೆ ಮತ್ತು ಅದು ನಿಜವೆಂದು ಒಪ್ಪುವ ವಿದ್ಯಾವಂತರೂ ಇರುವರಾದರೂ ಆ ನಂಬಿಕೆಗೆ ಏಟು ಬಿದ್ದಿದೆ ; ಪ್ರತ್ಯಕ್ಷ ಪ್ರಯೋಗಗಳನ್ನು ಮಾಡಿ ಅದು ನಿಜವೆಂದು ಹೇಳುವವರೂ ಇದ್ದಾರೆ.

ಗ್ರಹಣ ಬಿಟ್ಟ ಮೇಲೆ ಎಲ್ಲ ಅವಿದ್ಯಾವಂತರೂ ಸ್ನಾನ ಮಾಡಿದುದಾಗಿ ಹೇಳಿರುವುದು ನಿರೀಕ್ಷಿತವೇ. ವೈಜ್ಞಾನಿಕ ಬುದ್ಧಿಯವರೆಂದು ಹೇಳಬಹುದಾದ ವಿದ್ಯಾರ್ಥಿಗಳು ಮತ್ತು ವಿದ್ಯಾವಂತರಲ್ಲಿ ಬಹುಪಾಲು ಜನ ಸ್ನಾನ ಮಾಡಿರುವುದಾಗಿ ಹೇಳಿಕೊಂಡಿರುವುದು (ಮೇಲೆ ೨೫ನೋಡಿ), ಅವರಲ್ಲಿ ಪಾರಂಪರಿಕ ನಂಬಿಕೆ / ಆಚರಣೆ ಮತ್ತು ವೈಜ್ಞಾನಿಕ ಅರಿವುಗಳ ಕೂಡುಬದುಕನ್ನು (Co-existence) ಹೇಳುತ್ತದೆ. ಈ ಕೂಡುಬದುಕು ಯಾವುದೇ ಒಳತೋಟಿಯನ್ನು (Conflict) ಉಂಟು ಮಾಡಿಲ್ಲ. ಮಾತಿನಲ್ಲಿ ವಿಜ್ಞಾನಿ ; ಆಚರಣೆಗೆ ಬಂದಾಗ ಸಂಪ್ರದಾಯಸ್ಥ – ಇಂತಹ ಸ್ಥಿತಿಯನ್ನು ಹಳತು ಹೊಸತರ ಸಂಧಿಸ್ಥಾನದಲ್ಲಿ ನಿಂತಿರುವ ಭಾರತದಲ್ಲಿ ನಿರೀಕ್ಷಿಸಬಹುದು.

ಗ್ರಹಣದ ವೇಳೆಯಲ್ಲಿ ಊಟ ಮಾಡದಿರುವುದನ್ನು ನೋಡಿದರೆ, ಸಂಪ್ರದಾಯದ ಹಿಡಿತ ಇನ್ನೂ ಸ್ಪಷ್ಟವಾಗುತ್ತದೆ (ಮೇಲೆ ೨೭ ನೋಡಿ). ಗ್ರಹಣದ ಸಂದರ್ಭದಲ್ಲಿ ಊಟ ಮಾಡಿದ ಮೂವರಲ್ಲಿ ಇಬ್ಬರು ಬೆಂಗಳೂರು ಇಂಡಿಯನ್

ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಿನ ವಿಜ್ಞಾನಿಗಳು; ಇನ್ನೊಬ್ಬ ಎಂ.ಎಸ್‌ಸಿ. ಪದವೀಧರ (ಇವನು ಒನಕೆ ಪ್ರಯೋಗ ನಂಬಿದವನು); ಪಾನೀಯ ತೆಗೆದುಕೊಂಡವರಲ್ಲಿ ಒಬ್ಬರು ವಿಜ್ಞಾನಿ (ನಾನು ಮಾಹಿತಿ ಸಂಗ್ರಹಿಸಿದ ಮೂವರು ವಿಜ್ಞಾನಿಗಳು ಗ್ರಹಣದ ಸಂದರ್ಭದಲ್ಲಿ-ಸಂಪ್ರದಾಯವನ್ನು ಮುರಿಯಬೇಕೆಂಬ ಬುದ್ಧಿಯಿಂದಲೋ ಏನೋ ಎನ್ನುವಂತೆ-ಆಹಾರ ಪಾನೀಯ ಸ್ವೀಕರಿಸಿದ್ದಾರೆ). ಉಳಿದವರು ಯಾರೂ[೩] ಊಟ ಮಾಡದಿರುವುದು ಗ್ರಹಣದ ಭಯದ ದ್ಯೋತಕ. ಗ್ರಹಣಾನಂತರ ಸ್ನಾನದಂತಹ ಶುದ್ಧಿ ಕಾರ್ಯದಲ್ಲಿ ಎಲ್ಲ ಅವಿದ್ಯಾವಂತರೂ ತೊಡಗಿದ್ದರೆ, ವಿದ್ಯಾವಂತರಲ್ಲಿ ಅರ್ಧದಷ್ಟು ಜನ ಆ ಕಾರ್ಯದಲ್ಲಿ ತೊಡಗಿದ್ದರು ಎಂಬುದು ತಿಳಿಯುತ್ತದೆ (ಮೇಲೆ ೨೯ ನೋಡಿ)

ಬಹಳ ಆಶ್ಚರ್ಯದ ಸಂಗತಿಯೆಂದರೆ ೩೦ನೇ ಕಾಲಮ್ಮಿನ ಮಾಹಿತಿ. ಸೂರ್ಯನ ಗ್ರಹಣವು ದೇಶ ಅಥವಾ ವಿಶ್ವದ ಮೇಲೆ ಬೀರಬಹುದಾದ ದುರ್ಘಟನೆ ಅಥವಾ ಅನರ್ಥಗಳನ್ನು ನಂಬಿರುವವರಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು : ಹಾಗೆಯೇ ೭೫%ರಷ್ಟು ವಿದ್ಯಾವಂತರು ನಂಬಿದ್ದಾರೆ. ಅವಿದ್ಯಾವಂತರಲ್ಲಿ ೫೦%ಕ್ಕಿಂತ ಸ್ವಲ್ಪ ಜಾಸ್ತಿ ಜನ ಮಾತ್ರ ಅದನ್ನು ನಂಬಿದ್ದಾರೆ.[೪] ೩ಗನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಮುಂದೆ ಒದಗಲಿರುವ ದುರ್ಘಟನೆಗಳ ಬಗ್ಗೆ ಊಹೆ ಅಥವಾ ಯೋಚನೆ ಮಾಡಿರುವವರಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾವಂತರೇ ಹೆಚ್ಚು. ಅವರ ಪ್ರತಿಕ್ರಿಯೆಗಳ ವೈವಿಧ್ಯವನ್ನೂ ಗಮನಿಸಬಹುದು. ಈ ನಂಬಿಕೆಗಳಿಗೆ ಪತ್ರಿಕೆಗಳಲ್ಲಿ ಬಂದಿದ್ದ ಜ್ಯೋತಿಷಿಗಳ ಭವಿಷ್ಯ ವಾಣಿಗಳೂ ಕಾರಣವಿರಬಹುದು.

ಆಳದಲ್ಲಿ ನೋಡಿದಾಗ, ನಂಬಿಕೆ ಅಥವಾ ಮೂಢನಂಬಿಕೆಗಳಲ್ಲಿ ಒಟ್ಟು ವಿದ್ಯಾವಂತರು ಅವಿದ್ಯಾವಂತರಿಗಿಂತ ಹೆಚ್ಚು ಅಲ್ಲದಿದ್ದರೂ ಅಷ್ಟು ಕಡಮೆ ಎಂದೇನೂ ಅನ್ನಿಸುವುದಿಲ್ಲ.

ಸಮೂಹ ಮಾಧ್ಯಮದ ಬಗ್ಗೆ ನಡೆದಿರುವ ಈಚಿನ ಸಂಶೋಧನೆಗಳು ಒಂದು ಸಂಗತಿಯನ್ನು ಒತ್ತಿ ಹೇಳಿವೆ. ಸಮೂಹ ಮಾಧ್ಯಮಗಳು ಜನರ ಆಯ್ಕೆ, ಅಭಿರುಚಿ, ಭಾವನೆಗಳನ್ನು ಬದಲಾಯಿಸುವುದಕ್ಕಿಂತ, ಅವರ ಮನಸ್ಸಿನ ಭಾವನೆಗಳನ್ನು ಇನ್ನೂ ದೃಢಪಡಿಸುತ್ತವೆ. ಎಂದರೆ ನಮಗೆ ಇಷ್ಟವಾದದ್ದನ್ನು ಮಾತ್ರ ಸಮೂಹ ಮಾಧ್ಯಮದಿಂದ ತೆಗೆದುಕೊಂಡು ಉಳಿದುದನ್ನು ಅಲಕ್ಷ್ಯ ಮಾಡಬಹುದು. ಪತ್ರಿಕೆಗಳಲ್ಲಿ ಗ್ರಹಣವನ್ನು ವೈಜ್ಞಾನಿಕವಾಗಿ ವಿವರಿಸಿ ಬಂದ ಲೇಖನಗಳಿಗಿಂತ, ವಿರಳವಾಗಿಯಾದರೂ ಬಂದ ಜ್ಯೋತಿಷಿಗಳ ಭವಿಷ್ಯವು ಜನರ ಮನಸ್ಸನ್ನು ಆಳದಲ್ಲಿ ತಾಕಿರುವಂತೆ ತೋರುತ್ತದೆ. ವೈಜ್ಞಾನಿಕ ಬರಹಗಳು

ಗ್ರಹಣದ ಬಗ್ಗೆ ಮಾಹಿತಿಯನ್ನು ಕೊಟ್ಟವು, ಜನ ಸ್ವೀಕರಿಸಿದರು. ಆದರೆ, ಅವರು ಸಾಂಪ್ರದಾಯಕವಾಗಿ ನಂಬಿದ್ದ ರಾಹು ಕತೆಯನ್ನು ಮನಸ್ಸಿನ ಮೇಲ್ಪದರದಿಂದ ಕಿತ್ತು ಹಾಕಿದ್ದರೂ ಅದರ ಗುರುತು ಅಥವಾ ಛಾಯೆ ಒಳಪದರದಲ್ಲಿ ಉಳಿದಿದ್ದು, ಆ ರಾಹುವಿನ ಕತೆಗೆ ಬಹು ಹತ್ತಿರ ಬರುವ ವಿನಾಶ ಪ್ರಳಯಗಳ ಸಂಗತಿ ಜನತೆಯನ್ನು ಆಕರ್ಷಿಸಿತು ಎಂದು ಕಾಣುತ್ತದೆ.

## (೨) ಸಮೂಹ ಮಾಧ್ಯಮಗಳು

ಮುಖ್ಯವಾಗಿ ರೇಡಿಯೋ, ವರ್ತಮಾನ ಪತ್ರಿಕೆಗಳ ಮೂಲಕ ಗ್ರಹಣದ ವಿಷಯ, ಅದು ಕಣ್ಣಿನ ಮೇಲೆ ಮಾಡುವ ಅಪಾಯ, ಆ ಸಮಯದಲ್ಲಿ ವಹಿಸಬೇಕಾದ ಎಚ್ಚರದ ಬಗ್ಗೆ ಹಿಂದೆಂದೂ ಮಾಡದಷ್ಟು ಪ್ರಮಾಣದಲ್ಲಿ ಪ್ರಚಾರ ಮಾಡಲಾಯಿತು. (ಆಗ ದೂರದರ್ಶನ ಇರಲಿಲ್ಲ). ನನ್ನ ಬದುಕಿನಲ್ಲಿ ಹೇಳಿಕೊಳ್ಳಬಹುದಾದ ಮೂರು ಪ್ರಾಕೃತಿಕ ಘಟನೆಗಳಿವೆ. ನಾನು ಹಳ್ಳಿಯಲ್ಲಿ ಹನ್ನೆರಡು ಹದಿಮೂರು ವರ್ಷದ ವಿದ್ಯಾರ್ಥಿಯಾಗಿರುವಾಗ (ಸುಮಾರು ೧೯೪೭-೪೮ರಲ್ಲಿ) ಒಂದು ಬೆಳಿಗ್ಗೆ ಸೂರ್ಯೋದಯವಾಗುತ್ತಿದ್ದಂತೆ ಪಶ್ಚಿಮದಲ್ಲಿ ಅಂತಹುದೇ ಇನ್ನೊಂದು ಸೂರ್ಯನ ಛಾಯೆ, ಆಕಾಶದಲ್ಲಿ ಇನ್ನೂ ಎರಡು ಮೂರು ಕಡೆ ಹೊಳೆಯುವ ದುಂಡನೆಯ ಆಕೃತಿಗಳು, ಅವೆಲ್ಲವನ್ನೂ ಕೂಡಿಸಿದಂತಿದ್ದ ಬೆಳಕಿನ ರೇಖೆಗಳು, ವಿಚಿತ್ರವಾದ ವಿನ್ಯಾಸಗಳು, ಈ ದೃಶ್ಯ ನನ್ನ ಮನಸ್ಸಿನಲ್ಲಿ ಅಚ್ಚಳಿಯದಂತೆ ನಿಂತಿದೆ. ನನ್ನ ಹಳ್ಳಿಯ ಜನ ಮುಂದೆ ಏನೋ ಅನಾಹುತವಾಗುವುದಿದೆ ಎಂದು ಹೆದರಿ ಮಾತನಾಡಿಕೊಂಡಿದ್ದು ಜ್ಞಾಪಕವಿದೆ. ಆಗ ಪತ್ರಿಕೆಗಳಲ್ಲಿ ಏನು ವರದಿ ಬಂದುವೋ ಯಾರು ಬಲ್ಲರು! ೧೯೬೨ರಲ್ಲಿ ಅಷ್ಟಗ್ರಹ ಕೂಟದ ಸಂಗತಿ ಅನೇಕರಲ್ಲಿ ಬಹಳ ಭೀತಿಯನ್ನು ಹುಟ್ಟಿಸಿತ್ತು.[೯] ಅದೇ ದಿನ ಹುಟ್ಟಿದ ತಮ್ಮ ಗಂಡುಮಗುವೊಂದರ ಬಗ್ಗೆ ತೀರ ಭೀತರಾಗಿದ್ದ ನನ್ನ ಗೆಳೆಯರೊಬ್ಬರ ಮಗ ಪ್ರತಿಭಾಶಾಲಿಯಾಗಿ ಈಗ ಮೆಡಿಕಲ್ ಓದುತ್ತಿದ್ದಾನೆ. ಅವರಿಗೆ, ಆ ದಿನದ ಪರಿಣಾಮವಾಗಿ ಏನಾದರೂ ತೀರ ಕೆಟ್ಟದು ಆಗುತ್ತದೆ, ಅಥವಾ ತೀರ ಒಳ್ಳೆಯದು ಆಗುತ್ತದೆ ಎಂಬ ನಂಬಿಕೆ; ತಮ್ಮ ಮಗನಿಗೆ ಎರಡನೆಯದಾಗಿದೆ ಎಂಬ ನಂಬಿಕೆ ಇರುವಂತಿದೆ. ಆ ಕಾಲದಲ್ಲಿ ರೇಡಿಯೋ, ವೃತ್ತಪತ್ರಿಕೆಗಳು ಈಗಿನಷ್ಟು ಪ್ರಭಾವಶಾಲಿಗಳಾಗಿರಲಿಲ್ಲ ಮತ್ತು ನನಗೆ ತಿಳಿದ ಮಟ್ಟಿಗೆ ಅವು ಅಷ್ಟಗ್ರಹಕೂಟದ ಪ್ರಸ್ತಾಪಮಾಡಿದ್ದುವೇ ಹೊರತು ಜನರಲ್ಲಿ ಭಯ ಮೂಡಲು ಕಾರಣವಾಗಿರಲಿಲ್ಲ. ಕೆಲವು ವೃತ್ತ ಪತ್ರಿಕೆಗಳು ಸುದ್ದಿಯ

ಸ್ವಾರಸ್ಯಕ್ಕಾಗಿ ಜಗತ್ತು ಪ್ರಳಯವಾಗಲಿದೆಯೆಂಬ ಕೆಲವು ಜ್ಯೋತಿಷ್ಕರ ಭವಿಷ್ಯವನ್ನೂ, ಇಟಲಿಯಲ್ಲಿ ಅದನ್ನು ನಂಬಿದ ಕೆಲವು ಕ್ರೈಸ್ತ ಧರ್ಮಗುರುಗಳು ಬೆಟ್ಟದ ತುದಿಯೊಂದರ ವಿಹಾರದಲ್ಲಿ ಕುಳಿತು ಪ್ರಾರ್ಥನೆಗಳನ್ನು ನಡಸುತ್ತ ಜಲಪ್ರಳಯವಾದಾಗ ತಾವಾದರೂ ಉಳಿಯುವ ಹಂಬಲದಲ್ಲಿದ್ದರೆಂದೂ ವರದಿ ಮಾಡಿದ್ದುವು. ಆದರೂ ಅಷ್ಟಗ್ರಹಕೂಟದ ಭಯ ತೀವ್ರವಾದ್ದರಿಂದ, ಪತ್ರಿಕಾ ಪ್ರಚಾರವಿಲ್ಲದಿದ್ದರೂ ಜನ ತೀರ ಭೀತರಾಗಿ, ಮೈಸೂರು ನಗರದಲ್ಲಿ ಆ ದಿನ ಜನ ಸಂಚಾರ ಸ್ತಬ್ಧವಾಗಿದ್ದಿತು ಮತ್ತು ಆ ದಿನ ಎಲ್ಲೆಲ್ಲೂ ಶಾಂತಿ ಕಾರ್ಯಗಳು ನಡೆದುವು. ಸೂರ್ಯಗ್ರಹಣ, ಅದು ಪೂರ್ಣಗ್ರಹಣವೇ ಆಗಿದ್ದರೂ, ಅದು ಅಷ್ಟಗ್ರಹ ಕೂಟದಷ್ಟು ಭಯಾನಕವಾದುದಲ್ಲವಾದರೂ, ಬರಿಗಣ್ಣಲ್ಲಿ ಸೂರ್ಯನನ್ನು ನೋಡಬಾರದೆಂಬ ಪ್ರಚಾರ ತೀವ್ರವಾಗಿ ನಡೆಯಿತು. ರೇಡಿಯೋ, ಟ್ರಾನ್ಸಿಸ್ಟರುಗಳ ಮೂಲಕ ವೃತ್ತ ಪತ್ರಿಕೆಗಳ ಮೂಲಕ ದೇಶದ ಮೂಲೆ ಮೂಲೆಗಳಿಗೆ ಜನತೆಯನ್ನು ನಿಶ್ಚಯವಾಗಿಯೂ ತಲಪಿತು. ಜನತೆಯ ಕ್ಷೇಮ ಸಮೂಹಮಾಧ್ಯಮಗಳ ಉದ್ದೇಶವಾಗಿದ್ದು ಜನತೆಯಲ್ಲಿ ಅವು ತೀವ್ರ ಭಯವನ್ನು ಮೂಡಿಸಿದುವು. ೧೧ರಲ್ಲಿ ಗ್ರಹಣ ನೋಡಿದವರ ಸಂಖ್ಯೆ ನಲವತ್ತೊಂದಕ್ಕೆ ಇಪ್ಪತ್ತಮೂರು ಎಂದಿದ್ದರೂ, ಇವರಲ್ಲಿ ಎಷ್ಟೋ ಜನ ಮನೆಯೊಳಕ್ಕೆ ಸೂರ್ಯನ ಪ್ರತಿಫಲನವನ್ನು ಬೀಳಿಸಿ ನೋಡಿದವರು. ಈ ಅಂಕಿ ಅಂಶಗಳು ಸ್ಪಷ್ಟ ಪಡಿಸದಿದ್ದರೂ ಬಿಸಿಲಲ್ಲಿ ಬಂದು ನಿಂತುಕೊಂಡು ಸೂರ್ಯನನ್ನು ಸೂಕ್ತ ಮಾಧ್ಯಮದ ಮೂಲಕ ನೋಡಿದವರ ಸಂಖ್ಯೆ ತೀರ ಕಡಿಮೆ ಎಂಬುದನ್ನು ಎಲ್ಲರ ಅನುಭವ ತೋರಿಸಿಕೊಟ್ಟಿದೆ. ಪತ್ರಿಕಾ ವರದಿಗಳೂ (ಮುಂದೆ ನೋಡಿ) ಇದನ್ನು ಸಮರ್ಥಿಸಿವೆ. ರೇಡಿಯೋ, ಪತ್ರಿಕಾ ಪ್ರಚಾರಗಳು ಜನತೆಗೆ ಗ್ರಹಣವನ್ನು ನೋಡದೇ ಇರುವಂತೆ ಮಾಡುವಲ್ಲಿ ಜಯಶೀಲವಾದುವು; ಸರಿಯಾದ ರೀತಿಯಲ್ಲಿ ನೋಡುವಂತೆ ಮಾಡಲು ವಿಫಲವಾದುವು. (ಇದನ್ನು ಪತ್ರಿಕೆಯವರೇ ಒಪ್ಪಿಕೊಂಡಿದ್ದಾರೆ).

## (೩) ಪ್ರಯೋಗ ಶೀಲತೆ

ಮಕ್ಕಳು, ಮತ್ತು ಕೆಲವು ವಿದ್ಯಾವಂತರು ವಿಜ್ಞಾನಿಗಳಂತೆ ಪ್ರಯೋಗಗಳನ್ನು ನಡೆಸದಿದ್ದರೂ ಪ್ರಕೃತಿಯಲ್ಲಾಗುವ ಮಾರ್ಪಾಟುಗಳನ್ನು ಪರಿಶೀಲಿಸಿದರು. (ಮೇಲೆ ೧೮ ಮತ್ತು ೧೯ ನೋಡಿ) ಮಿತಸಂಖ್ಯೆಯವರಲ್ಲಾದರೂ ಪರಿಶೀಲನಾಸಕ್ತಿ ಕುತೂಹಲ ಮೂಡಲು ನಮ್ಮ ಪ್ರಸಾರ ಮಾಧ್ಯಮಗಳು ಕಾರಣ ಎಂಬಲ್ಲಿ ಅನುಮಾನವಿಲ್ಲ. ಒಬ್ಬ ಪದವೀಧರ ತಾನು ವಿಜ್ಞಾನಿಗಳಂತೆ ಕೆಲವು ಪ್ರಯೋಗಗಳನ್ನು

ನಡೆಸಿರುವುದಾಗಿ ಹೇಳಿದ್ದಾನೆ. ಇದೆಲ್ಲ ಸಂಶೋಧನ ಬುದ್ಧಿ ಬೆಳೆಯುತ್ತಿರುವ ಕುರುಹಾಗಿದೆ.

(೪) ದೇಶದ ಆಗುಹೋಗುಗಳ ಮೇಲೆ ಪರಿಣಾಮ

ಗ್ರಹಣದಿಂದ ಏನೂ ಪರಿಣಾಮಗಳಾಗುವುದಿಲ್ಲ ಎಂದು ಕೆಲವರು ಸ್ಪಷ್ಟವಾಗಿ ನುಡಿದಿದ್ದಾರೆ.

ಇನ್ನು ಕೆಲವರು ವಿವಿಧ ಭಯಗಳನ್ನು ವ್ಯಕ್ತಪಡಿಸಿದ್ದರೆ. ಈ ಭಯಗಳು ಅವಿದ್ಯಾವಂತರಲ್ಲಿ ತೀರ ಕನಿಷ್ಠ ಪ್ರಮಾಣದಲ್ಲಿ ವ್ಯಕ್ತವಾಗಿರುವುದನ್ನು ಗಮನಿಸಿದರೆ, ಅಂತಹ ಭಯ, ಅತಿ ವಿಚಿತ್ರ ಕಲ್ಪನೆ, ಊಹಾಪೋಹಗಳು ವಿದ್ಯಾವಂತರಲ್ಲಿ ಮೂಡಲು ಪ್ರಸಾರ ಮಾಧ್ಯಮಗಳು ತಮಗೆ ಅರಿವಿಲ್ಲದಂತೆ ಪ್ರಚೋದನೆ ನೀಡಿರುವಂತೆ ತೋರುತ್ತದೆ. ಇಷ್ಟಾದರೂ ಒಂದು ಮಾತನ್ನು ಹೇಳಲೇ ಬೇಕಾಗುತ್ತದೆ. ಮೂಢನಂಬಿಕೆ, ಅಂಧಶ್ರದ್ಧೆ, ಶಕುನ ಉತ್ಪಾತಗಳಲ್ಲಿನ ನಂಬಿಕೆಗಳನ್ನು ಮನುಷ್ಯನಿಂದ ಸಂಪೂರ್ಣವಾಗಿ ತೊಲಗಿಸುವುದು ಅಸಾಧ್ಯವೆಂದು ತೋರುತ್ತದೆ. ಮನುಷ್ಯ ಎಷ್ಟೇ ವೈಚಾರಿಕನಾದರೂ ಅವನ ತೀರ ಹತಾಶೆಯ ದಿನಗಳಲ್ಲಿ ಅವನ (ಮೂಢವೇ ಆದರೂ) ನಂಬಿಕೆ ಅವನ ಊರೆಗೋಲಾಗುತ್ತದೆ. ಜಗತ್ತಿನ ಇಂದಿನ ಅಲ್ಲೋಲಕಲ್ಲೋಲ ಪರಿಸ್ಥಿತಿ, ಭಾರತದಲ್ಲಿ ವ್ಯಾಪಕವಾಗಿ ಹರಡಿರುವ ಅಶಾಂತಿ, ಅತೃಪ್ತಿಗಳು ಕಾರಣವಾಗಿ ಸೂರ್ಯಗ್ರಹಣದಂತಹ ಒಂದು ಪ್ರಾಕೃತಿಕ ಘಟನೆ ಬಗೆಬಗೆಯ ಭಯಗಳನ್ನು ಮೂಡಿಸಿರುವುದು ಸ್ವಾಭಾವಿಕವಾಗಿದೆ. ಭಾರತೀಯರ ಅರೆ ಸಾಂಪ್ರದಾಯಕ, ಅರೆ ಆಧುನಿಕ ಸ್ಥಿತಿಯೊಡನೆ, ಪ್ರಸಾರ ಮಾಧ್ಯಮಗಳ ಪ್ರಭಾವ, ದೇಶದ ಅಲ್ಲೋಲ ಸ್ಥಿತಿಗಳೆಲ್ಲ ಒಟ್ಟಾಗಿ ಸೇರಿ ಮುಂದೆ ಅನಾಹುತವಾಗಲಿದೆ ಎಂಬ ತೀವ್ರ ಪ್ರತಿಕ್ರಿಯೆಗಳನ್ನು ಮೂಡಿಸಿರಬಹುದು. ಇಂತಹ ಪ್ರತಿಕ್ರಿಯೆಗಳನ್ನು ಪರಿಶೀಲಿಸಿ ವಿಶ್ಲೇಷಿಸುವ ಕೆಲಸಕ್ಕೆ ಮಾತ್ರ ನನ್ನ ಅಧ್ಯಯನವನ್ನು ಸೀಮಿತಗೊಳಿಸಿಕೊಳ್ಳುತ್ತೇನೆ. ಗ್ರಹಣದ ನೆಪದಲ್ಲಿ ಜೀವನದ ಬೇರೆ ಬೇರೆ ಸ್ತರದ ಜನರನ್ನು ತನ್ಮೂಲಕ ಮನುಷ್ಯನನ್ನು ಸಮಗ್ರವಾಗಿ ತಿಳಿದುಕೊಳ್ಳಲು ಯತ್ನಿಸುವ ಒಂದು ಪ್ರಯತ್ನ ಮಾತ್ರ ಇದು.

**ಗ್ರಹಣ ಸಮಯದ ಇನ್ನೂ ಕೆಲವು ರಿಚುಯಲ್ಲುಗಳು, ನಿಷೇಧಗಳು, ನಂಬಿಕೆಗಳು:**

ಇವುಗಳಲ್ಲಿ ಕೆಲವನ್ನು ವಕ್ತಾರರು ಪ್ರಾಸಂಗಿಕವಾಗಿ ಕೊಟ್ಟಿದ್ದಾರೆ; ಇನ್ನು ಕೆಲವನ್ನು ನಾನು ಅನೇಕರ ಜೊತೆ ಮಾತನಾಡುವಾಗ ಸಂಗ್ರಹಿಸಿದೆ. ಈಗಾಗಲೇ ಎರಡನೆಯ ಅಧ್ಯಾಯದಲ್ಲಿ ಕೆಲವು ಪ್ರಸ್ತಾಪವಾಗಿವೆ; ಎಂಟನೆಯ ಅಧ್ಯಾಯದಲ್ಲೂ ಕೆಲವು ಬರುತ್ತವೆ.

ಗ್ರಹಣದ ಸಮಯದಲ್ಲಿ ಹೊಟ್ಟೆಯಲ್ಲಿ ಆಹಾರವಿರಬಾರದು. ಆದ ಕಾರಣ ಗ್ರಹಣಕ್ಕೆ ಸಾಕಷ್ಟು ಮುನ್ನ ಊಟ ಮಾಡಬೇಕು. ಅಥವಾ ಸ್ವಲ್ಪ ಹೊತ್ತಿಗೆ ಮುನ್ನವಾದರೆ ಲಘು ಉಪಾಹಾರ ತೆಗೆದುಕೊಳ್ಳಬೇಕು. ಗ್ರಹಣದ ಸಮಯದಲ್ಲಿ ತೆಗೆದುಕೊಂಡ ಆಹಾರ ನೀರು ಗಡ್ಡೆ ಕಟ್ಟುತ್ತದೆ ಎಂಬ ನಂಬಿಕೆಯೂ ಇದೆ. (ಉತ್ತರ ಭಾರತದ ವಾಯವ್ಯ ಭಾಗದಲ್ಲಿ ಗ್ರಹಣಗಳಿಗೆ ಹನ್ನೆರಡು ಗಂಟೆ ಮುನ್ನ ಯಾರೂ ಊಟ ಮಾಡಕೂಡದು). ಒಬ್ಬರ ನಂಬಿಕೆ ಪ್ರಕಾರ, ಸೂರ್ಯಕಿರಣವಿಲ್ಲದಾಗ ನೀರಿನಲ್ಲಿ ಕ್ರಿಮಿಗಳು ಉತ್ಪತ್ತಿಯಾಗುತ್ತವೆಯಾದ್ದರಿಂದ ಆ ಸಮಯ ನೀರು ಕುಡಿಯಬಾರದು.

ಉತ್ತರ ಕರ್ನಾಟಕದ ಧಾರವಾಡ ಜಿಲ್ಲೆಯಲ್ಲಿ ಅಕ್ಕಿ, ಜೋಳ ಮುಂತಾದ ಧಾನ್ಯಗಳ ಕಣಜ, ಡಬ್ಬಗಳ ಮೇಲೂ ಬಿಲ್ವ, ಬನ್ನಿ ಗರಿಕೆ ಹಾಕಿಡುತ್ತಾರೆ; ಹಾಲು ಮೊಸರಲ್ಲಿ ಬಿಲ್ವಪತ್ರೆ ಹಾಕುತ್ತಾರೆ; ಬೆಂಗಳೂರಿನ ಬಿ. ಎ. ವಿದ್ಯಾರ್ಥಿನಿಯ ಮನೆಯಲ್ಲಿ ಹಪ್ಪಳ, ಉಪ್ಪಿನಕಾಯಿ, ಮಜ್ಜಿಗೆ, ಹಾಲು ಮೊದಲಾದ ಪದಾರ್ಥಗಳಿಗೆ ದರ್ಭೆ ಹಾಕಿದ್ದರು. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಮಜ್ಜಿಗೆ, ಹಾಲು, ತುಪ್ಪ ಮೊದಲಾದ 'ಹಸಿ' ಪದಾರ್ಥಗಳಿಗೆ ಮಾತ್ರ ಬಿಲ್ವ, ದರ್ಭೆ ಹಾಕುವುದು; ಅಕ್ಕಿ, ರಾಗಿ ಮೊದಲಾದ 'ಒಣಪದಾರ್ಥ'ಗಳಿಗೆ ಹಾಕುವುದಿಲ್ಲ. (ಉತ್ತರ ಭಾರತದಲ್ಲಿ ಕೆಲವೆಡೆ ಗ್ರಹಣಕ್ಕೆ ಮುಂಚೆ ಮಾಡಿದ್ದ ಅಡುಗೆಯಲ್ಲಿ ಗೃಹಿಣಿ ಗಂಗಾಜಲದಲ್ಲಿ ಅದ್ದಿದ ತುಳಸಿಯನ್ನು ಹಾಕಿಡುವ ಪದ್ಧತಿ ಇದೆ).

ಗ್ರಹಣದ ಬಳಿಕ ಹೊಸ ನೀರು ತರಬೇಕು. ಸಾಮಾನ್ಯವಾಗಿ ಜಲಾಶಯಗಳ ನೀರಿಗೆ ದೋಷ ಇಲ್ಲ. ಗ್ರಹಣಾವಧಿಯಲ್ಲಿ ತುಮಕೂರು ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ 'ಬಾವಿಗಳ ಮೇಲೂ ಚಾಪೆ ಮುಚ್ಚಿದ್ದು' ತಿಳಿದು ಬಂದಿದೆ.

ಗ್ರಹಣದ ಸಮಯದಲ್ಲಿ ಶಾಂತಿ ಕಾರ್ಯಕ್ಕಾಗಿ ಹಳ್ಳಿಗಳ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯುವುದನ್ನು ಒಬ್ಬ ವ್ಯಕ್ತಿ ವರದಿಮಾಡಿದ್ದಾನೆ. ಅಪ್ಪ, ಅಮ್ಮ ತೀರಿದವರು ಗ್ರಹಣದ ಮೊದಲು ಮತ್ತು ಬಳಿಕ ಸ್ನಾನ ಮಾಡಿ ಹೊಳೆಯಲ್ಲಿ ಎಳ್ಳುದರ್ಭೆಯಿಂದ ತರ್ಪಣ ಕೊಟ್ಟು ಬಂದು, ಬೇಕಾದರೆ ಮನೆಯಲ್ಲಿ ವಡೆ ಪಾಯಸ ಸಮಾರಾಧನೆ ನಡೆಸಬಹುದು. (ಇದು ಬ್ರಾಹ್ಮಣರಲ್ಲಿ). ನಕ್ಷತ್ರ ದೋಷವಿದ್ದವರು ದೋಷ ಪರಿಹಾರ ಮಂತ್ರವನ್ನು ಒಂದು ಚೀಟಿಯಲ್ಲಿ ಬರೆಸಿಕೊಂಡು ಅದನ್ನು ಹಿಡಿದೇ ನದಿಯಲ್ಲಿ ಸ್ನಾನಮಾಡಿ, ಬಳಿಕ ಆ ಒದ್ದೆ ಬಟ್ಟೆ, ಚೀಟಿ ಸಮೇತ ಎಳ್ಳು, ದಕ್ಷಿಣೆಗಳನ್ನು ಬ್ರಾಹ್ಮಣರಿಗೆ ದಾನಮಾಡುತ್ತಾರೆ ಎಂದು ಒಬ್ಬ ವಕ್ತಾರ ತಿಳಿಸಿದರೆ, ಹದಿನಾರರಂದು ನಡೆದ ಸೂರ್ಯಗ್ರಹಣ

ತಮ್ಮ ಯಜಮಾನರಿಗೆ ಬಹಳ ಕ್ರೂರವಾಗಿದ್ದುದರಿಂದ ಅವರು ಗ್ರಹಣದುದ್ದಕ್ಕೂ ರುದ್ರಾಭಿಷೇಕ ಮಾಡುತ್ತಿದ್ದು ಗ್ರಹಣ ಬಿಟ್ಟ ಮೇಲೆ ಮತ್ತೆ ಸ್ನಾನ ಮಾಡಿ ಮತ್ತೆ ಅಭಿಷೇಕ ಮಾಡಿ, ಎಡೆಯೂರು ಸಿದ್ಧಲಿಂಗೇಶ್ವರನಿಗೆ ಪೂಜೆ ಸಲ್ಲಿಸಿದರೆಂದು ಬೆಂಗಳೂರು ಗ್ರಾಮಾಂತರ ವೀರಶೈವ ಮಹಿಳೆ ತಿಳಿಸಿದ್ದಾರೆ. ಅವರ ಊರಿನಲ್ಲಿ ಒಬ್ಬ ದರ್ಜಿಯವನು ಗ್ರಹಣದ ಹಿಂದಿನ ದಿನ ಬಹು ಸಂಖ್ಯೆಯ ಮನೆಗಳಿಗೆ ಹೋಗಿ ದೀಪಕ್ಕೆ ಮೂರು ಬಗೆಯ ಎಣ್ಣೆ ಹಾಕಿ ದಿನವಿಡೀ ಉರಿಸಬೇಕೆಂದೂ ಗ್ರಹಣ ಬಿಟ್ಟ ಮೇಲೆ ಸಜ್ಜಿಗೆ ಮಾಡಿ ಹಸುವಿಗೆ ಎಡೆ ಹಾಕಿ ನೀವೂ ತಿನ್ನಬೇಕು ಎಂದು ಹೇಳಿದ್ದನ್ನು ಬಹಳ ಜನ ಅನುಸರಿಸಿದರು. ಅದೇ ಹಳ್ಳಿಯಲ್ಲಿ ಗ್ರಹಗತಿ ಕ್ರೂರವಾಗಿದ್ದವರು ಸೂರ್ಯನಿಗೆ ಪ್ರಿಯವಾದ ಧಾನ್ಯವನ್ನು ದೇವರ ಮನೆಯಲ್ಲಿ ಪೂಜೆ ಮಾಡಿ ಅದನ್ನು ಹಣದ ಸಮೇತ ಬ್ರಾಹ್ಮಣರಿಗೇ ಕೊಟ್ಟರು. (ಲಿಂಗಾಯತರಾದರೂ ಅವರ ಪುರೋಹಿತರಾದ ಜಂಗಮರಿಗೆ ಕೊಡುವಂತಿಲ್ಲ. ಗ್ರಹಣ ಶಾಂತಿಗೆ ಬ್ರಾಹ್ಮಣರೇ ಆಗಬೇಕೆಂಬುದು ಗಮನಾರ್ಹ ಸಂಗತಿ). ಉತ್ತರ ಭಾರತದ ಕೆಲವು ಪ್ರದೇಶಗಳಲ್ಲಿ ಕೆಲವು ನಕ್ಷತ್ರಗಳ ದುಷ್ಪರಿಣಾಮ ತಡೆಯಲು, ದೋಷ ಇರುವ ವ್ಯಕ್ತಿ ತನ್ನ ಬಿಂಬವನ್ನು ತುಪ್ಪದಲ್ಲಿ ನೋಡಿಕೊಂಡು ಅದರಲ್ಲಿ ಹಣ ಹಾಕಿ ಬ್ರಾಹ್ಮಣರಿಗೆ ದಾನ ಕೊಡಬೇಕು. ಇದೇ 'ಛಾಯಾದಾನ' (ಛಾಯಾ=ನೆರಳು, ಪ್ರತಿಬಿಂಬ).

ಗ್ರಹಣ ಕಾಲದಲ್ಲಿ ಉಳುಕು ಮಂತ್ರ, ಬಟ್ಟೆ ಬಿದ್ದಾಗ ಕಟ್ಟುವ ಮಂತ್ರಗಳನ್ನು ಕಲಿತರೆ ಆ ಮಂತ್ರಗಳು ಬೇಗ ಫಲಕಾರಿಯಾಗುತ್ತವೆ ಎಂಬ ನಂಬಿಕೆಯನ್ನು ಒಬ್ಬರು ದಾಖಲು ಮಾಡಿದರೆ, ಮಂತ್ರ ಮಾಟಗಳನ್ನು ಕಲಿಯಲು ಎಲ್ಲ ಅಮಾವಾಸ್ಯೆಗಳಿಗಿಂತ ಸೂರ್ಯಗ್ರಹಣದ ಅಮಾವಾಸ್ಯೆ ಪ್ರಶಸ್ತವೆಂಬ ನಂಬಿಕೆಯನ್ನು ಇನ್ನೊಬ್ಬರು ದಾಖಲು ಮಾಡಿದ್ದಾರೆ. ದೆವ್ವ ಬಿಡಿಸಲು, ಮಾಡಿಸಲು ಗ್ರಹಣ ಒಳ್ಳೆ ಕಾಲ[೬]. (ವೇದ ಮಂತ್ರಗಳನ್ನು ಕಲಿಯಲಾರಂಭಿಸುವುದಕ್ಕೆ ಸೂರ್ಯ ಗ್ರಹಣ ಶುಭವೆಂದು ಕೊಂಕಣದಲ್ಲಿ ನಂಬುತ್ತಾರೆ.[೭])

ಗರ್ಭಿಣಿಯರನ್ನು ಹೊರಕ್ಕೆ ಬಿಡುವುದೇ ಇಲ್ಲ. ಅವರು ಕೆಲಸ ಮಾಡಕೂಡದು ಮತ್ತು ಅವರಿರುವ ಕೊಠಡಿಯ ಎಲ್ಲ ಬಿರುಕುಗಳನ್ನೂ ಮುಚ್ಚಿ ಕತ್ತಲುಮಾಡಿ ಬಿಡುತ್ತಾರೆ. ಕೆಲವರು ಗರ್ಭಿಣಿಯು ಮನೆಯಲ್ಲಿದ್ದರೆ ಅನ್ನಕ್ಕೆ ಕೆಂಪು ನೀರು ಹಾಕಿ ಮನೆ ಸುತ್ತ ಎರಚುತ್ತಾರೆ. ಸೂರ್ಯನ ಗ್ರಹಣದ ಸ್ಪರ್ಶದಿಂದ ಮಕ್ಕಳು ಅಂಗವಿಕಲರಾಗುತ್ತಾರೆ ಎಂಬ ಪ್ರಬಲ ಭಯ ಸಾರ್ವತ್ರಿಕವಾಗಿದೆ.[೮] ತಮ್ಮ ಮನೆಯ ಜನಗಳನ್ನಿರಲಿ ಹಸು ಎಮ್ಮೆಗಳನ್ನೂ ಹೊರಗೆ ಬಿಡಲಿಲ್ಲವೆಂದು

ಶಿವಮೊಗ್ಗದ ಯುವತಿ ಹೇಳಿದ್ದಾಳೆ. ಬೆಂಗಳೂರಿನ ಹಳ್ಳಿಯ ಮಹಿಳೆ, ಬಾಣಂತಿಯರು ನೋಡಿದರೆ ಅಪಾಯವಿಲ್ಲದಿದ್ದರೂ ಸಾಮಾನ್ಯವಾಗಿ ಅವರನ್ನು ಯಾರೂ ಆ ದಿನ ಹೊರಗೆ ಬರಲು ಬಿಡುವುದಿಲ್ಲವೆಂದೂ ಜಾನುವಾರುಗಳನ್ನು ಹೊರಬಿಟ್ಟರೂ ಗಬ್ಬದ ಎಮ್ಮೆ ಹಸುಗಳನ್ನು ಬಿಡುವುದಿಲ್ಲವೆಂದೂ, ಬಿಡಲೇಬೇಕಾದರೆ ಅವಕ್ಕೆ ಕೋಡಿಗೆ ಕಬ್ಬಿಣದ ಅಣಸು, ಅಥವಾ ಕೊರಳಿಗೆ ಕಬ್ಬಿಣದ ಗಂಟೆ ಕಟ್ಟಿದ್ದರೆ ಏನೂ ಆಗುವುದಿಲ್ಲವೆಂದೂ ಹೇಳಿದ್ದಾರೆ. (ಹೇಗೋ ಕಬ್ಬಿಣ ಅವುಗಳ ಮೈಗೆ ತಾಗಿದಂತಿರಬೇಕು). ಗರ್ಭಿಣಿಯರಿಗೆ, ಗಬ್ಬದ ಹಸುಗಳಿಗೆ ಕಬ್ಬಿಣದ ಬಳೆ ತೊಡಿಸುವ ಪದ್ಧತಿ ತುಮಕೂರು ಜಿಲ್ಲೆಯಲ್ಲಿದೆ. 'ಕಬ್ಬಿಣ'ವು ಮೈಲಿಗೆ ಲೋಹ–ಇದು ಇದ್ದ ಕಡೆ ಭೂತ ಪ್ರೇತ ಸುಳಿಯವು. ಮಕ್ಕಳು ಹೊರ ಹೋದರೆ ಅವರಿಗೆ ಮಾತು ಬರುವುದಿಲ್ಲವೆಂಬ ನಂಬಿಕೆ ಇದೆ.

ಗಿಡ ಅಥವಾ ಮರಗಳು ಕಾಯಿ, ಹಣ್ಣು ಬಿಡದೆ ಗೊಡ್ಡಾದರೆ ಅಥವಾ ಫಸಲು ಇಳಿಮುಖವಾದರೆ ಅವಕ್ಕೆ ಗ್ರಹಣದ ದಿನ ಕಬ್ಬಿಣದ ಮೊಳೆ ಹೊಡೆದರೆ ಅವು ಫಲಕಾರಿಯಾಗುತ್ತವೆಂದು ನಂಬಿಕೆ ಇದೆ. (ಚಿತ್ರ ೧೧). ಒಬ್ಬ ಬಿ.ಎ. ವಿದ್ಯಾರ್ಥಿನಿ, (ಬಹುಶಃ ಚಿಕ್ಕ ಹುಡುಗಿಯಾಗಿದ್ದಾಗ ಇರಬೇಕು), ಸೀಬೇ ಗಿಡ ಮಾವಿನ ಮರಗಳಿಗೆ ಅವು ಫಲ ಕೊಡುವಂತೆ ಮಾಡುವುದಕ್ಕಾಗಿ ಬೆತ್ತಲೆಯಾದ ತನ್ನಿಂದ ಹಿರಿಯರು ಕಬ್ಬಿಣದ ಮೊಳೆಗಳನ್ನು ಹೊಡೆಯಿಸುತ್ತಿದ್ದುದನ್ನು ದಾಖಲು ಮಾಡಿದ್ದಾಳೆ. (ಕೊಂಕಣದಲ್ಲಿ ಗ್ರಹಣದ ದಿನ ಗೊಡ್ಡುಮರಗಳನ್ನು ಕಬ್ಬಿಣದ ಬಳೆ ಇರುವ ಒನಕೆಯಿಂದ ಬಡಿಯುವುದಲ್ಲದೆ, ಬಂಜೆ ಹೆಂಗಸರನ್ನೂ ಬಡಿಯುತ್ತಾರೆ).[೧೦]

ಗ್ರಹಣದ ದಿನ ಬೆಂಗಳೂರು ಜಿಲ್ಲೆಯ ಪಕ್ಕದ ತಮಿಳುನಾಡಿನ ಧರ್ಮಪುರಿ ಜಿಲ್ಲೆ ಹೊಸೂರು ತಾಲೂಕಿನ ಹಳ್ಳಿಯೊಂದರಲ್ಲಿ ಮನೆಗಳ ಹೊಸ್ತಿಲುಗಳಿಗೆ ಕಬ್ಬಿಣದ ಮೊಳೆಗಳನ್ನು ಹೊಡೆದುದಲ್ಲದೆ, ಆ ರಾತ್ರಿ ಹಳ್ಳಿಯ ಐವತ್ತು ಜನರ ಸಮೂಹದಲ್ಲಿ ಸಾನಂದ ಗಣೇಶನ ಕಥೆಯನ್ನು[೧೧] ಓದಲಾಯಿತೆಂದು ಆ ಹಳ್ಳಿಯ ಸ್ತ್ರೀ ಹೇಳಿದ್ದಾಳೆ. ಪಂಚಾಕ್ಷರಿ ಜಪದಿಂದ, ಶಿವನಾಮಸ್ಮರಣೆಯಿಂದ ನಾರಕಿಗಳ ಪಾಪ ಪರಿಹಾರವಾದಂತೆಯೇ ಪಂಚಾಕ್ಷರಿ ಮಹಿಮೆಯ ಸಾನಂದನ ಕತೆಯಿಂದ ಸೂರ್ಯಗ್ರಹಣ ದೋಷ ಪರಿಹಾರವಾಗುತ್ತದೆ ಎಂಬ ನಂಬಿಕೆ ಇಲ್ಲಿ ಕೆಲಸ ಮಾಡಿದೆ.

ಗ್ರಹಣದ ಬಳಿಕ ಬ್ರಾಹ್ಮಣರೂ, ಎಲ್ಲರೂ ಸ್ನಾನಮಾಡಿ ಪೂಜಾದಿಗಳನ್ನು ನೆರವೇರಿಸುತ್ತಾರಷ್ಟೇ. ಸಂಕ್ರಾಂತಿ ಮತ್ತು ಗ್ರಹಣದ ಮಾರನೆಯ ದಿನ ಬೆಳಿಗ್ಗೆ ಹಿಂದಿನ ದಿನದ ಗ್ರಹಣದ ಮೈಲಿಗೆ ಅಥವಾ ದೋಷ ಕಳೆಯುವುದಕ್ಕಾಗಿ

ಬ್ರಾಹ್ಮಣರು ಮಾಡುವ ವಿಶೇಷ ಸ್ನಾನಕ್ಕೆ 'ಕರಿ ಸ್ನಾನ' ಎಂಬ ಹೆಸರುಂಟು. 'ಕರಿ' ಎಂದರೆ ಅಶುಭ, ಅಮಂಗಳ ಎಂದರ್ಥ.

ಒಂದು ಊರಿನಲ್ಲಿ ಗ್ರಹಣ ಶಾಂತಿಗಾಗಿ ಊರ ಮಧ್ಯೆ ಕುರಿಮರಿ ಕಡಿದು ಅದರ ರಕ್ತದ ಜೊತೆ ಅನ್ನ ಬೆರಸಿ ಬಲಿಯಾಗಿ ಅದನ್ನು ಎಲ್ಲೆಡೆಗೆ ಎರಚಿದ್ದಾರೆ. ಇನ್ನೊಂದು ಹಳ್ಳಿಯಲ್ಲಿ (ಇವೆರಡೂ ಬೆಂಗಳೂರು ಜಿಲ್ಲೆಯವು) ಕೋಳಿ ಕಡಿದು ಶಾಂತಿ ಮಾಡಿದ್ದಾರೆ. ಎರಡು ಕಡೆಗೂ ನಡೆದ ಶಾಂತಿಕಾರ್ಯದಲ್ಲಿ ವೈದಿಕ ಪುರೋಹಿತರ ಪಾತ್ರವೇನೂ ಇಲ್ಲ.

ಬೆಂಗಳೂರು ಜಿಲ್ಲೆ ನೆಲಮಂಗಲ ತಾಲೂಕಿನ ಹೆಜ್ಜಾಜಿ ಗ್ರಾಮದಲ್ಲಿ ಗ್ರಹಣದ ದಿನ ಎಲ್ಲರ ಮನೆಯ ಎಡೆ ಸೇರಿಸಿ ಊರ ಮುಂದೆ ಸುರಿದರು. ತೋಟಿಯು ಹಂದಿ ಕಡಿದು ಅದರ ರಕ್ತವನ್ನು ಅನ್ನಕ್ಕೆ ಕಲೆಸಿದ. ಬಳಿಕ ಅವನು ತಮಟೆ ಬಡಿಯುತ್ತ 'ಕೋ ಬಲಿ' ಎಂದು ಕೂಗುತ್ತ ಮುಂದೆ ಹೋದಂತೆ ತಳವಾರ ಅನ್ನವನ್ನು ಊರ ಸುತ್ತ ಚೆಲ್ಲುತ್ತ ಬಂದ. ಬಳಿಕ ಊರ ಜನ ಅವರಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆ ಕೊಟ್ಟರು. ಮಾರನೆಯ ದಿನ ಅವರಿಗೆ ಅಕ್ಕಿ ರಾಗಿ ಕೊಟ್ಟರು. ಕೋಲಾರ ಜಿಲ್ಲೆ ಮಾಲೂರು ತಾಲೂಕಿನ ಸೊಣ್ಣಪ್ಪನ ಹಳ್ಳಿಯಲ್ಲಿ, ಗ್ರಹಣ ಹಿಡಿದಾಗ, ಶಾಂತಿ ಕಾರ್ಯಕ್ಕೆ 'ತಣುವು ಮುದ್ದೆ' ಮಾಡಿ ನೀರಲ್ಲಿ ಅರ್ಪಿಸುತ್ತಾರೆ. ತಣುವು ಮುದ್ದೆ ಎಂಬುದು ನುಚ್ಚಕ್ಕಿಯ ಅನ್ನ. ತೀಳ್ಯ ಎಂಬ ಹೆಸರಿನ ಬಳ್ಳಿಯ ಎಲೆಗಳನ್ನು ಹೊಲಿದು, ನಡುಮನೆ ಸಾರಿಸಿ ರಂಗೋಲೆ ಹಾಕಿ ಆ ಎಲೆಯ ತಟ್ಟೆಯ ಮೇಲೆ 'ತಣುವು ಮುದ್ದೆ' ಹಾಕಿ ಮೊಸರು ಕಲೆಸಿ ಪೂಜೆ ಮಾಡುತ್ತಾರೆ. ಗ್ರಹಣ ಬಿಟ್ಟ ಮೇಲೆ ಅದನ್ನು ನೀರಲ್ಲಿ ವಿಸರ್ಜಿಸುತ್ತಾರೆ. ಇದು ಎಲ್ಲರ ಮನೆಗಳಲ್ಲಿ ನಡೆಯುವುದು. ಊರಿನ ಮಾಂಸಾಹಾರಿಗಳಾದ ಜನ ಒಟ್ಟಾಗಿ ಕುರಿ ಕಡಿದು ರಕ್ತದ ಬಲಿ ಕೊಡುತ್ತಾರೆ. ('ತಣುವು' ಎಂದರೆ ತಂಪು. ಗ್ರಹಣದ ಉಗ್ರತೆ ಕಡಿಮೆಯಾಗಿ ಶಾಂತವಾಗಲು ಮಾಡಿದ ಅನ್ನವೇ 'ತಣುವು ಮುದ್ದೆ' ಎಂದು ತೋರುತ್ತದೆ.) ಆ ಊರಲ್ಲಿ ಗಬ್ಬದ ದನಗಳ ಕೊಂಬುಗಳಿಗೆ ಕಬ್ಬಿಣದ ಉಂಗುರ ಹಾಕುತ್ತಾರೆ.

ಹುಟ್ಟಿದ ಮಕ್ಕಳಲ್ಲಿ ಮೊದಲ ಮಗು ಉಳಿದಿದ್ದು ಉಳಿದ ಮಕ್ಕಳೆಲ್ಲ ಸಾಯುತ್ತಿದ್ದರೆ, ಆ ಮೊದಲ ಮಗುವನ್ನೇ ಅಮಾವಾಸ್ಯೆಯ ದಿನ ಅಥವಾ ಅದಕ್ಕಿಂತ ಹೆಚ್ಚಾಗಿ ಸೂರ್ಯಗ್ರಹಣದ ದಿನದಂದು ಮನೆಯ ಹೊಸ್ತಿಲಮೇಲೆ ಕುಳ್ಳಿರಿಸಿ ಅದರ ಬೆನ್ನ ಮೇಲೆ ರೊಟ್ಟಿ ತಟ್ಟಿದರೆ ಮುಂದಿನ ಮಕ್ಕಳು ಉಳಿಯುತ್ತವೆ ಎಂಬ ನಂಬಿಕೆ ತುಮಕೂರು ಜಿಲ್ಲೆಯ ಕೆಲವು ಹಳ್ಳಿಗಳಲ್ಲಿದೆ.

## ಅನುಬಂಧಗಳು

ಈ ಹಿಂದ ಬಂದಿರುವ ವಿವೇಚನೆಯಲ್ಲಿ ನನ್ನ ಪರವಾಗಿ ವಿದ್ಯಾರ್ಥಿನಿಯೊಬ್ಬರು ಭದ್ರಾವತಿ ಪ್ರದೇಶದಲ್ಲಿ ಎಂಟು ಹತ್ತು ಜನರನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಿರುವುದು ಇದೆ. ಅಷ್ಟು ಬಿಟ್ಟರೆ ಬಹುತೇಕ ಮಾಹಿತಿ ದಕ್ಷಿಣ ಕರ್ನಾಟಕಕ್ಕೆ (ಮುಖ್ಯವಾಗಿ ಬೆಂಗಳೂರು ಪ್ರದೇಶಕ್ಕೆ) ಸಂಬಂಧಿಸಿದೆ. ಈ ಅಧ್ಯಾಯವನ್ನು ಬರೆದಾದ ಮೇಲೆ ಕರ್ನಾಟಕದ ಪ್ರಾತಿನಿಧಿಕ ಭಾಗಗಳಾದರೂ ಈ ವಿವೇಚನೆಯಲ್ಲಿ ಪ್ರತಿನಿಧಿತವಾಗಬೇಕೆಂದು ಮಧ್ಯಕರ್ನಾಟಕದ ದಾವಣಗೆರೆ ಮತ್ತು ಸಮೀಪದ ಹಳ್ಳಿ, ಉತ್ತರ ಕರ್ನಾಟಕದ ಬೆಳಗಾವಿ ಪಕ್ಕದ ಹಳ್ಳಿ ಮತ್ತು ಧಾರವಾಡ ಸಮೀಪದ ಆಳ್ನಾವರಗಳಲ್ಲಿ ಕ್ಷೇತ್ರಕಾರ್ಯವನ್ನು ನಡಸಿದೆ. ಆಳ್ನಾವರ ಊರಿನ ಒಬ್ಬ ಹೈಸ್ಕೂಲ್ ಉಪಾಧ್ಯಾಯರು, ಒಬ್ಬ ಆಯುರ್ವೇದಿಕ್ ವೈದ್ಯರು, ಮತ್ತೊಬ್ಬ ಹಳ್ಳಿಯವರೊಡನೆ ಆಳ್ನಾವರ ಮತ್ತು ಧಾರವಾಡಗಳ ಮಧ್ಯೆ ರೈಲಲ್ಲಿ ಸಂಭಾಷಣೆಗೆ ಎಳೆದು ಪ್ರಶ್ನಾವಳಿಯ ಸಹಾಯದಿಂದ ಮಾಹಿತಿ ಸಂಗ್ರಹಿಸಿದೆ. ಎಂದರೆ, ಈ ಪುಸ್ತಕದಲ್ಲಿ ದಕ್ಷಿಣ ಕರ್ನಾಟಕ, ಮಧ್ಯ ಕರ್ನಾಟಕ, ಮತ್ತು ಉತ್ತರ ಕರ್ನಾಟಕಗಳು ಪ್ರತಿನಿಧಿತವಾದಂತಾಯಿತು. ಬಿಜಾಪುರ ಜಿಲ್ಲೆಯಲ್ಲೂ ಕ್ಷೇತ್ರಕಾರ್ಯ ನಡೆಸಿರುವುದು ಒಂದು ರೀತಿ ಕರ್ನಾಟಕದ ಎಲ್ಲ ಭಾಗಗಳೂ ಪ್ರತಿನಿಧಿತವಾದಂತಾಗುತ್ತದೆ.

ಆದರೆ, ದಾವಣಗೆರೆ ಬೆಳಗಾವಿ ಬಿಜಾಪುರ ಪ್ರದೇಶಗಳಲ್ಲಿ ನಡೆಸಿದ ಕ್ಷೇತ್ರಕಾರ್ಯ, ಅಲ್ಪ ಸ್ವಲ್ಪ ವಿವರಗಳ ಹೊರತು ಗ್ರಹಣಕ್ಕೆ ಸಂಬಂಧಿಸಿದ ಕತೆ, ವಿಧಿ ನಿಷೇಧಗಳು, ರಿಚುಯಲ್ಲುಗಳು ಕರ್ನಾಟಕದಲ್ಲಿ ಬಹುತೇಕ ಎಲ್ಲ ಕಡೆ ಒಂದೇ ಆಗಿವೆಯೆಂಬುದನ್ನು ದೃಢಪಡಿಸಿದೆ. ಈ ಮೂರು ಪ್ರದೇಶಗಳಲ್ಲಿ ನಾನು ನಡಸಿದ ಕ್ಷೇತ್ರ ಕಾರ್ಯದ ಸಂಕ್ಷಿಪ್ತ ವರದಿಯನ್ನು ಅನುಬಂಧರೂಪವಾಗಿ ಕೊಡುತ್ತಿದ್ದೇನೆ.

**ಅನುಬಂಧ – ೧.** (ಮಧ್ಯ ಕರ್ನಾಟಕದಲ್ಲಿ ಕ್ಷೇತ್ರಕಾರ್ಯ)

ದಾವಣಗೆರೆಯ ಕಾರ್ಮಿಕರೇ ಹೆಚ್ಚಾಗಿರುವ ಒಂದು ಕೇರಿಯಲ್ಲಿ (೨-೧೧-೮೦ರಂದು) ಇಬ್ಬರು ಅವಿದ್ಯಾವಂತ ಅಜ್ಜಿಯರನ್ನು ಭೇಟಿ ಮಾಡಿದ್ದಲ್ಲದೆ, ಧಾರವಾಡ ಜಿಲ್ಲೆಯ ಶಿರಹಟ್ಟಿಗೆ ಹೋಗಿ ಗ್ರಹಣದ ದಿನ ಅಲ್ಲಿಗೆ ಪುಣೆಯಿಂದ ಬಂದ ಖಗೋಳ ವಿಜ್ಞಾನಿಗಳ ವೀಕ್ಷಣಾಲಯ ನೋಡಿಕೊಂಡು ಬಂದ ಒಬ್ಬರನ್ನು

(ಇವರು ಜ್ಯೋತಿಷ್ಯ ಮತ್ತು ವಿಜ್ಞಾನಗಳಲ್ಲಿ ಆಸಕ್ತರಾದವರು), ದಾವಣಗೆರೆಯಿಂದ ಪ್ರಯೋಗಾಲಯದ ಸಲಕರಣೆಗಳನ್ನು ತೆಗೆದುಕೊಂಡು ಧಾರವಾಡದ ಪ್ರದೇಶಕ್ಕೆ ಹೋಗಿ ಗ್ರಹಣವನ್ನು ವೀಕ್ಷಿಸಿದ ಭೌತವಿಜ್ಞಾನದ ಅಧ್ಯಾಪಕರೊಬ್ಬರನ್ನು ಭೇಟಿಮಾಡಿದೆ. ದಾವಣಗೆರೆಗೆ ಇಪ್ಪತ್ತೈದು ಮೈಲಿ ದೂರದ ದೊಡ್ಡಮಲ್ಲಾಪುರದಲ್ಲಿ ಇಬ್ಬರು ಪ್ರೈಮರಿ ಶಾಲಾ ಉಪಾಧ್ಯಾಯರನ್ನು, ಇಬ್ಬರು ಅವಿದ್ಯಾವಂತರನ್ನು, ಒಬ್ಬ ಅಕ್ಕಸಾಲಿಯನ್ನು ಭೇಟಿ ಮಾಡಿದೆ. (೩–೧೧–೮೦ರಂದು).

ಭೌತವಿಜ್ಞಾನದ ಉಪನ್ಯಾಸಕರು ತಮ್ಮ ವಿದ್ಯಾರ್ಥಿನಿಯರು ಗ್ರಹಣವನ್ನು ನೋಡಲು ಪ್ರೋತ್ಸಾಹಿಸಿದ್ದಕ್ಕೆ ಕೊನೆಯ ಪಕ್ಷ ಇಪ್ಪತ್ತು ವಿದ್ಯಾರ್ಥಿನಿಯರು ದಾವಣಗೆರೆಯಲ್ಲಿ ಗ್ರಹಣವನ್ನು ನೋಡಿದರು. ಉಪನ್ಯಾಸಕರು ಗ್ರಹಣ ಹಿಡಿದ ಸಮಯದಲ್ಲಿ ಬೇಕೆಂದೇ ತಿಂಡಿ ತಿಂದರು. ಸರ್ಕಾರವೇ ಗ್ರಹಣವನ್ನು ಜನ ನೋಡದಿರಲು ಪ್ರೋತ್ಸಾಹ ನೀಡಿತೆಂದೂ, ಒಂದೆರಡು ಲೇಖನಗಳನ್ನು ಬಿಟ್ಟರೆ ಗ್ರಹಣದ ಬಗ್ಗೆ ಪತ್ರಿಕೆಗಳಲ್ಲಿ ಅಷ್ಟು ಒಳ್ಳೆಯ ಬರಹಗಳು ಬರಲಿಲ್ಲವೆಂದೂ ಅವರ ಅಭಿಪ್ರಾಯ.

ಶಿರಹಟ್ಟಿಯ ವೀಕ್ಷಣಾಲಯದ ಹತ್ತಿರ ಸೇರಿದ್ದ ಜನರಲ್ಲಿ ಐವರು ಮುದುಕರು ಗ್ರಹಣ ಹಿಡಿಯುತ್ತಿದ್ದಂತೆ, 'ದೇವರಿಗೆ ಏನು ಕಷ್ಟ ಬಂತಪ್ಪ!' ಎಂದು ಬಿಕ್ಕಿ ಬಿಕ್ಕಿ ಅತ್ತರು; ಬಹುತೇಕ ಜನ ವಿಸ್ಮಯದಿಂದ ಮೂಕರಾದರು. ಅಲ್ಲಿನ ತಹಸೀಲ್‌ದಾರ್ ಮತ್ತು ಇನ್ನೊಬ್ಬ ಅಧಿಕಾರಿ ಮನೆಯ ಬಾಗಿಲು, ಕಿಟಕಿ ಹಾಕಿಕೊಂಡು ಸಂಜೆಯಾದ ಮೇಲೆ ಹೊರ ಬಂದರಂತೆ. ದಾವಣಗೆರೆಯ 'ವಿಜ್ಞಾನ ಗಂಗೋತ್ರಿ' ಎಂಬ ಹವ್ಯಾಸೀ ತಂತ್ರಜ್ಞರ ಸಂಸ್ಥೆಯ ನಿರ್ದೇಶಕರು, ಶಿರಹಟ್ಟಿಯಲ್ಲಿ ಆ ದಿನ ಗ್ರಹಣದ ಸಮಯದಲ್ಲಿ ಒಬ್ಬರಿಗೆ ರಕ್ತದ ಒತ್ತಡ ಹೆಚ್ಚಾಗಿ ವಿಚಿತ್ರವಾಗಿ ನಡೆದುಕೊಂಡದ್ದನ್ನು ಹುಣಿಸೆ ಮರಗಳ ಸಾಲಿಗೆ ಬಾವಲಿಗಳು ಬಂದು ಸೇರಿದುದನ್ನು, ಹುಳುಗಳು ಬೇಲಿಗೆ ಸೇರಿದುದನ್ನು ವರದಿ ಮಾಡಿದರು.

ಒಬ್ಬ ಗ್ರಹಣದ ಸಮಯದಲ್ಲಿ ಹತ್ತಾರು ಬಾರಿ ಮೂತ್ರ ವಿಸರ್ಜನೆ ಮಾಡಿದನಂತೆ. ಅವರು ತೆಗೆದುಕೊಂಡು ಹೋಗಿದ್ದ ಸಾಧನಗಳ ಮೂಲಕ ಗ್ರಹಣ ವೀಕ್ಷಿಸಲು ಜನ ಕುತೂಹಲ ತೋರಿದರು. ಪುಣೆಯಿಂದ ಬಂದಿದ್ದ ವಿಜ್ಞಾನಿಗಳಿಗೂ ಶಿರಹಟ್ಟಿಯ ಜನಕ್ಕೂ ಸಮಾನ ಭಾಷೆಯ ಅಭಾವದಿಂದಾಗಿ ಯಾವುದೇ ಸಂಪರ್ಕವೂ ಬರಲಿಲ್ಲವೆಂದು ತಿಳಿಸಿದರು.

ದಾವಣಗೆರೆಯ ಒಂದು ತಿಂಗಳ ಗರ್ಭಿಣಿಯೊಬ್ಬಳು–ಅವಳಿಗೇ ತಾನು

ಗರ್ಭಿಣಿ ಎಂಬುದು ಖಾತರಿಯಾಗಿರಲಿಲ್ಲ–ಗ್ರಹಣವನ್ನು ನೋಡಿದಳು ಮತ್ತು ಮುಂದೆ ಅಕ್ಟೋಬರ್ ತಿಂಗಳಲ್ಲಿ ಆರೋಗ್ಯವಂತ ಗಂಡು ಮಗುವನ್ನು ಹೆತ್ತಳು. ಆದರೆ ಗ್ರಹಣದ ದಿನ ಬಾಣಂತಿಯಾಗಿ ಆಸ್ಪತ್ರೆಯಲ್ಲಿದ್ದ ಒಬ್ಬ ತಾಯಿ ತಿಳಿಸಿದ ಪ್ರಕಾರ, ವೈದ್ಯರು ಆ ದಿನ ಬಾಣಂತಿಯರಿಗೆ ಗುಳಿಗೆ ನೀರು ಏನೂ ತೆಗೆದುಕೊಳ್ಳಬಾರದೆಂದು ಹೇಳಬೇಕೆಂದು ದಾದಿಯರಿಗೆ ಸೂಚನೆ ಕೊಟ್ಟಿದ್ದರು.

ಗ್ರಹಣದ ದಿನ ಗರ್ಭಿಣಿಯರು ಸುಮ್ಮನೆ ಮಲಗಿರಬೇಕು. ಅವರು ಈರುಳ್ಳಿ, ತರಕಾರಿ ಹೆಚ್ಚಿದರೆ ಮಗುವಿನ ತುಟಿಗಳು ಹೋಳಾಗುತ್ತವೆ; ಕಟ್ಟಿಗೆ ಕಡ್ಡಿ ಮುರಿದರೆ ಕೈಕಾಲು ಸೊಟ್ಟಾಗುತ್ತವೆ ಅಥವಾ ಮುರಿದಿರುತ್ತವೆ. (ಗರ್ಭಿಣಿ ಈರುಳ್ಳಿ ಹೆಚ್ಚಿದ್ದರಿಂದ ತುಟಿ ಹೋಳಾದ ಎರಡು ನಿದರ್ಶನಗಳನ್ನು ತಿಳಿಸಿದರು.) ಗಬ್ಬದ ದನಗಳಿಗೆ ಬರೆ ಹಾಕುತ್ತಾರೆ. ಎಲ್ಲ ದನಗಳ ಕೊಂಬುಗಳಿಗೆ ಜಾಜು (ಉರಿಮಂಜು) ಬಡಿಯುತ್ತಾರೆ. ಗಬ್ಬದ ಹಸುಗಳಿಗೆ ಕೊಂಬಿನ ಜೊತೆಗೆ ಚಪ್ಪೆಗೂ (ಹಿಂಗಾಲಿನ ಮೇಲ್ಭಾಗ) ಜಾಜು ಅಥವಾ ಉರಿಮಂಜು ಬಳಿಯುತ್ತಾರೆ.

ಫಲ ಬಿಡುವ ಎಲ್ಲ ಮರಗಳಿಗೆ (ತೆಂಗು, ನಿಂಬೆ, ಮಾವು) ಸುಣ್ಣ, ಕೆಂಪು ಬಣ್ಣದ ಮೂರು ಕಟ್ಟುಗಳನ್ನು ಬಳಿದುದಾಗಿ ಹಳ್ಳಿಯ ಒಬ್ಬ ರೈತ ತಿಳಿಸಿದುದಲ್ಲದೆ (ಚಿತ್ರ ೧೨), ತಾನು ಆ ದಿನ ತನ್ನ ತೆಂಗಿನ ಮರಕ್ಕೆ ಊರಿನ ಆಚಾರಪ್ಪ (ಅಕ್ಕಸಾಲಿ) ಮಾಡಿಕೊಟ್ಟಿದ್ದ ಪಂಚಲೋಹದ ಮೂರು ಮೊಳೆಗಳನ್ನು ತಾನೇ ಬಡಿದುದಾಗಿ ಅದೇ ರೈತ ತಿಳಿಸಿದನು. (ಬರಿಮೈಯ ಮಕ್ಕಳಿಂದ ಬಡಿಸುವುದೂ ಉಂಟು). ಆ ತೆಂಗಿನ ಮರದ ಕಾಯಿಗಳು ಮುಂಚೆ 'ಹುಸಿ'ಯಾಗುತ್ತಿದ್ದುವು. ಆಚಾರಪ್ಪನು ಮೊಳೆ, 'ಪಂಚವಾಳದ ಉಂಗುರ' ಮಾಡುವ ವಿಧಾನ ಹೀಗಿದೆ: (ಅಕ್ಕಸಾಲಿಯೇ ನನಗೆ ತಿಳಿಸಿದ್ದು)–ಗ್ರಹಣದ ಸಮಯದಲ್ಲಿ ಚಿನ್ನ, ಬೆಳ್ಳಿ, ಕಬ್ಬಿಣ, ಹಿತ್ತಾಳೆ, ತಾಮ್ರದ ಐದು ಲೋಹಗಳನ್ನು ಮನೆದೇವರಾದ ಕಾಳಿದೇವಿಯ ಮುಂದೆ ಪೂಜೆ ಮಾಡಿ, ಹೊರಗೆ ತಂದಿಟ್ಟು ಗ್ರಹಣದ ಸೂರ್ಯನಿಗೆ ತೋರಿಸಲಾಗುತ್ತದೆ. ಬಳಿಕ ಆಗಲೇ ಅಷ್ಟನ್ನೂ ಕಾಸಿ ಗಟ್ಟಿ ಮಾಡಿಕೊಂಡು, ಬೇಕಾದರೆ ಆಗಲೇ ಮೊಳೆ, ಉಂಗುರಗಳನ್ನು ಮಾಡಬಹುದು; ಅಥವಾ ಮುಂದೆ ಯಾವಾಗ ಬೇಕಾದರೂ ಆ ಗಟ್ಟಿಯಿಂದ ಮಾಡಿಕೊಳ್ಳಬಹುದು. ಮೊಳೆಗಳನ್ನು ಗ್ರಹಣದ ದಿವಸ ಮರಗಳಿಗೆ ಹೊಡೆದರೆ ಕಾಯಿಗಳು 'ಹಳ್ಳೊ' (=ಟೊಳ್ಳು) ಆಗುವುದಿಲ್ಲ, 'ಹುಸಿ'ಯೂ ಆಗುವುದಿಲ್ಲ (ಬಿದ್ದು ಹೋಗುವುದಿಲ್ಲ). ಹೆಂಗಸರು, ಗಂಡಸರು, ಮಕ್ಕಳಿಗೆ 'ಗ್ರಹಚೇಷ್ಟೆ' ಇದ್ದರೆ ಪಂಚವಾಳದ ಉಂಗುರ ಹಾಕುತ್ತಾರೆ.

ಆ ಉಂಗುರವನ್ನು ಯಾವಾಗ ಬೇಕಾದರೂ ತೆಗೆದುಕೊಂಡು ಹೋಗಿ ಹಾಕಬಹುದು. ದೆವ್ವದ ಕಾಟ, ಹಾವಿನ ಕಾಟ, ಮುಟ್ಟಿನ ದೋಷ, ಮಕ್ಕಳಾಗದಿರುವುದು, ಗರ್ಭ ನಿಲ್ಲದಿರುವುದು ಇತ್ಯಾದಿ ಯಾವುದೇ ದೋಷಗಳಿಗೂ ಅದು ಪರಿಹಾರ ಒದಗಿಸುತ್ತದೆ. ತನಗೆ ಬಂದಿದ್ದ 'ಗ್ರಹಕಾಟ' ನಿವಾರಣೆಯಾದುದಾಗಿ ಈಗಲೂ ಅಂತಹ ಉಂಗುರ ಧರಿಸಿರುವ ಗೃಹಿಣಿಯೊಬ್ಬಳು ನನಗೆ ತಿಳಿಸಿದಳು. ಎಳೆಗರುಗಳಿಗೆ ದೃಷ್ಟಿಯಾದೀತೆಂದು ಕಿವಿಗೆ ಉಂಗುರ ಚುಚ್ಚುವುದೂ ಉಂಟು.

'ಗರಣ' ಎಂದರೆ ಸೂರ್ಯನ ಎದುರಾಗಿ ಶನಿಮಹಾರಾಜ ನಿಲ್ಲುವುದು– ಎಂಬ ಕತೆಯೂ ಸ್ವಲ್ಪಮಟ್ಟಿಗೆ ಪ್ರಚಾರದಲ್ಲಿದೆ. ಮತ್ತು ಶನಿಯು ಸೂರ್ಯ 'ಚಾಯದೇವಿ' (ಛಾಯಾದೇವಿ)ಯರ ಮಗನೆಂಬ ಕಲ್ಪನೆಯೂ ಇದೆ. ಆದರೆ, ರಾಹು ಸೂರ್ಯರ ಕತೆಯೇ ಸಾಮಾನ್ಯವಾಗಿ ಪ್ರಚಾರದಲ್ಲಿರುವುದು.

ಇಬ್ಬರು ಪ್ರೈಮರಿ ಶಾಲಾ ಉಪಾಧ್ಯಾಯರನ್ನು ಬಿಟ್ಟರೆ, ಉಳಿದ ಯಾರಿಗೂ ಗ್ರಹಣದಿಂದ ಮುಂದೆ ಕೆಟ್ಟ ಪರಿಣಾಮವಾಗುತ್ತದೆ ಎಂಬ ಬಗ್ಗೆ ಯೋಚನೆಗಳೇ ಇಲ್ಲ. ಆದರೆ ಎಲ್ಲರಿಗೂ ರೇಡಿಯೋ, ಪೇಪರ್ ಪ್ರಚಾರದಿಂದ ಕಣ್ಣಿನ ಭಯವಾಗಿತ್ತು. ಗಂಟೆ ಗಂಟೆಗೆ 'ನೋಡಬೇಡಿ' ಎಂದು ರೇಡಿಯೋ ಹೇಳುತ್ತಿದ್ದರೆ ಹಳ್ಳಿಯವರು ಏನು ಮಾಡಿಯಾರು? ಹಿಂದಿನ ಯಾವುದೇ ಸೂರ್ಯಗ್ರಹಣಗಳಲ್ಲೂ ಜನ ಹೆದರಿರಲಿಲ್ಲ; ಗ್ರಹಣ ಎನ್ನುವುದು ಸೂರ್ಯನಿಗೆ ಬರುವ ವಿಪತ್ತು, ಆ ಸಮಯದಲ್ಲಿ ಒದಗಬಹುದಾದ ಅನಿಷ್ಟವನ್ನು ಸ್ನಾನ, ಪೂಜಾದಿಗಳ ಮೂಲಕ ಪರಿಹರಿಸಿಕೊಂಡರೆ ಅಲ್ಲಿಗೆ ಮುಗಿಯಿತು ಎನ್ನುವ ಭಾವನೆಗಳೇ ಹಿಂದೆ ಇದ್ದುದು. ಕಣ್ಣಿಗೆ ಹೆದರಿ ಮನೆಯ ಒಳಗೆ ಉಳಿದಿದ್ದುದು ಈ ಗ್ರಹಣದಲ್ಲಿ ಮಾತ್ರ ಎಂದರು. ಹಳ್ಳಿಯ ಕೆಲವು ವಿದ್ಯಾವಂತ ಹುಡುಗರು ಮಾತ್ರ ಫಿಲ್ಮ್ ಇತ್ಯಾದಿ ಸಲಕರಣೆಗಳ ಮೂಲಕ ಗ್ರಹಣ ನೋಡಿದರು.

ದಾವಣಗೆರೆ ಪಟ್ಟಣದಲ್ಲಿ ನೀರು ಸರಬರಾಜಾಗುವ ದೊಡ್ಡ 'ಟ್ಯಾಂಕಿಗೆ' ಒಂದು ಹೊರೆ ಕರಿಕೆ, ಪತ್ರೆ ಹಾಕಿದ್ದರು. ಹಳ್ಳಿಗಳಲ್ಲಿ ಬಾವಿಗಳಿಗೆ ಅಂತಹ ಸಂಸ್ಕಾರವನ್ನೇನೂ ಮಾಡಿರಲಿಲ್ಲ.

ಒನಕೆ ಪ್ರಯೋಗ ಇಲ್ಲೂ ಉಂಟು. ಬೀಸುವ ಕಲ್ಲನ್ನು ನಿಲ್ಲಿಸುವ ಪದ್ಧತಿಯೂ ಇದೆ. ಬೀಸುವ ಕಲ್ಲಿನ ನೇಮಿ, ಎಂದರೆ ಅದರ ದುಂಡನೆಯ ಸುತ್ತುಭಾಗ ನೆಲದ ಮೇಲೆ ನಿಂತಿರುತ್ತದೆ; ಗೂಟ ನೆಲಕ್ಕೆ ಸಮಾನಾಂತರವಾಗಿರುತ್ತದೆ. ಈ ಪ್ರಯೋಗಗಳು ನಿಜವೆಂದೇ ಎಲ್ಲ ನಂಬಿದ್ದಾರೆ.

ಭೂತ ಪ್ರೇತಗಳನ್ನು ಒಲಿಸಿಕೊಳ್ಳುವುದು, ಹಾವಿನ ಮಂತ್ರ, ಚೇಳಿನ ಮಂತ್ರಗಳನ್ನು ಒಲಿಸಿಕೊಳ್ಳುವುದೂ ಗ್ರಹಣಕಾಲದಲ್ಲೇ. ಮೋಡಿ ಹಾಕುವವರು ಮತ್ತು ಸುಡುಗಾಡು ಸಿದ್ಧರು ಶಕ್ತಿಗಳನ್ನು ಒಲಿಸಿಕೊಳ್ಳುವ ರೀತಿಯ ಬಗ್ಗೆ ಒಂದು ಭಯಾನಕ ಕತೆಯಿದೆ. ಈಚೆಗೆ ಸತ್ತ ಬಾಣಂತಿಯರ ಸಮಾಧಿಗಳಿಗೆ ಗ್ರಹಣದ ದಿನ ಪೂಜೆ ಮಾಡಿದರೆ ಬಾಣಂತಿಯ ಹೆಣ ಎದ್ದು ಬಂದು ತಾನೇ ಕೈ ಚಾಚುತ್ತದೆ. ಅದನ್ನು ಕಡಿದು ತಮ್ಮ ಬಳಿ ಇಟ್ಟುಕೊಂಡರೆ ಶಕ್ತಿಗಳು ವಶವಾಗುತ್ತವೆ. ಅದಕ್ಕಾಗಿ, ಗ್ರಹಣಕ್ಕೆ ಮುಂಚೆ ಸತ್ತ ಬಾಣಂತಿಯರ ಸಮಾಧಿಗಳನ್ನು ಅವರ ಬಂಧುಗಳು ಕಾವಲಿದ್ದು ಅವನ್ನು ಯಾರೂ ಅಗೆಯದಂತೆ ನೋಡಿಕೊಳ್ಳುತ್ತಿದ್ದ ಬಗ್ಗೆ ಉದಾಹರಣೆಗಳಿವೆಯೆಂದು ತಿಳಿಸಿದರು.

ಕೆಲವರು ಗ್ರಹಣದ ದಿನ ಅಕ್ಕಿ ಬೆಲ್ಲ ಪೂಜೆ ಮಾಡಿ ಹಸುವಿಗೆ ತಿನ್ನಿಸುತ್ತಾರೆ. ಪೇಟೆಗಳಲ್ಲಿ ಕೆಲವರು ಬ್ರಾಹ್ಮಣರಿಗೆ ಮನೆಯ ಮಕ್ಕಳಿಂದ ಒಂದೊಂದು ಹಿಡಿ ಅಕ್ಕಿ ಸಮೇತ ದಕ್ಷಿಣೆ ಕೊಡಿಸುತ್ತಾರೆ. ಎಲ್ಲೂ ಬ್ರಾಹ್ಮಣರಲ್ಲದೆ ಬೇರೆ ಮತ, ಜಾತಿಗಳ ಪುರೋಹಿತರಿಗೆ ದಾನಗಳು ಇಲ್ಲ.

## ಅನುಬಂಧ – ೨ (ಬೆಳಗಾಂ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ)

ಬೆಳಗಾಂನಲ್ಲಿ ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳಲ್ಲಿ ಶೇಕಡ ಎಪ್ಪತ್ತರಷ್ಟು ಜನ ನೋಡಿದರೂ, ಇನ್ನೂ ಶೇಕಡ ಮೂವತ್ತರಷ್ಟು ಜನ ಒಳಗೆ ಕೂತಿದ್ದರು. ಸರ್ಕಾರವೇ ರೇಡಿಯೋ ಮೂಲಕ ಮೇಲಿಂದ ಮೇಲೆ ಪ್ರಸಾರ ಮಾಡುತ್ತಿರುವಾಗ ತಮ್ಮ ಪತ್ರಿಕೆಯಲ್ಲಿ ಗ್ರಹಣದ ಬಗ್ಗೆ ಎಚ್ಚರವನ್ನು ಹಾಕದೇ ಇರಲು ಸಾಧ್ಯವೇ ಇರಲಿಲ್ಲ ಎಂದು ಅಲ್ಲಿನ ಒಂದು ಕನ್ನಡ ಪತ್ರಿಕೆಯ ಸಂಪಾದಕರು ತಮ್ಮ ನಿಸ್ಸಹಾಯಕತೆಯನ್ನು ವ್ಯಕ್ತಪಡಿಸಿದರು.

ಬೆಳಗಾವಿ ನಗರಕ್ಕೆ ಐದು ಕಿಲೋಮೀಟರ್ ದೂರದ ಕಣಬರಗಿ ಗ್ರಾಮದಲ್ಲಿ ಕುಲಕರ್ಣಿಗಳ ಮನೆಯಲ್ಲಿ ಇಬ್ಬರು ಗ್ರಾಮಸ್ಥರನ್ನು ಭೇಟಿ ಮಾಡಿದೆ. (೧–೧೧–೯೮೦ರಂದು). ಮಾರನೆಯ ದಿನ ರೈಲಲ್ಲಿ ಧಾರವಾಡ ಪ್ರದೇಶದ ಮೂವರನ್ನು ಭೇಟಿ ಮಾಡಿದೆ. ಕಣಬರಗಿಯ ಕುಲಕರ್ಣಿಗಳು, ತಂದೆ ಮಗ ಇಬ್ಬರೂ ವಿದ್ಯಾವಂತರು ಮತ್ತು ಗ್ರಹಣದ ದಿನ ಇಡೀ ಸಂಸಾರ ಸಮೇತ ಗೋಕರ್ಣಕ್ಕೆ ಶಿವರಾತ್ರಿ, ಸಂಕ್ರಾಂತಿ ಮತ್ತು ಪೂರ್ಣ ಸೂರ್ಯಗ್ರಹಣಗಳು ಒಟ್ಟಿಗೆ ಬಂದುದರಿಂದ ಹೋಗಿದ್ದರು.[೨] ಆ ದಿನ ಪವಿತ್ರ ಕ್ಷೇತ್ರವಾದ ಗೋಕರ್ಣದಲ್ಲಿ ಎಷ್ಟೋ ಜನ ಸಮುದ್ರಸ್ನಾನವನ್ನು ಮಾಡಿದರು (ಚಿತ್ರ ೧೩); ತರ್ಪಣಾದಿಗಳನ್ನು

ಕೊಟ್ಟರು (ಚಿತ್ರ ೧೪) ಎಂದು ತಿಳಿಸಿದರು. ಗೋಕರ್ಣದ ಸಮುದ್ರದ ದಡದಲ್ಲಿ ಜಪ ಮಾಡುತ್ತಿರುವ ಒಬ್ಬ ಭಾರತೀಯನ ಚಿತ್ರ (ಚಿತ್ರ ೧೫), ಒಬ್ಬ ಪಾಶ್ಚಾತ್ಯ ಮಹಿಳೆಯ ಚಿತ್ರಗಳೂ ಗಮನಾರ್ಹ (ಚಿತ್ರ ೧೬). ಆ ದಿನ ವಿಜ್ಞಾನಿಗಳು, ಪ್ರವಾಸಿಗರು, ಯಾತ್ರಾರ್ಥಿಗಳು, ಕುತೂಹಲಿಗಳು ಬಹು ಸಂಖ್ಯೆಯಲ್ಲಿ ಬರುವರೆಂದು ನಿರೀಕ್ಷಿಸಿ ಭಿಕ್ಷುಕರೂ ಸಾಕಷ್ಟು ಸಂಖ್ಯೆಯಲ್ಲಿ ಗೋಕರ್ಣಕ್ಕೆ ಬಂದು ಸೇರಿದ್ದರು (ಚಿತ್ರ ೧೭) ಮತ್ತು ಸನ್ಯಾಸಿಗಳು ಅಲ್ಲಿಗೆ ಬಂದಿದ್ದರು (ಚಿತ್ರ ೧೮). (ಬೆಳಗಾವಿಯಲ್ಲಿ ಕಾಣಿಸಿದ್ದು ಶೇಕಡ ಎಂಬತ್ತರಷ್ಟು ಗ್ರಹಣ ಮಾತ್ರ). ಬೆಳಗಾವಿ ಕಡೆ ಗ್ರಹಣದ ದಿನ ಶಾಂತಿ ಕಾರ್ಯದ ಹೋಮಗಳು ಇಲ್ಲ. ಹಿಂದೆ ಬ್ರಾಹ್ಮಣರಿಗೆ ವಿಶೇಷವಾಗಿ ಬಟ್ಟೆಗಳನ್ನು ದಾನಕೊಡಲಾಗುತ್ತಿತ್ತು. ಈಗ ಆ ಪದ್ಧತಿ ನಿಂತುಹೋಗಿದೆ. ಆದರೆ, ಅಥಣಿ ಮತ್ತು ಇನ್ನೂ ಉತ್ತರದ ಮಹಾರಾಷ್ಟ್ರದಲ್ಲಿ ಗ್ರಹಣ ಬಿಡುತ್ತಿದ್ದಂತೆಯೇ "ಗ್ರಹಣ ಬಿಟ್ಟಿತು, ದಾನ ಕೊಡಿ" ಎಂದೂ ಮರಾಠಿಯಲ್ಲಿ "ಭುಟೇ ಗಿರನ್, ದೇದೊ ದಾನ್" ಎಂದೂ ಕೂಗುತ್ತ ಭಿಕ್ಷುಕರು ಮನೆಮನೆಗೆ ಬರುತ್ತಾರೆ.

ಗ್ರಾಮಸ್ಥರಲ್ಲಿ ಒಬ್ಬ ಅವಿದ್ಯಾವಂತ ರೈತ, ಇನ್ನೊಬ್ಬರು ನಿವೃತ್ತ ಉಪಾಧ್ಯಾಯರು. ಇಬ್ಬರದೂ ಮರಾಠಿ ಮನೆಮಾತಾದರೂ ಕನ್ನಡವನ್ನು ಸಹಜವಾಗಿ ಮಾತನಾಡುತ್ತಾರೆ. ವೃತ್ತ ಪತ್ರಿಕೆ, ರೇಡಿಯೋ ಪ್ರಚಾರಗಳಿಂದ ಗ್ರಹಣವನ್ನು ಊರಲ್ಲಿ ಯಾರೂ ನೋಡಲೇ ಇಲ್ಲ. ಕೆಲವರಂತೂ ಊರ ಪಕ್ಕದ ರಾಮತೀರ್ಥ ದೇವಾಲಯದ ಒಳಗೆ ಸ್ನಾನ ಮಾಡಿ ಗ್ರಹಣ ಮುಗಿಯುವವರೆಗೆ 'ಗಪ್' ಅಂತ ಕೂತಿದ್ದರು.

ಕಣ್ಣಿನ ಭಯ ಬಿಟ್ಟರೆ ಉಳಿದಂತೆ ಯಾವ ಭಯವೂ ಇರಲಿಲ್ಲ ಮತ್ತು ಗ್ರಹಣಾನಂತರದ ವಿಪರೀತ ಪರಿಣಾಮದ ಬಗ್ಗೆಯೂ ಯಾರಿಗೂ ಏನೂ ಕಲ್ಪನೆಗಳೇ ಇರಲಿಲ್ಲ. ಅವಿದ್ಯಾವಂತ ರೈತ ಗ್ರಹಣವೆಂದರೆ ಸೂರ್ಯನಿಗೆ ಚಂದ್ರ ಮರೆಯಾಗುವುದು ಎಂದು ಹೇಳಿದರೆ, ನಿವೃತ್ತ ಉಪಾಧ್ಯಾಯರು ರಾಹು ಸೂರ್ಯನನ್ನು ನುಂಗುತ್ತದೆ ಎಂದು ಹೇಳಿದರು. ಆ ದಿನ ದನಕರುಗಳು ಯಾವುದನ್ನೂ ಹೊರಗೆ ಬಿಟ್ಟಿರಲಿಲ್ಲ. ಗ್ರಹಣದ ದಿನ ಗರ್ಭಿಣಿ ಹೊರಬಂದರೆ ಮಗುವಿನ ಮೈ ಮೇಲೆ ಕಲೆ ಆಗುತ್ತದೆ. ಧಾರವಾಡದ ಒಬ್ಬ ಮಾಸ್ತರರ ಮನೆಯ ಮಗುವಿಗೆ ಹಾಗೆ ಕಲೆ ಆಗಿದೆಯಂತೆ. ಸೂರ್ಯ ಚಂದ್ರ ಗ್ರಹಣಗಳಂದು ಒನಕೆ ನಿಲ್ಲಿಸುವ ಪ್ರಯೋಗದ ಬಗ್ಗೆ ಎಲ್ಲರಿಗೂ ನಂಬಿಕೆಯಿದೆ. ಆಳ್ನಾವರದ (ಧಾರವಾಡ ಜಿಲ್ಲೆ) ಆಯುರ್ವೇದ ವೈದ್ಯರು ಹಿಂದೆ ಸೂಜಿಯನ್ನೂ ನಿಲ್ಲಿಸಿದ್ದೇವೆ ಎಂದರು.

ಗ್ರಹಣದ ಸಮಯ ಹಿಂದೆ ಹಾಲು, ಮೊಸರನ್ನು ಚೆಲ್ಲಿಬಿಡುತ್ತಿದ್ದರು. ಈಗ ಚೆಲ್ಲುವುದಿಲ್ಲ. ಬ್ರಾಹ್ಮಣರು ಮಾತ್ರ ಅವಕ್ಕೆ ತುಲಸಿ ಹಾಕಿಡುತ್ತಾರೆ. ಗಿಡಗಳು ಫಲ ಕೊಡಬೇಕೆಂದು ಬಟ್ಟೆ ಇಲ್ಲದ ಮಕ್ಕಳು ಮರಗಳಿಗೆ ಕೊಡಲಿ ಅಥವಾ ಮಚ್ಚಿನಿಂದ ಕಚ್ಚು ಹಾಕುತ್ತಾರೆ. ಮಂತ್ರ, ತಂತ್ರ ಕಲಿಯುವವರಿಗೆ ಆ ದಿನ ಪ್ರಶಸ್ತವೆಂಬ ನಂಬಿಕೆ ಇದೆ. ಧಾರವಾಡದ ಕಡೆ, 'ಸಪ್ತಧಾತು'ಗಳನ್ನು[೮] ಸೂರ್ಯನಿಗೆ ತೋರಿಸಿ ಉಂಗುರ ಮಾಡಿ ಪೈಲ್ಸ್ ರೋಗದವರಿಗೆ ಹಳ್ಳಿಯಲ್ಲಿ ಹಾಕುತ್ತಾರೆಂದು ಆಯುರ್ವೇದ ತಿಳಿಸಿದರು. ದನಗಳಿಗೆ ರೋಗ ಬಂದರೆ, ಅಂತಹ ಉಂಗುರದಿಂದ ಬರೆ ಕೊಡುತ್ತಾರೆ. ಫಲ ಬಿಡದ ಮರಗಳಿಗೆ ಮೊಳೆ ಹೊಡೆಯುವ ಪದ್ಧತಿ ಧಾರವಾಡ ಕಡೆ ಇರುವಂತಿಲ್ಲ.

ಬ್ರಾಹ್ಮಣರು ಗ್ರಹಣದ ಸಮಯದಲ್ಲಿ ತಾವು ಸ್ನಾನಮಾಡಿ ದೇವತಾ ಮೂರ್ತಿಗಳನ್ನು ನೀರಲ್ಲಿಟ್ಟು, ಗ್ರಹಣ ಬಿಟ್ಟ ಮೇಲೆ ತಾವು ಸ್ನಾನಮಾಡಿ ದೇವತಾ ಮೂರ್ತಿಗಳನ್ನು ಹೊರತೆಗೆದು ಪ್ರತಿಷ್ಠಾಪಿಸಿ ಪೂಜೆ ಮಾಡುತ್ತಾರೆ. ಈ ಪದ್ಧತಿ ಉತ್ತರ ಕನ್ನಡ ಜಿಲ್ಲೆಯಲ್ಲೂ ಉಂಟು.

### ಅನುಬಂಧ – ೩. (ಬಿಜಾಪುರ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ)

ಬಿಜಾಪುರ ಜಿಲ್ಲೆಯಲ್ಲೂ ಒನಕೆ ನಿಲ್ಲಿಸುವ ಪ್ರಯೋಗ, ಗ್ರಹಣದ ದಿನದಂದು ಮಾಟಮದ್ದುಗಳನ್ನು ಕಲಿಯುವವರು ನೀರಲ್ಲಿ ನಿಂತು ಸಾಧನೆ ಮಾಡುವುದು, ಆ ದಿನ ಗರ್ಭಿಣಿಯರು ಕೆಲಸ ಮಾಡಿದರೆ ಮಕ್ಕಳ ತುಟಿಗಳು ಹರಿಯುವುವು ಎಂಬ ನಂಬಿಕೆ ಇರುವುದು ಇವೂ ಕಂಡುಬಂದಿವೆ. ತೊರವೆ ಗ್ರಾಮದ ಕೆಲವು ಅವಿದ್ಯಾವಂತ ಜನಕ್ಕೆ ಗ್ರಹಣವೆಂದರೆ ಏನು ಎಂಬುದೇ ತಿಳಿಯದು. ಸೂರ್ಯನಿಗೆ ಏನೋ ತೊಂದರೆ ಎಂಬುದಷ್ಟೇ ಗೊತ್ತು. ಗ್ರಹಣದ ದಿನ ಅವರು ಹೊಲಗಳಲ್ಲಿ ಕೆಲಸಮಾಡಿದ್ದುಂಟು. ಗೊಡ್ಡು ಮರಗಳಿಗೆ ಮೊಳೆ ಹೊಡಿಸುವ ಕೆಲಸ ಗ್ರಹಣಗಳಂದೇ ಅಲ್ಲ, ಯಾವುದೇ ದಿನವೂ ಅದನ್ನು ಮಾಡಿಸಬಹುದು ಎಂದು ತೊರವೆ ಗ್ರಾಮದ ಬ್ರಾಹ್ಮಣರು ಹೇಳಿದರು.

ರೈಲಲ್ಲಿ ನಾನು ಮಾತನಾಡಿಸಿದ ಬಿಜಾಪುರ ಜಿಲ್ಲೆಯ ಮೂವರು ರೈತರು (ಇಬ್ಬರು ಬೇಡ ಜಾತಿಯವರು, ಒಬ್ಬಳು ವೀರಶೈವ ಮಹಿಳೆ) ರೇಡಿಯೋದಲ್ಲಿ 'ನೀವು ಗ್ರಹಣ ನೋಡಬೇಡಿ, ಮಕ್ಕಳಿಗೂ ತೋರಿಸಬೇಡಿ' ಎಂದು ಪದೇ ಪದೇ ಹೇಳಿದ್ದರಿಂದ ತಾವು ಆ ದಿನ ಗ್ರಹಣ ನೋಡಲಿಲ್ಲವೆಂದರು. ಮರಗಳಿಗೆ ಮೊಳೆ ಹೊಡೆಸುವ ವಿಷಯ ಅವರಿಗೆ ಗೊತ್ತೇ ಇಲ್ಲ.

**ಅನುಬಂಧ – ೪** (ಕುಣಿಗಲ್ ತಾಲೂಕಿನಲ್ಲಿ ಸೂರ್ಯಗ್ರಹಣದ ದಿನ ಬಲಿ)

ಅಂದು ಆಯಾ ಊರುಗಳಲ್ಲಿ ರಾಸುಗಳನ್ನು ಇಟ್ಟಿರುವವರು (ಅಂದರೆ ಕುರಿ, ಮೇಕೆ ಸಾಕಿರುವವರು) ಒಂದು ಕಡೆ ಸೇರಿ, ತಮ್ಮ ತಮ್ಮ ಕೈಲಾದಷ್ಟು ಹಣ ಹಾಕಿ ಒಂದು ಮೇಕೆಯನ್ನು (ಆಡು) ಕೊಂಡುಕೊಳ್ಳುತ್ತಾರೆ. ಅದನ್ನು ಪೂರ್ವಕ್ಕೆ ಮುಖ ಮಾಡಿ ನಿಲ್ಲಿಸಿ ಬಲಿಕೊಡುತ್ತಾರೆ. ನಂತರ ಅದನ್ನು ಕೊಯ್ದು ಅದರ ಕರುಳಿನಲ್ಲಿರುವ ಕಸರೆಯನ್ನು ಹೊರತೆಗೆಯುತ್ತಾರೆ. ಅದನ್ನು ಒಂದು ಬುಟ್ಟಿಗೆ ತುಂಬಿಕೊಂಡು ಊರ ಮುಂದಕ್ಕೆ ಬರುತ್ತಾರೆ.

"ಆವುಗೆ ಬೂದಿ" (ಕುಂಬಾರರು ಮಡಿಕೆ ಬೇಯಿಸುವ ಒಲೆಯ ಬೂದಿ), "ಕುಲುಮೆ ಬೂದಿ" (ಕಮ್ಮಾರರು ಉಪಕರಣಗಳನ್ನು ಕಾಯಿಸುವ ಒಲೆಯ ಬೂದಿ) ಮತ್ತು "ಉಬ್ಬೆ ಬೂದಿ" (ಅಗಸರು ಬಟ್ಟೆ ಬೇಯಿಸುವ ಒಲೆಯ ಬೂದಿ) ಈ ಮೂರು ತರಹದ ಬೂದಿಯನ್ನು ಊರ ಚಾವಡಿಯ ಮುಂದೆ ಸುರಿಯುತ್ತಾರೆ. ಈ ಬೂದಿ ಜೊತೆಗೆ ಮೇಕೆಯ ಕಸರೆಯನ್ನು ಬೆರಸಿ ನೆಲದಲ್ಲಿ ಹರಡುತ್ತಾರೆ. ನಂತರ ಸೂರ್ಯಗ್ರಹಣವಾಗುವ ಕಾಲದವರೆಗೆ ಹಾಗೇ ಇಟ್ಟುಕೊಂಡು ಕಾಯುತ್ತಿರುತ್ತಾರೆ. ಸೂರ್ಯಗ್ರಹಣ ಸಮೀಪಿಸುತ್ತಿದ್ದಂತೆ 'ರಾಸು' ಇರುವ ಮನೆಗಳವರಿಗೆ ಆ ಮಿಶ್ರವಸ್ತುವನ್ನು ಹಂಚುತ್ತಾರೆ. ಸೂರ್ಯಗ್ರಹಣ ಹಿಡಿದಾಗ ಆಯಾ ಮನೆಗಳವರು ಕುರಿ, ಮೇಕೆ ಕೂಡುವ ಕೊಟ್ಟಿಗೆಗಳಲ್ಲಿ ಅದನ್ನು ಎರಚುತ್ತಾರೆ. ಹಾಗೂ ಕುರಿ ಮೇಕೆಗಳ ಮೇಲೆಯೂ ಎರಚುತ್ತಾರೆ.

ಈಗಾಗಲೇ ಕೊಯ್ದಿದ್ದ ಮೇಕೆಯ ಮಾಂಸವನ್ನು ಎಲ್ಲ ಮನೆಗಳಿಗೂ ಸ್ವಲ್ಪ ಸ್ವಲ್ಪ ಹಂಚುತ್ತಾರೆ. (ಗ್ರಹಣಕ್ಕೆ ಬಲಿ ಕೊಡಬೇಕಾದರೆ ಮೇಕೆಯನ್ನು ಮಾತ್ರ ಬಲಿ ಕೊಡುತ್ತಾರೆಯೇ ಹೊರತು ಕುರಿಯನ್ನು ಕೊಡುವುದಿಲ್ಲ). ಎಲ್ಲರ ಮನೆಯಲ್ಲೂ ಆ ಮಾಂಸದ ಅಡುಗೆ ಮಾಡಿ ಪ್ರಸಾದದರೀತಿಯಲ್ಲಿ ಊಟ ಮಾಡುತ್ತಾರೆ.

ಈ ಆಚರಣೆ ಒಕ್ಕಲಿಗರಲ್ಲಿ ಮತ್ತು ಇತರ ಕೆಳಜಾತಿಯವರಲ್ಲಿ ರೂಢಿಯಲ್ಲಿದೆ.

### ಅಡಿಟಿಪ್ಪಣಿಗಳು

೧. ಶಿವಮೊಗ್ಗೆಯಲ್ಲಿ ಗ್ರಹಣಕ್ಕೆ ಮುನ್ನ ಇದೊಂದು ಉಗ್ರವಾದ ಗ್ರಹಣವೆಂದೂ, ಇನ್ನೆಂದೂ ಒದಗದ ವಿಪತ್ತು ಪ್ರಪಂಚಕ್ಕೆ ಒದಗಲಿದೆಯೆಂದೂ ಜನ ಹೆದರಿಸಿದುದು ಮಾತ್ರವಲ್ಲದೆ, 'ವಿದ್ವನ್ಮಣಿ'ಗಳಿಂದ ಭಾಷಣಗಳೂ ನಡೆದುವು

ಮತ್ತು ಗ್ರಹಣಕ್ಕೆ ಮುನ್ನ 'ಋಕ್ ಸಂಹಿತೆ' ಎಂಬ ಮಹಾ ದೊಡ್ಡ ಯಾಗವನ್ನು ಬಹುಶಃ ಗಣಪತಿ ದೇವಾಲಯದಲ್ಲಿ ಒಂಬತ್ತು ದಿನ ಭಯ ಭಕ್ತಿಗಳಿಂದ ಮಾಡಿದರು. ಹಿರಿಯರು ಗ್ರಹಣ ನೋಡಬಾರದೆಂದು ಎಚ್ಚರಿಸುತ್ತಿದ್ದರು. "ಪತ್ರಿಕೆಯವರು ಗ್ರಹಣವನ್ನು ಯಾವ ಉಪಕರಣದಿಂದ ನೋಡಿದರೂ ಕಣ್ಣು ಹೋಗುತ್ತದೆ" ಎಂದು ಹೆದರಿಸಿದ್ದರು; ಈ ಅಬ್ಬರದ ಪ್ರಚಾರಕ್ಕೆ ಭಯವಾಯಿತು–ಇದು ಒಬ್ಬ ವಿದ್ಯಾರ್ಥಿಯ ಪ್ರತಿಕ್ರಿಯೆ. ಪತ್ರಿಕೆಯವರು ಹಾಗೆ ಹೇಳಿರದಿದ್ದರೂ, ಒಟ್ಟಾರೆ ಜನದ ಮನಸ್ಸಿನ ಮೇಲೆ ಮೂಡಿದ ಪರಿಣಾಮ ಹೀಗೂ ಇತ್ತು.

೨. ಉತ್ತರಗಳನ್ನು ಸಂಗ್ರಹಿಸಿದಾಗ ಇರಾನ್ ಇರಾಕ್ ಯುದ್ಧ ಆರಂಭವಾಗಿರಲಿಲ್ಲ.

೩. ಮುಸ್ಲಿಂ ಅವಿದ್ಯಾವಂತ ಮಹಿಳೆಯೊಬ್ಬಳು ಊಟ ಮಾಡಿರುವುದಾಗಿ ಹೇಳಿದ್ದರೂ, ಪ್ರಶ್ನಾವಳಿಯ 'ಮಧ್ಯಾಹ್ನ' ಎಂಬುದನ್ನು ತಪ್ಪು ತಿಳಿದಿರುವಂತಿದೆ; ಆಕೆ ಮಧ್ಯಾಹ್ನ ಗ್ರಹಣಕ್ಕೆ ಮೊದಲು ಊಟ ಮಾಡಿರಬಹುದು. ವಿಚಾರಿಸಿದ್ದರಲ್ಲಿ, ಗ್ರಹಣದ ವಿಷಯದಲ್ಲಿ ಪ್ರತಿಕ್ರಿಯೆ ತೋರುವಲ್ಲಿ ಹಿಂದೂ ಮುಸ್ಲಿಮರಿಗೆ ಭೇದವಿಲ್ಲ. ಮುಸ್ಲಿಂ ಮಹಿಳೆಯರು ಗರ್ಭಿಣಿಯರಿದ್ದಲ್ಲಿ ಅವರು ಒಳಗೆ ಕೆಲಸ ಮಾಡದೆ ಸುಮ್ಮನೆ ಇದ್ದು ಬಿಡುತ್ತಾರೆ. ಗ್ರಹಣದ ಸಮಯದಲ್ಲಿ ಮುಸ್ಲಿಂ ಪುರುಷರು ನಮಾಜಿಗೆ ಹೋಗಿದ್ದರೆ, ಸ್ತ್ರೀಯರು ಮನೆಯಲ್ಲಿ ಪ್ರಾರ್ಥನೆ ಮಾಡುತ್ತಾರೆ. ವಿದ್ಯಾವತಿಯರಾಗಿದ್ದರೆ ಕೊರಾನ್ ಓದುತ್ತಾರೆ.

೪. ನಾನು ಪ್ರಶ್ನಾವಳಿಯಿಟ್ಟುಕೊಳ್ಳದೆ, ಆಮೇಲೆ ಮಾತನಾಡಿಸಿದ ನೂರಕ್ಕೂ ಮೇಲ್ಪಟ್ಟು ಅವಿದ್ಯಾವಂತರಲ್ಲಿ, ಬಹಳ ಜನ ಗ್ರಹಣವು ದೇಶದ ಮುಂದಿನ ಆಗುಹೋಗುಗಳ ಮೇಲೆ ಏನಾದರೂ ಪರಿಣಾಮ ಉಂಟುಮಾಡುವುದೇ ಎಂಬ ಪ್ರಶ್ನೆಯನ್ನು ಅಸಡ್ಡೆಯಾಗಿ ಕಂಡರು. ಅವರಿಗೆ ಅಂತಹ ಪರಿಣಾಮ ಆಗುವುದೆಂಬ ಕಲ್ಪನೆಯಾಗಲಿ ಭಯವಾಗಲಿ ಇರಲಿಲ್ಲ.

೫. ದುರ್ಯೋಧನ ಭೀಮನಿಂದ ತೊಡೆ ಮುರಿದು ಬಿದ್ದಾಗ, ಚಕ್ರವರ್ತಿಯ ಸಾವನ್ನು ತಿಳಿಸುವ ಉತ್ಪಾತಗಳಾಗುತ್ತವೆ. ಆಗ ಸೂರ್ಯನ ಜೊತೆ ಏಳು ಗ್ರಹಣಗಳು ಸೇರಿಕೊಂಡುವು ಎಂದು ಕುಮಾರವ್ಯಾಸ ಹೇಳುವಾಗ ಸ್ಪಷ್ಟವಾಗಿ ಅಷ್ಟಗ್ರಹ ಕೂಟವನ್ನೇ ಸೂಚಿಸುತ್ತಾನೆ. (ಕುಮಾರವ್ಯಾಸ ಭಾರತ. ಗದಾಪರ್ವ, ೮.೪)

ಬೀಸಿದುದು ಬಿರುಗಾಳಿ ಕತ್ತಲೆ
ಸೂಸಿದುದು ದಿಗುವಳಯದಲಿ ಪರಿ
ವೇಷದಲಿ ಗ್ರಹ ನೆರೆದವೈದಾರೇಳು ರವಿಯೊಡನೆ॥



ಚಿತ್ರ ೧೬. ಸಮುದ್ರತೀರದಲ್ಲಿ ಧ್ಯಾನಾಸಕ್ತ (?) ಯೂರೋಪ್ ತರುಣಿ



ಚಿತ್ರ ೧೭. ಗೋಕರ್ಣದಲ್ಲಿ ಭಿಕ್ಷುಕರು




ಚಿತ್ರ ೧೮. ಗೋಕರ್ಣದಲ್ಲಿ ಸನ್ಯಾಸಿಗಳು (ಗೋಡೆಮೇಲಿನ 'ಆರತಿಗೊಬ್ಬ ಮಗಳು' ಎಂಬ ಕುಟುಂಬ ಯೋಜನೆ ಘೋಷಣೆಯಲ್ಲಿ 'ರತಿಗೊಬ್ಬಮ' ಅಷ್ಟೇ ಕಾಣಿಸುತ್ತಿರುವುದು, ಅದೂ ಸನ್ಯಾಸಿಗಳ ಹಿನ್ನೆಲೆಯಲ್ಲಿ, ಸ್ವಾರಸ್ಯವಾಗಿದೆ)




ಚಿತ್ರ ೧೯. ಬೆಂಗಳೂರಲ್ಲಿ 'ಸೂರ್ಯಗ್ರಹಣ ಅದ್ಭುತಮಹಾಶಾಂತಿಮಹೋತ್ಸವ'; ಪೂರ್ಣಾಹುತಿ




ಚಿತ್ರ ೨೦. 'ಪ್ರಜಾವಾಣಿ'ಯ (೧೭–೨–೮೦) ಮುಖ ಪುಟ





ಚಿತ್ರ ೨೧. – ಪೂರ್ಣ ಸೂರ್ಯಗ್ರಹಣದ ಹಿನ್ನೆಲೆಯಲ್ಲಿ ಕೊನಾರಕ್ ದೇವಾಲಯ ('ಗ್ರಹಣಗಳು' ಪುಸ್ತಕದ ಮುಖಪುಟ)



ಚಿತ್ರ ೨೨. ವೇಳಾಸಿಗ್ನಲ್‌ಗಳನ್ನು ಕೇಳುತ್ತಿರುವುದು. ಜಾಗ: ಅಂಕೋಲ ಬಳಿ ಬಾಡಿ ಬೊಂಗ್ರಿ ಎಂಬಲ್ಲಿನ ಗುಡ್ಡದ ಮೇಲೆ.
(ಕೃಪೆ: ಅಮೆಚೂರ್ ಅಸ್ಟ್ರಾನಮರ್ಸ್ ಅಸೋಸಿಯೇಷನ್, ಬೊಂಬಾಯಿ)



ಚಿತ್ರ ೨೩. ದೂರದರ್ಶಕ ಯಂತ್ರ ಮತ್ತು ಪರದೆ ಮೇಲೆ ಸೂರ್ಯಬಿಂಬ




ಚಿತ್ರ ೨೪. ಗ್ರಹಣವೀಕ್ಷಣೆಗೆ ದೂರದರ್ಶಕ; ಹಿನ್ನೆಲೆಯಲ್ಲಿ ಪರದೆ ಮೇಲೆ ಸೂರ್ಯಬಿಂಬ




ಚಿತ್ರ ೨೫. ದೂರದರ್ಶಕಯಂತ್ರದ ಮೂಲಕ ಗ್ರಹಣವೀಕ್ಷಣೆ



ಚಿತ್ರ ೨೬. ಕಾಲವನ್ನು ಘೋಷಿಸುತ್ತಿರುವುದು



ಚಿತ್ರ ೨೭. ಗ್ರಹಣ – ತೆರೆಯ ಮೇಲೆ




ಚಿತ್ರ ೨೮. ಬೊಂಬಾಯಿಯ ಹವ್ಯಾಸಿ ಖಗೋಳ ವಿಜ್ಞಾನಿಗಳ ಸಂಘದ ವಾರ್ತಾಪತ್ರದ ಮುಖ ಪುಟ




ಚಿತ್ರ ೨೯. ಪತ್ರಿಕೆಯೊಂದರಲ್ಲಿ ಗ್ರಹಣದ ದಿನ ಬ್ಯಾಂಕ್ ಆಫ್ ಕೊಚಿನ್ನಿನ ಜಾಹಿರಾತು

೬. Eric Maple ಎಂಬುವರು Superstition and the Superstitious ಎಂಬ ಪುಸ್ತಕ ಬರೆದಿದ್ದಾರೆ (W. A. Allen. London. 1971) ಮನುಷ್ಯನ ಬದುಕಿನಲ್ಲಿ ಮೂಢನಂಬಿಕೆಗಳು ಹೇಗೆ ಹಾಸುಹೊಕ್ಕಾಗಿ ಅವನ ಬದುಕಿನ ಅನಿವಾರ್ಯ ಅವಿಭಾಜ್ಯ ಅಂಗವಾಗಿವೆ ಎಂಬುದನ್ನು ತೋರಿಸಿರುವರಲ್ಲದೆ, ಹಿಟ್ಲರ್ ನೆಪೋಲಿಯನ್ ಚರ್ಚಿಲರಂತಹ ಯಶಸ್ವೀ ವ್ಯಕ್ತಿಗಳೂ ಎಂತಹ ನಂಬಿಕೆಗಳನ್ನಿಟ್ಟುಕೊಂಡಿದ್ದರೆಂಬುದುದನ್ನು ಉದಾಹರಿಸಿದ್ದಾರೆ. ಯೂಂಗ್ ನಂತಹ ಮನೋವಿಜ್ಞಾನಿ "ಮೂಢನಂಬಿಕೆ ಮತ್ತು ವೈಚಾರಿಕತೆಗಳು ಪರಸ್ಪರ ಪೂರಕಗಳೆಂದು ನಂಬಿದ್ದ" ಎಂಬ ಮಾತನ್ನು ಅವರು ಗಮನಿಸಿದ್ದಾರೆ (ಪು. ೧೮೫). ಪುರಾಣ, ಮೂಢನಂಬಿಕೆ, ಶ್ರದ್ಧೆ, ರಿಚುಯಲ್ಲುಗಳಿಗೆ ಆಳವಾದ ಅರ್ಥ, ಉದ್ದೇಶಗಳೂ ಇವೆಯೆಂಬುದನ್ನು ಗುರುತಿಸಿದವರಿದ್ದಾರೆ. ಒಬ್ಬ ವಾಚಕರು ಈಚೆಗೆ ಪ್ರಜಾವಾಣಿಯ ವಾಚಕರವಾಣಿಯಲ್ಲಿ (೨೨-೨-೮೧) 'ಭವಿಷ್ಯ ಎಷ್ಟು ನಿಜವಾಯಿತು' ಎಂದು ಕೇಳಿ ೧೯೮೦ರ ಫೆಬ್ರವರಿ ೧೬ ರಂದು ನಡೆದ ಗ್ರಹಣದಿಂದ ಜ್ಯೋತಿಷ್ಕರು ಏನೇನೋ ಭವಿಷ್ಯ ನುಡಿದಿದ್ದು ಅದರಲ್ಲಿ ನಿಜವಾದುದು ಎಷ್ಟೆಂಬುದನ್ನು ಯಾರಾದರೂ ತಿಳಿಸಲು ಕೋರಿದ್ದಾರೆ. ಆಗ ಪತ್ರಿಕೆಗಳಲ್ಲಿ ಬಂದಿದ್ದ ಭವಿಷ್ಯದ ವಿಷಯ ಜನರ ಗಮನವನ್ನು ತೀವ್ರವಾಗಿ ಸೆಳೆದಿತ್ತೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

೭. ಉಳುಕು ಮಂತ್ರ ಇತ್ಯಾದಿ ವಿದ್ಯೆಗಳನ್ನು ಕಲಿಯಲು ಸೂರ್ಯಗ್ರಹಣವು ಪ್ರಶಸ್ತ ದಿನವೆಂದು ಇನ್ನೂ ಹಲವರು ಸಮರ್ಥಿಸಿದ್ದಾರೆ. 'ಚಕ್ರಸ್ಥಾಪನೆ'ಯಿಂದ ಅನೇಕರು ಆ ದಿನ ಕ್ಷುದ್ರ ದೇವತೆಗಳನ್ನು ವಶಮಾಡಿಕೊಳ್ಳುತ್ತಾರೆ. ಅದೃಶ್ಯಾಂಜನ, ದ್ರವ್ಯಾಂಜನ, ವಶೀಕರಣ ಅಭಿಚಾರ ಇತ್ಯಾದಿಗಳಿಗೂ ಒಳ್ಳೆಯ ದಿನ.

ದೆವ್ವಗಳನ್ನು ಬಿಡಿಸುವುದಕ್ಕಂತೂ ಅದು ಬಹಳ ಒಳ್ಳೆಯ ದಿನ. ತುಮಕೂರು ಜಿಲ್ಲೆಯ ಸಿದ್ಧಗಂಗಾಮಠ ಅದಕ್ಕೆ ಪ್ರಸಿದ್ಧ. ಫೆಬ್ರವರಿ ಹದಿನಾರರಂದು ಅಲ್ಲಿಗೆ ಮಾಟ ಮಂತ್ರಗಳನ್ನು ಹೋಗಲಾಡಿಸಿಕೊಳ್ಳಲು, ಗ್ರಹಗಳ ಚೇಷ್ಟೆ, ದೆವ್ವದ ಕಾಟ ಇತ್ಯಾದಿಗಳಿಂದ ಬಿಡುಗಡೆ ಹೊಂದಲು ಆ ದಿನ ಬೆಳಗಿನಿಂದ ರಾತ್ರಿವರೆಗೆ ಜನ ಸತತವಾಗಿ ಬಂದು ಅಲ್ಲಿನ ಶ್ರೀ ಸ್ವಾಮೀಜಿಯವರಿಂದ ಯಂತ್ರಗಳನ್ನು ಪಡೆದರೆಂದು ಸ್ವಾಮೀಜಿಯವರಿಗೆ ಅಂದು ಆ ಕಾರ್ಯದಲ್ಲಿ ಸಹಾಯ ಮಾಡಿದ ಒಬ್ಬರು ತಿಳಿಸಿದ್ದಾರೆ. ಮಂತ್ರ-ತಂತ್ರ ಕಲಿಯುವ 'ಗೋಸಾಯಿ'ಗಳಿಗೆ ಅದು ಹೇಳಿ ಮಾಡಿಸಿದ ದಿನ.

ತುಮಕೂರು ಜಿಲ್ಲೆಯ ಹರಿಜನರು ತಮ್ಮ ಹೊಲಗಳಲ್ಲಿನ ಮೂಳೆಗಳನ್ನು

ನಾಲ್ಕು ದಿಕ್ಕಿನಲ್ಲೂ ರಾಶಿ ಮಾಡಿ ಅವನ್ನು ಗ್ರಹಣದ ದಿನ ಸುಟ್ಟು ಬಿಡುತ್ತಾರೆ. ಯಾರಾದರೂ ಹೊಲದಲ್ಲಿ ಮಾಟ ಮಾಡಿಸಿದ್ದರೆ ಅಥವಾ ಅಲ್ಲಿ ದುಷ್ಟ ಶಕ್ತಿ ಇದ್ದರೆ ಅದನ್ನೆಲ್ಲ ಪರಿಹರಿಸುವ ಉದ್ದೇಶ ಅವರದು.

೮. ತೆಲುಗಿನ ಕವಿ ಪೋತನನು ತನ್ನ ಭಾಗವತವನ್ನು ಗ್ರಹಣದ ದಿನ ಆರಂಭಿಸಿದೆನೆಂದು ಹೇಳಿಕೊಂಡಿದ್ದಾನೆ. ಕಾವ್ಯಾರಂಭಕ್ಕೂ ಗ್ರಹಣ ಪ್ರಶಸ್ತಕಾಲವಾಗಿದ್ದಿತು.

೯. ಉತ್ತರ ಭಾರತದಲ್ಲಿ ಹಳ್ಳಿಗಳಲ್ಲಿ ಗರ್ಭಿಣಿ ಕೆಲಸಮಾಡಕೂಡದು. ಅವಳು ಬಟ್ಟೆಯನ್ನು ಸೂಜಿಯಿಂದ ಹೊಲೆದರೆ ಮಗುವಿನ ಕಿವಿ ತೂತಾಗುತ್ತದೆ. ಏನಾದರೂ ಕತ್ತರಿಸಿದರೆ ತುಟಿ ಇಬ್ಭಾಗವಾಗಿ 'ಚ್ವಾರ್ ಬಾಯಿ' ಆಗುತ್ತದೆ. ಅವಳ ಹೊಟ್ಟೆ ಸುತ್ತ ರಕ್ಷಣೆಗಾಗಿ ಗೋವಿನ ಸಗಣಿ ಬಳಿಯುತ್ತಾರೆ. ಅವಳು ಕತ್ತಲಲ್ಲೇ ಇರಬೇಕು. ಗಬ್ಬ ಇರುವ ಪ್ರಾಣಿಗಳ ಕೊಂಬಿಗೆ ಕೆಂಪು ಉರಿಮಂಜು ಬಳಿಯುತ್ತಾರೆ. (William Colebrooke: Religion and Folklore of Northern India. New Delhi, 1925. PP. 39-41) ಕೊಂಕಣದಲ್ಲೂ ಹೆಂಗಸರು ಆ ದಿನ ಬಟ್ಟೆ ಕತ್ತರಿಸರು, ಹೊಲಿಯರು.

೧೦. R. R. Enthoven : Folklore of the Konkan. Delhi, 1976, PP. 8-9.

೧೧. ಪೂರ್ಣವಿತ್ತನೆಂಬ ಋಷಿಗೆ ಸಾನಂದನೆಂಬ ಮಗ ಹುಟ್ಟಿ ಪಂಚಾಕ್ಷರಿ ಮಂತ್ರವನ್ನು ಜಪಿಸಿದ್ದರಿಂದ ಅವನಿಗೆ ಗಣೇಶತ್ವ ಪ್ರಾಪ್ತವಾಯಿತು. ಆ ಕಾರಣ ಅವನು ಸಾನಂದ ಗಣೇಶ ಎಂದು ಕರೆಯಿಸಿಕೊಳ್ಳುತ್ತಾನೆ. ದಿನವೂ ಅವನು ನಿಯಮಕಾಲದಲ್ಲಿ ಶಿವಾರ್ಚನೆ, ಶಿವ ಶಾಸ್ತ್ರಾಗಮಾಲೋಚನೆಗಳಲ್ಲಿ ಕಾಲ ಕಳೆಯುತ್ತ ರಾತ್ರಿ ಶಿವನ ಕೀರ್ತನೆಗಳನ್ನು ಹಾಡುತ್ತ ಇರುಳನ್ನು ಸಾಗಿಸುತ್ತಿದ್ದ. ಒಮ್ಮೆ ದಿವ್ಯಾಗಮದ ಶಿವಧರ್ಮೋತ್ತರ ಪುರಾಣದಲ್ಲಿ ನರಕವರ್ಣನೆಯನ್ನು ಕೇಳಿ, ನಾರಕಿಗಳ ಮೇಲೆ ದಯ ಹುಟ್ಟಿ ಅವರ ನೋವನ್ನು ಪರಿಹರಿಸುವ ಪ್ರತಿಜ್ಞೆ ಕೈಗೊಂಡ. ಅವನು ಯಮನ ಬಳಿಗೆ ಹೋದಾಗ, ಯಮ ಎಲ್ಲಾ ಘೋರ ನರಕಗಳನ್ನೂ ನಾರಕಿಗಳ ಚಿತ್ರಹಿಂಸೆಯನ್ನೂ ತೋರಿಸಿ, ಕೊನೆಯ ನರಕವನ್ನು ತೋರಿಸುವುದಿಲ್ಲ. ಅದು ಒಮ್ಮೆಯಾದರೂ ಬದುಕಿನಲ್ಲಿ 'ನಮಶ್ಶಿವಾಯ' ಎಂದು ಹೇಳದವರ ತಾಣ. ಸಾನಂದನು ಅವರ ಮುಂದೆ ಪಂಚಾಕ್ಷರಿ ಮಂತ್ರವನ್ನುಚ್ಚರಿಸಿ ಎಲ್ಲ ನಾರಕಿಗಳನ್ನೂ ಉದ್ಧರಿಸುತ್ತಾನೆ. ಇದು ಸಾನಂದನ ಕತೆ. ಕನ್ನಡದಲ್ಲಿ ಕುಮಾರ ಪದ್ಮರಸ (ಸು. ೧೨೮೦) ಸಾನಂದ ಚರಿತೆಯನ್ನೂ ಓದುವ ಗಿರಿಯನು

(ಸು. ೧೫೨೫) ಸಾನಂದ ಗಣೇಶ್ವರ ಸಾಂಗತ್ಯವನ್ನೂ ಬರೆದಿದ್ದಾರೆ. ಹಳ್ಳಿಯಲ್ಲಿ ವಾಚನವಾದ ಕೃತಿ ಈ ಎರಡನೆಯದೇ ಇರಬೇಕು.

೧೨. ಗೋಕರ್ಣದಲ್ಲಿ ಸಮುದ್ರ ಸ್ನಾನಕ್ಕೆ ಸೇರಿದ್ದ ಜನ, ಪೂರ್ಣ ಗ್ರಹಣವಾಗುತ್ತಿದ್ದಂತೆ ಸೂರ್ಯ ಮುಳುಗಿ ಬಿಟ್ಟು ಕತ್ತಲಾಯಿತೆಂದು ಹೆದರಿ ನೀರಿನಿಂದ ಹಾರಿ ಓಡಿ ಬಂದರೆಂದೂ ಕೆಲವರು ನೀರಲ್ಲೇ ಬಿದ್ದರೆಂದೂ ಕುಲಕರ್ಣಿಗಳು ತಿಳಿಸಿದರು.

೧೩. ಇದನ್ನು ಹೇಳಿದವರಿಗೆ ಹಾಗೆಂದರೇನು ಎನ್ನುವ ಸ್ಪಷ್ಟ ಕಲ್ಪನೆಯಿರಲಾರದು. 'ಸಪ್ತಧಾತು' ಎಂದರೆ ಬಹುಶಃ ಅವರ ಪ್ರಕಾರ ಬಗೆ ಬಗೆಯ ಲೋಹಗಳು. 'ಧಾತು'ಗಳು ವಾಸ್ತವವಾಗಿ ಒಂಬತ್ತು: ಚಿನ್ನ, ಬೆಳ್ಳಿ, ಹಿತ್ತಾಳೆ, ಸೀಸ, ತಾಮ್ರ, ತವರ, ಕಬ್ಬಿಣ, ಕಂಚು, ಸೂಜಿಗಲ್ಲು. 'ಸಪ್ತಧಾತುಗಳು'ಉಂಟು; ಆದರೆ ಅವು ರಕ್ತ, ಮಾಂಸ ಮುಂತಾದ ದೇಹ ಸಂಬಂಧಿ ವಸ್ತುಗಳು. (ಶ್ರೀವತ್ಸನಿಘಂಟು, ಪು. ೨೨೧)

# "ಸೂರ್ಯಗ್ರಹಣ ಅದ್ಭುತ ಮಹಾಶಾಂತಿ ಮಹೋತ್ಸವ"[1]

ಫೆಬ್ರವರಿ ೧೬, ೧೯೮೦ ರಂದು ನಡೆಯಲಿದ್ದ ಪೂರ್ಣ ಸೂರ್ಯಗ್ರಹಣದ ಸುದ್ದಿ ಆಕಾಶವಾಣಿಯಲ್ಲಿ ಮತ್ತು ಪತ್ರಿಕೆಗಳಲ್ಲಿ ಸಾಕಷ್ಟು ಪ್ರಚಾರವನ್ನು ಪಡೆಯಿತು. ಆ ದಿನಕ್ಕೆ ಎಷ್ಟೋ ವಾರಗಳ ಮುಂಚಿನಿಂದಲೇ ಆ ಘಟನೆ ಕೊನೆಯ ಪಕ್ಷ ಭಾರತದಲ್ಲಿ ಎಲ್ಲರ ಮಾತುಕತೆಯ ವಸ್ತುವಾಗಿ ಪರಿಣಮಿಸಿತು. ಈ ಹಿಂದೆ ಭಾರತದಲ್ಲಿ ನಡೆದ ಯಾವುದೇ ಪೂರ್ಣಸೂರ್ಯಗ್ರಹಣಕ್ಕೆ ಅಥವಾ, ಬಹುಶಃ ಯಾವುದೇ ಒಂದು ಪ್ರಾಕೃತಿಕ ಘಟನೆಗೆ ಈ ವ್ಯಾಪ್ತಿಯ ಸಮೂಹ ಮಾಧ್ಯಮದ ಪ್ರಚಾರ ಬೆಂಬಲ ದೊರಕಿರಲಾರದು. ಬೆಂಗಳೂರು ಚಿಕ್ಕಪೇಟೆಯ ಲಾಲ್‌ದಾಸ್ ವೆಂಕಟರಮಣ ಸ್ವಾಮಿ ದೇವಾಲಯದ ಶ್ರೀ ವೈಖಾನಸ ಮಂಡಲಿಯ ಕೆಲವು ಸದಸ್ಯರು ಲೋಕಾಭಿರಾಮವಾಗಿ ಮಾತನಾಡುತ್ತ ಅವರಲ್ಲಿ ಗ್ರಹಣದ ಸುದ್ದಿ ಪ್ರಸ್ತಾಪಿತವಾಯ್ತು! ಏಕೆ ಒಂದು ಚಿಕ್ಕ ಪ್ರಮಾಣದಲ್ಲಿ ಶಾಂತಿ ಕಾರ್ಯವನ್ನು ಕೈಗೊಳ್ಳಬಾರದು ಎಂಬ ಸೂಚನೆ ಬಂದು ಅದಕ್ಕೆ ಏರ್ಪಾಟುಗಳನ್ನು ಮಾಡತೊಡಗಿದರು.

ಶ್ರೀ ಲಾಲ್‌ದಾಸ್ ವೆಂಕಟರಮಣಸ್ವಾಮಿ ದೇವಾಲಯ ಕೊನೆಯ ಪಕ್ಷ ಸುಮಾರು ಇನ್ನೂರು ವರ್ಷಗಳಷ್ಟು ಹಳೆಯ, ಚಿಕ್ಕ, ಆದರೆ ಸುಂದರ ದೇವಾಲಯ. (ಅದರ ವಿಶಾಲವಾದ ಆವರಣದಲ್ಲಿ ಇನ್ನೊಂದು ಈಶ್ವರ ದೇವಾಲಯವೂ ಇದೆ). ವೆಂಕಟರಮಣ ಸ್ವಾಮಿಯ ಅರ್ಚಕರು ವೈಖಾನಸ ವೈಷ್ಣವರು (ಜನ ಸಾಮಾನ್ಯರು ಇವರನ್ನು ಹಳದಿ ನಾಮದವರು ಎಂದು ಕರೆಯುತ್ತಾರೆ). ವೈಖಾನಸರ ಮುಖ್ಯ ವೃತ್ತಿ ವೈಷ್ಣವ ದೇವಾಲಯಗಳಲ್ಲಿ ಅರ್ಚಕರಾಗಿರುವುದು.

ಸುಪ್ರಸಿದ್ಧ ತಿರುಪತಿ ದೇವಾಲಯದ ಅರ್ಚಕರು ವೈಖಾನಸರು. ಕರ್ನಾಟಕದಲ್ಲಿ ಇವರ ಸಂಖ್ಯೆ ಐನೂರಕ್ಕಿಂತ ಹೆಚ್ಚು ಇರಲಾರದು. ಮೂವತ್ತೆರಡು ಸೂತ್ರಕಾರರಲ್ಲಿ ವಿಖನಸಾಚಾರ್ಯರು ಒಬ್ಬರು; ಉಳಿದವರು ದೇವತಾರಾಧನೆಯನ್ನು ಹೇಳಿಲ್ಲ, ವಿಖನಸಾಚಾರ್ಯರು ಮಾತ್ರ ಹೇಳಿದ್ದಾರೆ. ಈ ಋಷಿಗಳ ಪರಂಪರೆಯವರು ವೈಖಾನಸರು. ಶ್ರೀ ವೈಷ್ಣವ ಮತ್ತು ಇತರ ಬ್ರಾಹ್ಮಣರಿಗೆ ಹದಿನಾರು ಕರ್ಮಗಳಾದರೆ (ಷೋಡಶ ಕರ್ಮ) ಇವರಿಗೆ ಹದಿನೆಂಟು ಕರ್ಮಗಳು, ಶ್ರೀ ವೈಷ್ಣವರಿಗೆ (ಅಯ್ಯಂಗಾರರಿಗೆ) ತಪ್ತ ಚಕ್ರಾಂಕನ ಉಂಟು, ಎಂದರೆ ಚಕ್ರ ಮುದ್ರೆಯನ್ನು ಕಾಯಿಸಿ ಒತ್ತಿಸಿಕೊಳ್ಳುವುದು. ವೈಖಾನಸರಿಗೆ ಅದು ಇಲ್ಲ, ಏಕೆಂದರೆ ಇವರು 'ಗರ್ಭವೈಷ್ಣವರು.' ಮಗು ತಾಯಿಯ ಗರ್ಭದಲ್ಲಿರುವಾಗಲೇ 'ವಿಷ್ಣುಬಲಿ' ಕರ್ಮವನ್ನು ಮಾಡಿ, ಪಾಯಸದಲ್ಲಿ ವಿಷ್ಣುವನ್ನು ಆವಾಹನೆ ಮಾಡಿ ಕುಡಿಸಿದರೆ ಅಲ್ಲಿಗೆ ವೈಷ್ಣವ ದೀಕ್ಷೆ ಆದಂತೆ. ವೈಖಾನಸರಿಗೆ ಮತ್ತೆ ಪುನರ್ದೀಕ್ಷೆ ಬೇಕಿಲ್ಲ. ಉಳಿದ ವೈಷ್ಣವರಿಗೆ (ಶ್ರೀ ವೈಷ್ಣವ, ಮಾಧ್ವ ಇತ್ಯಾದಿ) ಪುನರ್ದೀಕ್ಷೆ ಉಂಟು. ಇವರದು ರಾಮಾನುಜ ಪಂಥದಿಂದ ಭಿನ್ನ. ಇವರ ಕೇಂದ್ರ ಸಮಿತಿಯೇ ವೈಖಾನಸ ಮಹಾಮಂಡಲಿ.

ಈ ಮಂಡಲಿಯ ಆಶ್ರಯದಲ್ಲಿ "ಅದ್ಭುತ ಮಹಾಶಾಂತಿ ಮಹೋತ್ಸವ"ವನ್ನು ಆಚರಿಸಲು ನಿಶ್ಚಯಿಸಿ ಮೊದಲು ಅವರ ಮುಖ್ಯ ದೈವವಾದ ತಿರುಪತಿಯ ವೆಂಕಟೇಶ್ವರನ ಅನುಗ್ರಹವನ್ನು ಪಡೆದರು. ಒಂದು ಸ್ವಾಗತ ಸಮಿತಿಯನ್ನು ರಚಿಸಲಾಯ್ತು. ಅದರಲ್ಲಿ ತಿರುಪತಿ ತಿರುಮಲ ದೇವಾಲಯದ ಅರ್ಚಕರು, ಬೇರೆ ಬೇರೆ ವೈಷ್ಣವ ದೇವಾಲಯಗಳ ಅರ್ಚಕರು, ಬೇರೆ ಬೇರೆ ವ್ಯಾಪಾರಿಗಳು ಒಟ್ಟು ಹನ್ನೊಂದು ಜನ ಸದಸ್ಯರು. ೧೬-೨-೮೦ರಂದು ಸಂಜೆ ೪-೩೦ಕ್ಕೆ ನಡೆಯಲಿರುವ ಸೂರ್ಯ ಗ್ರಹಣದ ಅದ್ಭುತ ಮಹಾಶಾಂತಿ ಮತ್ತು ಪೂರ್ಣಾಹುತಿಗೆ ಕರ್ನಾಟಕದ ಮುಖ್ಯ ಮಂತ್ರಿಗಳು ಮುಖ್ಯ ಅತಿಥಿಗಳಾಗಿರುವರೆಂದು ಆಹ್ವಾನ ಪತ್ರಿಕೆ ಹೊರಟಿತು. ಒಟ್ಟು ನಾಲ್ಕು ದಿನಗಳ ಕಾರ್ಯಕ್ರಮ ಹೀಗಿತ್ತು. ವೈದಿಕಾಚರಣೆಗಳಲ್ಲಿ ಆಸಕ್ತರಾಗಿರುವವರಿಗಾಗಿ ಆ ಎಲ್ಲ ವಿವರಗಳನ್ನು ಕೆಳಗೆ ಕೊಡಲಾಗಿದೆ.

## ಕಾರ್ಯಕ್ರಮ : ವೈಖಾನಸಾಗಮದಂತೆ

| ದಿನಾಂಕ | ವಾರ | ಕಾರ್ಯಕ್ರಮ |
|---|---|---|
| ೧೪-೨-೧೯೮೦ | ಗುರುವಾರ<br>ತ್ರಯೋದಶಿ<br>ಮಹಾಶಿವರಾತ್ರಿ<br>ಸಾಯಂಕಾಲ<br>೫-೦೦ಕ್ಕೆ | ದೇವಸ್ಥಾನದಿಂದ ಅಗ್ರೋದಕದೊಡನೆ ಸದ್ಮ ಪ್ರದಕ್ಷಿಣೆ, ದೇವತಾ ಪ್ರಾರ್ಥನೆ, ಸ್ವಸ್ತಿವಾಚನ, ಋತ್ವಿಕ್ ವರಣ, ಪಂಚಗವ್ಯ ಪ್ರಾಶನ, ಮೃತ್ಸಂಗ್ರಹಣ ವಾಸ್ತು ಅಂಕುರಾರ್ಪಣೆ. |
| ೧೫-೨-೧೯೮೦ | ಶುಕ್ರವಾರ<br>ಚತುರ್ದಶಿ<br>ಪ್ರಾತಃಕಾಲ-<br>ಶಿವರಾತ್ರಿ<br>ಪಾರಣೆ | ಬ್ರಾಂಹ್ಮೀ ಮುಹೂರ್ತದಲ್ಲಿ ವೇದ ಘೋಷ, ಸ್ವಸ್ತಿವಾಚನೆ, ಅಗ್ನಿಪ್ರತಿಷ್ಠೆ, ಕಲಶ ಸ್ಥಾಪನೆ, ನವಗ್ರಹ ಜಪ, ನಕ್ಷತ್ರ ಜಪ, ಮೃತ್ಯುಂಜಯ ಜಪ, ಸೂರ್ಯ ನಮಸ್ಕಾರ, ನವಗ್ರಹ ಹೋಮ, ನಕ್ಷತ್ರ ಹೋಮ, ಗಾಯತ್ರೀ ಹೋಮ, ದುರ್ಗಾ ಸಪ್ತಶತೀ ಪಾರಾಯಣ, ಸುಂದರಕಾಂಡ ಪಾರಾಯಣ, ವೇದ ಪಾರಾಯಣ, ಯಂತ್ರ ಸ್ಥಾಪನೆ, ಮಹಾನಿವೇದನ, ಬಲಿಹರಣ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ. |
| | ಸಾಯಂಕಾಲ | ಸ್ವಸ್ತಿವಾಚನ, ನವಗ್ರಹ ಕುಂಭಾರಾಧನೆ, ಮಹಾಯಂತ್ರಾರಾಧನೆ, ನವಗ್ರಹ ಪೂಜಾ, ನಕ್ಷತ್ರ ಮಂಡಲ ಪೂಜಾ, ರಾಶಿಮಂಡಲ ಪೂಜಾ, ಕ್ಷೀರ ತರ್ಪಣ, ಉಕ್ತ ಹೋಮಗಳು, ನಕ್ಷತ್ರೇಷ್ಟಿ, ಜಪ ಪಾರಾಯಣಗಳು, ಮಹಾರಾತ್ರಿ ಶಾಂತಿಹೋಮ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ. |

| | | |
|---|---|---|
| ೧೬-೨-೧೯೮೦ | ಶನಿವಾರ ಅಮಾವಾಸ್ಯೆ ಸೂರ್ಯಗ್ರಹಣ (ಪ್ರಾತಃಕಾಲ) | ದೇವತಾ ಪ್ರಾರ್ಥನೆ, ಕಲಶಾರಾಧನೆ, ಸೂರ್ಯ ನಮಸ್ಕಾರ, ನಕ್ಷತ್ರ ಜಪ, ರಾಶಿ ಜಪ, ನಕ್ಷತ್ರ ಹೋಮ, ಪಂಚಾಂಗ ದೈವತ್ಯ ಹೋಮ, ಪಾರಾಯಣಗಳು, ನವಗ್ರಹ ಮಂಡಲ ಪೂಜೆ, ನಕ್ಷತ್ರ ಮಂಡಲ ಪೂಜೆ. ಉತ್ತರಾಷಾಢ, ಶ್ರವಣ, ಧನಿಷ್ಠಾ, ಶತಭಿಷ, ಪೂರ್ವಾಭಾದ್ರ (ಮಕರ-ಕುಂಭ ರಾಶಿಯವರ) ಶಾಂತಿ ಹೋಮಗಳು, ಮಂಗಳಾರತಿ. |
| | ಮಧ್ಯಾಹ್ನ ೨ಕ್ಕೆ ಗ್ರಹಣ ಕಾಲದಲ್ಲಿ (೨-೨೪ರಿಂದ ೪-೫೩) | ಸ್ವಸ್ತಿವಾಚನ, ಶಾಂತಿಶ್ಲೋಕ ಪಟ್ಟಿಕಾಧಾರಣ (ಭಾಗವಹಿಸುವವರೆಲ್ಲರಿಗೂ), ಮಾನಜಪ, ತರ್ಪಣ. |
| | ಗ್ರಹಣ ದೋಷ ಕಾಲದಲ್ಲಿ | ನವಯಾಗಕುಂಡಗಳಲ್ಲಿ ಪೂರ್ಣಾಹುತಿ, ಅವಭೃತ ಸ್ನಾನ. |
| | ಸಾಯಂಕಾಲ | ಸ್ವಸ್ತಿವಾಚನ, ಕಲಶಾರಾಧನೆ ನಿವೇದನ, ಕುಂಭತೀರ್ಥ ಪ್ರೋಕ್ಷಣೆ, ಯಂತ್ರಗಳ ವಿತರಣೆ, ನವಧಾನ್ಯಾದಿ ದಾನಗಳು, ಋತ್ವಿಕ್ ಸಂಭಾವನೆ, ಮೂಲಸ್ವಾಮಿಯವರಿಗೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಅನ್ನದಾನ, ನಂತರ ದೇಶದ ಹಾಗೂ ಮಹಾಜನಗಳ ಶ್ರೇಯಃಪ್ರಾರ್ಥನೆ, ಫಲಮಂತ್ರಾಕ್ಷತೆ ವಿತರಣೆ. |
| ೧೭-೨-೧೯೮೦ | ಭಾನುವಾರ | ಋತ್ವಿಕ್ ಸನ್ಮಾನ, ಮಂಗಳ. |

ಅದೇ ಸಮಯದಲ್ಲಿ ಹೊರಟ ಕರಪತ್ರದಲ್ಲಿ ಗ್ರಹಣದ ವಿಷಯ, ಅದರಿಂದುಂಟಾಗಬಹುದಾದ ವಿನಾಶಗಳು, ವಿನಾಶಗಳಿಗೆ ಶಾಂತಿ ಮತ್ತು ಶಾಂತಿ ಮಾಡಿಸಿಕೊಳ್ಳುವವರ ಅವಗಾಹನೆಗಾಗಿ ಅವರು ಕೊಡಬೇಕಾದ ದರಗಳು ಇವನ್ನೆಲ್ಲಾ ಕೊಡಲಾಗಿದೆ. ಆ ಕರಪತ್ರದ ಪೂರ್ಣಪಾಠ ಅಲ್ಲಿರುವಂತೆ ಹೀಗಿದೆ:

ಶ್ರೀ

"ಶ್ರೀ ವಿಖನಸ ಮಹಾಗುರವೇ ನಮಃ"

ಶ್ರೀ ಸೂರ್ಯನಾರಾಯಣಾಯ ನಮಃ

ಭಾಸ್ಕರಾಯ ವಿದ್ಮಹೇ ಮಹದ್ಯುತಿಕರಾಯ ಧೀಮಹೀ ತನ್ನೋ ಆದಿತ್ಯ ಪ್ರಚೋದಯಾತ್

## "ಸೂರ್ಯಗ್ರಹಣ ಅದ್ಭುತ ಮಹಾ ಶಾಂತಿ ಮಹೋತ್ಸವ"

ಆಸ್ತಿಕ ಮಹಾಜನಗಳೇ:

ದಿನಾಂಕ ೧೬-೨-೯೮೦ನೇ ಶನಿವಾರ ಶ್ರೀ ಸಿದ್ಧಾರ್ಥಿ ನಾಮ ಸಂವತ್ಸರ ಮಾಘ ಬಹುಳ ಅಮಾವಾಸ್ಯೆ ಧನಿಷ್ಠಾ ನಕ್ಷತ್ರದಲ್ಲಿ ಕೇತುಗ್ರಸ್ಥ ಸೂರ್ಯಗ್ರಹಣ ಸಂಭವಿಸಲಿದೆ. ಗ್ರಹಣವು ಭಾರತೀಯ ಕಾಲಮಾನ ರೀತ್ಯಾ ಹಗಲು ೨ ಘಂಟೆ ೨೪ ನಿಮಿಷಕ್ಕೆ ಸ್ಪರ್ಶವಾಗಿ ೪ ಘಂಟೆ ೫೩ ನಿಮಿಷಕ್ಕೆ ಮೋಕ್ಷವಾಗಲಿದೆ. ಅದ್ಯಂತ ಘಂಟೆ ೨-೨೯ ನಿಮಿಷಗಳು. ಇದರ ನಿಮಿತ್ತವಾಗಿ ಭಾರತೀಯಧರ್ಮಕ್ಕೆ ಹಾನಿ ಮಾತಾಪಿತೃಗಳ ಪೀಡೆ ಅತಿವೃಷ್ಟಿ ದೇಶಕ್ಷೋಭೆ ರೋಗ ರುಜಿನಗಳು ಜನಕ್ಷಯ ರಾಜಕೀಯ-ಆಂದೋಳನಗಳು ಅಪಮೃತ್ಯು ಮಹಾವ್ಯಾಧಿ ಮತ್ತು ಕ್ಷಾಮ ಡಾಮರಗಳು ಶತೃಪೀಡೆ ರಾಜಕೋಪ ಅಪಸ್ಮಾರ ಪಿಶಾಚಾದಿ ಪೀಡೆ ಸಂಭವಿಸುವ ಸೂಚಕವಾಗಿರುತ್ತದೆ. ಇಂತಹ ಪೂರ್ಣ ಗ್ರಹಣವು ಈ ಶತಮಾನದ ಆದಿಯಲ್ಲಿ ಸಂಭವಿಸಿತ್ತೆಂದೂ ಈ ಕಾಲದಲ್ಲಿ ರಾಷ್ಟ್ರವು ಪರಕೀಯರ ಆಳ್ವಿಕೆಯಲ್ಲಿದ್ದು ಸಹಿಸಲಸಾಧ್ಯವಾದ ತೊಂದರೆಗಳು ಅನುಭವಿಸಿತ್ತೆಂದೂ ೨ನೇ ಮಹಾ ಯುದ್ಧವೇ ಮುಂತಾದ ಕಾರಣಗಳಿಂದ ಹೆಚ್ಚಾಗಿ ಮಹಾಜನಗಳೂ ಸಹ ಅಕಾಲ ಮೃತ್ಯುವೇ ಮುಂತಾದ ತೊಂದರೆಗಳಿಗೆ ತುತ್ತಾಗಿರುವುದು ಸರ್ವವಿದಿತವೇ. ಇಂತಹ ಸಂದರ್ಭದಲ್ಲಿ ಗುರು ಹಿರಿಯರು ಭಾರತಾಗ್ರಣಿಗಳು ಕಾಲಕ್ಕನುಗುಣವಾಗಿ ತೀರ್ಥಕ್ಷೇತ್ರ

ನಗರಗಳಲ್ಲಿ ಇಂತಹ ಪರ್ವಕಾಲಗಳಲ್ಲಿ ಲೋಕ ಕಲ್ಯಾಣಾರ್ಥವಾಗಿ ನಡೆಸಿದ ಮಹಾ ಯಜ್ಞ ಯಾಗಾದಿ ಶಾಂತಿ ಕರ್ಮಗಳ ಫಲದಿಂದ ಇಂದಿಗೂ ಭಾರತೀಯ ಧರ್ಮವು ಉಳಿದಿರುತ್ತೆ. ಈಗ ಉಂಟಾಗಿರತಕ್ಕ ಗ್ರಹಣ ಪರ್ವಕಾಲದಲ್ಲಿ ಲೋಕ ಕಲ್ಯಾಣ ಉಂಟಾಗಲೆಂದು ಅದ್ಭುತ ಮಹಾ ಶಾಂತಿಯನ್ನು ಕರ್ನಾಟಕ ರಾಜಧಾನಿಯಾದ ಕಲ್ಯಾಣಪುರಿ ಎಂಬ ಬೆಂಗಳೂರು ನಗರದ ಶ್ರೀ ಲಾಲ್‌ದಾಸ್ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಆಚರಿಸಲು ಭಗವತ್ಪ್ರೇರಣೆಯಿಂದಲೂ ಮಹಾ ಜನಗಳ ಅಪೇಕ್ಷೆಯಿಂದಲೂ ಈ ಕಾರ್ಯಕ್ರಮವನ್ನು ಶ್ರೀ ವೈಖಾನಸ ಮಹಾಮಂಡಲಿಯು ನಡೆಸಲು ತೀರ್ಮಾನಿಸಿರುತ್ತೆ.

ಬೆಂಗಳೂರು ನಗರದ ಪ್ರಸಿದ್ಧ ಮಂಡಿ ವರ್ತಕರೂ ಧರ್ಮಾಭಿಮಾನಿಗಳೂ ಸಹೃದಯರೂ ಆಸ್ತಿಕರೂ ಆದ ಸನ್ಮಾನ್ಯ ಶ್ರೀ ಜಿ. ಕೆ. ಶ್ರೀನಿವಾಸಯ್ಯನವರ ಮುಂದಾಳತ್ವದಲ್ಲಿ ಅದ್ಭುತ ಮಹಾಶಾಂತಿ ಕಾರ್ಯನಿರ್ವಹಣಾ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ.

ವೈದಿಕ ಯಜ್ಞ ನಿರ್ವಹಣ ಸಮಿತಿಗೆ ಶ್ರೀಮದ್ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕನಾದ ತಿರುಮಲೈ ತಿರುಪತಿ ಶ್ರೀ ಶ್ರೀ ತಿರುವೆಂಕಟನಾಥ ಸ್ವಾಮಿಯವರ ದಿವ್ಯಪಾದ ಪದ್ಮಾರಾದಕರಾದ ಉಭಯ ವೇದಾಂತ ಪ್ರವರ್ತಕ ಪೈಡಿಪಲ್ಲಿ ಶ್ರೀ ಶ್ರೀನಿವಾಸ ನಾರಾಯಣ ದೀಕ್ಷಿತರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿರುತ್ತೆ.

ಈ ಗ್ರಹಣದ ನಿಮಿತ್ತ ಉತ್ತರಾಷಾಢ, ಶ್ರವಣ, ಧನಿಷ್ಟ, ಶತಭಿಷ, ಪೂರ್ವಾಭಾದ್ರ (ಮಕರ ಕುಂಭರಾಶಿ) ನಕ್ಷತ್ರಗಳಲ್ಲಿ ಜನನವಾದವರಿಗೆ ಉಂಟಾಗುವ ದೋಷ ನಿವಾರಣೆಗಾಗಿ ನಕ್ಷತ್ರ ಜಪ ನವಗ್ರಹ ಜಪ ಮೃತ್ಯುಂಜಯಜಪ ಸೂರ್ಯನಮಸ್ಕಾರ ಸುಂದರಕಾಂಡ ಪಾರಾಯಣ ದುರ್ಗಾಸಪ್ತಶತಿ ನವಗ್ರಹ ಹೋಮ ನವಗ್ರಹದಾನಗಳು ಚತುರ್ವೇದ ಪಾರಾಯಣ ನವಗ್ರಹ ಮಂಡಲಪೂಜೆ ನಕ್ಷತ್ರಮಂಡಲಪೂಜೆ ವಗೈರೆಯನ್ನು ಕರ್ನಾಟಕ ಆಂಧ್ರ ತಮಿಳುನಾಡು ಮುಂತಾದ ದೇಶಗಳ ವಿದ್ವನ್ಮಣಿಗಳಿಂದ ನಡೆಸಲಾಗುತ್ತೆ.

ಈ ಕೆಳಕಂಡ ವಿಳಾಸದಲ್ಲಿ ಹಣವನ್ನು ನೀಡಿ ಅಧಿಕೃತ ರಸೀತಿ ಪಡೆದು ಶಾಂತಿಗಳನ್ನು ಅವರವರ ಹೆಸರಿನಲ್ಲಿ ದೋಷ ಪರಿಹಾರ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ

ಈ ಗ್ರಹಯಜ್ಞವು ೧೪-೨-೮೦ ರಿಂದ ೧೬-೨-೮೦ ರ ಪೂರ್ತಾ ನಡೆದು ಗ್ರಹಣಮೋಕ್ಷಕಾಲದಲ್ಲಿ ನವಕುಂಡಗಳಲ್ಲಿ ಏಕ ಕಾಲದಲ್ಲಿ ಪೂರ್ಣಾಹುತಿಯನ್ನು ಮಾಡಿ ಪ್ರಜಾಕ್ಷೇಮ ದೇಶ ಕ್ಷೇಮ ಕೋರಲಾಗುವುದು.

ಮಹಾಜನಗಳೂ ಭಗದ್ಭಕ್ತರೂ ಆಗಮಿಸಿ ತಮ್ಮ ಶಕ್ತಿಯಾನುಸಾರ ಧನ-ಧಾನ್ಯ ವಸ್ತುಗಳನ್ನು ನೀಡಿ ಅಧಿಕೃತ ರಶೀದಿಯನ್ನು ಪಡೆದು ಆದಿತ್ಯಾದಿ ನವಗ್ರಹಗಳ ಮತ್ತು ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇವೆ.

ವಿಳಾಸ : ಇತಿ

ವೈಖಾನಸ ಮಂಡಲಿ (ರಿ) ಅದ್ಭುತಮಹಾಶಾಂತಿ

ಶ್ರೀ ಲಾಲ್ ದಾಸ್ ವೆಂಕಟ ಕಾರ್ಯನಿರ್ವಹಣಾ

ರಮಣಸ್ವಾಮಿ ದೇವಾಲಯ ಸ್ವಾಗತ ಸಮಿತಿ :

ಬೆಂಗಳೂರು ೫೬೦ ೦೫೩ ಬೆಂಗಳೂರು

ಋತ್ವಿಕ್ಕರ ಭೋಜನ-೧೫೦೦ /-೩ದಿನಕ್ಕೆ, ೧೦೦೦/-೨ ದಿನಕ್ಕೆ, ೫೦೦/೧ದಿನಕ್ಕೆ

ನವಗ್ರಹ ಹೋಮ - ಜಪ-೧೫೦/-೩ದಿನಕ್ಕೆ, ನಕ್ಷತ್ರಹೋಮ-೫೦/-೩ದಿನಕ್ಕೆ

ಅಷ್ಟೋತ್ತರನವಗ್ರಹಗಳಿಗೆ-೧೦/-; ಪಾರಾಯಣ-೧೫/-೧ದಿನಕ್ಕೆ; ನವಗ್ರಹಯಂತ್ರ ೧೦/-; ನವಧಾನ್ಯಗಳ ದಾನ ೧೦/-; ಪೂರ್ಣಾಹುತಿ ಮಂಗಳದ್ರವ್ಯ-೨೫/-; ಲಲಾಟಪಟ್ಟ ೧೦/-; ಯಂತ್ರ ಹೋಮ, ವಗೈರೆ ಎಲ್ಲಾ ಕಾರ್ಯಗಳಿಗಾಗಿ ದಿನ ೧ಕ್ಕೆ ೩೦೦ರೂ. ದಂಪತಿಗಳಿಂದ ಸಂಕಲ್ಪ ಪೂರ್ವಕ ನಡೆಸಲಾಗುವುದು.

ತಾ॥ ೧೪-೨-೮೦ ಋತ್ವಿಗ್ವರಣ ಅಂಕುರಾರ್ಪಣೆ ಇತ್ಯಾದಿ

ತಾ॥ ೧೫-೨-೮೦ ನವಗ್ರಹ ಕಲಶ ಸ್ಥಾಪನೆ-ಹೋಮಾದಿಗಳು ತಾ॥ ೧೬-೨-೮೦ ಗ್ರಹಣ ಶಾಂತಿ, ಜಪ, ತರ್ಪಣ, ಪೂರ್ಣಾಹುತಿ ಕಾರ್ಯಕ್ರಮಗಳು ನಡೆಯುತ್ತೆ.

ವೈಖಾನಸ ದೀಕ್ಷಾ ಕುಟುಂಬಿಗಳು ಕಾರ್ಯಕ್ರಮಗಳಲ್ಲಿ ತಪ್ಪದೇ ಭಾಗವಹಿಸಲು ಕೋರಿದೆ.


೨೦ನೇ ಶತಮಾನದ ಆದಿಯಲ್ಲಿ ನಡೆದ ಪೂರ್ಣಗ್ರಹಣದಿಂದ ಎರಡನೇ ಮಹಾಯುದ್ಧ ಇತ್ಯಾದಿ ಕಷ್ಟಗಳನ್ನು ಜನ ಅನುಭವಿಸಿದ್ದು ಗ್ರಹಣಗಳಿಂದ ಪ್ರಜಾನಷ್ಟ ಆಗುತ್ತದೆ ಎಂಬುದಕ್ಕೆ ಆಧಾರವೆಂದು ಹೇಳಿ, ಲೋಕಕಲ್ಯಾಣಾರ್ಥವಾಗಿ ಮಹಾಶಾಂತಿಯನ್ನು ಆಚರಿಸುತ್ತಿರುವುದಾಗಿ ಮೇಲಿನ ಕರಪತ್ರ ತಿಳಿಸುತ್ತದೆ. ಈ ಗ್ರಹಣದಲ್ಲಿ ಮುಖ್ಯವಾಗಿ ಉತ್ತರಾಷಾಢ, ಶ್ರವಣ, ಧನಿಷ್ಟ, ಶತಭಿಶ, ಪೂರ್ವಾಭಾದ್ರ (ಮಕರ ಕುಂಭರಾಶಿ) ನಕ್ಷತ್ರಗಳಲ್ಲಿ ಹುಟ್ಟಿದವರಿಗೆ ಉಂಟಾಗುವ ದೋಷನಿವಾರಣೆಗಾಗಿ ಬೇರೆ ಬೇರೆ ಜಪಗಳನ್ನೂ ಹೋಮ ದಾನಗಳನ್ನೂ ಹೇಳಲಾಗಿದೆ.

ಗ್ರಹಣ ಶಾಂತಿಯನ್ನು 'ಹಣಕ್ಕಾಗಿ ಅಲ್ಲ, ಲೋಕಕಲ್ಯಾಣಕ್ಕಾಗಿ' ಶಾಸ್ತ್ರ ಪ್ರಕಾರ ಮಾಡಬೇಕೆಂದು ನಿರ್ಣಯಿಸಿ ಭೃಗು, ಅತ್ರಿ ಸಂಹಿತೆಗಳನ್ನು ಪರಿಶೀಲಿಸಿ, ಆಯಾಯಾ ಗ್ರಹಣಕ್ಕೆ ಕ್ಲುಪ್ತವಾದ ಸಮಿತ್ತು, ಧಾನ್ಯ, ವಸ್ತ್ರ, ಪುಷ್ಪ, ಹವಿಸ್ಸು ಎಲ್ಲವನ್ನೂ ನಿರ್ಧರಿಸಿದರು. ನವಗ್ರಹಗಳಿಗೆ ಒಂಬತ್ತು ಕುಂಡಗಳು, ಇಪ್ಪತ್ತೇಳು ನಕ್ಷತ್ರಗಳಿಗೆ ಅಷ್ಟ ಕಳಶಗಳು, ಹನ್ನೆರಡುರಾಶಿಗಳಿಗೆ ಅಷ್ಟೇ ಕಳಶಗಳು (ರೇಖಾಚಿತ್ರ, ೭-೯), ಇವುಗಳಿಗೆ ಸಂಬಂಧಿಸಿದ ಹೋಮಗಳನ್ನು, ಕಳಶಾರಾಧನೆಯ ವಿಧಿ ವಿಧಾನಗಳನ್ನು ನಿರ್ಣಯಿಸಿಕೊಂಡರು. ಕರ್ನಾಟಕ, ತಮಿಳು ನಾಡು, ಆಂಧ್ರಗಳಿಂದ ಯೋಗ್ಯರಾದ ಋತ್ವಿಜರನ್ನು ಆಯ್ಕೆ ಮಾಡಿ ಆಹ್ವಾನಿಸಿದರು. ಮಹಾಶಾಂತಿ ಕಾರ್ಯಕ್ಕೆ ಜನರ ಅಪಾರ ಸಹಕಾರ ದೊರೆತು ಚಿಕ್ಕ ಪ್ರಮಾಣದ ಕಾರ್ಯಕ್ರಮ ತನಗೆ ತಾನೇ ದೊಡ್ಡದಾಗಿ ಬೆಳೆಯಿತು ಎಂದು ಕಾರ್ಯಕರ್ತರು ಹೇಳುತ್ತಾರೆ. ಐದು ಸಾವಿರ ಆಯವ್ಯಯದ ಅಂದಾಜು ಮೂವತ್ತೆರಡು ಸಾವಿರ, ವಿದ್ಯುಚ್ಛಕ್ತಿಗೆ ಎರಡು ಸಾವಿರ ಖರ್ಚಾದುವು.


ದೇವಾಲಯದ ಹೆಬ್ಬಾಗಿಲಲ್ಲಿ ಯಾಗ ಮಂಟಪದ ಮಹಾದ್ವಾರ ನಿರ್ಮಾಣವಾಯಿತು. ಯಾಗ ಪ್ರದೇಶದ ನಾಲ್ಕೂ ಕಡೆಗಳಲ್ಲಿ ನಾಲ್ಕು ಯಾಗಮಂಟಪಗಳು, ಮಧ್ಯ ಪ್ರದೇಶದಲ್ಲಿ ಅಗ್ನಿ ಕುಂಡಗಳ ಜಾಗಗಳು ಹೀಗಿದ್ದುವು - ಪಂಚಾಗ್ನಿಗಳು ಐದು: ಪೂರ್ವದಲ್ಲಿ ಆಹವನೀಯಾಗ್ನಿ ಕುಂಡ-ಇದಕ್ಕೆ ಎರಡು ಜಗಲಿ; ದಕ್ಷಿಣದಲ್ಲಿ ಅನ್ವಾಹಾರ್ಯಾಗ್ನಿ ಕುಂಡ-ಇದಕ್ಕೆ ಎರಡು ಜಗಲಿ; ಪಶ್ಚಿಮಕ್ಕೆ ಆವಸಥ್ಯಾಗ್ನಿ ಕುಂಡ-ಇದಕ್ಕೆ ಎರಡು ಜಗಲಿ; ಉತ್ತರಕ್ಕೆ ಗಾರ್ಹಪತ್ಯಾಗ್ನಿಕುಂಡ-ಇದಕ್ಕೆ ಮೂರು ಜಗಲಿ (ಜಗಲಿ = ವೇದಿಕೆ). ಸಭ್ಯಾಗ್ನಿಕುಂಡ ಅತಿ ಮುಖ್ಯವಾದ್ದರಿಂದ ಇದನ್ನು ಪ್ರಧಾನಾಗ್ನಿ ಕುಂಡವೆಂದೂ ಕರೆಯುತ್ತಾರೆ ಮತ್ತು ಇದು ಸೂರ್ಯನಿಗೆ ಮೀಸಲು. ಆಗ್ನೇಯ, ನೈರುತ್ಯ, ವಾಯವ್ಯ, ಈಶಾನ್ಯ

ದಿಕ್ಕುಗಳಲ್ಲಿ ಎರಡು ಜಗಲಿಯ ಒಟ್ಟು ನಾಲ್ಕು ಔಪಾಸನಾಗ್ನಿಗಳು. ಮುಂದೆ ಕಾಣಿಸಿರುವ ರೇಖಾಚಿತ್ರ ೧೦ ಇದನ್ನು ಸ್ಪಷ್ಟಪಡಿಸುತ್ತದೆ. ಬೇರೆ ಬೇರೆ ಕುಂಡಗಳ ವಿನ್ಯಾಸಕ್ಕೆ ರೇಖಾಚಿತ್ರಗಳನ್ನೂ (೧-೯) ನೋಡಿ. ಸಭ್ಯಾಗ್ನಿ ಕುಂಡದ ಪಕ್ಕದಲ್ಲಿ ಪಶ್ಚಿಮಕ್ಕೆ * ಗುರುತಿನ ಜಾಗದಲ್ಲಿನ ವೇದಿಕೆಯ ಮೇಲಿನ ಅಷ್ಟದಳ ಪದ್ಮದ ಮೇಲೆ ಆದಿತ್ಯಾದಿ ನವಗ್ರಹಗಳಿಗೆ ಒಂಬತ್ತು ಕಲಶಗಳು. ಆ ಪದ್ಮದ ಉತ್ತರಕ್ಕೆ ವೇದಿಕೆಯ ಮೇಲೆ ** ಈ ಗುರುತು ಇರುವ ಕಡೆ ವೇದಿಕೆಯ ಮೇಲೆ ಇಪ್ಪತ್ತೇಳು ನಕ್ಷತ್ರ ಮಂಡಲ ಕಳಶಗಳು. ಆದೇ ಪದ್ಮದ ದಕ್ಷಿಣಕ್ಕೆ *** ಈ ಗುರುತು ಇರುವ ವೇದಿಕೆಯ ಮೇಲೆ ರಾಶಿ ಚಕ್ರಮಂಡಲದ ಹನ್ನೆರಡು ಕಳಶಗಳು. ಸಭ್ಯಾಗ್ನಿ ಮತ್ತು * ಈ ಗುರುತಿನ ನವಗ್ರಹ ಕಲಶಗಳ ಜಾಗಕ್ಕೂ ಅವಸಥ್ಯಾಗ್ನಿ ಕುಂಡಕ್ಕೂ ಮಧ್ಯೆ ಆಸ್ಥಾನವೇದಿಕೆಯಲ್ಲಿ ವಿಷ್ಣು ಮತ್ತು ಅಷ್ಟ ದಿಕ್ಪಾಲಕರು ಪ್ರತಿಷ್ಠಿತರಾಗಿದ್ದರು. ಒಂದೊಂದು ಯಾಗ ಕುಂಡಕ್ಕೂ ಬಲಕ್ಕೆ ಬ್ರಹ್ಮ, ಎಡಕ್ಕೆ ಸೋಮರಿಗೆ ಸಂಕೇತವಾಗಿ ಒಬ್ಬೊಬ್ಬ ಋತ್ವಿಜ ಇರುತ್ತಾರೆ. ಬ್ರಹ್ಮನ ಮೂಲಕ ಕೆಲವು ದೈವಗಳನ್ನು ಸೋಮನ ಮೂಲಕ ಕೆಲವು ದೈವಗಳನ್ನು ಆಹ್ವಾನಿಸಿ ಅಗ್ನಿಯ ಮೂಲಕ ಅವರಿಗೆ ಹವಿಸ್ಸನ್ನು ಅರ್ಪಿಸಬೇಕು. ಯಾಗಮಂಟಪ, ಮಹಾದ್ವಾರಗಳನ್ನು ಸಾವಿರಾರು ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿತ್ತು.


ಇಡೀ ಅದ್ಭುತ ವ್ಯವಸ್ಥೆ, ಗ್ರಹಣದ ಬಗ್ಗೆ ಅಸಾಧ್ಯವಾಗಿ ರೇಡಿಯೋಪತ್ರಿಕೆಗಳಲ್ಲಿ ಪ್ರಚಾರ, ಅದರ ಫಲವಾಗಿ ಜನರಲ್ಲಿ ಉಂಟಾಗಿದ್ದ ಭೀತಿಗಳಿಂದಾಗಿ ಮಹಾಶಾಂತಿ ಕಾರ್ಯವು ಸಾವಿರಾರು ಜನರನ್ನು ಆಕರ್ಷಿಸಿತು. ಅದರಲ್ಲೂ ವಿಶೇಷವಾಗಿ ವೈಶ್ಯ ಜಾತಿಯ ಮತ್ತು ಇತರ ವರ್ತಕರನ್ನು ಆಕರ್ಷಿಸಿತೆಂದು ಕಾಣುತ್ತದೆ. ಹದಿನಾಲ್ಕು ಹದಿನೈದನೇ ತಾರೀಖುಗಳಂದು ಬೆಳಗ್ಗೆ ಸಂಜೆ ನಿರ್ದಿಷ್ಟ ಪೂಜೆ, ಹೋಮಗಳು ನಡೆದು ಬೇರೆ ಬೇರೆ ಜಪಗಳು ನಡೆದುವು; ಲೋಕ ಶಾಂತಿಗಾಗಿ ಸ್ವಸ್ತಿವಾಚನ ನಡೆಯಿತು. ಆ ಸ್ವಸ್ತಿವಾಚನದ ಪಾಠ ಹೀಗಿದೆ (ಎಲ್ಲ ಕಾರ್ಯಕ್ರಮಗಳೂ ಇಂಗ್ಲಿಷ್ ಅನುವಾದದೊಡನೆ ಧ್ವನಿವರ್ಧಕದಲ್ಲಿ ಬಿತ್ತರಗೊಂಡುವು):




ರೇಖಾಚಿತ್ರ 1: ಆಹವನೀಯಾಗ್ನಿ




ರೇಖಾಚಿತ್ರ 2: ಅನ್ವಾಹಾರ್ಯಾಗ್ನಿ




ರೇಖಾಚಿತ್ರ 3: ಅವಸಥ್ಯಾಗ್ನಿ




ರೇಖಾಚಿತ್ರ 4: ಗಾರ್ಹಪತ್ಯಾಗ್ನಿ




ರೇಖಾಚಿತ್ರ 5: ಔಪಾಸನಾಗ್ನಿ




ರೇಖಾಚಿತ್ರ 6: ಸಭ್ಯಾಗ್ನಿ




ರೇಖಾಚಿತ್ರ 7: ನವಗ್ರಹಕುಂಡಲಗಳು



ರೇಖಾಚಿತ್ರ 8: ರಾಶಿಮಂಡಲ



ರೇಖಾಚಿತ್ರ 9: ಇಪ್ಪತ್ತೇಳು ನಕ್ಷತ್ರ ಮಂಡಲ ಕಲಶಗಳು




ರೇಖಾಚಿತ್ರ 10: ಅಗ್ನಿಕುಂಡಗಳ ಸ್ಥಾನಗಳು

ಶ್ರೀಃ

"ಅಸ್ಮಿನ್ ದೇಶೇ ಸ್ಥಿತಾನಾಂ ಪ್ರಜಾನಾಂ ಬ್ರಾಹ್ಮಣಾದಿ ಸರ್ವವರ್ಣಾನಾಂ ಸರ್ವೇಷಾಂ ಭಕ್ತಜನಾನಾಂ ವ್ಯಾಧಿ ಚೋರ ದುರ್ಭಿಕ್ಷ ಅನಾವೃಷ್ಟಿ ರಾಜಬಾಧಾದಿ ಸರ್ವೋಪದ್ರವ ಶಾಂತ್ಯರ್ಥಂ ಮಂಗಳಾವಾಪ್ತ್ಯರ್ಥಂ ಸಮಸ್ತಾಭ್ಯುದಯಾರ್ಥಂ ಚ ಧರ್ಮಾರ್ಥಕಾಮ ಮೋಕ್ಷ ಚತುರ್ವಿಧ ಫಲ ಪುರುಷಾರ್ಥ ಸಿದ್ಧ್ಯರ್ಥಂ

ವಿಶೇಷೇಣ ಅಸ್ಮಿನ್ ಸಿದ್ಧಾರ್ಥಿನಾಮ ಸಂವತ್ಸರೇ ಮಾಘ ಕೃಷ್ಣ ಅಮಾವಾಸ್ಯಾಯಾಂ ಸ್ಥಿರವಾಸರೇ ಮಧ್ಯಾಹ್ನೇ ಸಂಭವಿಷ್ಯತ್ಕೇತುಗ್ರಸ್ತ ಸರ್ವಗ್ರಾಸ ಸೂರ್ಯೋಪರಾಗ ರೂಪ ದಿವ್ಯಾದ್ಭುತ ನಿಮಿತ್ತ ದರ್ಶನ ಪ್ರಯುಕ್ತ ರಾಜ ರಾಷ್ಟ್ರ ಕ್ಷೋಭ ನಿವೃತ್ತ್ಯರ್ಥಂ ಶರೀರೇ ವೃತ್ತ ವರ್ತಿಷ್ಯಮಾಣ ಸಕಲವ್ಯಾಧಿ ಪೀಡಾ ನಿವಾರಣಾರ್ಥಂ ದುಷ್ಟಸ್ಥಾನ ಸ್ಥಿತ ಗ್ರಹಪೀಡಾ

ವೈಷಮ್ಯ ಜನಿತ ಅಸ್ವಾಸ್ಥ್ಯ ನಿವಾರಣಾರ್ಥಂ ಇಹ ಜನ್ಮನಿ ಜನ್ಮಾಂತರೇಷು ಚ ಆರ್ಜಿತ ಸಕಲ ಪಾಪಾಪನೋದನಾರ್ಥಂ ಜ್ಞಾತಾಜ್ಞಾತ ಸಕಲ ಪಾಪ ಕ್ಷಯಾರ್ಥಂ ದುಃಸ್ವಪ್ನ ದುಶ್ಶಕುನಾದಿ ಸೂಚಿತ ಸಕಲಾರಿಷ್ಟ ನಿರಸನಾರ್ಥಂ ಆಕಸ್ಮಿಕ ಕ್ಷುದ್ರ ಜಂತು ಭಯ ವಾಹನಾದ್ಯಪಘಾತಭಯ ಭೌಮಾಂತರಿಕ್ಷ ದಿವ್ಯ ಮಹೋತ್ಪಾತ ಭಯ ನಿವಾರಣಾರ್ಥಂ ಅಪಮೃತ್ಯು ಅಪಸ್ಮಾರ ಪಿಶಾಚಾದಿ ಪೀಡಾ ಪರಿಹಾರಾರ್ಥಂ ಗ್ರಹವಶಾತ್ ಜನ್ಮನಕ್ಷತ್ರವಶಾತ್ ಜನ್ಮರಾಶಿವಶಾತ್ ಸೂರ್ಯಗ್ರಹಣಕಾಲೇ ಯೇ ಯೇ ದೋಷಾಃ ಶಾಸ್ತ್ರೇಷು ನಿರೂಪಿತಾಃ ತೇಷಾಂ ದೋಷಾಣಾಂ ನಿವಾರಣಾರ್ಥಂ ಧನಕನಕ ವಸ್ತು ವಾಹನಾದಿ ಸಪರಿಕರ ಸಂಪತ್ ಸಮೃದ್ಧ್ಯರ್ಥಂ ಅಖಂಡ ಲಕ್ಷ್ಮೀ ಐಶ್ವರ್ಯ ಸಿದ್ಧ್ಯರ್ಥಂ ಸರ್ವತೋ ರಕ್ಷಾರ್ಥಂ ಆರೋಗ್ಯ ದೃಢಕಾಯತಾ ಸಿದ್ಧಿದ್ವಾರಾ ದೀರ್ಘಾಯುಷ್ಯಾಭಿವೃದ್ಧ್ಯರ್ಥ್ಯಂ ಶ್ರೀ ವೈಖಾನಸ ಶಾಸ್ತ್ರೋಕ್ತ ಪ್ರಕಾರೇಣ ತ್ರ್ಯಾಹ್ನಿಕ ಸಂಕಲ್ಪಪೂರ್ವಕಂ ಅದ್ಭುತ ಮಹಾ ಶಾಂತ್ಯಾಖ್ಯಂ ಕರ್ಮ ಕರಿಷ್ಯಮಾಣಃ ತದಾದೌ ಯಾಗಶಾಲಾಶುದ್ಧ್ಯರ್ಥಂ ನವೋಪಕರಣ ಶುದ್ಧ್ಯರ್ಥಂ ಭಾಂಡ ಭಾಜನ ಶುದ್ಧ್ಯರ್ಥಂ ಸ್ವಸ್ತ್ಯರ್ಥಂ ಏಭಿಃ ಮಹಾಜನೈಃ ಸಹ ಸ್ವಸ್ತಿ ಪುಣ್ಯಾಹ ವಾಚನಂ ಕರಿಷ್ಯೇ"

## ಇದರ ಸಾರಾಂಶ ಹೀಗಿದೆ

"ಈ ದೇಶದಲ್ಲಿರುವ ಬ್ರಾಹ್ಮಣಾದಿ ಸರ್ವವರ್ಣಗಳ ಸರ್ವ ಪ್ರಜೆಗಳ ಭಕ್ತ ಜನರಿಗೆ ರೋಗ, ಕಳ್ಳತನ, ಕ್ಷಾಮ, ರಾಜಬಾಧಾದಿ ಉಪದ್ರವಗಳ ಉಪಶಮನಕ್ಕಾಗಿ; ಸಮಸ್ತರಿಗೂ ಮಂಗಳ ಅಭ್ಯುದಯಗಳಾಗಲು; ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಚತುರ್ವಿಧ ಫಲಗಳಿಗಾಗಿ:

೧೬-೨-೮೦ರ ಶನಿವಾರ ಮಧ್ಯಾಹ್ನ ನಡೆಯಲಿರುವ ಪೂರ್ಣಗ್ರಹಣವನ್ನು ನೋಡಿದ್ದರಿಂದ ಉಂಟಾಗಬಹುದಾದ ರೋಗ ಪೀಡೆಯ ನಿವಾರಣೆಗಾಗಿ;

ದುಷ್ಟ ಸ್ಥಾನದ ಗ್ರಹಗಳ ಪೀಡೆಯ ಪರಿಹಾರಾರ್ಥವಾಗಿ, ಮತ್ತು ಸುಸ್ಥಾನದ ಗ್ರಹಗಳ ಅತಿಶಯ ಫಲ ಸಂಪಾದನಾರ್ಥವಾಗಿ;

ಆಹಾರಾದಿಗಳಿಂದ ಉಂಟಾದ ಅಸ್ವಾಸ್ಥ್ಯ ನಿವಾರಣೆಗಾಗಿ; ಈ ಜನ್ಮ, ಹಿಂದಿನ ಜನ್ಮಗಳಲ್ಲಿ ಸಂಚಿತವಾದ ಪಾಪ ನಿವಾರಣೆಗಾಗಿ; ತಿಳಿದೋ ತಿಳಿಯದೆಯೋ ಮಾಡಿದ ಪಾಪಗಳ ಕ್ಷಯಾರ್ಥವಾಗಿ;

ಕೆಟ್ಟ ಕನಸು, ಶಕುನಗಳು ಸೂಚಿಸಿದ ಎಲ್ಲ ಅರಿಷ್ಟಗಳ ನಿವಾರಣೆಗಾಗಿ;

ದುಷ್ಟ ಪ್ರಾಣಿಗಳಿಂದ ಪೀಡೆ, ವಾಹನಗಳಿಂದ ಅಪಘಾತ, ಭೂಮಿ ಅಂತರಿಕ್ಷಗಳ ಉತ್ಪಾತಗಳ ಭಯ ನಿವಾರಣೆಗಾಗಿ;

ಅಪಮೃತ್ಯು, ಅಪಸ್ಮಾರ, ಪಿಶಾಚಿಗಳ ಪೀಡಾ ಪರಿಹಾರಕ್ಕಾಗಿ;

ಗ್ರಹದಿಂದಲೋ ಜನ್ಮನಕ್ಷತ್ರದಿಂದಲೋ ಜನ್ಮರಾಶಿಯಿಂದಲೋ ಸೂರ್ಯಗ್ರಹಣ ಕಾಲದಲ್ಲಿ ಯಾವ ದೋಷಗಳು ಸಂಭವಿಸುತ್ತವೆಂದು ಶಾಸ್ತ್ರಗಳಲ್ಲಿ ಹೇಳಲಾಗಿದೆಯೋ ಅವುಗಳ ನಿವಾರಣೆಗಾಗಿ;

ಧನ ಕನಕ ವಸ್ತು ವಾಹನಾದಿ ಎಲ್ಲ ಸಂಪತ್ತುಗಳ ಅಭಿವೃದ್ಧಿಗಾಗಿ; ಆರೋಗ್ಯ ದೃಢ ಕಾಯ, ದೀರ್ಘಾಯುಷ್ಯಗಳಿಗಾಗಿ;

ಶ್ರೀ ವೈಖಾನಸ ಶಾಸ್ತ್ರೋಕ್ತ ಪ್ರಕಾರ ಮಾಡುತ್ತಿರುವ ಅದ್ಭುತ ಮಹಾಶಾಂತಿಯೆಂಬ ಕರ್ಮವನ್ನು ಮಾಡುತ್ತಿರುವ ಯಾಗ ಶಾಲೆಯ ಶುದ್ಧಿಗಾಗಿ. ನವೋಪಕರಣಗಳ ಶುದ್ಧಿಗಾಗಿ ಸ್ವಸ್ತಿಗಾಗಿ, ವೃದ್ಧಿಗಾಗಿ ಎಲ್ಲ ಮಹಾಜನರೊಡನೆ ಸೇರಿ ಸ್ವಸ್ತಿ ಪುಣ್ಯಾಹವಾಚನವನ್ನು ಮಾಡುತ್ತೇನೆ."

ಗ್ರಹಣದಿಂದ ಉಂಟಾಗಬಹುದಾದ ಪೀಡೆಗಳು, ಅಥವಾ ಯಾವುದೇ ಕಾರಣದಿಂದಲೂ ಆಗಬಹುದಾದ ಪೀಡೆಗಳು ಇವುಗಳ ನಿವಾರಣೆ ಸ್ವಸ್ತಿ ವಾಚನದ (ಸ್ವಸ್ತಿ=ಕ್ಷೇಮ, ಆರೋಗ್ಯ, ಸಮೃದ್ಧಿ) ಒಂದು ಮುಖ–ಇದು ಕೆಟ್ಟದ್ದರ ತಡೆಯನ್ನು ಹೇಳುತ್ತದೆ. ಈ ನಿಷೇಧಾತ್ಮಕ ನಿಲುವಲ್ಲದೆ ಸ್ವಸ್ತಿವಾಚನಕ್ಕೆ ಒಂದು ಇತ್ಯಾತ್ಮಕ ನಿಲುವೂ ಉಂಟು; ಎಲ್ಲರಿಗೂ ಒಳ್ಳೆಯದನ್ನು ಮಾಡುವ, ಆರೋಗ್ಯ ಐಶ್ವರ್ಯ ಆಯುಸ್ಸನ್ನು ವರ್ಧಿಸುವ ಬಯಕೆಯೂ ಇದೆ.

ಮೊದಲ ಎರಡು ದಿನಗಳೂ ಪಂಚಾಗ್ನಿಗಳು ಆರಲಿಲ್ಲ. ಋತ್ವಿಕ್ಕುಗಳಿಗೆ ಆ ಮೂರು ದಿನಗಳೂ ಅಲ್ಲೇ ಸ್ನಾನ, ಊಟ. ಮಹಾಶಾಂತಿ ಯಜ್ಞದ ಕಾರ್ಯಕ್ರಮ ಕನ್ನಡ, ತೆಲುಗು ಪತ್ರಿಕೆಗಳಲ್ಲೂ ಪ್ರಕಟವಾಗಿ ಪ್ರಚಾರವನ್ನು ಪಡೆಯಿತು. ಮೂರನೆಯ ದಿನ–ಗ್ರಹಣದ ದಿನ, ಬಹು ಸಂಖ್ಯೆಯಲ್ಲಿ ಜನ ಬಂದರು. ಆ ದಿನ ಬಂದ ಜನರೆಲ್ಲ ಗ್ರಹಣ ಮುಗಿಯುವವರೆಗೆ ಅಲ್ಲೇ ಇರಬೇಕೆಂಬ ನಿಬಂಧನೆ ಬಹುತೇಕ ಈಡೇರಿತು. ಅನೇಕ ಜನ ಬಂದು ತಮ್ಮ ಹೆಸರಿನಲ್ಲಿ ಶಾಂತಿ ಮಾಡಿಸಿಕೊಂಡರು. ಅದರಲ್ಲೂ ಉತ್ತರಾಷಾಢ, ಶ್ರವಣ, ಧನಿಷ್ಟ, ಶತಭಿಷ, ಪೂರ್ವಾಭಾದ್ರ ನಕ್ಷತ್ರ (ಮಕರ ಕುಂಭ ರಾಶಿ) ನಕ್ಷತ್ರಗಳಲ್ಲಿ ಜನಿಸಿದವರು ಹಣ ಕೊಟ್ಟು ಗ್ರಹಶಾಂತಿ ಮಾಡಿಸಿಕೊಂಡರು. ಅನೇಕರು ಬೆಳ್ಳಿಯ ನವಗ್ರಹ ಯಂತ್ರಗಳನ್ನು (ತಾಯತಗಳನ್ನು) ಕಟ್ಟಿಕೊಂಡರು. ಒಂದೊಂದಕ್ಕೂ ಹತ್ತು ರೂಪಾಯಿ. ಯಂತ್ರಗಳ ಮೇಲೆ ಒಂದು ಕಡೆ ಆಂಜನೇಯ, ಇನ್ನೊಂದು ಕಡೆ ನವಗ್ರಹ ಚಿತ್ರಗಳಿದ್ದುವು. ಪಂಚಲೋಹದಲ್ಲಿ ಅಷ್ಟಲಕ್ಷ್ಮಿಯರ ಚಿತ್ರಗಳು. ಹಣೆಗೆ ಕಟ್ಟಿಕೊಳ್ಳಲು ಲಲಾಟಪಟ್ಟವನ್ನು ಮಾಡಿಸಿದ್ದರು. ಇದು ದಪ್ಪನೆಯ ರಟ್ಟಿನ ಮೇಲೆ ಅಚ್ಚಾದ ಸಂಸ್ಕೃತ ಪಾಠ. ಆ ಕಟ್ಟಿನ ಅಕ್ಕ ಪಕ್ಕಗಳಲ್ಲಿ ದಾರಗಳಿದ್ದು ಹಣೆಗೆ ಕಟ್ಟಿಕೊಳ್ಳಲು ಅನುಕೂಲವಾಗಿದ್ದಿತು. ಲಲಾಟ ಪಟ್ಟದ ಪಾಠ ಹೀಗಿದೆ.

ಯೋಽಸೌ ವಜ್ರಧರೋ ದೇವಃ ಆದಿತ್ಯಾನಾಂ ಪ್ರಭುರ್ಮತಃ
ಸಹಸ್ರನಯನಃ ಶಕ್ರೋ ಗ್ರಹಪೀಡಾಂ ವ್ಯಪೋಹತು (೧)

ಮುಖಂ ಯಃ ಸರ್ವದೇವಾನಾಂ ಸಪ್ತಾರ್ಚಿರಮಿತದ್ಯುತಿಃ
ಸೂರ್ಯೋಪರಾಗಸಂಭೂತಾಮಗ್ನಿಃ ಪೀಡಾಂ ವ್ಯಪೋಹತು (೨)

ಯಃ ಕರ್ಮಸಾಕ್ಷೀ ಲೋಕಾನಾಂ ಧರ್ಮೋ ಮಹಿಷವಾಹನಃ
ಯಮಃ ಸೂರ್ಯೋಪರಾಗೋತ್ಥಾಂ ಗ್ರಹಪೀಡಾಂ ವ್ಯಪೋಹತು (೩)

ರಕ್ಷೋ ಗಣಾಧಿಪಃ ಸಾಕ್ಷಾನ್ನೀಲಾಂಜನಸಮಪ್ರಭಃ
ಖಡ್ಗ ಹಸ್ತೋಽತಿಭೀಮಶ್ಚ ಗ್ರಹಪೀಡಾಂ ವ್ಯಪೋಹತು (೪)

ನಾಗಪಾಶಧರೋ ದೇವಃ ಸದಾ ಮಕರವಾಹನಃ
ಸ ಜಲಾಧಿಪತಿರ್ದೇವಃ ಗ್ರಹಪೀಡಾಂ ವ್ಯಪೋಹತು (೫)

ಯೋಽ ಸಾವಿಂದುಧರೋ ದೇವಃ ಪಿನಾಕೀ ವೃಷವಾಹನಃ
ಸೂರ್ಯೋಪಸರಾಗಪಾಪಾನಿ ನಾಶಯತು ಶಂಕರಃ (೬)

ಪ್ರಾಣರೂಪೋ ಹಿ ಲೋಕಾನಾಂ ಸದಾ ಕೃಷ್ಣಮೃಗಪ್ರಿಯಃ
ವಾಯುಃ ಸೂರ್ಯೋಪರಾಗೋತ್ಥಾಂ ಗ್ರಹಪೀಡಾಂ ವ್ಯಪೋಹತು (೭)

ಯೋಽಸೌ ನಿಧಿಪತಿರ್ದೇವಃ ಖಡ್ಗಶೂಲಗದಾಧರಃ
ಸೂರ್ಯೋಪಕರಾಗಕಲುಷಂ ಧನದೋಽತ್ರ ವ್ಯಪೋಹತು (೮)

ತ್ರೈಲೋಕ್ಯೇ ಯಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ
ಬ್ರಹ್ಮ ವಿಷ್ಣ್ವರ್ಕರುದ್ರಾಶ್ಚ ದಹನ್ತು ಮಮ ಪಾತಕಂ (೯)

ಗ್ರಹಣೋತ್ಪಾತವೇಳಾಯಾಂ ಸರ್ವದುಃಖೋಪಶಾಂತಯೇ
ಕ್ಷಿಪ್ರಂ ನಿವಾರ್ಯ ಗೋವಿಂದ ಪಾಹಿ ಮಾಂ ಪಟ್ಟ ಬಂಧನಮ್[೨] (೧೦)

ಇದರ ಕನ್ನಡಾನುವಾದ ಹೀಗಿದೆ:

ವಜ್ರಧಾರಿಯೂ, ಆದಿತ್ಯರಿಗೆ ಪ್ರಭುವೂ, ಸಾವಿರ ಕಣ್ಣುಳ್ಳವನೂ, ದೇವನೂ ಆದ ಇಂದ್ರನು ಗ್ರಹಗಳ ಪೀಡೆಯನ್ನು ಪರಿಹರಿಸಲಿ. (೧)

ಸಮಸ್ತದೇವತೆಗಳಿಗೆ ಮುಖನೆಂದೆನಿಸುವ, ಏಳು ಬಗೆಯ ಜ್ವಾಲೆಗಳುಳ್ಳ, ಅಮಿತ ಕಾಂತಿಯ ಅಗ್ನಿಯು ಸೂರ್ಯಗ್ರಹಣದಿಂದ ಉಂಟಾಗುವ ಪೀಡೆಯನ್ನು ನಿವಾರಿಸಲಿ.(೨)

ಎಲ್ಲ ಜನರ ಕರ್ಮಗಳಿಗೆ ಸಾಕ್ಷಿಯಾದ, ಮಹಿಷವಾಹನನಾದ ಯಮಧರ್ಮನು ಸೂರ್ಯಗ್ರಹಣದಿಂದ ಜನಿಸುವ ಪೀಡೆಯನ್ನು ನಾಶಮಾಡಲಿ. (೩)

ರಕ್ಷ ಎಂಬ ರಕ್ಷಕ ಗಣಕ್ಕೆ ಅಧಿಪತಿಯೂ. ನೀಲಾಂಜನಕ್ಕೆ ಸಮನಾದ ಪ್ರಭೆಯುಳ್ಳವನೂ, ಖಡ್ಗವನ್ನು ಹಿಡಿದು ಭಯಂಕರನೂ ಆದ ನಿರ್ಋತಿಯು ಗ್ರಹಗಳ ಪೀಡೆಯನ್ನು ಪರಿಹರಿಸಲಿ.(೪)

ನಾಗಪಾಶವನ್ನು ಧರಿಸಿರುವ, ಯಾವಾಗಲೂ ಮಕರವಾಹನನಾಗಿರುವ ಜಲಾಧಿಪತಿಯಾದ ದೇವನು (ವರುಣನು) ಗ್ರಹಪೀಡೆಯನ್ನು ಹೋಗಲಾಡಿಸಲಿ. (೫)

ಚಂದ್ರನನ್ನು ಧರಿಸಿದವನೂ, ಪಿನಾಕಿಯೂ, ವೃಷಭವಾಹನನೂ ಆದ ಆ ಶಂಕರನು ಸೂರ್ಯಗ್ರಹಣದ ಪಾಪಗಳನ್ನು ನಾಶಪಡಿಸಲಿ. (೬)

ಲೋಕಗಳಿಗೆ ಪ್ರಾಣರೂಪನಾದ, ಸರ್ವದಾ ಕೃಷ್ಣಮೃಗಪ್ರಿಯನಾದ ವಾಯುವು ಸೂರ್ಯಗ್ರಹಣದಿಂದಾಗುವ ಗ್ರಹಪೀಡೆಯನ್ನು ನಿವಾರಿಸಲಿ. (೭)

ನಿಧಿಗೆ ಅಧಿಪತಿಯೂ, ಖಡ್ಗ ಶೂಲ ಗದೆಗಳನ್ನು ಧರಿಸಿದವನೂ ಆದ ಕುಬೇರನು ಸೂರ್ಯಗ್ರಹಣದ ದೋಷವನ್ನು ಪರಿಹರಿಸಲಿ (೮)

ಮೂರು ಲೋಕಗಳ ಚರಾಚರಾತ್ಮಕವಾದ ಎಲ್ಲ ಭೂತಗಳೂ, ಬ್ರಹ್ಮ ವಿಷ್ಣು ಸೂರ್ಯ ರುದ್ರರೂ ನನ್ನ ಪಾತಕಗಳನ್ನು ಪರಿಹರಿಸಲಿ (೯)

ಗ್ರಹಣೋತ್ಪಾತ ವೇಳೆಯಲ್ಲಿ ಸರ್ವದುಃ ಖೋಪ ಶಾಂತಿಗಾಗಿ ಪಟ್ಟ ಬಂಧನದ ನನ್ನನ್ನು ಎಲ್ಲ ಕೆಟ್ಟದನ್ನೂ ನಿವಾರಿಸಿ – ಗೋವಿಂದ, ರಕ್ಷಿಸು (೧೦)

ಅಷ್ಟ ದಿಕ್ಪಾಲಕರೂ, ಸಕಲ ಭೂತಗಳೂ, ತ್ರಿಮೂರ್ತಿಗಳೂ ಸೂರ್ಯಗ್ರಹಣ ದೋಷವನ್ನು ನಿವಾರಿಸಲಿ ಎಂಬ ಪ್ರಾರ್ಥನೆ ಇದು. ಲಲಾಪಟ್ಟವನ್ನು ಮಂತ್ರ ಪೂರ್ವಕವಾಗಿ ಸ್ವೀಕರಿಸಿ, ಗ್ರಹಣಾನಂತರ ವಿಸರ್ಜಿಸಬೇಕಿತ್ತು. ೧೬–೨–೮೦ರ ಶನಿವಾರ ಮಧ್ಯಾಹ್ನ ೨–೨೪ ರಿಂದ ೪–೩೫ರವರೆಗೆ ಗ್ರಹಣ. ಆ ಅವಧಿಯಲ್ಲಿ ಯಾಗ ಮಹಾಮಂಟಪದಲ್ಲಿದ್ದ ಯಾರಿಗೂ ಸೂರ್ಯನನ್ನು ನೋಡಲು ಅವಕಾಶ ಕೊಡಲಿಲ್ಲ. ಹಣೆಗೆ ಪಟ್ಟ, ಯಂತ್ರಾದಿಗಳನ್ನು ವಿತರಣೆ ಮಾಡಿದ್ದು ಆಗಲೇ. ಎಷ್ಟೋ ಜನ ತರ್ಪಣಗಳನ್ನೂ ಕೊಟ್ಟರು. ಹೋಮ, ಕಲಶ ಪೂಜೆಗಳೆಲ್ಲ ಆದಮೇಲೆ ಗ್ರಹಣ ಬಿಡುವ ಹೊತ್ತಿಗೆ ಸಂಜೆ ೪–೩೦ಕ್ಕೆ ಪೂರ್ಣಾಹುತಿಯನ್ನು ಕೊಡಲಾಯಿತು. (ಚಿತ್ರ ೧೯) ಸಂಸಾರ ಸಮೇತರಾಗಿ ಕರ್ನಾಟಕದ ಮುಖ್ಯ ಮಂತ್ರಿ ಶ್ರೀ ಆರ್. ಗುಂಡೂರಾಯರು ಮತ್ತು ಕೇಂದ್ರ ಮಂತ್ರಿ ಶ್ರೀ ಜಾಫರ್ ಷರೀಫರು ಬಂದು ಪೂರ್ಣಾಹುತಿಯನ್ನು ವೀಕ್ಷಿಸಿದರು.[೩]

ಪ್ರತಿದಿನ ಐನೂರರಿಂದ ಸಾವಿರ ಜನಕ್ಕೆ ಅನ್ನದಾನ ನಡೆಯಿತು: ಸಂಜೆ ಭಗವದ್ಗೀತೆಯ ಮೇಲೆ ಉಪನ್ಯಾಸಗಳಿದ್ದುವು. ಗ್ರಹಣದ ಬೆಳಿಗ್ಗೆ, ರಾತ್ರಿ ಅನೇಕ ಸಾವಿರ ಜನರಿಗೆ ಅನ್ನಸಂತರ್ಪಣೆ ನಡೆಯಿತು. ಬಂದ ಎಲ್ಲ ಋತ್ವಿಕ್ಕುಗಳಿಗೆ ಸಂಭಾವನೆ, ಪ್ರಯಾಣದ ವೆಚ್ಚ, ವಸ್ತ್ರಗಳನ್ನು ಕೊಟ್ಟು ಸನ್ಮಾನಿಸಲಾಯ್ತು. ಮೂರು ದಿನವೂ ಪೋಲೀಸ್ ಬಂದೋಬಸ್ತ್ ಇತ್ತು.

**ಮಹಾಶಾಂತಿ ಮಹೋತ್ಸವ: ಸಾಮನ್ಯರ ಪ್ರತಿಕ್ರಿಯೆ:**

ಮೇಲಿನದು ವ್ಯವಸ್ಥಾಪಕರು ಕೊಟ್ಟ ಚಿತ್ರ. ಆವರ ಉದ್ದೇಶ ಉದಾತ್ತವಾದುದೆಂದೇ ಭಾವಿಸೋಣ. ಅದನ್ನು ಶಂಕಿಸಲು ಆಧಾರವಾದರೂ ಏನಿದೆ? ಅವರೇ ಕೊಟ್ಟ ಮಾಹಿತಿಯಿಂದ, ರಿಚುಯಲ್ಲುಗಳ ದೃಷ್ಟಿಯಿಂದ ಪ್ರಮುಖರು ಬ್ರಾಹ್ಮಣರು; ಹಣ ಕೊಟ್ಟವರಲ್ಲಿ ಮುಖ್ಯರು ವೈಶ್ಯರು, ಮತ್ತು ಇತರ ವರ್ತಕರು. ಸರ್ಕಾರದ ಪರವಾಗಿ ಸ್ವತಃ ಮುಜರಾಯಿ ಕಮಿಷನರು ಆಸಕ್ತಿವಹಿಸಿದ್ದರು; ಕರ್ನಾಟಕದ ಮತ್ತು ಕೇಂದ್ರದ ಮಂತ್ರಿಗಳೂ ಭಾಗವಹಿಸಿದ್ದರು. (ಇವರು 'ಕ್ಷತ್ರಿಯ' ವರ್ಗವೆಂದು ಬೇಕಾದರೆ ಭಾವಿಸಬಹುದು), ಬ್ರಾಹ್ಮಣ, ವೈಶ್ಯ, 'ಕ್ಷತ್ರಿಯ' ವರ್ಗಗಳ ಮುಂದಾಳುತ್ವದ ಸಮಾರಂಭದ ಬಗ್ಗೆ ಸಾಮಾನ್ಯರ ಅಥವಾ ಶೂದ್ರರ ಪ್ರತಿಕ್ರಿಯೆಯೂ ಇಂತಹ ಅಧ್ಯಯನದಲ್ಲಿ ಸ್ವಾರಸ್ಯವಾಗಿರಬಹುದು. ಮತ್ತು ನಮ್ಮ ಅಧ್ಯಯನವೇ ಗ್ರಹಣವನ್ನು ಕುರಿತಾದ ಸಾಮಾನ್ಯರ ಪ್ರತಿಕ್ರಿಯೆಯಾದ್ದರಿಂದ ಅದನ್ನೂ ಇಲ್ಲಿ, ಆ ಪ್ರತಿಕ್ರಿಯೆಯ ಎಲ್ಲ ವಿವರಗಳೂ ನಿಜವಲ್ಲದಿರುವ ಸಂಭವವಿದ್ದರೂ ದಾಖಲು ಮಾಡುತ್ತಿದ್ದೇನೆ.

ಗ್ರಹಣ ಜನಸಾಮಾನ್ಯರಲ್ಲಿ ಭಯವನ್ನು ಹುಟ್ಟಿಸಿದ್ದು ನಿಜ. 'ರೇಡಿಯೋದಲ್ಲಿ ಗೌರ್ನ್‌ಮೆಂಟೇ ಹೇಳುತ್ತಿರುವಾಗ ಬ್ರಾಹ್ಮಣರೇ ಹೆದರಿಸಿರುವಾಗ ಭಯವಾಗದೇ ಉಂಟೇ?', ಅದೂ ಕಣ್ಣು ಹೋಗುತ್ತದೆ ಎಂಬ ಭಯ. 'ಕೈಕಾಲು ಹೋದರೆ ಪರವಾ ಇಲ್ಲ, ಕಣ್ಣು ಹೋದರೆ?' ಇದು ಒಬ್ಬ ವ್ಯಕ್ತಿಯ ಸಹಜಾನ್ನಿಸಿಕೆ. ಗ್ರಹಣದ ದುಷ್ಪರಿಣಾಮ ಹಿಂದೂಗಳಿಗೆ ಮಾತ್ರ, ಕ್ರಿಶ್ಚಿಯನ್ ಮುಸ್ಲಿಮರಿಗೆ ಇಲ್ಲವೇ ಇಲ್ಲ ಎಂಬ ಮಾತಲ್ಲಿ ಗ್ರಹಣಗಳ ಆನಿಷ್ಟ ಪರಿಣಾಮದ ಬಗ್ಗೆ ಸಂದೇಹವೂ ಕೆಲವರಿಗೆ ಇದ್ದಿತು. ಜನಸಾಮನ್ಯರಲ್ಲಿ ಬಹಳ ಜನ ದೇವಾಲಯದಲ್ಲಿ ಏನೋ ನಡೆಯುತ್ತಿದೆ ಎಂಬ ಕುತೂಹಲಕ್ಕೆ ಬಂದಿದ್ದರು; ಭಯವೂ ಇರಬಹುದು. (ಶ್ರೀಮಂತರಿಗೆ ಸ್ವಾಭಾವಿಕವಾದ ಭಯವು ಜನಸಾಮಾನ್ಯರನ್ನು ಅಷ್ಟು ಕಾಡುವುದಿಲ್ಲ). ಆದರೆ, ಸಾಮಾನ್ಯ ಜನಕ್ಕೆ ಮಹೋತ್ಸವದಲ್ಲಿ ತಾದಾತ್ಮ್ಯ

ಇರಲಿಲ್ಲವೆಂಬುದು ಸ್ಪಷ್ಟವಾಗಿತ್ತು, 'ಕುಂಭ ರಾಶಿ ಮಕರ ರಾಶಿಯವರಿಗೆ ಅಪಾಯ ಎಂಬ ಭಯ ಹುಟ್ಟಿಸಿದ್ದರು' ಎಂಬ ಸಾಮಾನ್ಯರದೇ ಮಾತಿನಿಂದ, ಉತ್ಸವಸಮಿತಿಯ ಕರಪತ್ರ ಕೆಲಸ ಮಾಡಿತ್ತು ಎಂಬುದು ಸ್ಪಷ್ಟವಾಗಿದೆ. 'ಶೆಟ್ಟರು ವರ್ತಕರು ಹೆಚ್ಚಾಗಿ ಉಳಿದಂತೆ ವಿದ್ಯಾವಂತರು, ಎಲ್ಲಾ ತರದ ಜನರು ಬಂದಿದ್ದರು' ಎಂಬಲ್ಲಿ ಶ್ರದ್ಧೆಯ ಭಾಗಿಗಳು ಯಾರು, ಸುಮ್ಮನೆ ಭಾಗಿಗಳು ಯಾರು ಎಂಬುದು ಸ್ಪಷ್ಟವಾಗಿದೆ. ಗ್ರಹಣ ನೋಡದಂತೆ 'ಕಣ್ಮರೆ' ಕೊಟ್ಟಿದ್ದರು (=ಲಲಾಟಪಟ್ಟಿ), 'ಅದರಲ್ಲಿ ಸಂಸ್ಕೃತವೋ, ಇಂಗ್ಲೀಷೋ ಏನೋ ಇತ್ತು'! ೬೦ ರೂಪಾಯಿನ ಮೂರ್ನಾಲ್ಕು ಸಾವಿರ ತಾಯತ ಮಾರಿದರು ಎಂಬಲ್ಲಿ ತಾಯತದ ದರ ಉತ್ಪ್ರೇಕ್ಷಿತ. ತಾಯತ ಬೆಳ್ಳಿಯದಲ್ಲ, ಅಲ್ಯೂಮಿನಿಯಂ ಎಂದು ಒಬ್ಬ ಸಿನಿಕ್ ಸಾಮಾನ್ಯನ ಪ್ರತಿಕ್ರಿಯೆ. ಆದರೆ ವ್ಯವಸ್ಥಾಪಕರು ಬಹಳ ಹಣ ಕೂಡಿಸಿದರು, ಬ್ರಾಹ್ಮಣರಿಗೆ ಬಹಳ ಲಾಭವಾಯಿತು ಎಂಬುದು ಉತ್ಸವದಲ್ಲಿ ಜಡ ಪ್ರೇಕ್ಷಕರಾಗಿದ್ದ ಸಾಮನ್ಯ ಜನರ ಅನಿಸಿಕೆ. (ಹಣ ಓಡಾಡುವ ಯಾವುದೇ ಸಮಾರಂಭಗಳ ಬಗ್ಗೆ ಸಾರ್ವಜನಿಕರ ಪ್ರತಿಕ್ರಿಯೆ ಇಂತಹುದಾಗಿರುತ್ತದೆ). ಹೋಮ ಮಾಡುವವರಿಗೆ ಹಳದಿ ಬಟ್ಟೆಯ 'ಯೂನಿಫಾರ್ಮ್' ತಂದಿದ್ದರು. ಕಟ್ಟಿಗೆಗಳನ್ನು ಮಸೆದು ಬೆಂಕಿ ಹುಟ್ಟಿಸಿದರು. ಮತ್ತು ಟಿನ್‌ಗಟ್ಟಲೆ ತುಪ್ಪ ಸುರಿದರು, ಕೊನೆಯ ದಿನ ಭರ್ಜರಿ ರೇಷ್ಮೆ ಸೀರೆಯನ್ನೇ ಹೋಮಕ್ಕೆ ಹಾಕಿದರು ಎಂಬಲ್ಲಿ ಸಾಮಾನ್ಯರಿಗೆ ಈ ಅಪವ್ಯಯ ಅನಗತ್ಯವೆನ್ನುವ ಪ್ರಾಮಾಣಿಕ ಭಾವನೆಯಿದ್ದಿತೆಂಬುದು ಗೊತ್ತಾಗುತ್ತದೆ. ಮಂತ್ರಗಳೆಲ್ಲ ಸಂಸ್ಕೃತದಲ್ಲಿ; ಕನ್ನಡವೋ ತೆಲುಗೋ ಆಗಿದ್ದರೆ ತಮಗೆ ತಿಳಿಯುತ್ತಿತ್ತೆಂದು ಒಬ್ಬ ವ್ಯಕ್ತಿಗೆ ಅನ್ನಿಸಿತು. ಯಾಗ ಮಂಟಪಕ್ಕೆ ಎಲ್ಲರಿಗೂ ಮುಕ್ತ ಪ್ರವೇಶವಿತ್ತು. ಗ್ರಹಣದ ದಿನ ಆಲ್ಲಿ ಜನ ಸಮ್ಮರ್ದವಿದ್ದರೆ, ಬೀದಿಗಳಲ್ಲಿ 'ಕರ್ಫ್ಯೂ ಹಾಕಿದ ಹಾಗೆ' ಎಲ್ಲ ಸೈಲೆಂಟಾಗಿತ್ತು. ಗ್ರಹಣದ ದಿನ ಹಾಕಿದ ಊಟದ ಬಗ್ಗೆ ಅಷ್ಟು ಒಳ್ಳೆಯ ಅಭಿಪ್ರಾಯವೇನೂ ವ್ಯಕ್ತವಾಗಲಿಲ್ಲ. (ಬಹುಶಃ ತೀರ ಕೆಳವರ್ಗದ, ಭಿಕ್ಷುಕ ಜನರನ್ನು–'ಪಾಪಿ ಪರದೇಸಿಗಳನ್ನು'– ಗಮನದಲ್ಲಿಟ್ಟುಕೊಂಡು ವ್ಯವಸ್ಥಾಪಕರು ಅಡುಗೆ ಮಾಡಿಸಿದ್ದರೆಂದು ತೋರುತ್ತದೆ). ನೂರು ರೂಪಾಯಿ ಮೇಲೆ ಕೊಟ್ಟವರಿಗೆ ಆ ದಿನ ಪ್ರತ್ಯೇಕ ಊಟದ ವ್ಯವಸ್ಥೆಯಿತ್ತೆಂದು ತಿಳಿದಿದ್ದು ಇವರಿಂದಲೇ. 'ಹಳದಿನಾಮದವರು' ಆ ಮೂರೂ ದಿನ ಪಕ್ಕದ ಈಶ್ವರ ದೇವಾಲಯದ 'ವಿಭೂತಿ ಬ್ರಾಹ್ಮಣರನ್ನು' ಹತ್ತಿರಕ್ಕೂ ಸೇರಿಸಲಿಲ್ಲವಂತೆ!

ಈ ಪ್ರತಿಕ್ರಿಯೆಗಳು ಗ್ರಹಣ ನಡೆದ ಒಂದೆರಡು ತಿಂಗಳ ಬಳಿಕ ಬಂದದ್ದು.

ಆದರೆ ಆ ದಿನ ಎಲ್ಲರೂ ಹೆದರಿದ್ದರು ಎಂಬಲ್ಲಿ ಅನುಮಾನವಿಲ್ಲ. ಹೆಚ್ಚು ದುಡ್ಡಿದ್ದವರು, ಮತ್ತು ತಿಳಿದವರಿಗೆ ಹೆಚ್ಚು ಭಯ; ಕಡಿಮೆ ದುಡ್ಡಿದ್ದವರಿಗೆ ತಿಳಿಯದವರಿಗೆ ಕಡಿಮೆ ಭಯ (ದುಡ್ಡಿಲ್ಲದವರಿಗೆ ಬಹುಶಃ ಭಯವೇ ಇರಲಿಲ್ಲ). ಆ ದಿನ ರಿಚುಯಲ್ಲುಗಳನ್ನು, ನನ್ನ ವಕ್ತಾರರೂ ಸೇರಿದಂತೆ, ಎಲ್ಲರೂ ಗಂಭೀರವಾಗಿ ಸ್ವೀಕರಿಸಿರಬೇಕು. ಅವರಿಂದ ಬಂದ ಟೀಕೆ, ವ್ಯಂಗ್ಯಗಳು ಏನೇ ಇರಲಿ–ಭಾರತೀಯ ಸಮಾಜದ ಅತ್ಯುಚ್ಚ ಜಾತಿಯಾದ ಬ್ರಾಹ್ಮಣರು ಮುಂದೆ ನಿಂತು ಮಾಡುತ್ತಿದ್ದ ಶಾಂತಿಮಹಾಯಜ್ಞ ಎಲ್ಲ ಜನರ ಗಮನವನ್ನು ಸೆಳೆಯಿತು. ಆ ಯಜ್ಞವು ಗ್ರಹಣದ ಭಯವನ್ನು ಕಡಮೆ ಮಾಡುವಲ್ಲಿ ಪಾತ್ರವನ್ನು ವಹಿಸಿತು ಎಂಬಲ್ಲಿ ಅನುಮಾನವಿಲ್ಲ. 'ಸೂರ್ಯನಿಗೆ ಚಂದ್ರ ಅಡ್ಡ ಆಗುತ್ತೆ' ಎನ್ನುವ ಬೆಂಗಳೂರಿನ ಸಾಮಾನ್ಯರೂ ಗ್ರಹಣದ ಬಗ್ಗೆ ಇರುವ ಪರಂಪರಾಗತ ಭಯವನ್ನು ಬಿಡಲು ಸಿದ್ಧರಿರಲಿಲ್ಲ; ಮತ್ತು ಪ್ರಚಾರದ ಬಿರುಸು ಹುಟ್ಟಿಸಿದ ಭಯದಿಂದ ತಪ್ಪಿಸಿಕೊಳ್ಳುವಷ್ಟು ದಿಟ್ಟರೂ ಆಗಿರಲಿಲ್ಲ. ವಿದ್ಯಾವಂತರೂ ಕೂಡ ಆ ಭಯದಿಂದ ಮುಕ್ತರಾಗಿರಲಿಲ್ಲವೆಂದ ಮೇಲೆ ಈ ಸಾಮಾನ್ಯರ ಬಗ್ಗೆ ನಾವು ಟೀಕಿಸುವುದಕ್ಕಾಗುವುದಿಲ್ಲ.

ಗ್ರಹಣದ ದಿನ ಕರ್ನಾಟಕದ ಎಲ್ಲ ಮುಜರಾಯಿ ದೇವಾಲಯಗಳಲ್ಲಿ ವಿಶೇಷ ಪೂಜೆಗಾಗಿ ಸರ್ಕಾರ ತಲಾ ಇಪ್ಪತ್ತೈದು ರೂಪಾಯಿಗಳನ್ನು ಮುಂಜೂರು ಮಾಡಿದ್ದು ಆ ಸೌಲಭ್ಯವನ್ನು ಎಷ್ಟೋ ದೇವಾಲಯಗಳು ಬಳಸಿಕೊಂಡವು. ಆ ದಿನ ಬೆಂಗಳೂರು ಜಿಲ್ಲೆಯ ವರ್ತೂರು ವಿಷ್ಣು ದೇವಾಲಯದ ಅರ್ಚಕರು ದೇವರಿಗೆ ವಿಶೇಷ ಪೂಜೆ, ಅಲಂಕಾರಗಳನ್ನು ಮಾಡಿದ ಸಂಗತಿ ತಿಳಿಯಿತು. ಈ ಮಾದರಿಯ ಸಣ್ಣ ಪ್ರಮಾಣದ ವಿಶೇಷ ಪೂಜಾದಿಗಳು ಎಲ್ಲ ದೇವಾಲಯಗಳಲ್ಲಿ ನಡೆದುವು.

ಹೋಮ, ಪೂಜೆ ಇವುಗಳ ಫಲ ತಕ್ಷಣ ಕಾಣಿಸುವುದಿಲ್ಲ; ಅವು ಕ್ರಮೇಣ, ಗ್ರಹಣದಿಂದ ಒದಗುವ ವಿನಾಶಗಳನ್ನು ಓಡಿಸುತ್ತವೆ ಅಥವಾ ಅವುಗಳ ತೀವ್ರತೆಯನ್ನು ತಗ್ಗಿಸುತ್ತವೆ ಎಂಬುದು ಅವುಗಳನ್ನು ನಡಸಿದವರ ಅಭಿಪ್ರಾಯ. ಗ್ರಹಣದ ಬಗ್ಗೆ ನಂಬಿಕೆಯಿರುವವರು ಗ್ರಹಣಾನಂತರ ನಡೆದಿರುವ ಅನೇಕ ಅನಿಷ್ಟ ಘಟನೆಗಳನ್ನು ಪಟ್ಟಿ ಮಾಡಿ ಅವೆಲ್ಲ ಗ್ರಹಣದ ಪರಿಣಾಮಗಳು ಎಂದು ಹೇಳುತ್ತಾರೆ. ವೈಖಾನಸ ಮಂಡಲಿಯ ಉತ್ಸವದ ಕಾರ್ಯಕರ್ತರೇ ಅದನ್ನು ಪ್ರತಿಪಾದಿಸುತ್ತಾರೆ ಎಂದ ಮೇಲೆ ಬೇರೆ ಸಾಕ್ಷಿ ಬೇಕಾಗಿಲ್ಲ.

## ಅನುಬಂಧ

ಈ ಅಧ್ಯಾಯದಲ್ಲಿಯೇ ನನಗೆ ದೊರಕಿದ ನಾಲ್ವರು ಸಾಂಪ್ರದಾಯಕ ಸಂಸ್ಕೃತ ಪಂಡಿತರ ಪ್ರತಿಕ್ರಿಯೆಗಳನ್ನು ದಾಖಲು ಮಾಡುವುದು ಉಚಿತವಾಗಿ

ತೋರುತ್ತದೆ. (ಅವರಲ್ಲಿ ಇಬ್ಬರು ಲಿಂಗಾಯತರು, ಒಬ್ಬರು ಬ್ರಾಹ್ಮಣರು, ಇನ್ನೊಬ್ಬರು ವಿಶ್ವಕರ್ಮರು). ನಾಲ್ವರೂ ರಾಹು ಕತೆಯನ್ನು ನಂಬುತ್ತಾರೆ (ವೈಜ್ಞಾನಿಕ ಸಂಗತಿ ಗೊತ್ತಿದ್ದರೂ). ಒಬ್ಬರಿಗೆ, ಗ್ರಹಣ ಎನ್ನುವುದು ಭೂಮಿಯ ನೆರಳು ಎಂಬ ಪ್ರಾಚೀನ ಭಾರತೀಯ ಖಗೋಳಜ್ಞಾನದ ಹೇಳಿಕೆ ಗೊತ್ತಿದೆ. ಒಬ್ಬರಿಗಂತೂ 'ಪೌರಾಣಿಕವಾಗಿ ಸರ್ಪ ನುಂಗುತ್ತದೆ, ವೈಜ್ಞಾನಿಕವಾಗಿ ನೆರಳಿನ ಪರಿಣಾಮ'. ಇವರು ಗ್ರಹಣದ ಶಾಂತಿಕಾರ್ಯ, ಅಷ್ಟೋತ್ತರ ಜಪ, ತರ್ಪಣ ಇತ್ಯಾದಿಗಳಲ್ಲಿ ನಂಬಿಕೆ ಇರುವವರು. ಗ್ರಹಣ ಎಂಬುದು 'ದೈವಲೀಲೆ', 'ಪ್ರಕೃತಿ ನಿಯಮವೂ ಹೌದು', ಒಬ್ಬರಿಗೆ. (ಈ ಒಳತೋಟಿ ಗಮನಾರ್ಹ). ಆದರೆ, 'ಹಳೆಯದರಲ್ಲೂ ಸತ್ಯಾಂಶವಿದೆ, ಹೊಸದೆಂದು ಎಲ್ಲವನ್ನೂ ನಂಬಲಿಕ್ಕಾಗದು' ಎಂಬ ಅವರ ಮಾತಿನಲ್ಲಿ ಅವರ ಒಲವು ಎತ್ತ ಎಂಬುದು ಸ್ಪಷ್ಟ. ಗ್ರಹಣದ ಸಾಂಪ್ರದಾಯಕ ವಿವರಣೆ ನಂಬಿರುವ ಮತ್ತು ಶಾಂತಿಕಾರ್ಯಗಳು ತಿಳಿದಿರುವ ಇವರಿಗೆ ಗ್ರಹಣದಿಂದ ಯಾವುದೇ ಭಯವೂ ಇಲ್ಲವಾದರೂ, ರೇಡಿಯೊ ಮತ್ತು ಪತ್ರಿಕೆಗಳ ಸುದ್ದಿ ಕೇಳಿ ಓದಿ ಸ್ವಲ್ಪ ಭಯವಾಗಿದೆ. ಎಲ್ಲರೂ ನೀರು, ಸೆಗಣಿ ನೀರು, ಕಾಡಿಗೆ ಗಾಜು ಇವುಗಳ ಮೂಲಕ ನೋಡಿದ್ದಾರೆ. "ವೈಜ್ಞಾನಿಕ ದೃಷ್ಟಿಯಿಂದ ಸ್ವಲ್ಪ ಭಯವಾಯಿತು; ಪರಂಪರೆ ನಂಬಿಕೆ ಇದ್ದದ್ದರಿಂದ ಅವರು (=ಪತ್ರಿಕೆಯವರು) ಹೇಳಿದಷ್ಟು ಭಯವಾಗಲಿಲ್ಲ"ವಂತೆ. ಎಲ್ಲರೂ ಗ್ರಹಣದ ಬಳಿಕ ಪ್ರಪಂಚದ ಜನರ ಮೇಲೆ ಆಗಬಹುದಾದ ಒಂದಲ್ಲ ಒಂದು ಬಗೆಯ ಪರಿಣಾಮಗಳಲ್ಲಿ ನಂಬಿಕೆ ವ್ಯಕ್ತಪಡಿಸಿದ್ದಾರೆ. ಎಲ್ಲ ವಿಷಯಗಳಲ್ಲಿಯೂ ಈ ನಾಲ್ವರ ಪ್ರತಿಕ್ರಿಯೆಗಳು ಬಹುಮಟ್ಟಿಗೆ ಸದೃಶವಾಗಿವೆ.

## ಅಡಿಟಿಪ್ಪಣಿಗಳು

೧. ಈ ಅಧ್ಯಾಯಕ್ಕೆ ೧೨ ಜೂನ್ ೧೯೮೦ರಂದು ಶ್ರೀ ಲಾಲ್‌ದಾಸ್ ವೆಂಕಟರಮಣ ಸ್ವಾಮಿ ದೇವಾಲಯದ ಆವರಣದಲ್ಲಿ ಶ್ರೀ ವೆಂಕಟೇಶಪ್ಪ, ಶ್ರೀ ನರಸಿಂಹಯ್ಯ ಎಂಬ ಸಾರ್ವಜನಿಕರಿಂದ (ಇವರು ಮಹೋತ್ಸವದ ವೀಕ್ಷಕರಾಗಿದ್ದರು), ೨-೧೦-೮೦ರಂದು ಅದೇ ದೇವಾಯಲದಲ್ಲಿ ವೈಖಾನಸ ಮಹಾಮಂಡಲಿಯ ಅಧ್ಯಕ್ಷರು, ಕಾರ್ಯದರ್ಶಿಗಳಿಂದ ಸಂಗ್ರಹಿಸಿದ ಮಾಹಿತಿ ಆಧಾರ. ಅದರಲ್ಲೂ ಕರ್ನಾಟಕದ ಧಾರ್ಮಿಕ ದತ್ತಿ ಕಮಿಷನರ್ ಕಚೇರಿಯ ಸೀನಿಯರ್ ಆಗಮ ಭಾಸ್ಕರ ಶ್ರೀ ಎಚ್.ಎ.ಕೇಶವಾಚಾರ್ ಸಂಪೂರ್ಣವಾಗಿ ಸಹಕರಿಸಿ ಮಹೋತ್ಸವದ ಉದ್ದೇಶ, ಕಾರ್ಯಕ್ರಮಗಳನ್ನು ವಿಸ್ತಾರವಾಗಿ ತಿಳಿಸಿದ್ದಲ್ಲದೆ ಯಜ್ಞ ಮಂಟಪದ ರೇಖಾಚಿತ್ರಗಳನ್ನೂ ಒದಗಿಸಿದರು. ಇವರೆಲ್ಲರಿಗೆ ನಾನು ಕೃತಜ್ಞ.

೨. ಈ ಮಂತ್ರವನ್ನು, ಕೊನೆಯ ಎಂದರೆ ೧೦ನೆಯ ಶ್ಲೋಕ ವಿನಾ, ಬೆಂಗಳೂರು ನಗರದ ಒಬ್ಬ ವೈದಿಕರು 'ಕನ್ನಡ ಪ್ರಭ' ಪತ್ರಿಕೆಯಲ್ಲಿ (೧೫-೨-೮೦) ಪ್ರಕಟಿಸಿ, "ಸೂರ್ಯಗ್ರಹಣದ ರಾಶಿಯವರೂ ಇತರರೂ ಗ್ರಹಣ ಹಿಡಿದಾಗ ಕೆಳಕಂಡ ಮಂತ್ರ ಬರೆದ ಪಟ್ಟಿಯನ್ನು ನೀರಿನಲ್ಲಿ ವಿಸರ್ಜಿಸಬೇಕು" ಎಂದು ತಿಳಿಸಿದ್ದರು.

೩. ಶ್ರೀ ಗುಂಡೂರಾವ್ ಮತ್ತು ಶ್ರೀ ಷರೀಫರ ಸ್ನೇಹ ಉಳಿಯಲಿಲ್ಲ. ಅವರು ಪೂರ್ಣಾಹುತಿಯಲ್ಲಿ ಪಾಲುಗೊಂಡರೂ, ಸೂರ್ಯಗ್ರಣದ 'ಪೀಡೆ' ಅವರನ್ನು ತಟ್ಟದೆ ಬಿಡಲಿಲ್ಲ ಎಂದು ಹೇಳಬಹುದೇ ? ಈ ಊಹೆ ಸ್ವಲ್ಪ ತಮಾಷೆಯಾಗಿಯೂ ಇದೆ !

# ಸಮೂಹ ಮಾಧ್ಯಮದಲ್ಲಿ 'ಗ್ರಹಣ'

## ವೃತ್ತಪತ್ರಿಕೆಗಳು

ರೇಡಿಯೋ, ವೃತ್ತಪತ್ರಿಕೆಗಳು ಗ್ರಹಣದ ಸುದ್ದಿಗೆ ವಿಶೇಷ ಪ್ರಾಮುಖ್ಯವನ್ನು ಕೊಟ್ಟವು. ಆಗ ದೂರದರ್ಶನದ ವಿಷಯವೇ ಬಹಳ ಜನಕ್ಕೆ ಗೊತ್ತಿರಲಿಲ್ಲ. ಗ್ರಹಣಕ್ಕಿಂತ ಎಷ್ಟೋ ದಿನಗಳಿಂದ ಮೊದಲೇ ಸುದ್ದಿಯನ್ನು ಹನಿಹನಿಯಾಗಿ ಪ್ರಕಟಿಸುತ್ತಿದ್ದ ವೃತ್ತಪತ್ರಿಕೆಗಳು ಆ ದಿನ ಹತ್ತಿರ ಬಂದಂತೆ ಸುದ್ದಿಯ ಪ್ರಮಾಣವನ್ನು ಹೆಚ್ಚಿಸುತ್ತ ಬಂದುವು. ಗ್ರಹಣದ ದಿನ, ಗ್ರಹಣದ ಮಾರನೆಯ ದಿನ ಅದೇ ಮುಖಪುಟದ ಮುಖ್ಯ ಸುದ್ದಿಯಾಗಿತ್ತು. ಮುಂದಿನ ದಿನಗಳಲ್ಲಿ ಸುದ್ದಿ ತೆಳುವಾಗುತ್ತಾ ನಡೆದು ಎಂದೋ ನಿಂತು ಹೋಯಿತು.

ಇಲ್ಲಿ ಮುಖ್ಯವಾಗಿ ಮೂರು ದಿನಪತ್ರಿಕೆಗಳನ್ನು ಗಮನಿಸಿದ್ದೇನೆ. 'ಪ್ರಜಾವಾಣಿ' [ಪ್ರವಾ], 'ಕನ್ನಡಪ್ರಭ' [ಕಪ್ರ], 'ಉದಯವಾಣಿ' [ಉವಾ]. ಜೊತೆಗೆ 'Deccan Herald', 'ಸುಧಾ', 'Science Today', 'ಜನಪ್ರಿಯ ವಿಜ್ಞಾನ'ಗಳನ್ನೂ ಲಕ್ಷಿಸಿದ್ದೇನೆ.

ಇವು ಪ್ರಕಟಿಸಿದ ಎಲ್ಲ ಸುದ್ದಿಗಳನ್ನೂ ನಾನು ಕೊಡಲು ಹೋಗುವುದಿಲ್ಲ. ಜನತೆಯ ಪ್ರತಿಕ್ರಿಯೆಗಳನ್ನು ರೂಪಿಸುವಲ್ಲಿ, ಹಾಗೂ ಅವುಗಳನ್ನು ಬಿಂಬಿಸುವಲ್ಲಿ ಅವು ವಹಿಸಿದ ಪಾತ್ರವನ್ನು ಮತ್ರ ಲಕ್ಷ್ಯದಲ್ಲಿಟ್ಟುಕೊಂಡಿದ್ದೇನೆ. ಜನತೆಯನ್ನು ಗ್ರಹಣದ ವಿಷಯದಲ್ಲಿ ಶಿಕ್ಷಿತರನ್ನಾಗಿ ಮಾಡುವ ಗುರುತರ ಹೊಣೆಯನ್ನು ಕನ್ನಡ ಪತ್ರಿಕೆಗಳು ಹೊತ್ತು ಅತ್ಯಂತ ಸಮರ್ಥವಾಗಿ ಅದನ್ನು ಈಡೇರಿಸಿದುವೆಂದೇ ಹೇಳವೇಕು. ಆದರೆ ಅದರ ಪರಿಣಾಮವಾಗಿ ಶಿಕ್ಷಣದ ಜೊತೆ ಇತರ ಪರಿಣಾಮವೂ ಕಾಣಿಸಿಕೊಂಡು, ಆಧುನಿಕ ಜ್ಞಾನವು ಪರಂಪರಾಗತ ಮೂಢನಂಬಿಕೆಗಳಿಗಿಂತ ಹೆಚ್ಚಾಗಿಯೇ ಜನತೆಯನ್ನು ಭೀತಿಗೆ ಕೆಡಹಿತು. ಒಟ್ಟು ಜನತೆಯ ಪ್ರತಿಕ್ರಿಯೆ

ಭೀತಿಯದಾಗಿತ್ತು. ಇದಕ್ಕೆ ಪತ್ರಿಕೆಗಳು ಎಷ್ಟರ ಮಟ್ಟಿಗೆ ಹೊಣೆ ಎಂಬುದನ್ನು ಆಮೇಲೆ ನೋಡೋಣ. ಆದರೆ ಗ್ರಹಣಕ್ಕೆ ವಿಜ್ಞಾನಿಗಳಿಂದ ಹಿಡಿದು ಅತ್ಯಂತ ಸಾಮಾನ್ಯನವರೆಗೆ ಎಲ್ಲ ಬಗೆಯ ಜನ ಪ್ರತಿಸ್ಪಂದಿಸಿದ ರೀತಿಯ ಅಧ್ಯಯನಕ್ಕೆ ಆ ಅವಧಿಯ (ಇಡೀ ಫೆಬ್ರವರಿ ತಿಂಗಳಿನ) ಪತ್ರಿಕೆಗಳನ್ನು ತೆಗೆದು ಕಣ್ಣು ಹಾಯಿಸಿದರೆ ಸಾಕು. ಪತ್ರಿಕೆಗಳು ಗ್ರಹಣದ ಎಲ್ಲ ಬಗೆಯ ಸುದ್ದಿಗಳಿಗೆ ಪ್ರಾಮುಖ್ಯವನ್ನು ಕೊಟ್ಟು ಅದೊಂದು ಸ್ಮರಣೀಯ ಘಟನೆಯಾಗುವಂತೆ ಮಾಡಿದುವು. ಕೆಳಗೆ ಕೆಲವು ಶೀರ್ಷಿಕೆಗಳ ಕೆಳಗೆ ಸುದ್ದಿಗಳನ್ನು ವಿಶ್ಲೇಷಿಸಿದೆ.

**ನಂಬಿಕೆಗಳು: ವಿಜ್ಞಾನಿಗಳಲ್ಲಿ**

ವಿಜ್ಞಾನಿಗಳೂ ಮನುಷ್ಯರೇ; ಮನುಷ್ಯಸಹಜವಾದ ನಂಬಿಕೆ, ಧಾರ್ಮಿಕ ರಿಚುಯಲ್ಲುಗಳನ್ನು ಅವರೆಲ್ಲರೂ ತ್ಯಜಿಸಿದ್ದಾರೆ ಎಂಬುದನ್ನು ರುಜುವಾತು ಮಾಡಲು ಸಾಧ್ಯವಿಲ್ಲ, ಮತ್ತು ಎಷ್ಟೋ ಸಾರಿ ಅವರಿಗೆ ಗೊತ್ತಿಲ್ಲದೆಯೇ ಅವರು ತಾವು ಹುಟ್ಟಿ ಬಂದಿರುವ ಸಂಸ್ಕೃತಿ ತಮ್ಮಲ್ಲಿ ಮೂಡಿಸಿರುವ ನಂಬಿಕೆಗಳಿಂದ ನಿಯಂತ್ರಿಸಲ್ಪಡುವುದೂ ಉಂಟು. ಅತೀಂದ್ರಿಯ ಶಕ್ತಿಗಳಲ್ಲಿ, ಪೂಜೆಜಪಗಳಲ್ಲಿ ನಂಬಿಕೆ ಇರುವ ವಿಜ್ಞಾನಿಗಳೂ ಎಲ್ಲೆಡೆಗೂ ಇದ್ದಾರೆ. ಆಧುನಿಕ ವಿಜ್ಞಾನಿಗಳು ರಾಹುವನ್ನೋ ಸೂರ್ಯನನ್ನು ನುಂಗುವ ರಾಕ್ಷಸನನ್ನೋ ನಂಬದಿರಬಹುದು. ಆದರೆ ಬೇರೆ ನಂಬಿಕೆಗಳು ಅವರಲ್ಲಿರಬಹುದು. ಅಂತಹ ಕೆಲವನ್ನು ಪತ್ರಿಕೆಗಳು ಪ್ರಕಟಿಸಿವೆ.

(1) ಗರ್ಭಿಣಿಯರನ್ನು ಗ್ರಹಣದ ವೇಳೆ ಹೊರಗೆ ಬಿಡಬಾರದೆಂಬ ನಂಬಿಕೆ ಜಗತ್ತಿನ ಎಲ್ಲಡೆ ಇದೆ.[೧]

"ಮೆಕ್ಸಿಕೋದಲ್ಲಿ ಕಳೆದ ಗ್ರಹಣದ ಸಮಯದಲ್ಲಿ ನಡೆದ ಘಟನೆ : ಗರ್ಭವತಿಯಾದ ವಿಜ್ಞಾನಿಯೊಬ್ಬಳು ಗ್ರಹಣದ ಸಮಯಕ್ಕೆ ಸರಿಯಾಗಿ ರಕ್ಷಣೆ ಪಡೆಯಲು ಮನೆಯೊಳಕ್ಕೆ ಓಡಿಹೋದಳು. ಮತ್ತೊಬ್ಬ ವಿಜ್ಞಾನಿ ಹದಿಮೂರು ಗ್ರಹಣಗಳ ಸಮಯದಲ್ಲಿ ಪ್ರಯೋಗ ನಡೆಸಲು ಯತ್ನಿಸಿದ. ಪ್ರತಿಸಾರಿಯೂ ಸರಿಯಾದ, ಮೋಡವಿಲ್ಲದ ವಾತಾವರಣ ಸಿಗದೆ ಎಲ್ಲ ಪ್ರಯೋಗಗಳೂ ವಿಫಲವಾದುವು. ಐದು ಅಥವಾ ಆರನೆಯ ಪ್ರಯೋಗ ನಡೆಸುವ ಹೊತ್ತಿಗೆ ಗ್ರಹಣದ ಸಮಯದಲ್ಲಿ ಆ ವಿಜ್ಞಾನಿಯ ಮುಖ ನೋಡಲು ಯಾರೂ ಇಷ್ಟಪಡುತ್ತಿರಲಿಲ್ಲ. ಆ ವಿಜ್ಞಾನಿ ಕಂಡ ತಕ್ಷಣ ಗ್ರಹಣ ನೋಡಲು ಬಂದಿದ್ದ ಜನ ಜಾಗ ಖಾಲಿ ಮಾಡಿ ಬೇರೆ ಜಾಗಕ್ಕೆ ಹೋಗಲು ಆರಂಭಿಸುತ್ತಿದ್ದರಂತೆ."

ಈ ಸುದ್ದಿ ತಿಳಿಸಿದವರು ಭಾರತದ ಖಗೋಳ ಭೌತವಿಜ್ಞಾನ ಅಧ್ಯಯನ ಕೇಂದ್ರದ ಡೆಪ್ಯುಟಿ ಡೈರೆಕ್ಟರ್ ಜೆ.ಸಿ. ಭಟ್ಟಾಚಾರ್ಯ [ಪ್ರವಾ, 7-2-80]

ಗ್ರಹಣದ ಹಿಂದಿನ ದಿನ ಪತ್ರಿಕಾ ವರದಿಗಾರರು ಹುಬ್ಬಳ್ಳಿಯಲ್ಲಿ ಯುಗೋಸ್ಲಾವಿಯದ ಕೆಲವು ಖಗೋಳ ವಿಜ್ಞಾನಿಗಳನ್ನು, ಭಾರತೀಯರು ಗ್ರಹಣಾನಂತರ ಹೊಸ ನೀರಿನಲ್ಲಿ ಹೊಸದಾಗಿ ಜೋಳ ರಾಗಿ ಹಿಟ್ಟುಮಾಡಿ ಅಡಿಗೆ ಮಾಡುವ ಬಗ್ಗೆ ಪ್ರಶ್ನಿಸುತ್ತಿದ್ದಂತೆ, ಅವರು ಮರು ಪ್ರಶ್ನೆ ಹಾಕಿ, 'ಕನ್ನಡಿ ಒಡೆದರೆ ಶುಭವೇ ಅಶುಭವೇ' ಎಂದು ಕೇಳಿದರಂತೆ. 'ಅಶುಭ' ಎಂದು ಉತ್ತರಿಸಿದಾಗ ತಮ್ಮ ಪ್ರಯೋಗ ಉಪಕರಣದ ಕನ್ನಡಿ ಕೆಳಗೆ ಬಿದ್ದರೂ ಒಡೆಯಲಿಲ್ಲವೆಂಬ ಕಾರಣಕ್ಕೆ 'ದೇವರ ಕೃಪೆ, ನಾವು ಪಾರಾದೆವು" ಎಂದು ಉದ್ಗರಿಸಿದರಂತೆ, [ಪ್ರವಾ, 16-2-80] ಕನ್ನಡಿ ಒಡೆಯಲಿಲ್ಲ, ಅಶುಭವಾಗಲಿಲ್ಲ, ಆ ಕಾರಣ ಮಾರನೆಯ ದಿನ ಗ್ರಹಣದ ತಮ್ಮ ಎಲ್ಲ ಪ್ರಯೋಗಗಳು ಯಶಸ್ವಿಯಾಗುತ್ತವೆ ಎಂಬ ನಂಬಿಕೆ ಬಂತು.

"ಗ್ರಹಣದ ದಿನ ಧಾರ್ಮಿಕಾಚರಣೆಗಳಿಗೆ ಅನುಕೂಲವಾಗಲೆಂದು" ಇಡೀ ದಿನ ನೀರು ಸರಬರಾಜಾಗುವಂತೆ ಕೆಲವರು ಮೈಸೂರಲ್ಲಿ ಒತ್ತಾಯಪಡಿಸಿದರು [ಕಪ್ರ, 15-2-80]. ಅದೇ ಪತ್ರಿಕೆಯಲ್ಲಿ, ಗ್ರಹಣದ ದಿನ ಶಾಂತಿ ಕಾರ್ಯಕ್ಕಾಗಿ ಪಠನ ಮಾಡಿ ನೀರಿನಲ್ಲಿ ವಿಸರ್ಜಿಸಲು ಸೂಚಿಸಿ ಮಂತ್ರವನ್ನೂ ಪ್ರಕಟಿಸಲಾಗಿದೆ [ಕಪ್ರ, 15-2-80. ಅದನ್ನು ಹಿಂದೆ ನೋಡಿದ್ದೇವೆ].

## ಫಲಾಫಲಗಳು

ಗ್ರಹಣದ ಫಲಾಫಲಗಳನ್ನು ಜ್ಯೋತಿಷಿಗಳು ಹೀಗೆ ನುಡಿದಿದ್ದಾರೆ; ಎನ್.ಕೆ. ಜೋಗಳೇಕರ್ ಪ್ರಕಾರ [ಪ್ರವಾ, 13-2-80) ಗ್ರಹಣದ ಪ್ರಭಾವ ಆರು ತಿಂಗಳು.

> "ಈ ತಿಂಗಳಲ್ಲಿ ಜರುಗುವ ಸೂರ್ಯಗ್ರಹಣವು ಖಗ್ರಾಸವಿದ್ದು ಸೂರ್ಯಬಿಂಬವು ಪೂರ್ಣ ಪ್ರಮಾಣದಲ್ಲಿ ಚಂದ್ರಬಿಂಬದಿಂದ ಮುಚ್ಚಲಾಗುತ್ತದೆ. ಇಂಥ ಗ್ರಹಣವು ಕಳೆದ ೮೨ ವರುಷದಲ್ಲಿ ಪ್ರಪ್ರಥಮವಾಗಿ ಭಾರತದ ಪ್ರದೇಶದಲ್ಲಿ ಗೋಚರಿಸುತ್ತಿದೆ.
>
> ಸಪ್ತಗ್ರಹಯೋಗ, ಅಷ್ಟಗ್ರಹಯೋಗ ಹೇಗೆ ವಿರಳವೋ ಹಾಗೆ ೮೨ ವರುಷದ ನಂತರ ಈಗಿನ ಖಗ್ರಾಸ ಗ್ರಹಣದ ದೃಶ್ಯವೇ ಒಂದು ವೈಶಿಷ್ಟ್ಯ...ಸೂರ್ಯಗ್ರಹಣದ ಶುಭಾಶುಭ ಫಲದ ಅವಧಿ ಆರು ತಿಂಗಳವರೆಗೆ ಇರುತ್ತದೆ. ಮಾಘಮಾಸದಲ್ಲಿ ಕುಂಭರಾಶಿಯ ಧನಿಷ್ಠಾ ನಕ್ಷತ್ರದಲ್ಲಿ ಗ್ರಹಣವಾಗುತ್ತದೆ. ಕುಂಭರಾಶಿ ವಾಯುತತ್ತ್ವದ ರಾಶಿ. ಧನಿಷ್ಠಾ ನಕ್ಷತ್ರ ಭೂ ಹಾಗೂ ವಾಯುತತ್ತ್ವದ ಮಿಶ್ರಿತ ನಕ್ಷತ್ರ. ಆದುದರಿಂದ ಹವಾದೂಷಿತ

ರೋಗಗಳು, ವಾದ (ತ?) ಪ್ರಧಾನ ರೋಗಗಳು, ರಕ್ತದ ಒತ್ತಡ, ರಕ್ತಕ್ಕೆ ಸಂಬಂಧಿಸಿದ ಎಲ್ಲ ರೋಗಗಳು ಹೆಚ್ಚಾಗುತ್ತವೆ. ಅಲ್ಲದೆ ಹೃದಯರೋಗಿಗಳ, ಮಾನಸಿಕ ರೋಗಿಗಳ ಸಂಖ್ಯೆಯೂ ಮೊಳಕಾಲು ತೊಡೆ ನೋವುಗಳಿಂದ ಬಳಲುವ ರೋಗಿಗಳ ಸಂಖ್ಯೆಯೂ ಹೆಚ್ಚಾಗಬಹುದಾಗಿದೆ...ಅಲ್ಲದೆ ವಾಯುತತ್ತ್ವದ ಕುಂಭರಾಶಿಯಲ್ಲಿ ಗ್ರಹಣವಾಗುವುದರಿಂದ ಅಣೆಕಟ್ಟು, ಜಲಾಶಯ ಯೋಜನೆಗಳ ಪ್ರದೇಶಗಳಿಗೂ, ವಿಮಾನ ನಿಲ್ದಾಣ ಮತ್ತು ವಿಮಾನಕ್ಕೆ ಹಾನಿ, ಬಿರುಗಾಳಿಯಿಂದ ಅನಾಹುತ, ಸಂಪರ್ಕ ಮಾಧ್ಯಮಗಳಾದ ಆಕಾಶವಾಣಿ, ಪತ್ರಿಕೆಗಳಿಗೆ ತೊಂದರೆ ಸಂಭವವಿದೆ....ಬಾಂಗ್ಲಾದೇಶ, ಆಫ್ರಿಕಾ ಖಂಡದ ದಕ್ಷಿಣಭಾಗ, ಭಾರತದ ಕರ್ನಾಟಕ, ಮಧ್ಯಪ್ರದೇಶ, ಆಂಧ್ರ, ಒರಿಸ್ಸಾ, ಬಂಗಾಲ, ಮಿಜೋರಾಮ್–ಈ ರಾಜ್ಯಗಳ ಮೇಲೆ ಗ್ರಹಣ ಗೋಚರಿಸುವದರಿಂದ ಈ ರಾಜ್ಯಗಳಿಗೆ ಅಶುಭವಿದ್ದು ನೈಸರ್ಗಿಕ ಪ್ರಕೋಪವನ್ನು ಎದುರಿಸಬೇಕಾಗುತ್ತದೆ. ಅದರಲ್ಲಿಯೂ ಕರ್ಕರಾಶಿಯ ಬಾಂಗ್ಲಾದೇಶ, ಬಂಗಾಲ ರಾಜ್ಯಗಳಿಗೂ ಕರಾವಳಿಯ ಪ್ರದೇಶದ ಜನರಿಗೂ ಈ ಗ್ರಹಣದಿಂದ ಹೆಚ್ಚು ಅನಿಷ್ಟವಿದ್ದು ಬಿರುಗಾಳಿ, ಭೂಕಂಪ, ದಂಗೆ, ಗಲಭೆ ಮುಂತಾದವು ಸಂಭವಿಸಬಹುದು...ಗ್ರಹಣ ಕಾಣಿಸುವ ರಾಷ್ಟ್ರಗಳಾದ ಭಾರತ, ದಕ್ಷಿಣ ಆಫ್ರಿಕಾ, ಬಾಂಗ್ಲಾದೇಶಕ್ಕಂತೂ ಅನಿಷ್ಟ ಇದ್ದೇ ಇದೆ. ಅಲ್ಲದೇ ಕುಂಭ ರಾಶಿಯಾದ ರಷ್ಯಾ, ಇರಾನ್, ಸ್ವೀಡನ್, ಪೋರ್ಚುಗಲ್‌ಗಳಿಗೂ, ಕರ್ಕರಾಶಿಯ ಚೀನಾ, ಸ್ಕಾಟ್‌ಲ್ಯಾಂಡ್, ಹಾಲೆಂಡ್, ಜಿನೀವಾ, ಕೆನಡಾ, ನ್ಯೂಜಿಲೆಂಡ್ ರಾಷ್ಟ್ರಗಳಿಗೂ, ಮೀನ ರಾಶಿಯ ನಾರ್ವೆ, ಅಲ್ಜೀರಿಯಾ, ಬ್ರೆಜಿಲ್ ದೇಶಗಳಿಗೂ, ವೃಶ್ಚಿಕ ರಾಶಿಯ ನಾರ್ವೆ, ಅಲ್ಜೀರಿಯಾ, ಬ್ರೆಜಿಲ್ ದೇಶಗಳಿಗೂ, ಮೀನ ರಾಶಿಯ ಈಜಿಪ್ಟ್, ಇರಾಕ್ ರಾಷ್ಟ್ರಗಳಿಗೂ ಈ ಗ್ರಹಣ ಅಶುಭಕಾರಕ. ಯುದ್ಧದ ಕಿಡಿ ಹಾರುವಿಕೆ, ಸೈನ್ಯಕ್ರಾಂತಿ, ರಾಜ್ಯಕ್ರಾಂತಿಗಳಿಂದ ಅಧಿಕಾರದಲ್ಲಿರುವ ವ್ಯಕ್ತಿಗಳಿಗೆ, ಪಕ್ಷಕ್ಕೆ ತೊಂದರೆ ಉಂಟಾಗಬಹುದಾಗಿದೆ.........ನ್ಯೂಯಾರ್ಕ್, ವಾಷಿಂಗ್‌ಟನ್, ಟೆಹರಾನ್, ಮಾಸ್ಕೋ, ಕಲ್ಕತ್ತಾ, ಸೂರತ್, ಲಿವರ್‌ಪೂಲ್, ಟೋಕಿಯೋ, ವಿಶಾಖಪಟ್ಟಣ, ಮಂಗಳೂರು ಮೊದಲಾದ ಪಟ್ಟಣಗಳಿಗೆ ಗ್ರಹಣದ ಪರಿಣಾಮದಿಂದ ನೈಸರ್ಗಿಕ ತೊಂದರೆ ಇದೆ...ಧನಿಷ್ಠಾ ನಕ್ಷತ್ರದ ಕುಂಭರಾಶಿಯಲ್ಲಿ ಗ್ರಹಣವಾಗುವುದರಿಂದ ಕರ್ಕ, ವೃಶ್ಚಿಕ, ಕುಂಭ, ಮೀನ–ಈ ನಾಲ್ಕು ರಾಶಿಯವರಿಗೆ ಈ ಗ್ರಹಣ ಅಶುಭ. ಅದರಲ್ಲಿಯೂ ಧನಿಷ್ಠಾ ನಕ್ಷತ್ರದವರಿಗೆ,

ಕುಂಭರಾಶಿಯವರಿಗೆ ವಿಶೇಷಾನಿಷ್ಟವಿರುವುದರಿಂದ ಅವರು ಶಾಂತಿ, ಜಪಾದಿಗಳಿಂದ ಪೀಡೆಯನ್ನು ಪರಿಹರಿಸಿಕೊಳ್ಳಬೇಕು.......ಮಿಥುನ, ಸಿಂಹ, ತುಲಾ, ಮಕರ ಈ ನಾಲ್ಕು ರಾಶಿಯವರಿಗೆ ಈ ಗ್ರಹಣವು ಶುಭ-ಅಶುಭ ಮಿಶ್ರ ಫಲ ಕೊಡುತ್ತದೆ...ಮೇಷ, ವೃಷಭ, ಕನ್ಯಾ, ಧನು ಈ ನಾಲ್ಕು ರಾಶಿಯವರಿಗೆ ಶುಭ ಫಲವನ್ನು ಕೊಡುತ್ತದೆ. ವಶಿಷ್ಠ ಗೋತ್ರದವರಿಗೆ ಗ್ರಹಣವು ಅಶುಭದಾಯಕ.... ಮಾಘಮಾಸದಲ್ಲಿ ಗ್ರಹಣ ಇರುವುದರಿಂದ ಆನೆ, ಕುದುರೆ, ಹಂದಿಗಳಿಗೆ ಅಶುಭ. ಈ ಪ್ರಾಣಿಗಳ ಸಂಖ್ಯೆ ಕಡಿಮೆ ಆಗಬಹುದು. ಗ್ರಹಣಕಾಲದಲ್ಲಿ ಕುಟ್ಟುವುದು, ಬೀಸುವುದು ಮಾಡಿದರೆ ಟೊಂಕಶೂಲೆ ಉಂಟಾಗುತ್ತದೆ. ಗ್ರಹಣದ ಕಾಲದಲ್ಲಿ ನಿದ್ದೆ ಮಾಡಬಾರದು. ನಿದ್ದೆ ಮಾಡಿದರೆ ಶಾರೀರಕ ಪೀಡೆ ಉಂಟಾಗುತ್ತದೆ, ಜಲಪಾನ, ಭೋಜನ ಮಾಡಿದರೆ ಶಾರೀರಕ ಪೀಡೆ ಉಂಟಾಗುತ್ತದೆ."

"ಭಾನುಪ್ರಿಯ" ಎಂಬ ಜ್ಯೋತಿಷಿ, "ದಕ್ಷಿಣ ಭಾರತದ ಸರ್ಕಾರಗಳಿಗೆ ಅಪಾಯ" ಎಂದಿದ್ದಾರೆ [ಪ್ರವಾ, 16-2-80].

"ಗ್ರಹಣ ಪಥದಲ್ಲಿರುವ ದಕ್ಷಿಣ ಭಾರತದಲ್ಲಿ ಸರ್ಕಾರಗಳಿಗೆ ಏಳು ತಿಂಗಳ ಕಾಲ ಅಭದ್ರತೆಯ ಭಯವಿದೆ."

ಶನಿವಾರ ಸಂಭವಿಸಲಿರುವ ಅಪರೂಪದ ಪೂರ್ಣ ಸೂರ್ಯಗ್ರಹಣಕ್ಕೆ ಸಂಬಂಧಿಸಿದಂತೆ ಈ ರೀತಿ ಭವಿಷ್ಯ ನುಡಿದಿರುವ ಖ್ಯಾತ ಜ್ಯೋತಿಷಿ "ಭಾನುಪ್ರಿಯ" ಅವರು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ, "ಈ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಸ್ಥಾನ ಹೋದೀತು" ಎಂದು ಹೇಳಿದ್ದಾರೆ.

ಇಂದಿರಾಗಾಂಧಿ ಹಾಗೂ ಇಂದಿರಾಕಾಂಗ್ರೆಸ್ಸಿನ ಮೇಲೆ ಗ್ರಹಣದ ಪ್ರಭಾವದ ಬಗ್ಗೆ ವಿಶ್ಲೇಷಿಸಿ, "ಪ್ರಧಾನಿ ಇಂದಿರಾಗಾಂಧಿಯವರಿಗೆ ಶನಿದೆಶೆ, ಬುಧ ಶನಿಗಳ ಪರಿವರ್ತನೆಯ ಗ್ರಹಣ ಪ್ರಭಾವದಿಂದ ಅವರ ಆರೋಗ್ಯದತ್ತ ಗಮನ ಹರಿಸುವುದು ಉತ್ತಮ. ಇಂದಿರಾ ಕಾಂಗ್ರೆಸಿನ ಗ್ರಹಗಳ ಕೂಟದ (ಗುರು, ಮಂಗಳ, ರಾಹು) ಮೇಲೆ ಸೂರ್ಯನ ದೃಷ್ಟಿ, ಈ ಸೂರ್ಯ ತನ್ನ ನೀಚತ್ವದ ರಾಶಿತುಲಾಗೆ ತ್ರಿಕೋಣದಲ್ಲಿದ್ದು ಆಳುವ ಪಕ್ಷಕ್ಕೆ ಅಪಕೀರ್ತಿ.

"ಯಾವ ಸಿಂಹರಾಶಿಗೆ ಶನಿ ಬಂದಾಗ ಅವರ ಆಡಳಿತಕ್ಕೆ ಘಾತವಾಯಿತೋ ಅದೇ ಸಿಂಹರಾಶಿಗೆ ಶನಿ ಉಗಾದಿ ನಂತ ಬರುವ ಕಾರಣ ಅವರ ಆಡಳಿತ ಬಲಕ್ಕೆ ಈ ಏಳು ತಿಂಗಳು ತೀವ್ರ ಆತಂಕದ ಕಾಲ. ಅಲ್ಲದೆ ಧನಗ್ರಹ ಗುರುವಿಗೆ ಸರ್ಪದೋಷವಿದ್ದು ಗ್ರಹಣಸೂರ್ಯ

ದೃಷ್ಟಿಯಿಂದ ದೇಶದ ಅರ್ಥ ವ್ಯವಸ್ಥೆ ಹದಗೆಟ್ಟು, ಜನರಲ್ಲಿ ಕ್ರಾಂತಿಕಾರಿ ಮನೋಭಾವ ಹೆಚ್ಚಿ ಗಲಭೆಗಳು ಉಂಟಾದೀತು" ಎಂದು ಎಚ್ಚರಿಕೆ ನೀಡಿದ್ದಾರೆ.

ಪೂರ್ಣ ಸೂರ್ಯ ಗ್ರಹಣದ ದಿನ ಭಾರೀ ಭೂಕಂಪವೆಂಬ ಭಯದಿಂದ ನಾಗಾಲ್ಯಾಂಡಿನ ಜನ ದೂರದ ಊರುಗಳಿಗೆ ವಲಸೆ ಹೋಗುತ್ತಿರುವರಲ್ಲದೆ, ಸಣ್ಣ ದೊಡ್ಡ ವ್ಯಾಪಾರಿಗಳು ತಮ್ಮ ಅಂಗಡಿಗಳನ್ನು ಮಾರುತ್ತಿದ್ದಾರೆ; ರಜೆ ಸಿಗದ ಕೇಂದ್ರ ಸರ್ಕಾರಿ ನೌಕರರು ತಮ್ಮ ಸಂಸಾರಗಳನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸುತ್ತಿದ್ದಾರೆ [ಪ್ರವಾ. ೧೩-೧೨-೮೦] ಎಂಬ ವರದಿಯೂ ಪ್ರಕಟವಾಗಿದೆ.

## ಕುರುಕ್ಷೇತ್ರ ಮತ್ತು ಇತರ ಯಾತ್ರಾಸ್ಥಳಗಳು

ಸೂರ್ಯ ಗ್ರಹಣಕ್ಕೆ ಎಲ್ಲ ಪುಣ್ಯಕ್ಷೇತ್ರಗಳಿಗಿಂತ ಕುರುಕ್ಷೇತ್ರ ಪ್ರಶಸ್ತವಾದುದೆಂಬ ಭಾವನೆಯಿದ್ದುದನ್ನು ಹಿಂದೆ ನೋಡಿದ್ದೇವೆ. ಈ ಬಾರಿ ಕುರುಕ್ಷೇತ್ರ ಸುದ್ದಿಯಲ್ಲಿದ್ದುದರಲ್ಲಿ ಆಶ್ಚರ್ಯವಿಲ್ಲ. ಗ್ರಹಣದ ದಿನ ಅಲ್ಲಿಗೆ ಹದಿನೈದು ಲಕ್ಷಕ್ಕೂ ಹೆಚ್ಚು ಜನ ಬರುವ ನಿರೀಕ್ಷೆಯಿದ್ದು ಹರಿಯಾಣ ಸರ್ಕಾರ ಅವರಿಗೆ ಬೇಕಾದ ಎಲ್ಲ ವ್ಯವಸ್ಥೆಗಳನ್ನು ಮಾಡಿತು. ಯಾತ್ರಿಕರಿಗೆ ವಾಸಕ್ಕೆ ಬಯಲಲ್ಲಿ ಟೆಂಟುಗಳನ್ನು ಹಾಕಲಾಗಿತ್ತು. ಸಾವಿರಾರು ಹಾವುಗಳನ್ನು ಕೊಂದುದಲ್ಲದೆ ಅಷ್ಟೇ ಸಂಖ್ಯೆಯ ಬೀದಿ ನಾಯಿಗಳನ್ನೂ ಹಿಡಿದರು. ಯಾತ್ರಿಕರಿಗೆ ಧಾರ್ಮಿಕ ಉಪದೇಶ, ಮನರಂಜನೆ, ನೃತ್ಯ ನಾಟಕಗಳ ವ್ಯವಸ್ಥೆಗಳೂ ಅಲ್ಲಿದ್ದುವು. ಗ್ರಹಣದ ದಿನ ಬ್ರಹ್ಮ ಸರೋವರದಲ್ಲಿ ಸ್ನಾನಮಾಡಿದರೆ ಗ್ರಹಣ ದೋಷ ಹೋಗುವುದಲ್ಲದೆ, ಒಂದು ಸಾವಿರ ಅಶ್ವಮೇಧ ಯಾಗ ಮಾಡಿದ ಪುಣ್ಯ ಬರುವುದೆಂದು ನಂಬಿಕೆ. [ಪ್ರವಾ, ೧೨-೨-೮೦; ೧೬-೨-೮೦]. ಈ ಬಾರಿ ಮಹಾಶಿವರಾತ್ರಿ (ಫೆಬ್ರವರಿ ೧೪), ಸಂಕ್ರಾಂತಿ (ಫೆಬ್ರವರಿ ೧೫), ಸೂರ್ಯಗ್ರಹಣ (ಫೆಬ್ರವರಿ ೧೬) ಒಟ್ಟಿಗೆ ಬಂದಿರುವುದು ಗಮನಾರ್ಹ. ಕುರುಕ್ಷೇತ್ರದ ಯಾತ್ರಾ ಜನಗಳಿಗಾಗಿ ಉತ್ತರ ರೈಲ್ವೆ ವಿಶೇಷ ರೈಲುಗಳನ್ನು ಓಡಿಸಿತು. ೧೬ ರಂದು ಕುರುಕ್ಷೇತ್ರದಲ್ಲಿ ಸೂರ್ಯಗ್ರಹಣ ಪ್ರಯುಕ್ತ ನಡೆಯಲಿರುವ ಯಜ್ಞಕ್ಕೆ ಕೇಂದ್ರ ಗೃಹಸಚಿವ ಜೇಲ್‌ಸಿಂಗ್ ಹಾಜರಿರುತ್ತಾರೆಂದು ಒಂದು ಪತ್ರಿಕೆ ವರದಿ ಮಾಡಿತ್ತು[3] [ಕಪ್ರ, ೧೫-೨-೮೦].

ನಾಗಪುರ ಸಮೀಪ ಕೃನ್ಹಾನ್ ಹೊಳೆಯಲ್ಲಿ ಗ್ರಹಣ ನೋಡಿದ ಬಳಿಕ ಸ್ನಾನಮಾಡುತ್ತಿದ್ದ ಮೂರು ಜನ ಸತ್ತರೆಂದೂ ಸುದ್ದಿ ಬಂದಿತ್ತು. [ಉವಾ, ೧೮-೨-೮೦]. ಕರ್ನಾಟಕದಲ್ಲಿ ಅಕ್ಕಪಕ್ಕದ ಅಂಕೋಲ, ಗೋಕರ್ಣದ ಸಮುದ್ರ

ದಂಡೆಗಳಲ್ಲಿ (ಚಿತ್ರಗಳು ೧೩, ೧೪, ೧೫, ೧೬, ೧೭, ೧೮,) ಸೇರಿದ್ದ ಜನರು ಸಮುದ್ರದಲ್ಲಿ ಅರೆಬೆತ್ತಲಲ್ಲಿ ಸ್ನಾನ ಮಾಡುತ್ತಿದ್ದ ವಿದೇಶಿ ಮಹಿಳೆಯರನ್ನು ಕುತೂಹಲದಿಂದ ನೋಡಿ, ಗ್ರಹಣಾನಂತರ ಗ್ರಹಣ ದೋಷ ನಿವಾರಣೆಗೆ (ಗೋಕರ್ಣದ) ಸಮುದ್ರ ಸ್ನಾನಕ್ಕೆ ಕಿಕ್ಕಿರಿದ ಸ್ವಾರಸ್ಯದ ವಿಷಯ ಉದಯವಾಣಿ [೨೦-೨-೧೯೮೦] ಮತ್ತು ಸುಧಾದಲ್ಲಿ [೯-೩-೮೦] ವರದಿಯಾಗಿದೆ. "ಪ್ರಸಿದ್ಧ ಯಾತ್ರಾಸ್ಥಳ ಗೋಕರ್ಣಕ್ಕೆ ಜನರ ಸಾಲುಗಳು ಹರಿದುಬರತೊಡಗಿವೆ. ನಿನ್ನೆಯಷ್ಟೇ [೧೪-೨-೮೦] ಸಂಭ್ರಮದಿಂದ ವಿಧ್ಯುಕ್ತವಾಗಿ ಮಹಾಶಿವರಾತ್ರಿಯನ್ನು ಆಚರಿಸಿದ ಅಲ್ಲಿನ ಜನರು ನಾಳೆ ಗ್ರಹಣ ಕಾಲದಲ್ಲಿ ಪುನಃ ಸಮುದ್ರ ಸ್ನಾನ ಮಾಡಲು ಸಿದ್ಧರಾಗಿದ್ದಾರೆ" [ಉವಾ, ೧೬-೨-೮೦].

ಗ್ರಹಣ ಕಾಲದಲ್ಲಿ ಎಂತಹ ಬಟ್ಟೆ ತೊಡಬೇಕು, ಎಷ್ಟು ನೀರು ಕುಡಿಯಬೇಕೆಂದು ಪುಣೆಯ ಕೇಂದ್ರೀಯ ಹವಾಮಾನ ವೀಕ್ಷಣಾಲಯಕ್ಕೆ ದೂರದ ಮುಂಬೈಯಿಂದ ಟ್ರಂಕ್‌ಕಾಲ್ ಮಾಡಿ ಕೇಳಿದವರೂ ಉಂಟೂ. [ಉವಾ, ೧೮-೨-೮೦].

## ಸುಮ್ಮನೆ, ತಮಾಷೆಗೆ (ಅಥವಾ ಗಂಭೀರವಾಗಿ?)

ಗ್ರಹಣ ನಡೆದಾದ ಮೇಲೆ, ಗ್ರಹಣದ ಬಿಸಿ ಬಿಸಿ ವರದಿಗಳು ತಣ್ಣಗಾಗುತ್ತಿದ್ದಂತೆ Deccan Herald ಪತ್ರಿಕೆಯಲ್ಲಿ [ಫೆಬ್ರವರಿ ೨೪, ೧೯೮೦] ಮುಖ ಪುಟದಲ್ಲಿ ತೀರ ಮುಖ್ಯ ಸುದ್ದಿಗಳಾಗಿ ಬಂದ ಕೆಲವನ್ನು ಗಮನಿಸಿ. "46 Defence Men Killed in IAF Plane Crash"; "Hundred dead: fighting continues in Kabul"; "10-lakh loss as fire rages in busy city Area"; "ಟಿಟೋಗೆ ನ್ಯೂಮೋನಿಯ" ಇಂಥ ಸುದ್ದಿಗಳನ್ನೂ, ಮುಂದೆ ಟಿಟೋ, ಸಂಜಯಗಾಂಧಿ ನಿಧನ, ಇರಾನ್ ಇರಾಕ್ ಯುದ್ಧಗಳನ್ನೂ ಉಲ್ಲೇಖಿಸಿ ಇವೆಲ್ಲ ಗ್ರಹಣದ ಪರಿಣಾಮಗಳೆಂದು ಯಾರಾದರೂ ವಾದಿಸಿದರೆ, ಸುಳ್ಳು ಎಂದು ಹೇಳಲು ಸಾಧ್ಯವೇ? ರೇಗನ್, ಪೋಪರ ಮೇಲೆ ಈಚೆಗೆ ನಡೆದ ಹತ್ಯೆಯ ಯತ್ನಗಳು ಗ್ರಹಣದ ಪರಿಣಾಮವೇ? ನಂಬಿಕೆಗಳ ವಿರುದ್ಧವಾಗಿ ವಾದಿಸುವುದು ಅಷ್ಟು ಸುಲಭ ಅಲ್ಲ. ನಂಬದವರನ್ನು ನಂಬಿಸಲು ಯತ್ನಿಸುವುದು ಪ್ರಿಯವಾದ ಕೆಲಸವೇನೂ ಅಲ್ಲ.

## ಗ್ರಹಣದ ಬಗ್ಗೆ ಮಾಹಿತಿ

ಎಲ್ಲ ಪತ್ರಿಕೆಗಳೂ ಗ್ರಹಣ ನಡೆಯುವ ವೇಳೆ, ಕಾಣಿಸಿಕೊಳ್ಳುವ ಜಾಗ,

ಹೇಗೆ ನೋಡಬೇಕು, ನೋಡುವಲ್ಲಿ ಎಚ್ಚರ ಮತ್ತು ಆ ಎಚ್ಚರ ತಪ್ಪಿದಲ್ಲಿ ಕಣ್ಣಿಗೆ ಒದಗುವ ಅಪಾಯಗಳ ಮಾಹಿತಿಗಳ ಬಗ್ಗೆ ವಿವರಗಳನ್ನು ಮೇಲಿಂದ ಮೇಲೆ ಕೊಟ್ಟುವು. ಕಾರವಾರ, ಗದಗ, ಗೋಕರ್ಣ, ಹೊನ್ನಾವರ, ಹುಬ್ಬಳ್ಳಿ, ರಾಯಚೂರು, ಜಪಾಲ್-ರಂಗಾಪುರ ವೀಕ್ಷಣಾಲಯ, ಖಮ್ಮಮ್, ಕರ್ನೂಲ್, ಮಹಬೂಬ್ ನಗರ, ನಲಗೊಂಡ, ಹೈದರಾಬಾದ್, ಕೊನಾರಕ್ ಇವು ಪೂರ್ಣಗ್ರಹಣ ಪಥದಲ್ಲಿದ್ದ ಕೆಲವು ಪ್ರಮುಖ ನಗರಗಳು. [ಪ್ರವಾ, ೫-೨-೮೦]. ಪತ್ರಿಕೆಗಳಲ್ಲಿ ಹವಾಮಾನ ಸಂಸ್ಥೆಗಳು, ತಜ್ಞರು ಹೇಳಿದ ಮಾತುಗಳು, ಹೊರಡಿಸಿದ ಹೇಳಿಕೆಗಳು ಪ್ರಕಟವಾದುವು. ಜೆ. ಸಿ. ಭಟ್ಟಾಚಾರ್ಯ ಹೊರಡಿಸಿದ "Viewing Solar Eclipse" ಎಂಬ ಹೇಳಿಕೆ ಪುಟ್ಟ ಲೇಖನವಾಗಿಯೂ ಪ್ರಕಟವಾಯಿತು. [Deccan Herald, 10-2-80]. ಅದು ಚಿಕ್ಕದಾಗಿರುವುದರಿಂದ ಅದನ್ನು ಹಾಗೇ ಕೆಳಗೆ ಕೊಟ್ಟಿದ್ದೇನೆ.

## Viewing Solar Eclipse.

There have been several instances of people losing their eyesight permanently by watching a solar eclipse without proper precautions. It is, therefore, imperative that due care is taken to look at the sun during an eclipse.

There will be a solar eclipse on February 16 Saturday varying between 2 p.m. and 5 p.m. according to the place.

The sun is normally so bright that one cannot look at it. During an eclipse, however, the illumination is so low that the iris opens up to gather more light. But the small areas of still uncovered sun are intrinsically very bright. Under these conditions if a person looks directly at the sun, an intensely bright image of the crescent sun forms on the retina. Although the rays from the almost covered disk of the sun are easy to watch without discomfort, they are still ten thousand times brighter than our eyes can handle. The brightness of the image is so great that even a short exposure can burn the retina permanently.

## Safest Way

The safest way to watch an eclipse before and after totality is to use a fully exposed black and white photographic film of density six sandwiched between two glass plates. (A density six film transmits only one part in one million of intensity).

Such a filter can be built up with two thicknesses at most, of commercially available black and white photographic film that is opened out in broad day-light and developed to maximum density. This filter should be used only before and after totality during the partial phases of the eclipse. For the two and a half minutes of totality, one should view the sun directly without the aid of this natural filter, taking care to use the filters immediately again after totality.

It is advisable not to point any optical instrument (like binoculars) at the sun without specially designed sun filters, because the rays are focussed by the optics and may damage the eyes.

The next best method for family viewing is to cover a plane mirror with a piece of paper having a circular hole of about 1/2 cm diameter. The sunlight reflected from the mirror may be projected on a wall 15 metres away. This would give an image of the partially eclipsed sun. When the image completely disappears, the viewer would come out and observe the totally blocked sun. But one should remember to look away the moment totality ends.

## ಗ್ರಹಣ ಹಿಡಿಯುವ ಕಾಲದ ವಿವರಗಳು

| | ಆರಂಭ | ಪೂರ್ಣ | ಮುಕ್ತಾಯ |
|---|---|---|---|
| ಗೋಕರ್ಣ ಮತ್ತು ಕಾರವಾರ | ೧೪.೧೭ | ೧೫.೪೦ | ೧೬.೫೨ |
| ಹುಬ್ಬಳ್ಳಿ-ಧಾರವಾಡ | ೧೪.೨೦ | ೧೫.೪೨ | ೧೬.೫೩ |
| ಬೆಂಗಳೂರು | ೧೪.೨೩ | ೧೫.೪೪ (ಸು. ೯೦%) | ೧೬.೫೪ |
| ಪುರಿ–ಕೊನಾರಕ್ | ೧೪.೪೨ | ೧೫.೫೫ | ೧೭.೦೦ |

ಪೂರ್ಣಗ್ರಹಣದ ಗರಿಷ್ಠ ಕಾಲಾವಧಿ ಎರಡು ನಿಮಿಷ ಐವತ್ತು ಸೆಕೆಂಡ್. ಗ್ರಹಣವನ್ನು ಹೇಗೆ ನೋಡಬೇಕೆಂಬುದರ ಬಗ್ಗೆ ಪರಸ್ಪರ ವಿರೋಧದ ಹೇಳಿಕೆಗಳೂ ಬಂದಿವೆ. "ಗಾಜಿನ ಫಲಕಕ್ಕೆ ಎಣ್ಣೆಯ ದೀಪದ ಕಾಡಿಗೆಯನ್ನು ದಪ್ಪವಾಗಿ ಲೇಪಿಸಿ ಅದರ ಮೂಲಕ ಗ್ರಹಣವನ್ನು ನೋಡಬಹುದು" ಎಂದು ಕರ್ನಾಟಕ ರಾಜ್ಯದ ಆರೋಗ್ಯ ಇಲಾಖೆಯ ನಿರ್ದೇಶಕರ ಪ್ರಕಟಣೆ ತಿಳಿಸಿದರೆ [ಪ್ರವಾ, ೮–೨–೮೦], ಅದೇ ಪತ್ರಿಕೆಯಲ್ಲಿ [೧೬–೨–೮೦] "ಮಸಿ ಹಿಡಿದ ಗಾಜುಗಳ ಮೂಲಕ ನೋಡುವುದೂ ಸಹ...ತೀವ್ರ ಅಪಾಯ" ಎಂದಿದೆ. ಆರೋಗ್ಯ ಇಲಾಖೆಯ ನಿರ್ದೇಶಕರ ಮೇಲಿನ ಪ್ರಕಟಣೆಯಲ್ಲಿ ಸ್ವಾರಸ್ಯದ ಒಂದು ಸಂಗತಿಯಿದೆ. [ಪ್ರವಾ, ೮–೨–೮೦]. "ಗ್ರಾಮೀಣ ಜನರು ಬಳಸುವಂತಹ ಸಗಣಿ ಕದಡಿದ ನೀರಿನ ಮೂಲಕ ಗ್ರಹಣವನ್ನು ನೋಡುವುದು ವೈಜ್ಞಾನಿಕವಾಗಿ ಸರಿ ಎಂದು ಅವರು ಒಪ್ಪಿಕೊಂಡರು." ಕೇರಳ ನೇತ್ರ ವಿಜ್ಞಾನಿಗಳ ಸಂಘದ ಅಧ್ಯಕ್ಷರು ನೀಲಿ, ಹಸಿರು, ಕಪ್ಪು ಬಣ್ಣ ಕದಡಿರುವ ಮಂದ ನೀರಿನಲ್ಲಿ ನೋಡುವುದು ಕ್ಷೇಮವೆಂದೂ, "ಮಕ್ಕಳನ್ನು ಸೂರ್ಯಗ್ರಹಣದಲ್ಲಿ ಬಿಡಬೇಡಿ" ಎಂದೂ ಹೇಳಿಕೆ ಕೊಟ್ಟರು [ಪ್ರವಾ, ೧೪–೨–೮೦]. ಗ್ರಹಣದ ದಿನದ ಪ್ರಜಾವಾಣಿ ಪತ್ರಿಕೆ ಹೀಗೆ ಹೇಳಿತು. [೧೬–೨–೮೦].

"ದಯವಿಟ್ಟು ಗ್ರಹಣದ ಸಮಯದಲ್ಲಿ ಸೂರ್ಯನನ್ನು ನೋಡಬೇಡಿರಿ": "ಸೂರ್ಯನನ್ನು ಬಿಟ್ಟು ಬೇರೆ ಕಡೆ ನೋಡಿರಿ".

ರೇಡಿಯೋದಲ್ಲಂತೂ ಮೇಲಿಂದ ಮೇಲೆ "ಗ್ರಹಣವನ್ನು ಬರಿ ಕಣ್ಣಿಂದ ನೋಡಬೇಡಿ, ಮಕ್ಕಳಿಗೆ ತೋರಿಸಬೇಡಿ" ಎಂದು ಪ್ರಕಟಿಸಲಾಯ್ತು. ರಾಜ್ಯದ ಪ್ರಮುಖ ಪತ್ರಿಕೆಯೊಂದು (ಹೆಸರು ತಿಳಿಯದು) **"ಅವಕಾಶ ಕಳೆದುಕೊಳ್ಳಿ, ಕಣ್ಣು ಉಳಿಸಿಕೊಳ್ಳಿ"** ಎಂದು ಪ್ರಕಟಿಸಿದರೆ ['ಗ್ರಹಣ–ಪ್ರವಾಸ ಕಥನ', ಎ. ಎಸ್. ಎಲ್. ಹೆಬ್ಬಾರರ ಲೇಖನ. ಉವಾ ೨೦–೨–೮೦] ಜನ ಗ್ರಹಣವನ್ನು ನೋಡಲು

ಧೈರ್ಯ ಮಾಡುತ್ತಾರೆಯೇ? ಮೂಢನಂಬಿಕೆಗಳಿರದವರೂ ಆ ದಿನ ಹೊರ ಬರಲು ಹೆದರಿದರು. ಗ್ರಹಣ ವಿಜ್ಞಾನಿಯೊಬ್ಬರು ಉದ್ಗರಿಸಿದಂತೆ, ಜಪಾನ್ ದೇಶ ಹಣ ಕೊಟ್ಟು ವಿದ್ಯಾರ್ಥಿಗಳನ್ನು ಗ್ರಹಣ ನೋಡಲಿ ಎಂದು ಭಾರತಕ್ಕೆ ಕಳಿಸಿದರೆ, ೧೯೭೩ರಲ್ಲಿ ದಕ್ಷಿಣ ಆಫ್ರಿಕಾ ಸರಕಾರ ಗ್ರಹಣ ನೋಡಲು ಸುರಕ್ಷಿತ ಸಾಧನಗಳನ್ನು[4] ಮಾಡಿಸಿ ಲಕ್ಷಾಂತರ ಜನರಿಗೆ ಕೊಟ್ಟು ಪ್ರೋತ್ಸಾಹಿಸಿತು. ನಮ್ಮ ದೇಶ ಅಸಾಧ್ಯವಾಗಿ ಜನರಲ್ಲಿ ನಿರುತ್ಸಾಹ ಭಯ ತುಂಬಿರುವುದನ್ನು ಕುರಿತು ವಿಜ್ಞಾನಿ ವ್ಯಾಕುಲಪಟ್ಟರಂತೆ [ಮೇಲಿನ ಹೆಬ್ಬಾರರ ಲೇಖನ, ಉವಾ. ೨೦–೨–೮೦].

ಗ್ರಹಣ ಪೂರ್ಣವಾದಾಗ, ಎಂದರೆ ಸೂರ್ಯನ ಕರಿಯ ಗೋಳ (Corona) ಕಾಣಿಸುವಾಗ ಬರಿಗಣ್ಣಲ್ಲಿ ನೋಡಬಹುದು ಎಂಬುದನ್ನು ಪತ್ರಿಕೆಗಳಲ್ಲಿ ಹೇಳಲಾಗಿತ್ತು.

### ರಜೆ; ಬಸ್ ಸಂಚಾರ ರದ್ದು

ಗ್ರಹಣದ ದಿನ ರಜೆ ಬೇಕೆಂದು ಸಾರ್ವಜನಿಕರಿಂದ, ವಿಧಾನಪರಿಷತ್ತಿನ ಸದಸ್ಯರಿಂದ ಒತ್ತಾಯಗಳು ಬಂದುವು [ವಾಚಕರವಾಣಿಯಲ್ಲಿ, ಪ್ರವಾ, ೬–೨–೮೦]. ಭಾರತದಲ್ಲಿ ರಜೆಗಳ ಬಗ್ಗೆ ಚೆನ್ನಾಗಿ ಬಲ್ಲವರಿಗೆ ಗೊತ್ತು. ಇದು ಧಾರ್ಮಿಕ ವಿಧಿಗಳನ್ನು ನಡೆಸಬಹುದು ಎಂಬುದಾಗಲಿ ಅಥವಾ ಗ್ರಹಣವನ್ನು ನೋಡಬೇಕು ಎಂಬ ಕುತೂಹಲವಾಗಲಿ ಅಂತಹ ಒತ್ತಾಯಕ್ಕೆ ಪ್ರಚೋದನೆ ಅಲ್ಲ. ಕಣ್ಣಿನ ಅಪಾಯದ ಭೀತಿ, ಅದಕ್ಕಿಂತ ಹೆಚ್ಚಾಗಿ ರಜೆಯನ್ನು ಆರಾಮವಾಗಿ ಅನುಭವಿಸಬೇಕೆನ್ನುವ ಪ್ರವೃತ್ತಿ ಮುಖ್ಯ ಪ್ರಚೋದನೆಗಳಾಗಿದ್ದುವೆಂದು ಊಹಿಸಬಹುದು. ಕರ್ನಾಟಕ ಸರ್ಕಾರ ತನ್ನ ಎಲ್ಲ ಕಚೇರಿ, ವಿದ್ಯಾಸಂಸ್ಥೆಗಳು, ಕೋರ್ಟುಗಳಿಗೆ ರಜೆಯನ್ನು ಘೋಷಿಸಿತು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಬೆಂಗಳೂರು ನಗರ ಸಾರಿಗೆ ಸಂಸ್ಥೆ "ಮಧ್ಯಾಹ್ನ ೨ರಿಂದ ಸಂಜೆ ೫ರವರೆಗೆ ಬಸ್ಸುಗಳ ಸಂಚಾರವನ್ನು ಸ್ಥಗಿತಗೊಳಿಸಿದುವು" [ಪ್ರವಾ. ೧೪–೨–೮೦]. ಕೇಂದ್ರ ಸರ್ಕಾರ ತನ್ನ ಕಚೇರಿಗಳಿಗೆ ಮಧ್ಯಾಹ್ನದಿಂದ ಅರ್ಧ ದಿನ ರಜ ಘೋಷಿಸಿತ್ತು [ಪ್ರವಾ. ೧೪–೨–೮೦]; ತನ್ನ ಆಜ್ಞೆಯನ್ನು ಮಾರ್ಪಡಿಸಿ ೧೫ನೇ ತಾರೀಖು ಹೊರಡಿಸಿದ ಪ್ರಕಟಣೆಯು ಪೂರ್ಣದಿನ ರಜ ಘೋಷಿಸಿತು [ಉವಾ. ೧೬–೨–೮೦]. ಎಲ್ಲ ಬ್ಯಾಂಕುಗಳಿಗೂ ರಜೆ ಇತ್ತು.

ಗ್ರಹಣದ ದಿನ ಬಸ್ಸುಗಳು ಬೆಳಿಗ್ಗೆ ಹತ್ತು ಹನ್ನೊಂದರಿಂದಲೇ ತಮ್ಮ

ಸಂಚಾರವನ್ನು ನಿಲ್ಲಿಸಿದುವು. ರೈಲು, ವಿಮಾನಗಳ ಸಂಚಾರ ಎಂದಿನಂತೆ ನಡೆಯಿತು. ಅಂದಿನ ರೈಲುಗಳೆಲ್ಲ ಖಾಲಿಯಾಗಿ ಓಡಿದುವು. ಹೋಟೆಲ್ಲುಗಳೆಲ್ಲ ಮಧ್ಯಾಹ್ನ ೧-೩೦ ರಿಂದ ೪-೩೦ರವರೆಗೆ ತಮ್ಮ ಬಾಗಿಲುಗಳನ್ನು ಮುಚ್ಚಿ ವ್ಯಾಪಾರವನ್ನು ನಿಲ್ಲಿಸಿದುವು.

ಆ ದಿನ ನಡೆಯಬೇಕಾಗಿದ್ದ ಎಲ್ಲ ಪರೀಕ್ಷೆಗಳನ್ನು ಮೈಸೂರು ವಿಶ್ವವಿದ್ಯಾನಿಲಯ ಮುಂದೆ ಹಾಕಿತು [ಪ್ರವಾ. ೧೦-೨-೮೦].

## ಪ್ರಾಣಿಗಳ ಮೇಲೆ ಪ್ರಯೋಗಕ್ಕೆ ಸಿದ್ಧತೆ

Economic Times ಪತ್ರಿಕೆಯಲ್ಲಿ [೬-೨-೮೦] ಈ ಸುದ್ದಿಯಿದೆ. ಬೊಂಬಾಯಿಯ National (Natural ?) History Society ಸಂಸ್ಥೆಯ ಐವರು ವಿಜ್ಞಾನಿಗಳು ಗ್ರಹಣದ ಸಮಯದಲ್ಲಿ ಪ್ರಾಣಿಗಳ ಮೇಲೆ ಆಗುವ ಪರಿಣಾಮಗಳನ್ನು ಅಧ್ಯಯನ ಮಾಡಲು ಸಿದ್ಧತೆ ಮಾಡಿಕೊಂಡಿದ್ದರು. ಅವರು ಆಯ್ಕೆ ಮಾಡಿಕೊಂಡ ಜಾಗಗಳು: ಮಧ್ಯಪ್ರದೇಶದ ಬಸ್ತಾರ್ ಜಿಲ್ಲೆಯ ದಟ್ಟ ಕಾಡು. ಪೂರ್ವದಲ್ಲಿ ಉತ್ಕಲ ವಿಶ್ವವಿದ್ಯಾಲಯ (ಭುವನೇಶ್ವರ) ಮತ್ತು ಕಲ್ಕತ್ತೆಯ Nandankanan Biological Park ಸಂಸ್ಥೆಯವರೂ ಅಂತಹ ಅಧ್ಯಯನಗಳನ್ನು ಕೈಗೊಂಡಿದ್ದರು. ಆಂಧ್ರಪ್ರದೇಶದ ರಂಗಾಪುರ ವೀಕ್ಷಣಾಲಯದವರೂ ಈ ದಿಸೆಯಲ್ಲಿ ಯೋಜನೆ ಕೈಗೊಂಡಿದ್ದರು. ಕಾಡಿನ ಪ್ರಾಣಿಪಕ್ಷಿಗಳನ್ನಲ್ಲದೆ ಮೃಗಾಲಯದ ಪ್ರಾಣಿ ಪಕ್ಷಿಗಳ ನಡವಳಿಕೆಗಳನ್ನೂ ಗಮನಿಸುವುದು ಯೋಜನೆಯ ಅಂಗವಾಗಿತ್ತು.

## ಗ್ರಹಣ ಸಮಯದಲ್ಲಿ ಸಸ್ಯ ಪ್ರಾಣಿಗಳ ನಡವಳಿಕೆ ಹೀಗಿರುತ್ತದೆ

ಡಾ॥ ಎಂ. ಕೆ. ವೈನು ಬಪ್ಪು ಅವರು ಮಾರ್ಚ್ ೧೫-೧೬, ೧೯೭೯ ರಂದು ಉಸ್ಮಾನಿಯ ವಿಶ್ವವಿದ್ಯಾಲಯದ Centre of Advanced study in Astronomy ವಿಭಾಗದವರು "The total Solar Eclipse of February 16, 1980" ವಿಷಯವಾಗಿ ಏರ್ಪಡಿಸಿದ ವಿಚಾರಗೋಷ್ಠಿಯ ಆರಂಭ ಭಾಷಣದಲ್ಲಿ ಹೇಳಿದ್ದಾರೆ.

"Several interesting things happen in Nature during these moments of totality and a few minutes before and after totality. If you look at the plant and animal kingdom, many plants that close up for the night, close up during the phases of total eclipse. The crocus, the anemone, and wattle leaves that close up for the

evening, behave as if they would at nightfall. Violets which give out their very agreeble smell only in darkness and which were probably unnoticed before totality, give out an agreeble perfume. The animal kingdom responds in much the same fashion. Birds get confused. The owls and bats come out. Pigeons go to roost and as soon as total phase is over they come out again. The fowls sit down where they are. A cock may even crow, soon after totality. Ants however, continue their work unperturbed by what has happened. The famous French physicist, Arago, at the eclipse of 1842 carried out an experiment on his dog. He did not give it food for twenty four hours and started giving it pieces of bread at different phases of the eclipse. **While the animal greedily grabbed at the pieces of bread well before totality, during totality it refused to eat.** And this is **much the same** I suppose, if one looks at homosapiens......"

ಗ್ರಹಣದ ಸಮಯದಲ್ಲಿ ಆಹಾರ ತೆಗೆದುಕೊಳ್ಳದಿರುವ ಮನುಷ್ಯರ ನಡವಳಿಕೆಗೆ ಆ ದಿನ ರಿಚುಯಲ್ಲಿನ ಸ್ಥಾನವನ್ನು ಕಲ್ಪಿಸಿದ್ದರೂ ಗ್ರಹಣಕ್ಕೆ ಮನುಷ್ಯನೂ ಸೇರಿದಂತೆ ಒಟ್ಟು ಪ್ರಾಣಿ ಜಗತ್ತಿನ ನೈಸರ್ಗಿಕ ಪ್ರತಿಕ್ರಿಯೆಯೇ ಮೂಲವಿರುವಂತೆ ತೋರುತ್ತದೆ. **ಗ್ರಹಣದ ಸಮಯದಲ್ಲಿ ಊಟ ಮಾಡದಿರುವುದು ಮೂಢನಂಬಿಕೆ ಅಲ್ಲ; ಅದು ಸ್ವಾಭಾವಿಕ ಕ್ರಿಯೆ (?)**

## ಗ್ರಹಣದ ದಿನ

ಗ್ರಹಣದ ಹಿಂದಿನ ದಿನವೇ ಜನರಿಗೆ ಗ್ರಹಣಜ್ವರ ಆರಂಭವಾಗಿತ್ತು. ಗ್ರಹಣದ ದಿನ [೧೬–೨–೮೦] ಬಂದ ಪತ್ರಿಕೆಗಳು ಅದನ್ನು ಕಣ್ಣಿಗೆ ಕಟ್ಟುವಂತೆ ವರದಿ ಮಾಡಿದ್ದುವು. ವಿಜ್ಞಾನಿಗಳು ಗ್ರಹಣ ವೀಕ್ಷಣೆಗೆ ಸಜ್ಜಾದರು; ಅವರಿಗೆ ಮೋಡಗಳು ಮರೆಮಾಡುವ ಆತಂಕ. "ಸಂಪ್ರದಾಯವಾದಿಗಳು ಮಂತ್ರ ಪಠಣಾದಿಗಳಲ್ಲಿ ತೊಡಗಿದ್ದು" ಮಾರನೆಯ ಒಬ್ಬ ಜ್ಯೋತಿಷಿ ಉಚಿತವಾಗಿ ಮಂತ್ರ ಪಟ್ಟಿಕೆಗಳನ್ನು ವಿತರಣೆ ಮಾಡುತ್ತಿದ್ದರು. "ಗ್ರಹಣದ 'ಜ್ವರ'ಪೀಡಿತರಾಗಿರುವ ಲಕ್ಷಾಂತರ ಮಂದಿ ಭಾರತೀಯರು ನಾಳೆ ಸಂಭವಿಸಲಿರುವ ಪೂರ್ಣ ಸೂರ್ಯ ಗ್ರಹಣವನ್ನು ಕುತೂಹಲ, ಭಾವೋದ್ವೇಗ ಹಾಗೂ ಸ್ವಲ್ಪ ಭೀತಿಯಿಂದ ಎದುರು

ನೋಡುತ್ತಿದ್ದಾರೆ" ಎಂದು ಪ್ರಜಾವಾಣಿ ಪತ್ರಿಕೆ ಸಾಮಾನ್ಯ ಜನರ ಭಾವನೆಗಳನ್ನು ಸರಿಯಾಗಿ ಬಣ್ಣಿಸಿತು. ಗ್ರಹಣದ ದಿನ ಕತ್ತಲಾಗಿ ಕಳ್ಳತನ ದರೋಡೆಗಳಾಗಬಹುದೆಂಬ ಭೀತಿಯಿಂದ ಆ ವೇಳೆ ಗಸ್ತು ತಿರುಗಲು ಚಿತ್ರದುರ್ಗ ವಿಭಾಗದ ಪೋಲೀಸರಿಗೆ ಸೂಚನೆಗಳು ಹೋಗಿದ್ದುದು, "ಮೈನವಿರೇಳಿಸುವ ಪೂರ್ಣ ಸೂರ್ಯ ಗ್ರಹಣದಲ್ಲಿ ಜನರಿಗೆ ಉಂಟಾಗುವ ಅನಾಹುತಗಳಿಗೆ ಪೂರ್ವಭಾವಿಯಾಗಿ ರಕ್ಷಣೆಯ ವ್ಯವಸ್ಥೆ ಮಾಡಲಾಗಿದೆ"ಯೆಂದೂ, "ಬಿರುಗಾಳಿಯಂತೆ ಬೀಸುವ ಕಪ್ಪು ನೆರಳು ಭೀತಿ ಮೂಡಿಸುವುದರಿಂದ ಜನಗಳಿಗೆ ರಕ್ಷಣೆ ಕೂಡ ಒದಗಿಸಲಾಗುವುದು" ಎಂದೂ ಉತ್ತರ ಕನ್ನಡ ಜಿಲ್ಲಾಧಿಕಾರಿ ಉತ್ಪ್ರೇಕ್ಷಿಸಿ ಅರ್ಥಮಾಡಿಕೊಂಡಿದ್ದುದರ ಸೂಚನೆ ಎಂಬಲ್ಲಿ ಅನುಮಾನವಿಲ್ಲ. ಆ ದಿನ ಒಬ್ಬ ವಾಚಕರು [ಪ್ರವಾ. ೧೬-೨-೮೦] ಗ್ರಹಣದ ದಿನ ಅನೇಕರು ಕಣ್ಣಾರೆ ನೋಡಿ ಕುರುಡರಾಗುವ ಸಂಭವವಿರುವುದರಿಂದ ಅದನ್ನೊಂದು ರಾಷ್ಟ್ರೀಯ ಮಟ್ಟದ ಸಮಸ್ಯೆಯೆಂಬಂತೆ ಸರ್ಕಾರ ಭಾವಿಸಬೇಕು ಎಂದು ಒತ್ತಿ ಹೇಳಿದರು. ಅನೇಕರಿಗೆ, ಹಗಲು ಹೊತ್ತೇ ನಕ್ಷತ್ರ ಕಾಣುವ ಘಟನೆ "ಅನಿಷ್ಟದ ಮುನ್ಸೂಚನೆ"ಯಾಗಿತ್ತು. "ಪ್ರಕೃತಿ ವಿಕೋಪಗಳಲ್ಲದೆ ನಾನಾ ವಿಧದ ವ್ಯಾಧಿಗಳು ಹೆಚ್ಚುವ ಸಾಧ್ಯತೆ ಬಗ್ಗೆ ಜ್ಯೋತಿಷಿಗಳು ಭವಿಷ್ಯ ನುಡಿದಿರುವುದು ಅಮಾಯಕರನ್ನು ಗಾಬರಿಗೊಳಿಸಿದೆ." ಒಟ್ಟಾರೆ ಎಲ್ಲೆಡೆ "ಭಯ ಮಿಶ್ರಿತ ಕುತೂಹಲ."

ಒಬ್ಬರು (ಭಾರತೀಯರು) ಗದಗಿನಲ್ಲಿ "ತಮ್ಮ ತಂಡ ಸಾಮಾಜಿಕ ಪರಿಣಾಮ ಮತ್ತು ಸಾಂಸ್ಕೃತಿಕ ದೃಷ್ಟಿಯಿರಿಸಿಕೊಂಡು" ಅಭ್ಯಾಸ ಮಾಡುವುದಾಗಿ ಹೇಳಿದರು. ವಿಭಿನ್ನ ಸಂಸ್ಕೃತಿಯ ಜನರ ನಡುವೆ ಗ್ರಹಣದ ಬಗ್ಗೆ ಇರುವ ದಂತಕತೆ, ನಂಬಿಕೆ ಮೊದಲಾದುವುಗಳ ಪ್ರಾಮಾಣಿಕ ಸತ್ಯತೆ ಅಭ್ಯಸಿಸುವುದು, ಅದನ್ನು ವೈಜ್ಞಾನಿಕ ದೃಷ್ಟಿಯಿಂದ ವಿಶ್ಲೇಷಿಸುವುದು, ಅವಶ್ಯವಾದ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದೇ ಮೊದಲಾದ ಬಗ್ಗೆ ವಿವರಿಸಿ ತಮ್ಮ ತಂಡದವರು "ಕರ್ನಾಟಕದಲ್ಲಿ ಗೋಕರ್ಣ, ಗದಗ, ಅಣ್ಣಿಗೇರಿ ಹಾಗೂ ಯಲ್ಲಾಪುರಗಳಲ್ಲಿ ಕೇಂದ್ರ ತೆರೆದಿರುವುದಾಗಿ ಹೇಳಿದರು". ಇಂತಹುದೇ ಅಧ್ಯಯನ ಆಂಧ್ರದಲ್ಲಿ ನಡೆದಿತ್ತೆಂಬುದೂ ತಿಳಿದುಬಂದಿದೆ. "ಗ್ರಹಣದ ಬಗ್ಗೆ ಶ್ರೀ ಸಾಮಾನ್ಯನ ಕಲ್ಪನೆ"ಯನ್ನು ತಿಳಿಯುವುದು ಅದರ ಉದ್ದೇಶ. "ಇಂದಿರಮ್ಮ ಅಧಿಕಾರಕ್ಕೆ ಬಂದಿದ್ದಾರೆ. ಭಾರತದಲ್ಲಿ ಯಾವ ವಿಪತ್ತೂ ಸಂಭವಿಸುವುದಿಲ್ಲ"ವೆಂದು ಕೆಲವು ಮಹಿಳೆಯರ ಅಭಿಪ್ರಾಯ ಎಂದು ಅಧ್ಯಯನ ತಂಡದವರು ತಿಳಿಸಿದರೆಂಬ ವರದಿಯೂ ಇದೆ. [ಪ್ರವಾ, ೧೬-೨-೮೦]. (ಈ ಎಲ್ಲ ಸಂಗತಿ ನನ್ನ ಅರಿವಿಗೆ ಬಂದುದು ನನ್ನ ಕ್ಷೇತ್ರಕಾರ್ಯ

ಮುಗಿದ ಮೇಲೆ ಮತ್ತು ಅವರ ಅಧ್ಯಯನದ ಫಲವೂ ಬೇಗ ಓದುಗರಿಗೆ ಸಿಗಲಿ ಎಂದು ಹಾರೈಸೋಣ).

ಆ ದಿನದ ಪತ್ರಿಕೆಗಳಲ್ಲಿ ಮುಖ್ಯವಾಗಿ ಕರ್ನಾಟಕದ ಬೇರೆ ಬೇರೆ ಕಡೆಗಳಲ್ಲಿ ವಿಜ್ಞಾನಿಗಳು ಮಾಡಿಕೊಂಡಿದ್ದ ಸಜ್ಜುಗಳ ವಿವರಪೂರ್ಣ ವರ್ಣನೆಗಳಿದ್ದುವು. ಅವರನ್ನು ಭೇಟಿ ಮಾಡಿ ಅವರ ಪ್ರಯೋಗಗಳ ಸ್ವರೂಪವೇನೆಂಬುದನ್ನು ಓದುಗರಿಗೆ ತಿಳಿಸಿಕೊಡುವ ಒಳ್ಳೆಯ ಯತ್ನಗಳು ಇದ್ದುವು. "ಪ್ರಜಾವಾಣಿ" ಪತ್ರಿಕೆಯ [೧೬-೨-೧೯೮೦] ಐದನೆಯ ಪುಟದಲ್ಲಿ ಪ್ರಧಾನವಾಗಿ ಪ್ರಕಟವಾಗಿದ್ದ ಒಂದು ಸುದ್ದಿ ಸೂರ್ಯಗ್ರಹಣ, ನಿತ್ಯ ಭವಿಷ್ಯಗಳಿಗೆ ಸಂಬಂಧಿಸಿದ್ದು ಅದನ್ನು ಹಾಗೇ ಕೆಳಗೆ ಕೊಟ್ಟಿದೆ.

### ಇಂದು ಸೂರ್ಯಗ್ರಹಣ

ಈ ದಿನ ಮಧ್ಯಾಹ್ನ ಬೆಂಗಳೂರಿಗೆ ೨ಘಂ. ೨೩ನಿಮಿಷದಿಂದ ಸಂಜೆ ೪ಘಂ. ೫೪ ನಿಮಿಷಗಳವರೆಗೆ ಪೂರ್ಣ ಸೂರ್ಯಗ್ರಹಣ. ಇದು ಸಂಪೂರ್ಣ ಸೂರ್ಯಗ್ರಹಣವಾದರೂ ಬೆಂಗಳೂರಿನಲ್ಲಿ ನೋಡುವಾಗ ೧೦೦ಕ್ಕೆ ೯೨ ಭಾಗ ಮಾತ್ರ ಕಾಣುತ್ತೆ. ಈ ಗ್ರಹಣ ಧನಿಷ್ಠ ನಕ್ಷತ್ರದಲ್ಲಿ ಹುಟ್ಟಿದವರಿಗೆ (ಮಕರ ಮತ್ತು ಕುಂಭ ರಾಶಿ ಮಂದಿಗೆ) ಗ್ರಹಣದ ಪ್ರಭಾವ ಹೆಚ್ಚು. ಈ ರಾಶಿ ನಕ್ಷತ್ರದಲ್ಲಿ ಹುಟ್ಟಿದವರು ಶಾಂತಿ ಆಚರಣೆ ಮಾಡಿಕೊಳ್ಳಬೇಕು. ಈ ಗ್ರಹಣವನ್ನು ಬರಿಗಣ್ಣಿನಿಂದ ನೋಡಿದರೆ ಕುರುಡತ್ವ ಬಂದೀತು. ಈ ರಾಶಿಗಳವರಂತೂ ಗ್ರಹಣವನ್ನು ನೋಡಲೇಬಾರದೆಂದು ಕೆಲವರ ಮತ. ಅಶಕ್ತರು, ವೃದ್ಧರು, ಮಕ್ಕಳು ಬೆಳಗ್ಗೆ ಒಂಬತ್ತು ಘಂಟೆ ಒಳಗೆ ಸ್ವಲ್ಪ ಉಪಾಹಾರ ಸೇವಿಸಬಹುದು. ಗ್ರಹಣ ಕಾಲದಲ್ಲಿ ಖಾಲಿ ಹೊಟ್ಟೆಯಲ್ಲಿ ಇರುವುದು ಆರೋಗ್ಯಕರ. ಗ್ರಹಣ ಮೋಕ್ಷಕಾಲ ಸೂರ್ಯಾಸ್ತಕ್ಕೆ ಸ್ವಲ್ಪ ಮುಂಚೆ ಇರುವುದರಿಂದ ಶ್ರಾದ್ಧ ಆಚರಣೆ ಮಾರನೆಯ ದಿನ. ಆಯಾ ಮಠಗಳ ಗುರು ನಿರ್ಣಯದಂತೆ ಆಚರಿಸಬೇಕು.

ರಹಸ್ಯದ ರಾಶಿಯಾದ ಕುಂಭದಲ್ಲಿ ಸೂರ್ಯ ಗ್ರಹಣ. ಸೂರ್ಯನ ನೀಚದ ರಾಶಿ ತುಲಾ ತ್ರಿಕೋಣದ ಕಾರಣ ಈ ಗ್ರಹಣ ಆಡಳಿತ ಪಕ್ಷಕ್ಕೆ ಅಪಾಯದ ಕಷ್ಟಗಳನ್ನು ಕೊಡುತ್ತೆ. ಗುರು ಮಂಗಳ ರಾಹುಗಳು ಇದಕ್ಕೆ ಎದುರು ರಾಶಿಯಲ್ಲಿದ್ದು ಇಂದಿರಾ ಕಾಂಗ್ರೆಸ್ಸಿನ ಗ್ರಹಕೂಟವಾಗಿದ್ದು ಆ ಪಕ್ಷಕ್ಕೆ ಅದರ ನಾಯಕರುಗಳಿಗೆ ಸ್ವಲ್ಪಕಾಲ ಆತಂಕಕಾರಿ.

## ನಿತ್ಯ ಭವಿಷ್ಯ

೧೬-೨-೧೯೮೦: ಶನಿವಾರ: ಕುಂಭ

ಮಾಸ ತೇದಿ ೪ ಮಾಘ ಬಹುಳ

ಅಮಾವಾಸ್ಯೆ ೨೦-೫೦ ಧನಿಷ್ಠ

೩೫-೧೬

ರಾಹುಕಾಲ: ಗುಳಿಕ ಕಾಲ:

೯-೦೦ ರಿಂದ ೧೦-೩೦ ೪-೩೦ ರಿಂದ ೬-೦೦

ಮಳೆ : ಧನಿಷ್ಠ ೪ನೇ ಪಾದ

(ಪೂರ್ಣ ಸೂರ್ಯ ಗ್ರಹಣ ದರ್ಶನ)

೪ ೯ ೨ ૭

ಮೇಷ : ನೇತ್ರ ವೈದ್ಯರಿಗೆ ಲಾಭ.

ವೃಷಭ : ಬಾಧೆ, ಅಧಿಕಾರಿಗೆ ಶ್ರಮ.

ಮಿಥುನ : ತಂದೆಗೆ ಆಲಸ್ಯ, ಪ್ರಗತಿ.

ಕಟಕ : ತಂದೆಗೆ ಪ್ರಾಣಗಂಡ ಭಯ.

ಸಿಂಹ : ಶ್ರೀಮತಿಗೆ ನರವ್ಯಾಧಿ, ಲಾಭ.

ಕನ್ಯಾ : ಬಾಧೆ, ಕನ್ನಡಕ ಖರೀದಿ.

ತುಲಾ : ಗುಪ್ತಮಂತ್ರ ಅಧ್ಯಯನ.

ವೃಶ್ಚಿಕ : ಆಸ್ಪತ್ರೆ ದರ್ಶನ, ಲಾಭ.

ಧನು : ಅಪವಾದ, ನ್ಯಾಯಾಂಗ ಲಾಭ.

ಮಕರ : ತೆರಿಗೆ ಖರ್ಚು, ಕಲಹ.

ಕುಂಭ : ಗ್ರಹಣ ಶಾಂತಿ ಆಚರಣೆ.

ಮೀನ : ಶಾಸ್ತ್ರ ಸಲಹೆ, ತೆರಿಗೆ ಖರ್ಚು.

**ನಗರದಲ್ಲಿ ಸೂರ್ಯ-ಚಂದ್ರ**

| | | |
|---|---|---|
| ಸೂರ್ಯಾಸ್ತ ಶನಿವಾರ | ಸಂ. | ೬-೨೫ |
| -ಉದಯ ಭಾನುವಾರ | ಬೆ. | ೬-೪೨ |
| ಚಂದ್ರಾಸ್ತ ಶನಿವಾರ | ಸಂ. | ೬-೩೧ |
| -ಉದಯ ಭಾನುವಾರ | ಬೆ. | ೬-೨೯ |

ಹಲವಾರು ಜ್ಯೋತಿಷಿಗಳ ಅಭಿಪ್ರಾಯ ಸಂಗ್ರಹಣೆಯೂ ಅದೇ ಪತ್ರಿಕೆಯಲ್ಲಿದೆ.[೪]

## ಭದ್ರತೆಗೆ ಅಪಾಯ

"ಗ್ರಹಣ ಕಾಲದಲ್ಲಿ ರವಿ ಸಂಗದಲ್ಲಿ ಬುಧ; ಜತೆಗೆ ಬುಧ ಶನಿಗಳ ಪರಿವರ್ತನೆ ಯೋಗ. ಗ್ರಹಣದ ದಿನ ಶನಿವಾರ ಬೇರೆ ಹವಮಾನ ಹೊಣೆ ಹೊತ್ತ ಬುಧನ ಕಾರಣದಿಂದ ದೇಶದಲ್ಲಿ ಪ್ರಕೋಪದ ವಾತಾವರಣ ಉಂಟಾಗಿ ಮಳೆ ಬೆಳೆಗಳಿಗೆ ಹಾನಿಯಾಗಿ ಫಸಲು ಕುಂದುತ್ತದೆ" ಎಂದು ಮಳೆ, ಬೆಳೆ ಬಗ್ಗೆ ಅವರ ಭವಿಷ್ಯ ನುಡಿ.

ಆತ್ಮ ಬಲಕ್ಕೆ ಕೇಂದ್ರವಾದ ಸೂರ್ಯನ ಕಿರಣಗಳು ಎರಡು ನಿಮಿಷ ಕಾಲ ಭೂಮಿಗೆ ಇಲ್ಲವಾದಾಗ, ಜನರಲ್ಲಿ ಆತ್ಮಬಲ, ನೈತಿಕ ಬಲ ಕುಂದುತ್ತದೆ ಎಂದು ವಿಶ್ಲೇಷಿಸುವ ಅವರು, "ಇದರಿಂದ ಗ್ರಹಣದ ಅಲ್ಪಕಾಲಾವಧಿಯಲ್ಲಿ ಜೀವನಾಶಕ ತತ್ವಗಳಿಗೆ ಬಲ ಹೆಚ್ಚಿ ಹೊಸ ರೋಗಗಳು ವೈದ್ಯರಿಗೆ ಸಮಸ್ಯೆ ಆದೀತು. ಪಿತ್ತ ಜನಕಾಂಗ ಸೂರ್ಯನ ಪ್ರಭಾವದಲ್ಲಿದ್ದು ಈ ವರ್ಷ ಪಿತ್ತ ವ್ಯಾಧಿಗಳು ಹೆಚ್ಚಲಿವೆ" ಎಂದು ಹೇಳಿದ್ದಾರೆ.

"ಈಗ ಸಂಭವಿಸುವ ಸೂರ್ಯ ಗ್ರಹಣ ಕುಂಭರಾಶಿ ಯೋಗದಿಂದ ರಹಸ್ಯ ಶೋಧಕರಿಗೆ ಉತ್ತಮ ಸನ್ನಿವೇಶ. ಕಾರಣ, ಕುಂಭ (ಮಡಿಕೆ) ರಾಶಿ ರಹಸ್ಯಗಳ ರಾಶಿ" ಎನ್ನುತ್ತಾ, "ಈ ಗ್ರಹಣದಿಂದ ರಾಜಗ್ರಹ ಸೂರ್ಯನ ಪ್ರಭಾವ ಆಡಳಿತದ ಮೇಲೆ ತೆರೆಮರೆಯ ವಿರೋಧಿಗಳಿಗೆ ಪುಷ್ಟಿ ಕೊಟ್ಟೀತು. ರಷ್ಯಾ-ಅಮೆರಿಕಾ ಪರಸ್ಪರ ವಿರೋಧಿ ಆಕ್ರಮಣಕಾರಿ ಯತ್ನಗಳು ವಿಶ್ವಶಾಂತಿಯನ್ನು ಕದಡುವ ಹಂತದಲ್ಲಿ ನಿಂತಿದ್ದು, ಇದರಿಂದ ವಿಶ್ವದಲ್ಲಿ ವಿಚಿತ್ರ ಭಯ ಏರ್ಪಡುವುದು. ಇದರ ಪ್ರಭಾವ ಈ ವಿಷ ವಲಯದ ದೊಡ್ಡ ರಾಷ್ಟ್ರವಾದ ಭಾರತದ ಮೇಲೆ ಹೆಚ್ಚು. ಈ ಆತಂಕಕಾರಿ ಕಳವಳ ಪ್ರಭಾವ ಗ್ರಹಣ ಕಾಲದಿಂದ ಆರೇಳು ತಿಂಗಳಾದರೂ ಇರಬಹುದು" ಎಂದೂ ಹೇಳಿದ್ದಾರೆ.

ಕುರುಕ್ಷೇತ್ರದಲ್ಲಿ ಮಹಾಭಾರತದ ಯುದ್ಧ ನಡೆಯುತ್ತಿದ್ದಾಗ ಸೂರ್ಯಗ್ರಹಣ ನಡೆದಿತ್ತೆ? ಪುರಾಣದ ಪ್ರಕಾರ ಅರ್ಜುನನ ಶಪಥವನ್ನು ಸಫಲ ಮಾಡಲು ಶ್ರೀಕೃಷ್ಣ ಸುದರ್ಶನ ಚಕ್ರದಿಂದ ಸೂರ್ಯನನ್ನು ಮರೆಮಾಡಿ ಕೃತಕ ಸಂಜೆ ಮೂಡಿಸಿದ್ದ. ಆದರೆ ಆಗ ಸಂಜೆ ಸೂರ್ಯನಿಗೆ ಪೂರ್ಣ ಗ್ರಹಣ ಯೋಗವಿತ್ತು ಎಂದು ವಿಜ್ಞಾನಿಗಳ ವಿಶ್ಲೇಷಣೆ.

ಈ ಎಲ್ಲ ಭವಿಷ್ಯಗಳ ಜೊತೆ "ಸೂರ್ಯಗ್ರಹಣದ ಬಗ್ಗೆ ಪತ್ರಿಕೆಗಳು ಮತ್ತು ರೇಡಿಯೋಗಳು ಮೇಲಿಂದ ಮೇಲೆ ಎಚ್ಚರಿಕೆ ನೀಡುತ್ತಿರುವುದು ಸ್ಥಳೀಯ ಜನರಿಗೆ ಭೀತಿಯ ಮನೋಭಾವ" ಮೂಡಿತ್ತು. ಗ್ರಹಣದ ಸಮಯದಲ್ಲಿ ಭಾರಿ ತೆರೆಗಳು ಬರುವ ಅಪಾಯವಿರುವುದರಿಂದ ಸಮುದ್ರ ಸ್ನಾನ ಮಾಡುವವರನ್ನು, ಮೀನು ಹಿಡಿಯುವವರನ್ನು ಎಚ್ಚರಿಸಲಾಗಿತ್ತು; "ಜೈವಿಕ ಗಡಿಯಾರ" ಅಸ್ತವ್ಯಸ್ತಗೊಳ್ಳುವ ರೀತಿಯನ್ನು ಪತ್ರಿಕೆಗಳು ಆಕರ್ಷಕವಾಗಿ ಬಣ್ಣಿಸಿದುವು.

"ಹಗಲಲ್ಲೇ ಅಂಧಕಾರ : ಇಂದು ರಮಣೀಯ ಸೂರ್ಯಗ್ರಹಣ"

ಎಂಬ ಮುಖಪುಟದ ಸುದ್ದಿಯನ್ನು ಬೆಳಿಗ್ಗೆ ಓದಿದ ಜನರನ್ನು ಹದಿನಾರನೆಯ ತಾರೀಖು ಕುತೂಹಲದ ಮುಳ್ಳಿನ ತುದಿಗೆ ಏರಿಸಿತು.

ಆ ದಿನ ಏನೇನು ಪ್ರಾಕೃತಿಕ, ಜೈವಿಕ ಬದಲಾವಣೆಗಳು ಕಾಣಬಹುದು ಎಂಬುದರ ವಿವರಪೂರ್ಣ ಮಾಹಿತಿ ಇತ್ತು. ಪತ್ರಿಕೆ ಓದಿದ ಜನ ಮಧ್ಯಾಹ್ನದ ನಾಟಕ ವೀಕ್ಷಣೆಗೆ ಎಲ್ಲ ಮಾಹಿತಿಯೊಡನೆ ಸಿದ್ಧರಾದರು; ಅವರಿಂದ ಅದೂ ಇದೂ ಕೇಳಿಕೊಂಡ ಜನ ಅಷ್ಟೂ ಇಷ್ಟೂ ಅರ್ಥಮಾಡಿಕೊಂಡು ಅವರೂ ಹಾಗೂ ಹೀಗೂ ಸಿದ್ಧರಾದರು.

## ಮಾರನೆಯ ದಿನದ ಮತ್ತು ಮುಂದಿನ ಪತ್ರಿಕೆಗಳಲ್ಲಿ

ಮಾರನೆಯ ದಿನದ ಪತ್ರಿಕೆಗಳು (೧೭-೨-೮೦) ಗ್ರಹಣದ ದಿನದ ವೀಕ್ಷಣೆಗಳನ್ನು ರಂಗುರಂಗಾಗಿ ಕಾವ್ಯಮಯವಾಗಿ ಆದರೆ ನಿಕರವಾಗಿ ಪ್ರಕಟಿಸಿದುವು. (ಚಿತ್ರ ೨೦) ರಾಜಕೀಯ ಸುದ್ದಿಯೇ ಇಲ್ಲದ ಮುಖಪುಟವನ್ನು ಅಂದಿನ ಪತ್ರಿಕೆಗಳು ಹೊಂದಿದ್ದು ಒಂದು ವಿಶೇಷ. "ನಗರಕ್ಕೆ ನಿಸರ್ಗ ತಂದ ಕರ್ಫ್ಯೂ": ಇಡೀ ಬೆಂಗಳೂರು ನಗರ ಆ ದಿನ ಮಧ್ಯಾಹ್ನದಿಂದ ಸಂಜೆ ಐದರವರೆಗೆ ಬಿಕೋ ಎನ್ನುತ್ತಿತ್ತು. ಇದು ಎಲ್ಲ ನಗರಗಳ ಕತೆ. ಆ ದಿನ ಹಿಂದೂ ದೇವಾಲಯ ಗಳಲ್ಲಿ ಪೂಜೆಗಳಾದರೆ, ಮಸೀದಿಗಳಲ್ಲಿ 'ವಿಶೇಷ ನಮಾಜ್' ನಡೆದುವು. ಆಂಧ್ರದ ಪಾಲೆಂ ಎಂಬಲ್ಲಿನ ವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ "ಆಂಧ್ರಪ್ರದೇಶಾದ್ಯಂತ ೩೦೦ಕ್ಕೂ ಹೆಚ್ಚು ಮಂದಿ ಪಂಡಿತರು...ರುದ್ರಯಾಗ ಕೈಗೊಂಡು ಮಾನವ ಕಲ್ಯಾಣಕ್ಕಾಗಿ ದೇವತೆಗಳನ್ನು ಪ್ರಾರ್ಥಿಸಿದರು". [ಪ್ರವಾ. ೧೭-೨-೮೦][೫]. ಆ ದಿನ ಬಂದ ಕೆಲವು ಸ್ವಾರಸ್ಯ ಸುದ್ದಿಗಳು.

> "ಹುಬ್ಬಳ್ಳಿಯ ಹಾಲು ಮಾರುವ ಗೌಳಿಗರು ಸೂರ್ಯಗ್ರಹಣ ವಿಮೋಚನೆ ಆದ ಕೂಡಲೇ ತಾವು ಸಾಕಿದ ಎಮ್ಮೆಗಳಿಗೆ ಸ್ನಾನ ಮಾಡಿಸಿದರು. ನಂತರ ಎಲ್ಲ ಎಮ್ಮೆಗಳಿಗೆ ಬರೆ ಹಾಕಿದರು. ಗ್ರಹಣದ ಪರಿಣಾಮ ಕರೆಯುವ

ಹಾಲಿನ ಪ್ರಮಾಣ ತಗ್ಗದಿರಲೆಂದು ಎಮ್ಮೆಗೆ ಬರೆ ಹಾಕುವುದು ಅವರು ಅನುಸರಿಸುವ ಕ್ರಮ. ನಂತರ ಗೌಳಿಗರೂ ಸ್ನಾನ ಮಾಡಿದರು".

(ಗದಗ್‌ನ ಒಂದು ಮನೆಯಲ್ಲಿ) ಎಲ್ಲರಿಗೂ ಆತಂಕ, ಗ್ರಹಣದ ವೇಳೆ ಎಲ್ಲಿ ಮಗು ಹುಟ್ಟುವುದೋ ಎಂದು! ಮಗು ಕಡೆಯವರ ಒತ್ತಾಯ, ಮುಂಚೆಯೇ ಆಪರೇಷನ್ ಮಾಡಿ ಮಗು ತೆಗೆಯಿರಿ ಎಂದು; ವೈದ್ಯರು ಒಪ್ಪಲಿಲ್ಲ. ಅದೃಷ್ಟ,

> "ಕೊನೆಗೂ ಆಕೆ ಹಡೆದಳು! ಆ ಹೊತ್ತಿಗೆ ಗ್ರಹಣವೂ ಸೂರ್ಯನಲ್ಲಿ ಬಿಟ್ಟಿತ್ತು; ಮುಗುಳುನಗುತ್ತ ಮಗು ಧರೆಗಿಳಿದಿತ್ತು."

> "ಅಲಸೂರಿನಲ್ಲಿ ಮನೆಯೊಂದರಲ್ಲಿ ಅಜ್ಜಿಯೊಬ್ಬರು ತನ್ನ ಮೂವರು ಮೊಮ್ಮಕ್ಕಳನ್ನು ಮಡಿಲಲ್ಲಿ ಹಾಕಿಕೊಂಡು ಅತ್ತರು. ಭೂ ಪ್ರಳಯವಾಗುತ್ತದೆಂದು ಆಕೆ ಹೆದರಿದ್ದರು."

ಖಗೋಳ ವಿಜ್ಞಾನಿ ಡಾ. ಎಲ್. ಪಿ. ಶ್ರೀವತ್ಸ ಅವರು ಬೆಂಗಳೂರಿನಿಂದ ಅಂಕೋಲಾಕ್ಕೆ ಹೊರಡುವ ಮುನ್ನ ತಾವು ಮೂರು ಕಾರುಗಳನ್ನು ಬದಲಾಯಿಸಬೇಕಾಯಿತೆಂದು ತಿಳಿಸಿದರು. ಅವರು–

> "ವಿಜ್ಞಾನಿಯಾದ ನನಗೆ ಮೂಢನಂಬಿಕೆಯಿಲ್ಲ. ಆದರೂ ನಾನು ಮೂರು ಕಾರುಗಳನ್ನು ಬದಲಾಯಿಸಬೇಕಾಯಿತು" ಎಂದು ಹೇಳಿದರು.

> (ಗದಗ್‌ನಲ್ಲಿ) ಆಸ್ಪತ್ರೆಗಳಲ್ಲಂತೂ ರೋಗಿಗಳು ಕೂಡ ಬರಲೇ ಇಲ್ಲ. ಮಧ್ಯಾಹ್ನದ ಹೊತ್ತಿಗೆ ಆಸ್ಪತ್ರೆಗಳು ರಜಾ ಘೋಷಿಸಿದುವು. ದನಕರುಗಳನ್ನು ಕಟ್ಟಿಹಾಕುತ್ತಿದ್ದ ಸ್ಥಳಗಳಲ್ಲಿ ಅವು ಕಂಡುಬರಲಿಲ್ಲ."

ಗೋಕರ್ಣ, (ಚಿತ್ರ ೧೩, ೧೪) ಕುರುಕ್ಷೇತ್ರ, ಪುರಿಗಳಲ್ಲಿ ಜನ ಪುಣ್ಯಸ್ನಾನ ಮಾಡಿದರು; ಉಡುಪಿಯ ಶ್ರೀ ಕೃಷ್ಣದೇವಾಲಯ, ಕನ್ಯಾಕುಮಾರಿಯ ಕನ್ಯಾಕುಮಾರಿ, ಜಮ್ಮುವಿನ ವೈಷ್ಣೋದೇವಿ ಇವು ವಿಶೇಷ ಪೂಜೆ ನಡೆದ ಕೆಲವು ಪ್ರಸಿದ್ಧ ದೇವಾಲಯಗಳು.

> "ಕಾರವಾರ ಸಮುದ್ರ ತೀರದಲ್ಲಿ ಗ್ರಹಣ ವೀಕ್ಷಿಸಲು ಅಧಿಕ ಸಂಖ್ಯೆಯಲ್ಲಿ ಬಂದಿದ್ದ ಹಿಪ್ಪಿಗಳು ಭಾವಾವೇಶದಿಂದ ನರ್ತಿಸಿದರು."

ಕೊನಾರಕ್ ಗ್ರಹಣ ಪಥದಲ್ಲಿದ್ದುದು ಒಂದು ವಿಶೇಷ. ಗಂಗವಂಶದ ಮೊದಲನೆಯ ನರಸಿಂಹದೇವ ಏಳುನೂರು ವರ್ಷಗಳ ಹಿಂದೆ ಕಟ್ಟಿಸಿದ ಸುಪ್ರಸಿದ್ಧ ಸೂರ್ಯ ದೇವಾಲಯ ಇರುವುದು ಅಲ್ಲಿ. (ಚಿತ್ರ ೩೨) ಅಲ್ಲಿ ಆ ದೇವಾಲಯ ಕಟ್ಟಿದವರು "ಸೂರ್ಯಗ್ರಹಣದ ಕಾಲದಲ್ಲಿ ಅತ್ಯಂತ ತೀವ್ರವಾದ ಅನುಭವವಾಗುತ್ತದೆ ಎಂಬ ಕಾರಣಕ್ಕೆ ಆ ಸ್ಥಳವನ್ನು ಆಯ್ಕೆ ಮಾಡಿದರೆಂಬ ನಂಬಿಕೆ." ಸೂರ್ಯ ದೇವಾಲಯದಿಂದಾಗಿ ಕೊನಾರಕ್‌ಗೆ ಎಷ್ಟು ಮಹತ್ವ ಬಂದಿತೆಂದರೆ,.ಗ್ರಹಣದ ಹಿಂದಿನ ದಿನದ ಅಲ್ಲಿನ ಸೂರ್ಯವಿಗ್ರಹದ ಚಿತ್ರವನ್ನು ಮುಂದೆ Illustrated

Weekly of India (Sept. 7, 1980, P. 23) ಪತ್ರಿಕೆ "ರಾಹು ಕಬಳಿಸುವ ಮುನ್ನ" ಎಂಬ ಶೀರ್ಷಿಕೆಯಲ್ಲಿ ಕೊಟ್ಟಿದೆ. ಕನ್ನಡ ಪ್ರಭವು [೨೨-೨-೮೦] ಕೊನಾರಕ್ ದೇವಾಲಯದ ಹಿನ್ನೆಲೆಯಲ್ಲಿ ಪೂರ್ಣ ಸೂರ್ಯಗ್ರಹಣದ ಸೊಗಸಾದ ಚಿತ್ರವನ್ನು ಪ್ರಕಟಿಸಿತು (ಚಿತ್ರ ೨೧). ಇನ್ನೊಂದು ಪತ್ರಿಕೆ (ಹೆಸರು ಮರೆತಿದೆ) ಕೊನಾರಕ್ ದೇವಾಲಯದ ಹಿನ್ನೆಲೆಯಲ್ಲಿ ಗ್ರಹಣ ಸ್ಪರ್ಶದಿಂದ ಹಿಡಿದು ಮೋಕ್ಷವಾಗುವವರೆಗಿನ ಎಲ್ಲ ಹಂತಗಳನ್ನು ಒಂದರ ಪಕ್ಕದಲ್ಲಿ ಒಂದನ್ನಿಟ್ಟು ಅಸಾಧಾರಣ ಚಿತ್ರವನ್ನು ಪ್ರಕಟಿಸಿತು. ಕೊನಾರಕ್‌ನಲ್ಲಿ ವಿಶ್ವಾದ್ಯಂತದಿಂದ ಬಹುಸಂಖ್ಯೆಯ ವಿಜ್ಞಾನಿಗಳು ಗ್ರಹಣವನ್ನು ವೀಕ್ಷಿಸಲು ನೆರೆಯುವರೆಂದೂ, ಅವರಲ್ಲಿ ಅಮೆರಿಕ, ಸಂಯುಕ್ತ ಸಂಸ್ಥಾನ, ಕೆನಡಗಳಿಂದಲೇ ೫೦೦ ಜನ ಬರುವರೆಂದೂ ವರದಿಯಾಗಿತ್ತು.

[Deccan Herald. 10-2-1980].

"ನವದೆಹಲಿಯಲ್ಲಿ ಜನರು ಗ್ರಹಣದಿಂದ ಸಂಭವಿಸಬಹುದಾಗಿದ್ದ ಅನಾಹುತಗಳಿಂದ ಪಾರಾಗಲು ರಸ್ತೆಗಳಲ್ಲಿ ತಲೆತಗ್ಗಿಸಿ ಸಂಚರಿಸುತ್ತಿದ್ದರು. ಗ್ರಹಣದ ಜ್ವರದಿಂದ ಅಲ್ಲಿನ ೬೦ ಲಕ್ಷ ಜನ ತತ್ತರಿಸಿ ಹೋಗಿದ್ದರು."

"ಜನಸಂಚಾರವಿಲ್ಲದೆ ಬಿಕೋ ಎನ್ನುತ್ತಿದ್ದ ಬೀದಿಗಳಿಂದ ಕೂಡಿದ ಮದ್ರಾಸು..."

"ಮದುರೆಯಲ್ಲಿ...ಜನರು ಸುತ್ತಾಡದಂತೆ ಪೋಲೀಸರು ಎಚ್ಚರಿಕೆ ನೀಡಿದ್ದರು..."

"ಯಾತ್ರಾಕ್ಷೇತ್ರವಾದ ತಿರುಪತಿಯಲ್ಲಿ ಗ್ರಹಣ ಸಮಯದಲ್ಲಿ ಸಂಪೂರ್ಣವಾಗಿ ನಿರ್ಜನ ಪ್ರದೇಶದಂತೆ ಇತ್ತು. ಇಂದು ಸೂರ್ಯೋದಯ ಸಮಯದಲ್ಲಿ ವೆಂಕಟೇಶ್ವರ ಸ್ವಾಮಿ ದೇವಾಲಯವು ಮುಚ್ಚಲ್ಪಟ್ಟಿತ್ತು. ಸುಪ್ರಭಾತ ಹಾಗೂ ಇತರ ಪೂಜಾ ಕಾರ್ಯಗಳು ಸೂರ್ಯೋದಯಕ್ಕೆ ಮುಂಚೆ ನಡೆದುವು."

"ಕಲ್ಕತ್ತದಲ್ಲಿ ಬೀದಿಗಳು ಹಾಳು ಬಿದ್ದಂತಿದ್ದುವು."

ಇಷ್ಟೆಲ್ಲ ಸ್ತಬ್ಧವಾಗಿದ್ದ ಸನ್ನಿವೇಶದಲ್ಲೂ, ಅತಿ ಚುರುಕಾಗಿ ಕೆಲಸದಲ್ಲಿ ನಿರತರಾಗಿದ್ದವರೆಂದರೆ ಪುರೋಹಿತರು. ಗ್ರಹಣ ರಾಶಿಯವರಿಗೆ ಶಾಂತಿ ಮಾಡಿಸುವ ಶಾಸ್ತ್ರದಲ್ಲಿ ತೊಡಗಿದ್ದ ಅವರು ಒಂದು ಮನೆಯಿಂದ ಮತ್ತೊಂದು ಮನೆಗೆ ಬಿರುಸಿನಿಂದ ಓಡಾಡಿದರು.

"ಹಳೆಯ ಕಾಲದ ಕಂದಾಚಾರಗಳಿಗೆಲ್ಲ ಹೀಗೆ ಪ್ರಾಮುಖ್ಯ ನೀಡಿ ಜನತೆಯ ಮಾಮೂಲು ಜೀವನದ ಮೇಲೆ ಹೆಚ್ಚು ಕಡಿಮೆ ಪೂರ್ಣ ನಿಷೇಧ ವಿಧಿಸಿದ ಸರ್ಕಾರದ ಧೋರಣೆಗಳನ್ನು ಇಲ್ಲಿ (ಕಲ್ಕತ್ತದಲ್ಲಿ) ಟೀಕಿಸಲಾಯಿತು."

ರಾಜಧಾನಿ ದೆಹಲಿಯಲ್ಲಿ "ಜನರು ಹೊರಗೆ ತಿರುಗಾಡದಂತೆ ಮತ್ತು ತಮ್ಮ ಕಣ್ಣುಗಳಿಗೆ ಹಾನಿಯುಂಟುಮಾಡಿಕೊಳ್ಳದಂತೆ ತಡೆಯಲು ಟಿ. ವಿ. ಕಥಾ ಚಿತ್ರ ಪ್ರದರ್ಶಿಸಲಾಯಿತು. ಆಗಾಗ ಹತ್ತು ನಿಮಿಷಗಳಿಗೊಮ್ಮೆ ಗ್ರಹಣವನ್ನೂ ಮಧ್ಯೆ ಮಧ್ಯೆ ತೋರಿಸಲಾಯಿತು."

ದೆಹಲಿಯಲ್ಲಿ 'ದೂರ್ವಾ' ಅಥವಾ 'ವಿಶ್ವಾಮಿತ್ರ' ಎಂದೂ ಹೆಸರಿರುವ ಒಂದು ಬಗೆಯ ಗರಿಕೆಗೆ ಸಂಪ್ರದಾಯಸ್ಥರಿಂದ ಅಪಾರವಾದ ಬೇಡಿಕೆಯಿತ್ತು; ಇದು ಆಹಾರ ಪದಾರ್ಥಗಳ ಮೈಲಿಗೆ ಹೊಡೆದೋಡಿಸಿ ಶುದ್ಧವಾಗಿ ಇಡುವುದೆಂಬ ನಂಬಿಕೆ. ನೀರು, ತುಪ್ಪ, ಹಾಲುಗಳಲ್ಲಿ ಈ ದರ್ಭೆಯನ್ನು ಹಾಕಿಟ್ಟರೆ ಗ್ರಹಣದ ದುಷ್ಪರಿಣಾಮಗಳನ್ನು ಅದು ದೂರವಿರಿಸುತ್ತದೆ ಎಂಬ ಪ್ರಬಲವಾದ ನಂಬಿಕೆ ಎಲ್ಲ ಕಡೆ ಇದೆ.

ಆ ದಿನ ಇಷ್ಟೆಲ್ಲ ಎಚ್ಚರಗಳಿದ್ದರೂ ಬರಿಗಣ್ಣಲ್ಲಿ ಹಠದಿಂದ ನೋಡಿದವರು ಎಷ್ಟೋ ಜನ. ಎಷ್ಟೋ ಕಡೆ ಜನ ಕಣ್ಣಿಗೆ ತೊಂದರೆಯಾಗಿ ಆಸ್ಪತ್ರೆಗೆ ಓಡಿದರು. ಹಲವರಿಗೆ ಅಪಾಯವೂ ಆಯಿತು. ದೆಹಲಿಯ ಆಸ್ಪತ್ರೆಗೆ ಕಣ್ಣಿಗೆ ಅಪಾಯವಾಗಿ ಬಂದ ೩೬ ಜನರಲ್ಲಿ ಒಬ್ಬ ಐ. ಎ. ಎಸ್. ಅಧಿಕಾರಿ, ಒಬ್ಬ ಪ್ರೊಫೆಸರ್, ಒಬ್ಬ ಇಂಜಿನಿಯರ್ ಇದ್ದರು. ತಿರುವನಂತಪುರದ ತುಂಬಾ ಅಂತರಿಕ್ಷ ಕೇಂದ್ರದ ಒಬ್ಬ ಇಂಜಿನಿಯರ್ ದೃಷ್ಟಿ ಮಂಕಾಯಿತು. ಗ್ರಹಣದಿಂದ ಪಾರ್ಶ್ವವಾಯು ಹೊಡೆದ ಸುದ್ದಿಯೂ ಬಂದಿದೆ (ಪ್ರವಾ. ೧೮-೨-೮೦]. ಆಂಧ್ರದ ಕಡಪ ಪುರಸಭಾ ಮಾಜಿ ಸದಸ್ಯರೊಬ್ಬರಿಗೆ ಬರಿಗಣ್ಣಿಂದ ನೋಡಿದ್ದರಿಂದ ದೃಷ್ಟಿ ಲಾಭವಾಗಿದೆ, ಈಗ ಪೂರ್ತಿ ಎಲ್ಲ ಕಾಣಿಸುತ್ತಿದೆಯೆಂಬ ಸ್ವಾರಸ್ಯದ ಸುದ್ದಿಯೂ ಬಂದಿದೆ [ಉವಾ. ೨೦-೨-೮೦]. ಅಗರ್ತಲಾದ ಇಪ್ಪತ್ತೈದರ ಪ್ರಾಯದ ಕಾಳಿದಾಸರಾಂಯ್ ಬರಿಕಣ್ಣಿಂದಲೇ ಗ್ರಹಣ ನೋಡಿಯೂ ಏನೂ ಆಗಲಿಲ್ಲವೆನ್ನುತ್ತಾನೆ [ಉವಾ. ೧೮-೨-೮೦].

ಈ ಸುದ್ದಿಗಳ ಜೊತೆಗೆ, ಗ್ರಹಣದ ಅನುಭವವನ್ನು ಎಲ್ಲ ಪತ್ರಿಕೆಗಳೂ ಸವಿಸ್ತಾರವಾಗಿ ಸಚಿತ್ರವಾಗಿ ಪ್ರಕಟಿಸಿವೆ. ಗ್ರಹಣದ ಸಮಯದ ಮಂದ ಹುಣ್ಣಿಮೆಯ ಬೆಳಕು, ಹಕ್ಕಿಗಳು ಗೂಡು ಸೇರುವ ತವಕವನ್ನು ವ್ಯಕ್ತಪಡಿಸಿದ್ದು, ನಡುಹಗಲಲ್ಲಿ ನಕ್ಷತ್ರ ದರ್ಶನವಾದುದು ಎಲ್ಲದರ ವಿಸ್ತೃತ ವರದಿಗಳನ್ನು ಪ್ರಕಟಿಸಿ, ಪೂರ್ಣ ಸೂರ್ಯಗ್ರಹಣವನ್ನು ನೋಡುವ ಭಾಗ್ಯವಿರದಿದ್ದ ಜನರ ಕುತೂಹಲವನ್ನು ತೃಪ್ತಿಪಡಿಸಿದುವು. ಪತ್ರಿಕೆಗಳೇ ಭಯ ಹುಟ್ಟಿಸಿದ್ದುವು. ಆ ಪತ್ರಿಕೆಗಳೇ ತಮ್ಮ ವರದಿಗಳಲ್ಲಿ "ದೇವ ದುರ್ಲಭ ದೃಶ್ಯ"ವನ್ನು ಬಗೆ ಬಗೆಯಾಗಿ ವರ್ಣಿಸಿ ಎಂತಹ ಅವಕಾಶ ಕಳೆದುಕೊಂಡೆವೆಂದು ಜನ ಮರುಗುವಂತೆ ಮಾಡಿದುವು.

"ಅಳಲೇಕಾಯಿ ಪಂಡಿತರೂ ಭವಿಷ್ಯ ನುಡಿಯುವವರೂ ಹೇಳಿದಂಥ ಭೂಕಂಪ, ನೆರೆಹಾವಳಿ, ಬುದ್ಧಿಭ್ರಮಣೆ, ಬಿರುಗಾಳಿಯೇ ಮುಂತಾದ ಪ್ರಾಕೃತಿಕ ಗಂಡಾಂತರವಾವುದೂ ನಡೆಯದ್ದು ಕಂಡು ಜನರು ಬಿಡುಗಡೆಯ ನಿಟ್ಟುಸಿರು ಬಿಟ್ಟರು" [ಉವಾ. ೧೮-೨-೮೦].

"ಗ್ರಹಣದ ಅನುಭವ ಆ ಎಲ್ಲ ಕಲ್ಪನೆಯನ್ನೂ ಮೀರಿ ನಿಂತಿತ್ತು. ಓದಿದ ಯಾವ ಲೇಖನವಾಗಲಿ ಕಂಡ ಚಿತ್ರವಾಗಲಿ ಆ ಅನುಭವದ ಸ್ವಲ್ಪ ಭಾಗವನ್ನೂ ಕೂಡ ಬಣ್ಣಿಸಿದಂತಿರಲಿಲ್ಲ...ಇಂಥ ಅನುಭವ ಬಾಗಿಲಿಗೆ ಬಂದಾಗಲೂ ಬಾಗಿಲು ಮುಚ್ಚಿ ಕುಳಿತವರೇ ಹೆಚ್ಚು. ಸೂರ್ಯನ ಇಡೀ ಗೋಳವನ್ನು ಚಂದ್ರ ಪೂರ್ಣವಾಗಿ ಮುಚ್ಚಿದಾಗ ಅದನ್ನು ನೋಡುವುದು ಕಣ್ಣಿಗೆ ಅಪಾಯಕರವಲ್ಲ ಎನ್ನುವ ವಿಷಯವೇ ಜನಕ್ಕೆ ತಿಳಿಯದಾಯಿತು. ಪೂರ್ಣಗ್ರಹಣಕ್ಕೆ ಮುಂಚಿನ ಸೂರ್ಯನಲ್ಲಿನ "ಇನ್‌ಫ್ರಾರೆಡ್, ಅಲ್ಟ್ರಾವೈಲೆಟ್" ಕಿರಣಗಳಷ್ಟೇ ಕಣ್ಣಿಗೆ ಅಪಾಯ. ಈ ಸಾಮಾನ್ಯ ತಿಳಿವಳಿಕೆ ಎಲ್ಲರಿಗೂ ಕೊಡಬೇಕಿತ್ತು. ಅದನ್ನು ಬಿಟ್ಟು 'ಸೂರ್ಯಗ್ರಹಣ ನೋಡಿದರೆ ಕಣ್ಣಿಗೆ ಅಪಾಯ' ಎನ್ನುವ 'ತಲೆಗೆಲ್ಲಾ ಒಂದೇ ಮಂತ್ರ' ಪ್ರಚಾರವಾಗಿತ್ತು. ಬಹುತೇಕ ಪತ್ರಿಕೆ, ರೇಡಿಯೋಗಳಲ್ಲಿ ಬಂದದ್ದು ಇಷ್ಟೇ ಸುದ್ದಿ. ಅದರ ಬದಲು ಹೇಗೆ ನೋಡಬೇಕು, ಹೇಗೆ ನೋಡಬಾರದು, ಯಾವಾಗ ನೋಡಬೇಕು ಎಂದು ವಿವರವಾಗಿ ಸ್ಪಷ್ಟ ಚಿತ್ರಣ ಕೊಟ್ಟಿದ್ದರೆ ಗ್ರಹಣದ ದಿನ ಬೀದಿ ಬೀದಿಗಳು ನಿರ್ಜನ ಆಗುವ ಅಗತ್ಯವಿರಲಿಲ್ಲ." [ಸುಧಾ. ೯-೩-೮೦].

ಗ್ರಹಣದ ದಿನ ಮನೆಯ ಕಿಟಕಿ ಬಾಗಿಲು ಮುಚ್ಚಿ, ಕಿಟಕಿಗೆ ಗಾಜುಗಳಿದ್ದರೆ ಅವಕ್ಕೆ ಬಟ್ಟೆಯ ತೆರೆ ಹಾಕಿ, ಬಾಗಿಲು ಕಿಟಕಿಗಳಲ್ಲಿ ತೂತು ಬಿರುಕುಗಳಿದ್ದರೆ ಬಟ್ಟೆ ತುರುಕಿ ಕತ್ತಲುಮಾಡಿ ಒಳಗೆ ಉಳಿದ ವಿದ್ಯಾವಂತರು ಎಷ್ಟೋ ಮಂದಿ.

## ವೈಜ್ಞಾನಿಕ ಪ್ರಯೋಗಗಳು (ಕರ್ನಾಟಕದಲ್ಲಿ)

ಇದರ ಪ್ರಸಕ್ತಿ ಪ್ರಸ್ತುತ ಅಧ್ಯಯನಕ್ಕೆ ಹೊರತಾದರೂ, ಪತ್ರಿಕೆಗಳಲ್ಲಿ ಈ ಬಗ್ಗೆ ಸಾಕಷ್ಟು ವರದಿ ಬಂದುದರಿಂದ, ಸಾರ್ವಜನಿಕರಲ್ಲಿ ಆ ಬಗ್ಗೆ ಚರ್ಚೆಗಳು ನಡೆದುದರಿಂದ ಮತ್ತು ವೈಜ್ಞಾನಿಕ ಪ್ರಯೋಗಗಳು ಅವರ ಆಸಕ್ತಿಯನ್ನು ಕೆರಳಿಸಿದುದರಿಂದ, ಪತ್ರಿಕೆಗಳಲ್ಲಿ ವರದಿಯಾದಂತೆ ಗ್ರಹಣದ ವೇಳೆ ನಡೆದ ಪ್ರಯೋಗಗಳ ಒಂದು ಚಿಕ್ಕ ಸಮೀಕ್ಷೆಯನ್ನು ಕೊಡುತ್ತೇನೆ.

ಕರ್ನಾಟಕದ, ಇತರ ಪ್ರಾಂತಗಳ ವಿದೇಶಗಳ ವಿಜ್ಞಾನಿಗಳಿಗೆ

ಅನುಕೂಲವಾಗುವಂತೆ ಬೆಂಗಳೂರಿನ Indian Institute of Astrophysics ಸಂಸ್ಥೆಯವರು "Total Solar Eclipse (Feb. 16, 1980)" ಎನ್ನುವ ಮಾರ್ಗದರ್ಶಿ ಪುಸ್ತಿಕೆಯನ್ನು ಹೊರಡಿಸಿ, ಗ್ರಹಣ ಕಾಣಿಸುವ ಜಾಗಗಳು, ಅಲ್ಲಿನ ಹವಾ, ಇಳಿದುಕೊಳ್ಳಲು ವಸತಿ ಸೌಕರ್ಯ ಇತ್ಯಾದಿ ಮಾಹಿತಿ ಒದಗಿಸಿದರು. ಗ್ರಹಣ ವೀಕ್ಷಣೆಗೆ ಬರುವ ವಿಜ್ಞಾನಿಗಳಿಗೆ ಮತ್ತು ಪ್ರವಾಸಿಗಳಿಗೆ ಟೆಂಟ್, ಶೆಡ್ ಹಾಕಿಕೊಡಲು ಕರ್ನಾಟಕ ಸರ್ಕಾರ ೨.೬೦ ಲಕ್ಷ ರೂಪಾಯಿ ಮಂಜೂರು ಮಾಡಿತ್ತು. [ಉವಾ. ೧೬-೨-೮೦]. ಆ ದಿನ ಹವಾಮಾನ ಇಲಾಖೆಯವರು ರೇಡಿಯೋ ಮೂಲಕ ಹವಾಮಾನ ವರದಿಗಳನ್ನು ಪ್ರಸಾರ ಮಾಡಿದ್ದಲ್ಲದೆ, "ಸೂರ್ಯಗ್ರಹಣ ವೀಕ್ಷಕರ ಅನುಕೂಲಕ್ಕಾಗಿ ಆಕಾಶವಾಣಿ ಮೂಲಕ ವೇಳಾ ಸಿಗ್ನಲ್‌ಗಳನ್ನೂ ಪ್ರಸಾರ ಮಾಡಲು ವಿಶೇಷ ವ್ಯವಸ್ಥೆ" ಮಾಡಲಾಗಿತ್ತು. (ಚಿತ್ರ ೨೨) ಹೊರದೇಶದವರು ಬಂದಿಳಿದಾಗ ಕಸ್ಟಮ್ಸ್ ಕ್ಲಿಯರೆನ್ಸಿಗೆ ವಿಳಂಬವಾಗದಂತೆ ಸೂಚನೆ ಕೊಡಲಾಗಿತ್ತು. ಬೆಂಗಳೂರಿನ ಖಗೋಳ ಭೌತವಿಜ್ಞಾನ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆ, ಸೆಂಟ್ ಜಾನ್ಸ್ ಆಸ್ಪತ್ರೆಯ ವೈದ್ಯರ ತಂಡ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಭೌತ ವಿಜ್ಞಾನ ವಿಭಾಗ, ಪುಣೆ ವಿಶ್ವವಿದ್ಯಾಲಯದ ಭೌತವಿಜ್ಞಾನ ವಿಭಾಗ, ಮುಂಬಯಿಯ ಇನ್‌ಸ್ಟಿಟ್ಯೂಟ್ ಆಫ್ ಬಯೋಮ್ಯಾಗ್ನೆಟಿಸಂ ಸಂಸ್ಥೆ ಮೊದಲಾದ ಸಂಸ್ಥೆಗಳು, ವಿದೇಶಗಳಿಂದ ಬೇರೆ ಬೇರೆ ವಿಶ್ವವಿದ್ಯಾಲಯಗಳ ಸಂಶೋಧನ ಸಂಸ್ಥೆಗಳ ವಿಜ್ಞಾನಿಗಳು ಅಂಕೋಲ, ಗೋಕರ್ಣ, ಯಲ್ಲಾಪುರ, ಶಿರಹಟ್ಟಿ, ಹುಬ್ಬಳ್ಳಿ, ಗದಗ್, ರಾಯಚೂರು ಸಮೀಪದ ಜಾವಳಗೇರಿ, (ಚಿತ್ರ ೪೧) ಬಂಕಾಪುರ, ಲಕ್ಷ್ಮೇಶ್ವರ ಮೊದಲಾದ ಜಾಗಗಳಲ್ಲಿ ತಮ್ಮ ಸಂಶೋಧನೆಗಳನ್ನು ನಡೆಸಿದರು. ವಿಜ್ಞಾನಿಗಳು ಗ್ರಹಣ ಪ್ರದೇಶಕ್ಕೆ ವೈಜ್ಞಾನಿಕ ಉಪಕರಣಗಳನ್ನಲ್ಲದೆ, ಮೊಲ, ಕಪಿ, ಜೇನುಹುಳ ಇತ್ಯಾದಿ ಪ್ರಾಣಿಗಳನ್ನೂ ತಂದಿದ್ದರು. ಗ್ರಹಣದ ಪರಿಣಾಮ ಅವುಗಳ ಮೇಲೆ ಏನು ಎಂಬುದನ್ನು ಅಭ್ಯಸಿಸುವುದು ಅವರ ಉದ್ದೇಶ. ಬೆಂಗಳೂರು, ಧಾರವಾಡಗಳಲ್ಲಿ ಹುಚ್ಚಾಸ್ಪತ್ರೆಗಳಲ್ಲಿನ ರೋಗಿಗಳ ಮೇಲೆ ಆಗುವ ಪರಿಣಾಮಗಳನ್ನೂ ವೀಕ್ಷಿಸಲಾಯಿತು. ಬೊಂಬಾಯಿಯ ಅಮೆಚೂರ್ ಅಸ್ಟ್ರಾನಮರ್ಸ್ ಅಸೋಸಿಯೇಷನ್ನಿನ ಹವ್ಯಾಸಿ ಯುವವಿಜ್ಞಾನಿಗಳು ಗ್ರಹಣ ವೀಕ್ಷಣೆ, ಚಿತ್ರ ತೆಗೆಯುವುದು ಇತ್ಯಾದಿಗಳನ್ನು ಅಂಕೋಲ ಬಳಿಯ ವಾಡಿ ಬೊಂಗ್ರಿ ಗುಡ್ಡದ ಮೇಲಿಂದ ನಡಸಿದರು. (ಚಿತ್ರ ೨೩, ೨೪, ೨೫, ೨೬, ೨೭). ಅವರು ಆ ಮುಂಚೆ (ಜನವರಿ ೧೯೮೦) ಹೊರಡಿಸಲಾದ ವಾರ್ತಾಪತ್ರದಲ್ಲಿ (ಚಿತ್ರ ೨೮), ಸಂಸ್ಥೆಯ ಸದಸ್ಯರಿಗೆ ಗ್ರಹಣ ಮಾಹಿತಿಯನ್ನೂ ಪೂರ್ವಭಾವೀ ಸಿದ್ಧತೆಯ ವಿವರಗಳನ್ನೂ ಕೊಡಲಾಗಿದಿತು.

## ಕೆಲವು ಪ್ರಯೋಗಗಳು; ಮತ್ತು ಮನುಷ್ಯ, ಪ್ರಾಣಿಗಳ ಮೇಲೆ ಪರಿಣಾಮಗಳು

(೧) ಕರ್ನಾಟಕ ವಿಶ್ವವಿದ್ಯಾಲಯದ ಭೌತವಿಜ್ಞಾನಿ ಡಾ॥ ಎನ್. ಉಮಾಕಾಂತ್ (ಇವರು ಶ್ರೀ ಎಸ್. ನಿಜಲಿಂಗಪ್ಪನವರ ಮಗ) 'ಸೂರ್ಯನ ಸನಿಹದಲ್ಲಿ ಭೌತಿಕ ವಸ್ತು'ವೊಂದನ್ನು ಕಂಡುಹಿಡಿದರು, ಮತ್ತು ಅದಕ್ಕೆ 'ಉಷಾ' ಎಂಬ ಹೆಸರನ್ನೂ ಕೊಟ್ಟರು. "ಆ ಭೌತಿಕ ವಸ್ತುವಿನಲ್ಲಿ ಇದ್ದಿರಬಹುದಾದ ಲಿಥಿಯಂ ಬೊರಾನ್ ಹಾಗೂ ಬೇರಿಯಮ್ ಗಳಂತಹ ಪ್ರಕಾಶಕಾರಕ ಅಂಶಗಳು ಪ್ರಭಾವ ವಲಯದೊಂದಿಗೆ ಸಂಯುಕ್ತ ಹೊಂದಿದಾಗ ಉಚ್ಚ ಪರಮಾಣು ಪ್ರಕ್ರಿಯೆಯಿಂದ ಬೆಳಕು ಹೊರಹೊಮ್ಮಿರಬೇಕೆಂಬುದು ಅವರ ತರ್ಕ. ಇದು ನೈಸರ್ಗಿಕವೋ ಮಾನವ ನಿರ್ಮಿತವೋ ಎಂಬುದನ್ನು ಖಚಿತಪಡಿಸಲು ಇನ್ನೂ ಹೆಚ್ಚು ಕಾಲ ಬೇಕು". [ಪ್ರವಾ.೨೮-೨-೮೦]. ಆ 'ಭೌತಿಕ ವಸ್ತು'ಕ್ಯಾಮರಾ ಹುಟ್ಟಿಸಿದ ಭ್ರಾಂತಿಯೇ ಹೊರತು ವಾಸ್ತವವಲ್ಲವೆಂದು ಆಮೇಲೆ ಪತ್ರಿಕೆಗಳಲ್ಲಿ ಒಂದೆರಡು ಹೇಳಿಕೆಗಳು ಬಂದುವು.

(೨) ಸೂರ್ಯನ ಸುತ್ತ ಶನಿ, ಗುರು, ಮತ್ತು ಯೂರನಸ್ ಗ್ರಹಗಳ ವರ್ತುಲವಿದೆಯೆಂಬ ಊಹೆ ತಮ್ಮ ಪ್ರಯೋಗಗಳಿಂದ ನಿಜವೆಂದು ಕಂಡು ಬಂದುದಾಗಿ ಭಾರತದ ಬಾಹ್ಯಾಕಾಶ ಸಂಶೋಧನ ಸಂಸ್ಥೆ ಡೈರೆಕ್ಟರ್ ಡಾ॥ ಯು. ಆರ್. ರಾವ್ ಪತ್ರಕರ್ತರಿಗೆ ತಿಳಿಸಿದ್ದಾರೆ. [ಪ್ರವಾ. ೧೭-೨-೮೦]. ಆ ಪ್ರಯೋಗದ ನಿಖರವಾದ ಫಲಿತಾಂಶಗಳು ಕೆಲಕಾಲದ ಮೇಲೆ ತಿಳಿಯುತ್ತವೆ ಎಂದೂ ಅವರು ಹೇಳಿದ್ದಾರೆ.

ತುಂಬಾ ನೆಲೆಯಿಂದ ಅಂದು ರಾಕೆಟ್ಟುಗಳನ್ನು ಉಡಾಯಿಸಲಾಯಿತು.

ಇದು ಒಟ್ಟಾರೆ ಎಲ್ಲ ವಿಜ್ಞಾನಿಗಳೂ ಹೇಳಬಹುದಾದ್ದು : ಗ್ರಹಣದಲ್ಲಿ ಅವರು ನಡೆಸಿದ ಪ್ರಯೋಗಗಳ ಮಾಹಿತಿಯನ್ನು ವಿಶ್ಲೇಷಿಸಿ, ಮತ್ತೆ ಪರೀಕ್ಷಿಸಿ ತಮ್ಮ ಫಲಿತಾಂಶಗಳನ್ನು ಅವರು ಕ್ರಮೇಣ ಪ್ರಕಟಿಸುತ್ತಾರೆ. ಆದರೆ ಅವು ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ; ಆ ಹೊತ್ತಿಗೆ ಜನರೂ ದಿನಪತ್ರಿಕೆಗಳವರೂ ಗ್ರಹಣದಂತಹ ಘಟನೆಯನ್ನು ಮರೆಯುತ್ತಾರೆ. ಹೀಗಾಗಿ ಫಲಿತಾಂಶಗಳನ್ನು ವೃತ್ತ ಪತ್ರಿಕೆಗಳೂ ಪ್ರಕಟಿಸುವುದಿಲ್ಲ, ವಿಜ್ಞಾನಿಗಳೂ ಅಂತಹ ಪ್ರಕಟನೆಗಳ ಬಗ್ಗೆ ಅನಾಸಕ್ತರಾಗಿರುತ್ತಾರೆ. ಒಟ್ಟಾರೆ, ಗ್ರಹಣದ ದಿನಕ್ಕಿಂತ ಮುಂಚೆ ವಿಜ್ಞಾನಿಗಳು ಏನೇನು ಪ್ರಯೋಗ ಮಾಡಬೇಕೆಂದಿದ್ದರೋ ಅದರ ವಿವರಗಳು ಬಂದಷ್ಟು ಗ್ರಹಣ ನಡೆದ ಮೇಲೆ ಏನು ಪ್ರಯೋಗಗಳು ನಡೆದುವು ಎಂಬುದರ ವರದಿಗಳು ಹೆಚ್ಚು ಬಂದಂತೆ ಕಾಣುತ್ತಿಲ್ಲ.[೬]

ಆದರೆ, ನಮ್ಮ ಅಧ್ಯಯನಕ್ಕೆ ಹೆಚ್ಚು ಪ್ರಸುತವಾದುದು, ಅಥವಾ ತೀರ ಸಮೀಪದ್ದು, ಗ್ರಹಣಕ್ಕೆ ಪ್ರಾಕೃತಿಕವಾಗಿ ಮನುಷ್ಯರು ಪ್ರಾಣಿಗಳು ಪ್ರತಿಕ್ರಿಯಿಸಿದ ರೀತಿ. ಅದನ್ನು ಕುರಿತಂತೆ ಬಹು ಸಂಖ್ಯೆಯ ವರದಿಗಳು ಬಂದುವು.

(೧) ಗ್ರಹಣವಾಗುತ್ತಿದ್ದಂತೆ ಉಷ್ಣಾಂಶ ೧೦ರಿಂದ ೧೮ ಸೆಂಟಿಗ್ರೇಡಿನಷ್ಟು ಇಳಿಯಿತು. ಸಂಜೆಯಾಯಿತೆಂದು ಹಕ್ಕಿಗಳು ಗೂಡು ಸೇರುವ ತವಕವನ್ನು ವ್ಯಕ್ತಪಡಿಸಿದುವು. ಅವುಗಳ ಸ್ಪಷ್ಟವಾದ ಚಿಲಿಪಿಲಿ ಸದ್ದು ಆಗಲೇ ಆರಂಭವಾಗಿತ್ತು. ದನಗಳೂ ಮನೆಗೆ ಹೋಗುವ ಆತುರ ತೋರಿದುವು. ಕೋಳಿಗಳು ಹೆದರಿದ್ದುವು. ಅನೇಕ ಪ್ರಾಣಿಗಳು ಸಂಜೆಯಾಯಿತೆಂದು ವಿಶ್ರಾಂತಿ ತೆಗೆದುಕೊಳ್ಳಲು ಆರಂಭಿಸಿದುವು. ಮೊದಲು ಬಹಳ ಚೂಟಿಯಾಗಿದ್ದ ನಾಯಿಗೆ ಮಂಪರು ಕವಿದಿತ್ತು.

(೨) ಬೋನುಗಳಲ್ಲಿದ್ದ ಕತ್ತೆ ಕಿರುಬಗಳು ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದುವು. ಮತ್ತು ಒಂದೇ ಸಮನೆ ಕಿರುಚುತ್ತಿದ್ದುವು. ಸಿಂಹಗಳು ತಳಮಳಗೊಂಡಿದ್ದುವು (ಇವೆಲ್ಲ ರಾತ್ರಿ ಚಟುವಟಿಕೆಯಿಂದಿರುವ ಪ್ರಾಣಿಗಳು.)

(೩) ಮೊಲಗಳ ಎದೆಬಡಿತ ತಗ್ಗಿತ್ತು.

(೪) ಹೆಣ್ಣು ದುಂಬಿಗೆ ಕಾಮೋದ್ರೇಕ ಕಾಣಿಸಿಕೊಂಡಿತು. ಹಾಗೆಯೇ ಮುಂಗುಸಿಗಳು ಕಾಮೋದ್ರೇಕದಿಂದ ಕೂಡಿದುವು.

(೫) ಮಧ್ಯಾಹ್ನ ಉದ್ರಿಕ್ತ ಜಾಗೃತವಿದ್ದ ಜೊಂಡಿಗ (ಜಿರಲೆ) ಮತ್ತು ಚೇಳುಗಳು ಗ್ರಹಣದ ಅವಧಿಯಲ್ಲಿ ಮಂಕಾದವು.

(೬) ಅಮಲು ಪದಾರ್ಥ ತಿನ್ನಿಸಿದ್ದ ಅಲ್ಬಿನೊ ಇಲಿ ಗ್ರಹಣದ ಬಳಿಕ ತಕ್ಷಣ ಸತ್ತುಬಿದ್ದಿತು. ಇರುವೆಗಳಿಗೆ ಮಾತ್ರ ಯಾವಾಗಲೂ ಗ್ರಹಣ ಏನೂ ಮಾಡುವುದಿಲ್ಲ. (Science Today. Feb. 1980. P. 34)

(೭) ಮನೋರೋಗಿಗಳ ಸ್ಥಿತಿಯನ್ನು ಕುರಿತಂತೆ ಎರಡು ವಿರೋಧಾಭಿಪ್ರಾಯಗಳು ಬಂದಿವೆ. ರೋಗಿಗಳ ಮೇಲೆ ಏನೂ ಪರಿಣಾಮವಿಲ್ಲ ಎಂದು ಹೈದರಾಬಾದ್ ವರದಿ ತಿಳಿಸಿದೆ. ಹುಚ್ಚಾಸ್ಪತ್ರೆಯಲ್ಲಿನ ದೀರ್ಘಕಾಲದ ಸ್ಕಿಜೋಫ್ರೇನಿಯದ ಮೂವತ್ತು ರೋಗಿಗಳ ಮೇಲೆ, ಮೂವತ್ತಾರು ಮೂರ್ಛೆ ರೋಗಿಗಳ ಮೇಲೆ ಏನೂ ಪರಿಣಾಮವಿಲ್ಲವೆಂದು ಹೈದರಾಬಾದ್ ವರದಿ. ಆದರೆ ಗ್ರಹಣಕ್ಕೆ ಇಪ್ಪತ್ತನಾಲ್ಕು ಗಂಟೆ ಮುನ್ನ ಮನೋರೋಗಿಗಳ ಚಿತ್ತ ಸ್ವಾಸ್ಥ್ಯದಲ್ಲಿ ತೀವ್ರ ಏರುಪೇರಾಗಿದ್ದಿತೆಂದೂ, ಗ್ರಹಣದ ಸಮಯದಲ್ಲಿ ಬುದ್ಧಿ ವೈಕಲ್ಯದ ಚಿಹ್ನೆ ತೀವ್ರ ಕನಿಷ್ಠ ಪ್ರಮಾಣಕ್ಕೆ ಇಳಿದಿತ್ತೆಂದೂ, ಪುರುಷರಿಗಿಂತ ಸ್ತ್ರೀಯರು ಹೆಚ್ಚಿನ ವೈಕಲ್ಯ ತೋರಿದರೆಂದೂ ಧಾರವಾಡದ ವರದಿ ಹೇಳುತ್ತದೆ. [ಉವಾ. ೧೮–೨–೮೦.][೬೩]

(೮) ಗ್ರಹಣದ ಸಮಯದಲ್ಲಿ ವೈದ್ಯರು ನಾಡಿ ಪರೀಕ್ಷಿಸಿದಾಗ ಅದು ೮೦ರಿಂದ ೧೨೦ಕ್ಕೆ ಏರಿತ್ತು. ಒಬ್ಬರ ಕಾಲಲ್ಲಿ ಒಣಗಿದ್ದ 'ಎಕ್ಸಿಮ' ತೇವವಾಗಿ ನೀರು ಒಸರುತ್ತಿತ್ತು; ಬಹುಶಃ ಗುರುತ್ವಾಕರ್ಷಣೆಯ ಬದಲಾವಣೆಯ ಫಲ ಇರಬಹುದೆಂದು ಊಹೆ [ಉವಾ. ೨೦-೨-೮೦].

(೯) ಗ್ರಹಣದ ಸಮಯದಲ್ಲಿ ಮೂರ್ಛೆ ರೋಗಿಗಳು, ಒಬ್ಬ ಯೋಗಾಭ್ಯಾಸಿ, ಇಬ್ಬರು ಆರೋಗ್ಯವಂತರ ಮೆದುಳಿನ ಚಟುವಟಿಕೆಗಳನ್ನು ಪರೀಕ್ಷಿಸಿ, ಸಂಗ್ರಹವಾದ ಮಾಹಿತಿಯನ್ನು ಕಂಪ್ಯೂಟರ್‌ಗೆ ಅಳವಡಿಸುವ ಮತ್ತು ಮೂರ್ಛೆರೋಗ, ಇತರ ಮಾನಸಿಕ ವೈಕಲ್ಯಗಳಿಗೆ ಚಿಕಿತ್ಸೆ ಒದಗಿಸುವ ಫಲಿತಾಂಶಗಳನ್ನು ಕಂಡುಹಿಡಿಯುವ ವಿಶ್ವಾಸವನ್ನು ವ್ಯಕ್ತಪಡಿಸಲಾಯಿತು.

(೧೦) ಮನೆಯ ಹಿತ್ತಲಿನ 'ಚಗತೆ' ಮತ್ತು 'ನಾಚಿಕೆ ಮುಳ್ಳಿ'ನ ಗಿಡಗಳ ಎಲೆಗಳು ಮುಚ್ಚಿಕೊಂಡು ಗ್ರಹಣ ಮುಗಿದ ಬಳಿಕ ಬಿಚ್ಚಿಕೊಂಡವು (ಕಪ್ರ. ೧೯-೨-೮೦].

(೧೧) ಅಮೆರಿಕದ ಒಬ್ಬ ಸಂಶೋಧಕಿ "ವಿಜ್ಞಾನಿಗಳು ಸಂಶೋಧನ ನಿರತರಾಗಿರುವಾಗ ಅವರ ಮಾನಸಿಕ ಸ್ಥಿತಿಗಳೇನು, ಧೋರಣೆಗಳೇನು" ಎಂಬುದನ್ನು ಅಧ್ಯಯನ ಮಾಡಲು ಭಾರತಕ್ಕೆ ಬಂದಿದ್ದರು. ವಿಜ್ಞಾನಿಗಳ ಶ್ರದ್ಧೆ, ಒಟ್ಟುಗೂಡಿ ದುಡಿವ ಮನೋಭಾವ ಆಕೆಯ ಪ್ರಶಂಸೆ ಗಳಿಸಿವೆ. [Span. May, 1980. P. 11].

**ಕೆಲವು ವಿಚಿತ್ರ ಘಟನೆಗಳು**

ಮಂಡ್ಯದಲ್ಲಿ ಗ್ರಹಣದ ಸಂಜೆ ಏಳು ಗಂಟೆಯಲ್ಲಿ ನೈರುತ್ಯ ದಿಕ್ಕಿನಲ್ಲಿ ಒಂದು ಕೆಂಪು ಬಣ್ಣದ ಬೆಳಕಿನ ಪಟ್ಟಿ ಮತ್ತು ಎರಡು ವೃತ್ತಾಕಾರದ ಬಿಳಿಯ ಕಲೆಗಳು ಹದಿನೈದು ನಿಮಿಷ ಕಂಡುವು. [ಪ್ರವಾ. ೧೮-೨-೮೦].

ಗುಡಿಬಂಡೆಯಲ್ಲಿಯೂ ಇಂತಹುದೇ ದೃಶ್ಯ (-ದಕ್ಷಿಣದಲ್ಲಿ ೨೦ ಗಜ ಉದ್ದದ ಕೆಂಪು ಬಾಲ, ೨-೩ಅಡಿ ವ್ಯಾಸದ ಬಿಳಿಯ ವಲಯ-) ಕಾಣಿಸಿಕೊಂಡ ವರದಿಯಾಗಿದೆ. ಪ್ರವಾ. ೧೮-೨-೮೦] "ಈ ದೃಶ್ಯ ನೋಡಿದ ಜನರು ತೀವ್ರವಾಗಿ ಭೀತಿಗೊಂಡಿದ್ದಾರೆ."

ಕರಾವಳಿಯಲ್ಲಿ ಕೆಲವರಿಗೆ ಬೆಳಿಗ್ಗೆ ಎಂಟು ಗಂಟೆಗೆ ನಾಲ್ಕು ಸಲ, ಸಂಜೆ ಮತ್ತೆ ಗುಡುಗು ಕೇಳಿಸಿತು.

ಕಾರವಾರದಲ್ಲಿ ಪತ್ರಿಕೋದ್ಯೋಗಿಯೊಬ್ಬರು ಸಾರ್ವಜನಿಕ ವ್ಯಕ್ತಿಯೊಬ್ಬರನ್ನು "ಗ್ರಹಣ ಹೇಗಿತ್ತು" ಎಂದಾಗ "ಪೇಪರ್‌ನೋರು ಬರೆಯೋದರಲ್ಲಿ ಒಂದು

ಸಲವಾದರೂ ಸತ್ಯವಾಯಿತಲ್ಲ, ಅದೇ ಸಂತೋಷ" ಎಂದು ಮೆತ್ತಗೆ ಚಾಟಿಸಿದರಂತೆ [ಉವಾ. ೨೦-೨-೮೫].

"ಇದು ಬಹುಶಃ ನಾನು ಕಂಡಿರುವ ಗ್ರಹಣಗಳಲ್ಲೆಲ್ಲ ಅತ್ಯಂತ ಸುಂದರವಾದುದು" ಎಂದು ಒಟ್ಟು ಐದು ಪೂರ್ಣ ಸೂರ್ಯ ಗ್ರಹಣಗಳನ್ನು ನೋಡಿರುವ ಅಮೆರಿಕದ ಅಯೋವಾ ಪ್ರಾಂತದ ಖಗೋಳ ವಿಜ್ಞಾನಿ ಡಾ. ವಿಲ್ಲೆಟ್ ಬೀವರ್ಸ್ ಉದ್ಗರಿಸಿದರು. ಇನ್ನೊಬ್ಬರು "ಬಹುರಮ್ಯ, ಪರಿಪೂರ್ಣ ಮತ್ತು ತುಂಬಾ ಸುಂದರ" ಎಂದರು. [ಪ್ರವಾ. ೧೭-೨-೮೦] ಭಾರತದ ಇಂದಿನ ಅಗ್ರ ಖಗೋಳ ವಿಜ್ಞಾನಿ ಡಾ. ಬಪ್ಪು ಫೆಬ್ರವರಿ ಗ್ರಹಣಕ್ಕೆ ಮುಂಚೆ ಹೀಗೆ ನುಡಿದ್ದರು: "Here is then an occasion of the interest not only to both professional and amateur astronomers, but also to anybody who appreciate beauty in nature."[೮]

ಪೂರ್ಣಗ್ರಹಣವನ್ನು ವೀಕ್ಷಿಸಿದ ಎಲ್ಲರ ಅನುಭವ ಒಂದೇ. ಯಾರು ಅವಕಾಶವಿದ್ದು ನೋಡಲಿಲ್ಲವೋ ಅವರು ಬದುಕಿನ ಒಂದು ಅವಕಾಶವನ್ನು ಕಳೆದುಕೊಂಡರು. ಬಹುತೇಕ ಎಲ್ಲ ದಿನಪತ್ರಿಕೆಗಳವರು ಗ್ರಹಣದ ಸೊಗಸಾದ ಚಿತ್ರಗಳನ್ನು ಪ್ರಕಟಿಸಿದ್ದರು. ವಾರಪತ್ರಿಕೆ, ಮಾಸಿಕೆಗಳು ವಿಶೇಷ ಲೇಖನಗಳನ್ನು ಮುಂಚೆ, ಆಮೇಲೆ ಪ್ರಕಟಿಸಿದುವು (ಕೆಲವು ದಿನಪತ್ರಿಕೆಗಳಲ್ಲೂ ವಿಶೇಷ ಲೇಖನಗಳು ಬಂದಿದ್ದುವು)[೯].

### ಗ್ರಹಣದ ಜಾಹಿರಾತು ಮೌಲ್ಯ

ಪೂರ್ಣಗ್ರಹಣದ ಘಟನೆಯನ್ನು ತಮ್ಮ ಸರಕುಗಳ ಮಾರಾಟಕ್ಕೆ ತಮ್ಮ ಸಂಸ್ಥೆಯ ಜಾಹಿರಾತಿಗೆ ಎಷ್ಟೋ ಸಂಸ್ಥೆಗಳು ಬಳಸಿಕೊಂಡಿರುವುದು ಸ್ವಾರಸ್ಯವಾಗಿದೆ. ಫೋಟೋ ಫಿಲ್ಮಿನ ಸುಪ್ರಸಿದ್ಧ ಕಂಪನಿ AGIL (Agfa-Gevaert India Limited) ಫೆಬ್ರವರಿ ೧೬. ೧೯೮೦ರ ಒಂದು ಜಾಹಿರಾತಿನಲ್ಲಿ (The Times of India. February 16, 1980. P 13) ಮೇಲೆ ಸೂರ್ಯನ ಗ್ರಹಣವಾಗುತ್ತಿರುವ ಮತ್ತು ಗ್ರಹಣ ಬಿಡುತ್ತಿರುವ ರೇಖಾ ಚಿತ್ರಗಳನ್ನೂ, ಮಧ್ಯದಲ್ಲಿ ಪೂರ್ಣಗ್ರಹಣದ ಕಪ್ಪು ಬಿಂಬವನ್ನೂ ಕೊಟ್ಟು, ಮೇಲೆ ದಪ್ಪಕ್ಷರದಲ್ಲಿ 'DON'T LOOK NOW!' ಎಂದು ಹೇಳಿ, ಬರಿಕಣ್ಣಿಂದ ಗ್ರಹಣವನ್ನು ನೋಡುವ ಅಪಾಯಗಳನ್ನು ವಿವರಿಸಿ, ಕೆಲವು ಸೂಚನೆಗಳನ್ನು ಕೊಟ್ಟಿದೆ. ಗ್ರಹಣದ ಭಾವ ಚಿತ್ರವನ್ನು ಸರಿಯಾಗಿ ತೆಗೆಯಲು ಅನುಸರಿಸಬೇಕಾದ ಮಾರ್ಗವನ್ನೂ ವಿವರಿಸಿದೆ. ಬೊಂಬಾಯಿಯ Hotel Poonam International ತನ್ನ ಒಂದು ಜಾಹಿರಾತಿನಲ್ಲಿ

(The Times of India, February 15, 1980. P 7) "Bombay's new moon invites you to witness the Solar Eclipse" ಎಂದು ಹೇಳಿ ಗ್ರಹಣದ ದಿನ ತನ್ನಲ್ಲಿಗೆ ಭೋಜನಕ್ಕೆ ಬಂದ ಗಿರಾಕಿಗಳಿಗೆ (ಎಲ್ಲ ಸೇರಿ ಊಟಕ್ಕೆ ರೂ ೨೫/–), ಗ್ರಹಣವನ್ನು ನೋಡಲು ಸುರಕ್ಷಿತ 'viewers' ಸರಬರಾಜು ಮಾಡುವುದಾಗಿ ಹೇಳಿಕೊಂಡಿದೆ.

Bank of Cochin Limited ಈ ಸಂಸ್ಥೆಯು ಅದೇ ದಿನ ಕೊಟ್ಟ ಜಾಹಿರಾತು (ಚಿತ್ರ ೨೯) "Darkness At Noon" ಎಂಬ ಶೀರ್ಷಿಕೆಯೊಡನೆ ಪ್ರಕಟವಾಗಿದೆ. ಗ್ರಹಣದ ದಿನದಂತೆ ಜೀವನದಲ್ಲಿ ನಿರಾಸೆಯ ಕತ್ತಲು ಕವಿದಾಗ ತಮ್ಮ ಬ್ಯಾಂಕಿನ ಯೋಜನೆಗಳು ಸಹಾಯಕ್ಕೆ ಸಿದ್ಧ ಎನ್ನುತ್ತದೆ ಬ್ಯಾಂಕು.

## ರೇಡಿಯೋ

ಆಕಾಶವಾಣಿಯು ಗ್ರಹಣದ ಸಂದರ್ಭವನ್ನು ಕೆಲವು ಸಂಶೋಧನೆಗಳಿಗೆ ಬಳಸಿಕೊಂಡಿತು. ಅದರ ಯೋಜನೆಯ ಪತ್ರಿಕಾ ವರದಿ ಹೀಗಿತ್ತು:

> The Research Department of All India Radio will conduct a series of experiments to study the effects of the total solar eclipse on the propagation of radio waves reflected by the ionosphere.
>
> The experiments are aimed at collecting scientific information of potential use in planning broadcasting services, says a Press release.
>
> The experiment will probe the different layers of the ionosphere by an ionoshperic pulse sounder developed by AIR's Research Department. The experiment will be conducted at Cuttack situated on the path of the total eclipse.
>
> Different frequencies ranging from very long waves to short waves are propagated through different layers of the ionosphere.
>
> AIR will take field strength measurements of some

medium wave and short wave transmissions having their propagation paths through different ionospheric layers in the eclipsed region at Madras, Trivandrum and Kozhikode.

These studies are expected to yield information on ionization and absorption effects as well as the re-combination processes taking place in the ionosphere. [Deccan Herald. 10-2-1980]

ಸೂರ್ಯಗ್ರಹಣ ವೀಕ್ಷಕರ ಅನುಕೂಲಕ್ಕಾಗಿ ಗ್ರಹಣದ ದಿನ ಹವಾಮಾನ ವರದಿಗಳನ್ನೂ, ವೇಳಾ ಸಿಗ್ನಲ್‌ಗಳನ್ನೂ, ಬರಿಗಣ್ಣಲ್ಲಿ ನೋಡಿದರೆ ಆಗುವ ಅನಾಹುತಗಳನ್ನೂ ಪ್ರಸಾರಮಾಡಲು ಆಕಾಶವಾಣಿ ಯೋಜನೆಗಳನ್ನು ಹಾಕಿಕೊಂಡಿತು. [ಪ್ರವಾ. ೫–೨–೮೦].

ಬೆಂಗಳೂರು ಆಕಾಶವಾಣಿಯಿಂದ ಗ್ರಹಣಕ್ಕೆ ಸಂಬಂಧಿಸಿದಂತೆ ಪ್ರಸಾರವಾದ ಕಾರ್ಯಕ್ರಮಗಳು ಹೀಗಿವೆ.[೧೦] ನವದೆಹಲಿಯ Directorate General of Health Services, Central Health Education ಮುಖ್ಯಾಧಿಕಾರಿಗಳಿಂದ ಎಲ್ಲ ಆಕಾಶವಾಣಿ, ದೂರದರ್ಶನ ಕೇಂದ್ರಗಳಿಗೆ ಫೆಬ್ರವರಿ, ೨, ೧೯೮೦ ರಂದು (ತಲುಪಿದ್ದು ೭–೨–೧೯೮೦) ಸೂಚನಾ ಪತ್ರ ಹೊರಟಿತು. Ministry of Health and Family Welfare ವಿಭಾಗದಲ್ಲಿ Advisor (Optholmology) ಅವರಿಂದ, ಕಣ್ಣಿನ ಮೇಲೆ ದುಷ್ಪರಿಣಾಮಗಳ ಸೂಚನೆಗಳು ಬಂದಿವೆಯೆಂದೂ ಅವನ್ನು ಆಕಾಶವಾಣಿ ಪ್ರಸಾರ ಮಾಡಿ ಹೆಚ್ಚಿನ ಪ್ರಚಾರ ಕೊಡಲು ಆ ಪತ್ರ ಪ್ರಾರ್ಥಿಸಿಕೊಂಡಿದೆ. ಆ ಪತ್ರದ ಶೀರ್ಷಿಕೆ– "A stare at solar Eclipse may sneak eye-sight". ಅದರಲ್ಲಿ ಗ್ರಹಣದ ವೇಳೆ ಸೂರ್ಯನನ್ನು ದಿಟ್ಟಿಸುವುದು ಅಪಾಯಕಾರಿಯೆಂದೂ, ಒಮ್ಮೊಮ್ಮೆ ಕಣ್ಣಿಗೆ ಆದ ಹಾನಿ ಅನೇಕ ಕಾಲದವರೆಗೆ ತಿಳಿಯದೇ ಇರಬಹುದೆಂದೂ, ಒಮ್ಮೊಮ್ಮೆ ಆ ಹಾನಿ ಪೂರ್ಣ ಅಂಧತ್ವಕ್ಕೆ ಎಡೆಮಾಡಿ ಕೊಡಬಹುದೆಂದೂ, ತಿಳಿಸಿ.

"People are therefore advised not to see at Solar Eclipse" ಎಂದು ಎಚ್ಚರಿಸಲಾಗಿದೆ. ಮಕ್ಕಳು ಕುತೂಹಲದಿಂದ ಸೂರ್ಯಗ್ರಹಣ ನೋಡದಂತೆ ಎಚ್ಚರ ವಹಿಸಲು ವಿಶೇಷ ಗಮನ ಕೊಡಬೇಕೆಂದೂ ಕೇಳಿಕೊಂಡಿದೆ.

ಮೇಲಿನ ಪತ್ರದಲ್ಲಿ ಗ್ರಹಣವನ್ನು ನೋಡಲೇಬಾರದು ಎಂಬ ಧ್ವನಿ

ಇರುವುದನ್ನು ಗಮನಿಸಿದುದರ ಫಲವಿರಬೇಕು, ಅದೇ ಕಚೇರಿಯಿಂದ ಫೆಬ್ರವರಿ ೬ರಂದು (ತಲುಪಿದ್ದು ೧೧-೨-೮೦) ಇನ್ನೊಂದು ಪತ್ರ ಹೊರಟಿತು. ಅದರ ವಿಷಯ-Education of People to ward off evil effects of solar Eclipse to their eyesight. ಅದೇ Adviser ಅವರಿಂದ ಬಂದ 'ಮಾಹಿತಿ'ಯನ್ನು ಪ್ರಸಾರ ಮಾಡಿ, ಬರಿಗಣ್ಣಿಂದ ನೋಡಿದರೆ ಕಣ್ಣಿಗೆ ಆಗುವ ಹಾನಿಯ ಅರಿವು ಜನರಲ್ಲಿ ಹುಟ್ಟುವಂತೆ ಮಾಡಬೇಕೆಂದೂ ಹೇಳಿ ಕೊನೆಯಲ್ಲಿ 'It is requested that the message contained in the enclosed material be repeatedly broadcast, telecast'[೧೧] ಎಂದು ಹೇಳಿದೆ ಪತ್ರದ ಜೊತೆ ಇರುವ ಒಂದು ಪುಟದಲ್ಲಿ "ಕೆಲವು ಮುಂಜಾಗರೂಕತೆಗಳನ್ನು" ಕೊಡಲಾಗಿದೆ. ಸೂರ್ಯ ಗ್ರಹಣವನ್ನು ಹೇಗೆ ನೋಡಬೇಕು, ಯಾವ ಸಾಧನಗಳನ್ನು ಬಳಸಬೇಕು, ಬರಿಗಣ್ಣಲ್ಲಿ ನೋಡಿದರೆ ಏನು ಅಪಾಯ ಎಂಬ ಬಗ್ಗೆ ನಿರ್ದೇಶನವಿದೆ.

ಗ್ರಹಣವನ್ನು ನೋಡಲೇಬೇಡಿ ಎಂಬರ್ಥದ ಮೊದಲ ಪತ್ರವನ್ನನುಸರಿಸಿ ಕೆಲವು ದಿನ ಆ ಎಚ್ಚರಿಕೆಯನ್ನು ಪ್ರಸಾರಮಾಡಲಾಯಿತು. ಬಳಿಕ ಎರಡನೆಯ ಪತ್ರವನ್ನನುಸರಿಸಿ, ಕನ್ನಡದಲ್ಲಿ ಒಟ್ಟು ಏಳು ಅಂಶಗಳನ್ನು ಪ್ರಸಾರ ಮಾಡಲಾಯಿತು. ಅವುಗಳಲ್ಲಿ ಮೊದಲನೆಯದು "ಬರಿಗಣ್ಣಲ್ಲಿ ನೋಡಲೇ ಕೂಡದು" ಎಂಬ ಕಟ್ಟುನಿಟ್ಟಾದ ಸೂಚನೆ. ದುರ್ಬೀನು, ತಂಪು ಕನ್ನಡಕಗಳೂ ಅಪಾಯಕಾರಿಗಳು; ನೀರಿನಲ್ಲೂ ನೋಡಕೂಡದು. ಕಪ್ಪು ಬಣ್ಣದ ಬೆಸುಗೆ ಮುಖವಾಡ ಆಗಬಹುದು (ಚಿತ್ರ ೧೦), ಪಿನ್‌ಹೋಲ್ ಕ್ಯಾಮರಾ ಕೂಡ ಒಳ್ಳೆಯ ಸಾಧನ. ಹೊಗೆ ಹಿಡಿಸಿದ ಗಾಜೂ ಅಪಾಯ. ಆದರೆ ಕೆಂಪು ಬಣ್ಣದ ತೆಳು ಜಿಲೆಟಿನ್ ಕಾಗದವನ್ನು ಮೂರು ನಾಲ್ಕು ಪದರಮಾಡಿ ಮಸಿ ಬಳಿದ ಗಾಜಿನ ಇನ್ನೊಂದು ಮುಖದಲ್ಲಿಟ್ಟು ಈಚಿನ ಮುಖದಿಂದ ನೋಡುವುದೂ ಸುರಕ್ಷಿತ (ಜಿಲೆಟಿನ್ ಕಾಗದವು ಮಕ್ಕಳ ಆಟದ ಕನ್ನಡಕ, ಅಗರ ಬತ್ತಿ ಪ್ಯಾಕೆಟ್‌ಗಳಲ್ಲಿ ದೊರೆಯುತ್ತದೆ ಎಂಬ ವ್ಯಾವಹಾರಿಕ ಸೂಚನೆಯೂ ಉಂಟು.) ಈ ಮೇಲಿನ ಎಚ್ಚರಿಕೆಯನ್ನು ೧೨ನೇ ತಾರೀಕಿನಿಂದ ೧೬ನೇ ತಾರೀಕಿನವರೆಗೆ ಹೆಂಗಸರ, ಮಕ್ಕಳ, ಗ್ರಾಮೀಣರ, ಕಾರ್ಮಿಕರ, ಯುವಕರ, ಮತ್ತು ಇತರ ಎಲ್ಲ ಸಾಮಾನ್ಯ ಕಾರ್ಯಕ್ರಮಗಳ ಜೊತೆ ಪ್ರಸಾರ ಮಾಡಬೇಕೆಂದು ಆಕಾಶವಾಣಿ ನಿರ್ದೇಶಕರು ಆಜ್ಞೆ ಮಾಡಿದರು. ಪ್ರತಿದಿನವೂ ಆಕಾಶವಾಣಿಯ ಶ್ರೋತೃಗಳಿಗೆ ಈ ಎಚ್ಚರಿಕೆಗಳು ಬೆಳಗಿನಿಂದ ರಾತ್ರಿಯವರೆಗೆ ಹಲವಾರು ಬಾರಿ ಕಿವಿಯ ಮೇಲೆ ಬಿದ್ದುವು.

ಇದಲ್ಲದೆ, ಬೆಂಗಳೂರು ಆಕಾಶವಾಣಿ ನಡೆಸಿದ ಇನ್ನೂ ಕೆಲವು ಕಾರ್ಯಕ್ರಮಗಳು ಹೀಗಿವೆ:




ಚಿತ್ರ ೩೦. ಸೂರ್ಯ, ಕೋಲಾರ (ಕರ್ನಾಟಕ). ಕೈಯಲ್ಲಿ ಪದ್ಮಗಳನ್ನು ಗಮನಿಸಿ



ಚಿತ್ರ ೩೩. ಸೂರ್ಯನಾರಾಯಣ, ಕೊನಾರಕ್ (೧೩ನೇ ಶ.)



ಚಿತ್ರ ೩೧. ಸೂರ್ಯ (ಪಶ್ಚಿಮ ಬಂಗಾಳ) ಕ್ರಿ. ಶ. ೭ನೇ ಶತಮಾನ (ಕೈಯಲ್ಲಿ ಪದ್ಮಗಳನ್ನು ಗಮನಿಸಿ)




ಚಿತ್ರ ೩೨. ಸೂರ್ಯನ ರಥ, ಕೊನಾರಕ್ (೧೩ನೇ ಶತಮಾನ)



ಚಿತ್ರ ೩೫. ಸೂರ್ಯಸ್ತಂಭ,
ನಾಗಾರ್ಜುನಕೊಂಡ
(ಕ್ರಿ. ಶ. ೨ನೇ ಶ.)



ಚಿತ್ರ ೩೪. ಸೂರ್ಯ, ಭೋಧಗಯ
(ಕ್ರಿ. ಪೂ. ೨ನೇ ಶ.)



ಚಿತ್ರ ೩೬. ನವಗ್ರಹ ಪಟ್ಟಿಕೆ. (೧೨ನೇ ಶತಮಾನ, ಪಶ್ಚಿಮ ಬಂಗಾಳದಿಂದ) ತೀರ ಬಲಗಡೆ ಗಣಪತಿ, ಅವನ ಎಡಕ್ಕೆ ಸೂರ್ಯ, ತೀರ ಎಡಗಡೆ ಕೇತು, ಅವನ ಬಲಕ್ಕೆ ರಾಹು.



ಚಿತ್ರ ೩೭. ನವಗ್ರಹ ಪೂಜೆ (ಬೆಂಗಳೂರಿನ ದೇವಾಲಯವೊಂದರಲ್ಲಿ)



ಚಿತ್ರ ೩೮. 'ಗ್ರಹಣ ದರ್ಪಣ' ಕೃತಿಯ ಐದನೆಯ ಪುಟ



ಚಿತ್ರ ೩೯. 'ಗ್ರಹಣ ದರ್ಪಣ'ದ ಇನ್ನೊಂದು ಪುಟ



ಚಿತ್ರ ೪೦. 'ಗ್ರಹಣದರ್ಪಣ'ದ
ಮತ್ತೊಂದು ಮಟ



ಚಿತ್ರ ೪೧(ಅ). ಜಾವಳಗೇರಿಯಲ್ಲಿ
ವೀಕ್ಷಣಾಲಯ



ಚಿತ್ರ ೪೧(ಆ). ವೀಕ್ಷಣಾಲಯದ ಮುಂದೆ ಡಾ. ಭಟ್ಟಾಚಾರ್ಯರು
ಜನರಿಗೆ ಗ್ರಹಣದ ವಿವರಣೆ ಮಾಡುತ್ತಿರುವುದು.



ಚಿತ್ರ ೪೨. ಕೆಳದಿಯ (ಶಿವಮೊಗ್ಗ ಜಿಲ್ಲೆ) ಒಂದು ಶಿಲ್ಪ-ಚಂದ್ರನನ್ನು
ರಾಹು ನುಂಗುತ್ತಿರುವುದು.

(೧) ಫೆಬ್ರವರಿ ೬ರಂದು ಗ್ರಾಮಸ್ಥರಿಗಾಗಿ ನಡೆಯುವ ಕಾರ್ಯಕ್ರಮದಲ್ಲಿ (ಸಂಜೆ ೬-೫೦) ಬೆಂಗಳೂರು ಭಾರತೀಯ ಖಗೋಳ ಭೌತವಿಜ್ಞಾನದ ಒಬ್ಬರೊಡನೆ ಸಂದರ್ಶನವಿತ್ತು; "ಗ್ರಹಣದಲ್ಲಿ ತಿಳಿದುಕೊಳ್ಳಬಹುದಾದುದು ಏನು" ಎಂಬ ಬಗ್ಗೆ ಸಂಭಾಷಣೆಯಿತ್ತು.

(೨) ಫೆಬ್ರವರಿ ೭ರಂದು ಯುವವಾಣಿ ಕಾರ್ಯಕ್ರಮದಲ್ಲಿ (ರಾತ್ರಿ ೭-೪೫) "Science Spectrum Programme" ಅಂಗವಾಗಿ ಒಬ್ಬ ಪ್ರಾಧ್ಯಾಪಕರು ಕನ್ನಡದಲ್ಲಿ ಗ್ರಹಣದ ವಿಶೇಷಾಂಶಗಳನ್ನು ಎತ್ತಿ ತೋರಿಸಿದರು.

(೩) ಫೆಬ್ರವರಿ ೧೦ ರಂದು ವಿದ್ಯಾವಂತರಿಗಾಗಿ ರಾತ್ರಿ ೯-೧೫ ಕ್ಕೆ ನಾಲ್ವರು ಖಗೋಳ ವಿಜ್ಞಾನಿಗಳ ಜೊತೆ ಸಂದರ್ಶನವಿತ್ತು. ಕಾರ್ಯಕ್ರಮದ ಹೆಸರು "ನಡುಹಗಲಲ್ಲಿ ನಕ್ಷತ್ರಗಳು". ಗ್ರಹಣದ ಬಗ್ಗೆ ಮಾಹಿತಿ, ಅದಕ್ಕಿಂತ ಗ್ರಹಣದ ಸಮಯದಲ್ಲಿ ನಡೆಸಲಾಗುವ ಪ್ರಯೋಗಗಳು, ಗ್ರಹಣದ ಸಮಯವೇ ಏಕೆ ಆ ಪ್ರಯೋಗಗಳಿಗೆ-ಇವು ಆ ಕಾರ್ಯಕ್ರಮದ ಮುಖ್ಯಾಂಶಗಳು.

(೪) ಫೆಬ್ರವರಿ ೧೩ ರಂದು ಬೆಳಿಗ್ಗೆ ೭-೩೦ ರಲ್ಲಿ "ವಿಜ್ಞಾನದ ಮುನ್ನಡೆ" ಭಾಗವಾಗಿ ಆಕಾಶವಾಣಿಯವರೇ ನಾಲ್ಕು ನಿಮಿಷಗಳ ಕಾರ್ಯಕ್ರಮ ಕೊಟ್ಟು, ಮುಖ್ಯವಾಗಿ ಗ್ರಹಣ ಪ್ರಯೋಗಗಳ ಪರಿಚಯ ಮಾಡಿಕೊಟ್ಟರು.

(೫) ಅದೇ ದಿನ ರಾತ್ರಿ ಸುಪ್ರಸಿದ್ಧ ಖಗೋಳ ವಿಜ್ಞಾನಿ ಡಾ॥ಜೆ.ಸಿ.ಭಟ್ಟಾಚಾರ್ಯ ಅವರಿಂದ ಇಂಗ್ಲಿಷಿನಲ್ಲಿ ಉಪನ್ಯಾಸವಿತ್ತು. ಇವರು ಬೆಂಗಳೂರು ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆಯ ಉಪನಿರ್ದೇಶಕರು ಮತ್ತು ಭಾರತದ ಗ್ರಹಣ ಸಂಶೋಧನೆಗಳ ಸಮನ್ವಯಾಧಿಕಾರಿ.

(೬) ಫೆಬ್ರವರಿ ೧೬ ರಂದು ರಾತ್ರಿ ೯-೧೫ ಕ್ಕೆ ಆ ದಿನ ಗ್ರಹಣ ಸಂಶೋಧನೆಗಳನ್ನು ನಡೆಸಿದ ಡಾ॥ ಯು. ಆರ್. ರಾವ್ ಮುಂತಾದ ವಿಜ್ಞಾನಿಗಳ ಜೊತೆ ಸಂದರ್ಶನವಿತ್ತು. ಅವರೆಲ್ಲ ತಾವು ಏನು ಪ್ರಯೋಗಗಳನ್ನು ಮಾಡಿದೆವು ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿದರು.

(೭) ಫೆಬ್ರವರಿ ೨೩ರಂದು ರಾತ್ರಿ ೭-೪೫ಕ್ಕೆ, ಹುಬ್ಬಳ್ಳಿ ಸಮೀಪದ ವೀಕ್ಷಣಾಲಯದಲ್ಲಿ ಆಕಾಶವಾಣಿ ಧ್ವನಿಮುದ್ರಿಸಿಕೊಂಡದ್ದರ ಆಧಾರದ ಮೇಲೆ ಕಾರ್ಯಕ್ರಮವೊಂದನ್ನು ಪ್ರಸಾರ ಮಾಡಲಾಯಿತು.

(೮) ಈಚೆಗೆ ಜುಲೈ ೬ ರಂದು ಡಾ॥ ಜೆ. ಸಿ. ಭಟ್ಟಾಚಾರ್ಯ ಅವರು ಪ್ರಯೋಗಗಳನ್ನು ನಡೆಸಿದ ಫಲಿತಾಂಶಗಳನ್ನು ಕುರಿತು ಒಂದು ಸಮೀಕ್ಷೆ ಮಾಡಿ ಪ್ರಯೋಗಗಳ ಮೌಲ್ಯ ಕುರಿತು ಮಾತನಾಡಿದರು.

ಬಹುಶಃ ಆಕಾಶವಾಣಿಯ ಎಲ್ಲ ಕೇಂದ್ರಗಳಲ್ಲೂ ಇಂತಹುದೇ ಕಾರ್ಯಕ್ರಮಗಳು ಬಿತ್ತರಗೊಂಡಿರಬೇಕು. ಮತ್ತು ಮೇಲಿನ ಕೆಲವು ಕಾರ್ಯಕ್ರಮಗಳು ಕರ್ನಾಟಕದ ಇತರ ಕೇಂದ್ರಗಳಿಂದ ಮರು ಪ್ರಸಾರವಾಗಿರಬೇಕು.

ಮೈಸೂರಿನ ಕೇಂದ್ರದಿಂದ ೧೧-೨-೮೦ ರಂದು ಸಂಜೆ ೫-೫೦ ರಿಂದ ಐದು ನಿಮಿಷ ಬಿತ್ತರಗೊಂಡ ಒಂದು ವಾರ್ತೆಯ ಪಾಠ ನನಗೆ ದೊರಕಿದೆ.[೨] **"ಬಹಳ ಕಾಲದಿಂದ ಕಾದಿದ್ದ ಸಂಪೂರ್ಣ ಸೂರ್ಯಗ್ರಹಣ ಶತಮಾನದ ಅತಿ ಮುಖ್ಯ ಖಗೋಳ ವಿಜ್ಞಾನ ಘಟನೆ ಈಗ ತೀರಾ ಹತ್ತಿರ ಬಂದಿದೆ......"** ಎಂದು ಆರಂಭವಾಗಿ, ಆ ವೇಳೆ ನಡೆಯಲಿರುವ ಕೆಲವು ಪ್ರಯೋಗಗಳ ಪರಿಚಯ ಮಾಡಿಕೊಡುತ್ತದೆ. ಕೊನೆಯಲ್ಲಿ ಹೀಗಿದೆ- **"......ವಿಜ್ಞಾನಿಗಳು ನಿರ್ದಿಷ್ಟ ಗುರಿಯುಳ್ಳೋರು, ಸೂಕ್ತ ಸಾಧನ ಸಲಕರಣೆ ಮಾಪಕಗಳನ್ನು ಹೊಂಚಿಕೊಂಡಿರೋರು ಏನಾದರೂ ನಿರೀಕ್ಷಿಸಲಿ, ಹ್ಯಾಗಾದರೂ ನಿರ್ಣಯಿಸಲಿ ನಾವು ಸುಮ್ಮ ಸುಮ್ಮನೆ ಬರೀ ಕಣ್ಣು ಅಥವಾ ಸಾಕಷ್ಟು ರಕ್ಷಣೆ ಇಲ್ಲದ ಇತರ ಸಾಧನಗಳಿಂದ ಗ್ರಸ್ತ ಸೂರ್ಯನನ್ನು ನೋಡಿ ಕಣ್ಣಿಗೆ ಅಪಾಯ ತಂದುಕೊಳ್ಳಬಾರದು, ಅಲ್ಲವೇ?"**

ಇದು ಗ್ರಹಣವನ್ನು ಆಕಾಶವಾಣಿ ತನ್ನ ಶ್ರೋತೃ ವರ್ಗಕ್ಕೆ ಪರಿಚಯ ಮಾಡಿಕೊಡಲು, ಆ ವರ್ಗವನ್ನು ಶಿಕ್ಷಿತರನ್ನಾಗಿ ಮಾಡಲು ಕೈಗೊಂಡ ಕಾರ್ಯಕ್ರಮಗಳ ಸ್ಥೂಲಪರಿಚಯ. ಪತ್ರಿಕೆಗಳು ಮತ್ತು ರೇಡಿಯೋಗಳು ಜನತೆಯ ನಡವಳಿಕೆಯನ್ನು ರೂಪಿಸಿದ ಬಗ್ಗೆ ಮತ್ತು ಅದರ ಪರಿಣಾಮಗಳ ಬಗ್ಗೆ ಹೆಚ್ಚಿನ ಚರ್ಚೆಯನ್ನು ಮುಂದಿನ ಅಧ್ಯಾಯದಲ್ಲಿ ಮಾಡಲಾಗಿದೆ.

### ಅಡಿಟಿಪ್ಪಣಿಗಳು

೧. "ಗರ್ಭಿಣಿಯರ ಮೇಲೆ ಸೂರ್ಯಗ್ರಹಣದಿಂದಾಗಿ ದುಷ್ಪರಿಣಾಮಗಳಾಗುವುದು ಮಿಥ್ಯ"-ಖಗೋಳ ವಿಜ್ಞಾನಿ ಡಾ. ಎಲ್. ಪಿ. ಶ್ರೀವತ್ಸ [ಪ್ರವಾ. ೬.೨.೮೦]

೨. ಕುರುಕ್ಷೇತ್ರದಲ್ಲಿ ಜನ ಸ್ನಾನ ಮಾಡುತ್ತಿರುವುದನ್ನು, ಮತ್ತು ಸಾಧುಗಳು ತಂಡತಂಡವಾಗಿ ಹೋಗುತ್ತಿದ್ದುದನ್ನು ಕೇಂದ್ರ ಸರ್ಕಾರ ನಿರ್ಮಿಸಿರುವ ವಾರ್ತಾ ಚಲನಚಿತ್ರದಲ್ಲಿ ಹಿಡಿಯಲಾಗಿದೆ. ಆ ಚಿತ್ರವನ್ನು ಅನೇಕ ಚಲನಚಿತ್ರ ಮಂದಿರಗಳು ತೋರಿಸಿದುವು. ನನಗೆ ಬೆಂಗಳೂರಿನ All India Institute of Astrophysics ವಿಭಾಗದ ಡಾ॥ಕಪೂರ್ ತಮ್ಮ ಕೇಂದ್ರದಲ್ಲಿದ್ದ ಅದೇ ಚಿತ್ರವನ್ನು ತೋರಿಸಿ ಉಪಕರಿಸಿದರು. ಅದರಲ್ಲಿ ಗ್ರಹಣದ ಬೇರೆ ಬೇರೆ ಹಂತಗಳನ್ನೂ ದೃಶ್ಯಗಳನ್ನೂ ಮನೋಹರವಾಗಿ ಸೆರೆ ಹಿಡಿಯಲಾಗಿದೆ.

೩. ನಮ್ಮಲ್ಲೂ ಕಾರ್ಖಾನೆಗಳು ಕಾರ್ಮಿಕರಿಗೆ ಸುರಕ್ಷತಾ ಸಾಧನಗಳನ್ನು ಒದಗಿಸಿ ಗ್ರಹಣ ನೋಡಲು ಪ್ರೋತ್ಸಾಹಿಸಿದ ತೀರ ವಿರಳ ನಿದರ್ಶನಗಳಿವೆ. ಉದಾಹರಣೆಗೆ, ಮದ್ರಾಸಿನ ವಾಯುಪಡೆ ಕಾರ್ಖಾನೆ ಹಾಗೆ ಒದಗಿಸಿತೆಂದು ಗ್ರಹಣದ ದಿನ ಅಲ್ಲಿದ್ದ ನಾಸಿಕದ ಏರ್‌ಫೋರ್ಸ್ ಕಾರ್ಮಿಕ ನನಗೆ ತಿಳಿಸಿದ. (ರೈಲಿನಲ್ಲಿ ನನಗೆ ಸಹ ಪ್ರಯಾಣಿಕನಾಗಿದ್ದ ಆತ).

೪. ವಿದ್ಯಾವಂತ ಜನ ಗ್ರಹಣಾನಂತರ ದೇಶಕ್ಕೆ ಒದಗಬಹುದಾದ ಅನಾಹುತಗಳ ಬಗೆಗೆ ವಿಪರೀತವಾಗಿ ಕಲ್ಪಿಸಿಕೊಳ್ಳಲು ಪತ್ರಿಕೆಗಳಲ್ಲಿ ಬಂದ ಇಂತಹ ಭವಿಷ್ಯಗಳೂ ಕಾರಣವಾಗಿವೆಯೆಂದು ತೋರುತ್ತದೆ.

೫. ಗ್ರಹಣದ ದಿನ ಬೆಂಗಳೂರಿನ 'ಶೇಟ್' ಶ್ರೀಮಂತನ ಮನೆಯಲ್ಲಿ ಬೆಳಗಿನಿಂದ ಸಂಜೆವರೆಗೆ ಹರಿಕಥೆ ನಡೆದುದನ್ನು ಒಬ್ಬ ಕೆಲಸಗಾರ ಮಾಹಿತಿ ಕೊಟ್ಟಿದ್ದಾನೆ.

೬. 'ಪೂರ್ಣ ಸೂರ್ಯಗ್ರಹಣ-ತಪ್ಪು ಕಲ್ಪನೆಗಳು ಮತ್ತು ಮೂಢ ನಂಬಿಕೆಗಳು.' ಎಂಬ ಲೇಖನದಲ್ಲಿ (ಜನಪ್ರಿಯ ವಿಜ್ಞಾನ, ನವೆಂಬರ್ ೧೯೮೦) ಜೆ. ಸಿ. ಭಟ್ಟಾಚಾರ್ಯ ಅವರು ಫೆಬ್ರವರಿ ೧೬ ರಂದು ನಡೆಸಿದ ಕೆಲವು ಪ್ರಯೋಗಗಳಿಂದ ತಮಗೆ ದೊರಕಿದುವೆಂದು ಕೆಲವು ವಿಜ್ಞಾನಿಗಳು ಹೇಳಿಕೊಂಡ ಕೆಲವು ಫಲಿತಾಂಶಗಳನ್ನು ಹಾಸ್ಯ ಮಾಡಿದ್ದಾರೆ. ತಮ್ಮ ಪ್ರಯೋಗಗಳ ಫಲಿತಾಂಶಗಳನ್ನು ಕೊಟ್ಟಿಲ್ಲ, ಅವರು ಗ್ರಹಣ ಸಂಬಂಧಿಯಾದ ಕೆಲವು ಜನಪ್ರಿಯ ನಂಬಿಕೆಗಳನ್ನೂ ಕುಚೋದ್ಯ ಮಾಡಿದ್ದಾರೆ.

೬ಅ. ತೀರ ಈಚಿನ 'ಪ್ರಜಾವಾಣಿ' ಸುದ್ದಿಯೊಂದು [೧೮-೫-೧೯೮೧], ಪೂರ್ಣ ಸೂರ್ಯಗ್ರಹಣ ಸಂದರ್ಭದಲ್ಲಿ ನಡೆಸಲಾದ ಮನೋರೋಗಿಗಳ ಮೇಲಿನ ಪ್ರಯೋಗಗಳ ಫಲಿತಾಂಶವನ್ನು ವರದಿಮಾಡಿದೆ. 'ಸೂರ್ಯಗ್ರಹಣದ ವಿಕಿರಣ' ಮಾನಸಿಕ ವಿಕಲತೆಗೆ ಪರಿಹಾರ ಒದಗಿಸುತ್ತದೆಯೆಂದೂ ಪೂರ್ಣ ಸೂರ್ಯಗ್ರಹಣ ಕಾಲದಲ್ಲಿ ಹೊರಗಡೆ ಇದ್ದ ಮನೋರೋಗಿಗಳಲ್ಲಿ ಕೆಲಮಟ್ಟಿನ ಸುಧಾರಣೆ ಕಂಡುಬಂದಿದೆಯೆಂದೂ ಅದು ಹೇಳುತ್ತದೆ.

೭. ಬೆಂಗಳೂರು ಆಕಾಶವಾಣಿಯ ನಾಟಕ ನಿರ್ದೇಶಕ ಶ್ರೀ ವಸಂತ ಕವಲಿಯವರು ಹೇಳಿದ್ದು. ೧೯೮೦ರ ಜನವರಿ ೩೧ ಅವರಿಗೆ ಬೆಂಗಳೂರು ಸೇಂಟ್ ಜಾನ್ ಮೆಡಿಕಲ್ ಆಸ್ಪತ್ರೆಯಲ್ಲಿ ಮೂತ್ರ ಕೋಶಕ್ಕೆ ಸಂಬಂಧಿಸಿದ ದೊಡ್ಡ ಶಸ್ತ್ರಚಿಕಿತ್ಸೆ ಆಯಿತು. ಫೆಬ್ರವರಿ ೧೫ರ ಹೊತ್ತಿಗೆ ಎಷ್ಟೋ ಸುಧಾರಿಸಿ ಸ್ವಲ್ಪ ಓಡಾಡುವಂತಾದರು. ಆದರೂ ಗಾಯ ಇತ್ತು. ಹದಿನಾರನೇ ತಾರೀಖು ಬೆಳಗಿನಿಂದ ತಲೆ ನೋವು; ಮಧ್ಯಾಹ್ನ ಅದರ ಜೊತೆ ಗಾಯದ ನೋವು ತೀರ ಹೆಚ್ಚಾಯ್ತು. ನೋವುಶಮನಕಾರಿ ಗುಳಿಗೆ ಕೇಳಿದಾಗ ಆಸ್ಪತ್ರೆಯವರೇ

ಬೇಡ ಎಂದರು. ಆದರೆ ತಾವೇ ಒತ್ತಾಯ ಮಾಡಿ ಸಂಜೆ ೩-೪೫, ೪-೦೦ ಗಂಟೆ ಅವಧಿಯಲ್ಲಿ ಒಂದು ಗುಳಿಗೆ ತೆಗೆದುಕೊಂಡು, ನೀರು ಕುಡಿದರು. ನೋವು ಉಪಶಮನವಾಯ್ತು ನಿಜ. ಆದರೆ ರಾತ್ರಿ ಮತ್ತು ಮಾರನೆಯ ದಿನ ತೆಗೆದುಕೊಂಡಿದ್ದೆಲ್ಲ ವಾಂತಿ, ಬರಿ ಕರಿನೀರು. ಎರಡು ದಿನಗಳಲ್ಲಿ dehydrate ಆಗಿ ವೈದ್ಯರು 'ಡ್ರಿಪ್ಸ್' ಕೊಟ್ಟರು. Blood-urea ಜಾಸ್ತಿಯಾಗಿ ಮುಂದಿನ ದಿನಗಳಲ್ಲಿ ಬದುಕಿದ್ದೇ ಆಶ್ಚರ್ಯವಾಯ್ತು. ಕವಲಿಯವರ ಪ್ರಕಾರ, ಗ್ರಹಣದ ಅವಧಿಯಲ್ಲಿ ಗುಳಿಗೆ, ನೀರು ಸೇವಿಸಿದ್ದು ಇದಕ್ಕೆ ಕಾರಣ. ಅವರನ್ನು ನೋಡಿಕೊಂಡ ವೈದ್ಯರು ಸುಪ್ರಸಿದ್ಧ ಮೂತ್ರತಜ್ಞರು. ಅವರು ಕವಲಿಯವರ ಅನುಭವ ಕೇಳಿ ಗ್ರಹಣದ ಪರಿಣಾಮದಲ್ಲಿ ತಮಗೆ ನಂಬಿಕೆಯಿಲ್ಲದಿದ್ದರೂ, ತಮ್ಮ ಚಿಕ್ಕಪ್ಪ ಹಿಂದೊಮ್ಮೆ ಗ್ರಹಣದ ಸಮಯದಲ್ಲಿ ಅಸ್ಪ್ರೋ ನುಂಗಿ, ರಕ್ತ ಕಾರಿ ಬಹಳ ಅವಸ್ಥೆ ಪಟ್ಟುದಾಗಿಯೂ ಅವರನ್ನು ಕಷ್ಟಪಟ್ಟು ಉಳಿಸಿದುದಾಗಿಯೂ ಹೇಳಿಕೊಂಡರಂತೆ.

ಗ್ರಹಣದ ಅವಧಿಯಲ್ಲಿ ಹಾಲು, ಮೊಸರು ಇತ್ಯಾದಿಗಳಿಗೆ ಗರಿಕೆ ಹಾಕುವುದು, ಮುಗಿದ ಮೇಲೆ ಹೊಸ ನೀರು ತರುವುದು ಇತ್ಯಾದಿ ಪದ್ಧತಿಗಳು ಗ್ರಹಣದ ದುಷ್ಪರಿಣಾಮಗಳನ್ನು ಹಿಂದಿನವರು ಬಲ್ಲವರಾಗಿದ್ದರೆಂಬುದಕ್ಕೆ ಸಾಕ್ಷಿಯೆಂದು ಕವಲಿಯವರ ಭಾವನೆ.

೮. M. K. V. Bappu : 'When the Sun goes out'. (Science Today. Feb. 1980. P. 32)

೯. ನನ್ನ ಗಮನಕ್ಕೆ ಬಂದ ಕೆಲವು ಲೇಖನಗಳು:-ಕೆ. ವಿಜಯಶ್ರೀ: 'ನಡು ಹಗಲಿನಲ್ಲೊಂದು ಹುಣ್ಣಿಮೆಯ ಇರುಳು' (ಸುಧಾ. ಮಾರ್ಚ್ ೯, ೧೯೮೦); ಬಿ. ಎಸ್. ಶೈಲಜಾ: 'ಗ್ರಹಣ ವೀಕ್ಷಕರಿಗೊಂದು ಕಿವಿಮಾತು' (ಕನ್ನಡಪ್ರಭ, ಫೆಬ್ರವರಿ ೧೦, ೧೯೮೦); M. R. Rao: 'Darkenss at noon' (The Illustrated Weekly of India. Feb. 3, 1981); M. P. Rao: 'Total Eclipse of the Sun'. (Deccan Herald. Feb. 10, 1980); ಹೆಬ್ಬಾರ್: 'ಗ್ರಹಣದ ಅನುಭವ ಕಥನ' (ಉದಯವಾಣಿ. ಫೆಬ್ರವರಿ ೨೦, ೧೯೮೦); ಪ್ರ. ರಾ. ಆಚಾರ್ಯ: 'ಖಗ್ರಾಸ ಸೂರ್ಯಗ್ರಹಣ' (ಮಧುರವಾಣಿ. ಕೆ.ಬಿ. ಹೈಯರ್ ಸೆಕಂಡರಿ ಸ್ಕೂಲ್, ಬೊಂಬಾಯಿ ೧೯೮೦); ಎಂ. ಜಿ. ಕೆ. ಮೂರ್ತಿ: 'ಪೂರ್ಣ ಸೂರ್ಯಗ್ರಹಣ' (ಸಿದ್ಧಗಂಗಾ. ಜನವರಿ, ಫೆಬ್ರವರಿ ೧೯೮೦); Mal Oettinger: 'Solar Eclipse: Experiencing Totality' (Span. May 1980); M. K. V. Bappu: 'When the Sun goes out'; Maithili Rao: 'Eclipse in Mythology'; S. M. Chitre:

'How well do we know our Sun?'; Arvind Bhatnagar: 'The Solar Corona'; A. Bhatnagar, N.C. Rana: and Jyothi Nevatia: 'An Eclipse watcher', Guide'; J. Mistry: 'Shoot the eclipse'; N. C. Rana: 'The Eclipse Families'; A. P. Mitra: 'Effects on the earth's atmosphere (ಮೇಲಿನ ಎಂಟು ಲೇಖನಗಳು Science Today, Feb., 1980, Vol. 14, No. 2, ಪತ್ರಿಕೆಯಲ್ಲಿ. ಈ ಪತ್ರಿಕೆಯ ಒಳಪುಟದ ವಿಷಯ ಸೂಚಿ ವಿಭಾಗದಲ್ಲಿ ಮೇಲೆ ಪ್ರಮುಖವಾಗಿ ಎದ್ದು ಕಾಣುವಂತೆ ಈ ವಾಕ್ಯವಿದೆ.– "Never never look at the partially eclipsed Sun!"): ಬಿ. ಎಸ್. ಶೈಲಜಾ: 'ಕತ್ತಲು ಹಗಲು' (ಜನಪ್ರಿಯ ವಿಜ್ಞಾನ, ಫೆಬ್ರವರಿ ೪, ೧೯೮೦); ಅದೇ ಪತ್ರಿಕೆಯಲ್ಲಿ (ಜನಪ್ರಿಯ ವಿಜ್ಞಾನ, ನವೆಂಬರ್ ೧೯೮೦), ಅಬ್ಬೂರಿ ರಾಮಲಿಂಗಂ '೧೯೮೦ರ ಒಂದು ಅಪೂರ್ವ ಘಟನೆ: ಪೂರ್ಣ ಸೂರ್ಯಗ್ರಹಣ (ಬಂಡಿವಾಡದಲ್ಲಿ ನಾವು ಕಂಡಂತೆ)' ಎಂಬ ಲೇಖನದಲ್ಲಿ ಕೆಲವು ಅನುಭವಗಳನ್ನು ಹೇಳಿಕೊಂಡಿದ್ದಾರೆ. ಅವರು ಹೋಗಿದ್ದ ಬಂಡಿವಾಡ ಗ್ರಾಮದ ಸುತ್ತಮುತ್ತ ಹಳ್ಳಿಗಳಲ್ಲಿ ಗ್ರಹಣದ ಹಿಂದಿನ ದಿನ ಡಂಗುರ ಹೊಯ್ಸಿಸಿ 'ಬಾಗಿಲು ಮುಚ್ಚಿ, ಹೊರಗೆ ಹೋಗಬೇಡಿ, ಸೂರ್ಯನ ಕಿರಣ ನೋಡಬೇಡಿ' ಎಂದು ಸಾರಿಸಿದರೆಂದು ವರದಿ ಮಾಡಿದಾರೆ. ಅನುಭವ ಕಥನಕ್ಕೆ ಇವನ್ನೂ ನೋಡಿ:

Biman Basu: 'The total Eclipse' (Science Reporter. April 1980. P. 226 "...Metropolitan cities like Delhi, Calcutta, Bombay and Madras looked like ghost cities with shops and offices closed, streets deserted and even public transport off the Road"); Ramesh Chander Kapoor: 'The day of the Dark Sun' (Hawk. ಜೂನ್ 15, 1980.) ಬೆಂಗಳೂರಿನ ಖಗೋಳ ವಿಜ್ಞಾನ ಸಂಸ್ಥೆ ರಾಯಚೂರು ಜಿಲ್ಲೆಯ ಜಾವಳಗೇರಿ ಎಂಬಲ್ಲಿ ನಡೆಸಿದ ಪ್ರಯೋಗಗಳಲ್ಲಿ ಭಾಗಿಯಾದವರ ಅನುಭವ ಇಲ್ಲಿದೆ. ದಿನಕ್ಕೆ ಹದಿನೆಂಟು ಗಂಟೆಗಳಂತೆ ಎರಡು ವಾರ ಶ್ರಮಿಸಿ ವಿಜ್ಞಾನಿಗಳು ಅಲ್ಲಿ ಗ್ರಹಣದ ವೀಕ್ಷಣಾಲಯವನ್ನು ಸಿದ್ಧಪಡಿಸಿದ್ದರು. ಪೂರ್ಣಗ್ರಹಣದ ದರ್ಶನದ ಬಳಿಕ-"People jumped, shook hands, congratulated each other and some even danced. Everybody was talking excitedly, and in their excitement, lots of people entered the cordoned off area unknowingly disturbing the set up where some observations were still going on.....The experiments had gone on smoothly. We were happy. That evening became a

memorable one. There was a camp fire at the camp late in the evening. Talks, group songs and dances! A day of hectic activity had a joyful end"); Bart J. Bok: 'A Wonderful Eclipse'. (ಅದೇ ಪತ್ರಿಕೆ.-"I am a Milky way astronomer and night watchman, and when it comes to an eclipse, I am a bystander who loves to see it. I have seen several of them. I have never seen one as beautiful as this one"); J.C. Bhattacharya: 'Total Solar Eclipse-Fallacies, Fantasies and Superstitions'. (ಅದೇ ಪತ್ರಿಕೆ.–"Most people in general hid themselves in darkened rooms and threw away their only chance of witnessing a rare event of natural beauty. I think it is the fear of the unknown, which might have plagued the mind of prehistoric man, that even today is responsible for such peculiar human behaviour"); J. C. Bhattacharya: 'Experiments' (ಅದೇ ಪತ್ರಿಕೆ); 'Indian Institute of Astrophysics-A Bright Star in the Universe of Astronomy' (Week-end feature by Raj Chengappa in The City Tab. February 17, 1980). ಅನೇಕ ಕಾಲೇಜು ವಾರ್ಷಿಕ ಪತ್ರಿಕೆಗಳಲ್ಲಿ ತಮ್ಮ ಅನುಭವಗಳನ್ನು ಹೇಳಿಕೊಂಡವರು ಎಷ್ಟೋ. ಉದಾಹರಣೆಗೆ, Vardhaman V. Gunjal ಅವರ 'Fascinating Celestial Game of Hide and Seek-Experience' (College Magazine. S.J.R.C. College of Science and Arts, Bangalore. 1979-80).

೧೦. ಈ ವಿವರಗಳನ್ನು ಬೆಂಗಳೂರು ಆಕಾಶವಾಣಿಯಲ್ಲಿ ವಿಜ್ಞಾನಾಧಿಕಾರಿಯಾಗಿರುವ ಶ್ರೀ ಎಚ್. ಆರ್. ಕೃಷ್ಣಮೂರ್ತಿಯವರು ಒದಗಿಸಿ ಸಹಕರಿಸಿದರು. ಅವರು ಪೂರ್ಣ ಸೂರ್ಯಗ್ರಹಣದ ವೇಳೆಯಲ್ಲಿ ಹುಬ್ಬಳ್ಳಿಯ ಬಳಿ ಹೊಸೂರಿನಲ್ಲಿ ಪ್ರಯೋಗ ನಡೆಸಿದ ವಿಜ್ಞಾನಿಗಳ ಶಿಬಿರದಲ್ಲಿದ್ದು ಹಲವರನ್ನು ಭೇಟಿ ಮಾಡಿದ್ದಾರೆ. ತಮ್ಮ ಹಲವಾರು ಅನುಭವಗಳನ್ನು ತಿಳಿಸಿ ಉಪಕರಿಸಿದ್ದಾರೆ.

೧೧. ದೂರದರ್ಶನದಲ್ಲಿ ಗ್ರಹಣವನ್ನು ತೋರಿಸುವ ಯತ್ನಗಳಾಗುತ್ತಿವೆಯೆಂದು ವಾರ್ತಾ ಸಚಿವ ಶ್ರೀ ವಸಂತ ಸಾತೆಯವರು ತಿಳಿಸಿದಂತೆ ವರದಿಯಾಗಿದೆ. (ಪ್ರವಾ. ೧೪-೨-೮೦). ದೂರದರ್ಶನದಲ್ಲಿ ರಾಷ್ಟ್ರಪತಿ, ಪ್ರಧಾನ ಮಂತ್ರಿಯವರು ಪೂರ್ಣ ಗ್ರಹಣವನ್ನು ನೋಡಿದರೆಂದು ಮುಂದೆ ವರದಿಗಳು ಬಂದುವು. (ಬೆಂಗಳೂರಿಗೆ ದೂರದರ್ಶನ ಆಗ ಬಂದಿರಲಿಲ್ಲ.)

೧೨. ಅಲ್ಲಿಯ ಶ್ರೀ ಆರ್. ಭಾರತಾದ್ರಿಯವರ ಮೂಲಕ

# ಉಪಸಂಹಾರ

## 'ಸಮಾಜೋಸಾಂಸ್ಕೃತಿಕ ಸಮೀಕ್ಷೆ'

ಗ್ರಹಣದ ಈ ಸಮೀಕ್ಷೆಯನ್ನು ನಾನು ಸಮಾಜೋಸಾಂಸ್ಕೃತಿಕವೆಂದು (Sociocultural) ಕರೆಯಲು ಕಾರಣವನ್ನು ಕುರಿತು ಒಂದು ಚಿಕ್ಕ ವಿವರಣೆ ಅಗತ್ಯವಾಗಿದೆ. Sociocultural ಅಧ್ಯಯನದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳೆರಡೂ ಮಿಳಿತವಾಗಿರುತ್ತವೆ. ಸಂಸ್ಕೃತಿ ಎನ್ನುವುದು ಬದುಕಿನ ಎಲ್ಲ ಸ್ತರಗಳನ್ನೂ ಒಳಗೊಳ್ಳಬಲ್ಲಷ್ಟು ವಿಸ್ತಾರವಾದ ಅರ್ಥವನ್ನು ಒಳಗೊಂಡಿರುವ ಪದ. ಅದರ ಅಂಗವಾದ ಸಮಾಜ, ಅದರ ಘಟಕಗಳಾದ ಜನ ಗ್ರಹಣಕ್ಕೆ ಹೇಗೆ ಪ್ರತಿಕ್ರಿಯಿಸಿದರೆಂಬುದು ಈ ಸಮೀಕ್ಷೆಯ ವಸ್ತುವಾಗಿವೆ.

"Socio"- ಎಂಬುದನ್ನು 'ಸಮಾಜೋ' ಎಂದು ಅನುವಾದಿಸಿರುವುದು ವ್ಯಾಕರಣ ಮರ್ಯಾದೆಗೆ ಅನುಗುಣವಾಗಿಲ್ಲದಿದ್ದರೂ ನನ್ನ ಅಧ್ಯಯನದ ಉದ್ದೇಶವನ್ನು ಅಡಕವಾಗಿ ಹೇಳುತ್ತದೆಂದು ಅದನ್ನು ಇಟ್ಟುಕೊಂಡಿದ್ದೇನೆ. ಅದು ಗ್ರಹಣಗಳನ್ನು ಕುರಿತಂತೆ ವಿಜ್ಞಾನಿಗಳ ಅಧ್ಯಯನವಲ್ಲವೆಂಬುದನ್ನೂ, ಅಥವಾ ವಿಜ್ಞಾನಿಗಳ ಅಧ್ಯಯನದಿಂದ ಅದು ಬೇರೆಯೆಂಬುದನ್ನೂ, ಈ ಅಧ್ಯಯನವು ನೇರವಾಗಿ ಬದುಕಿಗೆ, ಜನರ ಮನೋಭಾವನೆಗಳಿಗೆ, ಆಚರಣೆಗಳಿಗೆ ಸಂಬಂಧಿಸಿದುದೆಂಬುದನ್ನೂ ಸೂಚಿಸುತ್ತದೆ.

## ಪ್ರತಿಕ್ರಿಯೆಗಳಲ್ಲಿ ಸಮಾನತೆ

ಈ ಸಮಾಜೋಸಾಂಸ್ಕೃತಿಕ ಸಮೀಕ್ಷೆಯನ್ನು ಆರಂಭಿಸಿದ ಮೇಲೆ ನನಗೆ ಕೆಲವು ತೀರ ವಿಲಕ್ಷಣ ಸಂಗತಿಗಳು ತಿಳಿದು ಬಂದು ಹೊಸ ಅನುಭವಗಳನ್ನೇ ತಂದುಕೊಟ್ಟುವು. ವಿಶ್ವದ ಎಲ್ಲೆಡೆ ಪ್ರಚಲಿತವಾಗಿರುವ ಗ್ರಹಣವಿಷಯಕ ಪುರಾಣ

ಮತ್ತು ಕಟ್ಟುಕತೆಗಳು, ಹಾಗೂ ರಿಚುಯಲ್ಲುಗಳಲ್ಲಿ ಕಾಣುವ ಹೋಲಿಕೆಗಳೂ ಸಮಾನ ಅಂಶಗಳೂ ಕೇವಲ ಆಕಸ್ಮಿಕಗಳೆಂದು ಅನ್ನಿಸಲಿಲ್ಲ. ಪ್ರಾಕೃತಿಕ ಘಟನೆಯೊಂದಕ್ಕೆ ದೂರದ ಬೇರೆ ಬೇರೆ ದೇಶಗಳ ಭಿನ್ನ ಸಂಸ್ಕೃತಿಗಳ ಜನ ಒಂದೇ ರೀತಿಯ ಕತೆ ಕಟ್ಟಿ ಒಂದೇ ರೀತಿ ಪ್ರತಿಕ್ರಿಯಿಸುವುದರಲ್ಲಿ ಆಶ್ಚರ್ಯವೇನೂ ಇರದಿದ್ದರೂ, ಗ್ರಹಣದ ಕತೆಗಳನ್ನು (ಸರ್ಪ ಸೂರ್ಯನನ್ನು ನುಂಗುವುದು), ಆ ಸಮಯದ ಪ್ರತಿಕ್ರಿಯೆಗಳನ್ನು (ಆಕಾಶಕ್ಕೆ ಬಾಣ ಹಾರಿಸುವುದು) ನೋಡಿದರೆ ಅಂತಹ ಕತೆ ಮತ್ತು ಸಂಪ್ರದಾಯಗಳು ಒಂದು ಕಡೆಯಿಂದ ಮತ್ತೊಂದೆಡೆಗೆ ಪ್ರಸಾರ ಹೊಂದಿರುವ ಸಾಧ್ಯತೆಗಳನ್ನು ಅಲ್ಲಗಳೆಯಲು ಸಾಧ್ಯವಾಗುವುದಿಲ್ಲ.

ಕರ್ನಾಟಕ ಗ್ರಹಣಸಂಬಂಧಿ ನಂಬಿಕೆ ರಿಚುಯಲ್ಲುಗಳು ಅಕ್ಕಪಕ್ಕದ ಆಂಧ್ರ, ತಮಿಳು ನಾಡುಗಳಲ್ಲೂ ಇರುವುದನ್ನು ಖಚಿತಪಡಿಸಿಕೊಂಡಿದ್ದೇನೆ.

ಭಾರತದ ವಿಷಯ ಹಾಗಿರಲಿ, ಕರ್ನಾಟಕದಲ್ಲಿ ಎಲ್ಲೆಡೆ ಗ್ರಹಣಕ್ಕೆ ಸಂಬಂಧಿಸಿದ ಮನುಷ್ಯನ ನಡವಳಿಕೆಯಲ್ಲಿ ಕಂಡುಬರುವ ಸಮಾನಾಂಶಗಳು ಆಶ್ಚರ್ಯವನ್ನು ಹುಟ್ಟಿಸುತ್ತವೆ. ಗರ್ಭಿಣಿ ಬಾಣಂತಿಯರಿಗೆ ಸಂಬಂಧಿಸಿದ ನಿಷೇಧಗಳು, ಆಹಾರ ಪದಾರ್ಥಗಳಿಗೆ ಬಿಲ್ವ ಕರಿಕೆ ಹಾಕಿಡುವುದು, ಮಂತ್ರ ತಂತ್ರಗಳ ಸಾಧನೆಗೆ ಗ್ರಹಣ ದಿನ ಪ್ರಶಸ್ತವೆಂಬ ನಂಬಿಕೆ, ಗೊಡ್ಡು ಮರಗಳಿಗೆ ಮೊಳೆ ಹೊಡೆಯುವುದು, ಒನಕೆ ನಿಲ್ಲಿಸುವುದು ಇವೆಲ್ಲ ಬಹುತೇಕ ಎಲ್ಲ ಕಡೆಗೂ ಪ್ರಚಲಿತವಿರುವ ನಂಬಿಕೆ ಮತ್ತು ಆಚರಣೆಗಳು. ಸಾವಿರಾರು ವರ್ಷಗಳಲ್ಲಿ ಇವು ಒಂದು ಕಡೆಯಿಂದ ಎಲ್ಲೆಡೆಗೆ ಹಬ್ಬಿರುವುದು ವಿಚಿತ್ರವಾಗಿ ಕಾಣಿಸುವುದಿಲ್ಲ. ಹಾಗೆಯೇ ಪ್ರಾದೇಶಿಕ ವೈಲಕ್ಷಣ್ಯಗಳನ್ನೂ ನಾವು ಇಂತಹ ಕಡೆ ನಿರೀಕ್ಷಿಸಬಹುದು. ಕೋಲಾರ ಜಿಲ್ಲೆಯ 'ತಣುವನ ಮುದ್ದೆ' ಸಂಪ್ರದಾಯವನ್ನು ಇಲ್ಲಿ ಉದಾಹರಣೆಯಾಗಿ ಕೊಡಬಹುದು. ಆದರೆ ವೈಲಕ್ಷಣ್ಯಗಳಿಗಿಂತ ಸಮಾನತೆಯೇ ಒಟ್ಟಾರೆ ಎದ್ದು ಕಾಣುತ್ತದೆ. ಕಾಲದ ಅಂತರದಲ್ಲಿ ಸಮಾನ ಸಂಸ್ಕೃತಿಯೊಂದು ರೂಪುಗೊಳ್ಳುವುದು ಇಂತಹ ಸಮಾನ ಆಚರಣೆ ಮತ್ತು ನಂಬಿಕೆಗಳಿಂದಲೇ.

## ಪುರಾಣಗಳು ಮತ್ತು ರಿಚುಯಲ್ಲುಗಳು

ಗ್ರಹಣಕ್ಕೆ ಸಂಬಂಧಿಸಿದ ಪುರಾಣಗಳು ಪ್ರಾಕ್ತನ ಮಾನವ ಪ್ರಾಕೃತಿಕ ಘಟನೆಯೊಂದನ್ನು ಗಂಭೀರವಾಗಿ ಪರಿಗಣಿಸಿದನೆಂಬುದಕ್ಕೆ, ಅದನ್ನು ತಿಳಿದುಕೊಳ್ಳುವ ಯತ್ನವನ್ನು ಮಾಡಿದುದಕ್ಕೆ ಮತ್ತು ಅದನ್ನು ತನ್ನದೇ ರೀತಿಯಲ್ಲಿ ಅರ್ಥೈಸಿಕೊಂಡನೆಂಬುದಕ್ಕೆ ಸಾಕ್ಷಿಗಳು. ಪುರಾಣಗಳು ಜನರು ಜಗತ್ತನ್ನು ನೋಡಲು

ಕಣ್ಣುಗಳನ್ನು ಒದಗಿಸುತ್ತವೆ ಮತ್ತು ಅವರ ನಂಬಿಕೆವ್ಯವಸ್ಥೆಗಳನ್ನು ದೃಢಪಡಿಸುತ್ತವೆ. ಎಲ್ಲ ಜನರೂ ತಮ್ಮ ಭೌತಿಕ ಇಂದ್ರಿಯಗಳಿಂದಲೇ ಪ್ರಪಂಚವನ್ನು ಗ್ರಹಿಸಿದರೂ ಅವರೆಲ್ಲ ಜಗತ್ತನ್ನು ನೋಡುವ ರೀತಿ ಒಂದೇ ಆಗಿರಬೇಕಾಗಿಲ್ಲ. ಉದಾಹರಣೆಗೆ, ದೈವ ಮಾಟಮಂತ್ರಗಳಲ್ಲಿ ನಂಬಿಕೆ ಇರುವವನಿಗೆ ಪ್ರಪಂಚವೆಲ್ಲ ಚೈತನ್ಯಮಯ; ಸುಣ್ಣ ಹಚ್ಚಿದ ಬೋಕಿ ಚೂರು ಅವನಿಗೆ ಒಂದು ಶಕ್ತಿಯ ಕೇಂದ್ರವಾಗುತ್ತದೆ. ದೈವ ಮಾಟಮಂತ್ರಗಳಲ್ಲಿ ನಂಬಿಕೆಯಿರದ ಮನುಷ್ಯನಿಗೆ ಕಾಣುವ ಜಗತ್ತಿಗಿಂತ ನಂಬಿಕೆಯಿರುವ ಮನುಷ್ಯನಿಗೆ ಕಾಣುವ ಜಗತ್ತು ತೀರ ಬೇರೆ. ಹಾಗೆಯೇ, ಪ್ರಕೃತಿಗೆ ತೀರ ಹತ್ತಿರದ ಬದುಕನ್ನು ಸಾಗಿಸುತ್ತ ಪ್ರಕೃತಿಯ ಜೊತೆ ನಿಕಟ ಸಂಪರ್ಕವನ್ನು ಹೊಂದಿ ದೈವ ಅಥವಾ ದೆವ್ವಗಳಲ್ಲಿ ನಂಬಿಕೆ ಹೊಂದಿರುವ ಅವಿದ್ಯಾವಂತ ಸಮಾಜದ ಕಣ್ಣಿಗೆ ಜಗತ್ತು ಕಾಣುವ ರೀತಿ ಬೆರೆಯಾಗಿರುತ್ತದೆ. ಆ ಸಮಾಜಕ್ಕೆ ಸೂರ್ಯನು ಕೃಪೆಯಿಂದ ಬೆಳಕು, ಜೀವಗಳನ್ನು ಕರುಣಿಸುವ ಶಕ್ತಿಯಾಗಿ ಕಾಣಿಸುತ್ತಾನೆ. ಅವನ ಉಳಿವು ಅಳಿವುಗಳು ಸಮಾಜದ ಉಳಿವು ಅಳಿವುಗಳೂ ಆಗುತ್ತವೆ. ಸೂರ್ಯನಿಗೆ ಒದಗುವ ಸಂಕಟ ಜಗತ್ತಿಗೇ ಒದಗುವ ಸಂಕಟ. ಜಾನಪದ ಮನಸ್ಸು ಸೂರ್ಯ ಗ್ರಹಣದ ಬಗ್ಗೆ ಪ್ರತಿಕ್ರಿಯಿಸುವ ರೀತಿಯನ್ನು ಈ ನಿಟ್ಟಿನಿಂದ ನೋಡಬೇಕು. ಸೂರ್ಯನನ್ನು ನುಂಗುವ ರಾಕ್ಷಸನನ್ನು ಸದ್ದು ಮಾಡಿ ಬಾಣಬಿಟ್ಟು ಓಡಿಸುವ ಯತ್ನವನ್ನಾಗಲಿ, ಗ್ರಹಣ ಹಿಡಿದಾಗ ಜನ ಅಳುವುದನ್ನಾಗಲಿ ಈ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕು. ಗ್ರಹಣದ ಸಮಯದಲ್ಲಿ ಊಟ ನಿರಾಕರಿಸುವುದು, ಗ್ರಹಣ ಬಿಟ್ಟ ಮೇಲೆ ಸ್ನಾನ ಮಾಡುವುದು ಎರಡೂ ಸೂರ್ಯನಿಗೆ ದೇವರು ಒಳ್ಳೆಯದು ಮಾಡಲಿ ಎಂಬ ಹಾರೈಕೆಯಿಂದ ಎಂಬ ಪ್ರತಿಕ್ರಿಯೆಯು ಸ್ವಾಭಾವಿಕವಾದುದು. ಗ್ರಹಣವು ಲೋಕದ ಕಣ್ಣಾದ ಸೂರ್ಯನಿಗೆ ಸಂಕಟಕಾಲ; ತಮ್ಮ ರಿಚುಯಲ್ಲುಗಳು ಆ ಸಂಕಟವನ್ನು ಹೋಗಲಾಡಿಸುತ್ತವೆ, ಮತ್ತು ಅದೇ ಸಮಯದಲ್ಲಿ ಸೂರ್ಯನ ಶತ್ರುವಿನಿಂದ ತಮಗೂ ಒದಗಬಹುದಾದ ಸಂಕಟಗಳನ್ನೂ ಪರಿಹರಿಸುತ್ತವೆ ಎಂದು ಜಾನಪದರು ಸಮಾಧಾನಪಟ್ಟುಕೊಳ್ಳುತ್ತಾರೆ. ಸಂಕಟವೂ ಇದೆ, ಆ ಸಂಕಟಕ್ಕೆ ಪರಿಹಾರವೂ ಸಿದ್ಧವಾಗಿದೆ. ಗ್ರಹಣದ ವಿಷಯದಲ್ಲಿ ಸಾಮಾನ್ಯವಾಗಿ ಹಿಂದೆ ಕೋಲಾಹಲಕರ ಭಯ ಇರುತ್ತಿರಲಿಲ್ಲವೆಂಬುದಕ್ಕೆ ಇದೇ ಕಾರಣ. ಸೂರ್ಯನ ಸಂಕಟದಲ್ಲಿ ಪಾಲುಗಾರರಾಗುವುದು ತಮ್ಮ ಕರ್ತವ್ಯವೆಂದು ಜನ ಭಾವಿಸಿ ಹಾಗೆ ನಡೆದುಕೊಳ್ಳುತ್ತಿದ್ದರು. ರಿಚುಯಲ್ಲು, ಬಗೆ ಬಗೆಯ ವಿಧಿ ನಿಷೇಧಗಳು, ಪುರಾಣಗಳು ಮುಂತಾದ ಸಾಧನಗಳ ಮೂಲಕ ಜಾನಪದರು ಗ್ರಹಣವನ್ನು ಗ್ರಹಿಸಿದ್ದರು.

ಅವಿದ್ಯಾವಂತ ಸಮಾಜಕ್ಕೆ ಪ್ರಕೃತಿ ಬದುಕನ್ನು ಅನುಗ್ರಹಿಸುವ ದೇವತೆ. ಆದರೆ, ಆಧುನಿಕ ಜ್ಞಾನವು ಬದುಕಿಗೆ ಬೇಕಾದ ಅನುಕೂಲಗಳಿಗಾಗಿ ಪ್ರಕೃತಿಯನ್ನು ಬಗ್ಗಿಸಿಕೊಳ್ಳಬೇಕೆನ್ನುತ್ತದೆ. ಇಲ್ಲಿ ಮನುಷ್ಯನಿಗೆ ಪ್ರಕೃತಿ ಇರುವುದು ಅದರಿಂದ ತನಗೆ ಬೇಕಾದ ಅನುಕೂಲಗಳನ್ನು ಕಿತ್ತುಕೊಳ್ಳಲು. ಈ ಧೋರಣೆ ಆಧುನಿಕ ಜನರಿಗೂ ಪ್ರಕೃತಿಗೂ ಇರುವ ಸಂಬಂಧಗಳನ್ನು ನಿರ್ಣಯಿಸುತ್ತದೆ. ಈ ಮಾತಿನ ಜೊತೆಗೆ ಇನ್ನೊಂದನ್ನೂ ಲಕ್ಷಿಸಬೇಕು. ವಿದ್ಯಾವಂತರೂ ಕೂಡ ಒಂದಲ್ಲ ಒಂದು ಘಟ್ಟದಲ್ಲಿ ತಾವು ಹುಟ್ಟಿ ಬಂದ ಸಂಸ್ಕೃತಿಯ ನಂಬಿಕೆಗಳ ಅಚ್ಚಿನ ಮೂಲಕ ಹಾದು ಬಂದಿರುತ್ತಾರೆ. ಹಳೆಯ ಪಾರಂಪರಿಕ ಜ್ಞಾನ ಸಂಪೂರ್ಣ ಅಳಿಸಿರುವುದಿಲ್ಲ, ಹೊಸ ಜ್ಞಾನವನ್ನು ಅವರು ಕೈ ಬಿಡಲಾರರು. ಈ ಇಬ್ಬಂದಿಯ ಇಕ್ಕಟ್ಟಿಗೆ ಸಿಲುಕಿದ ವಿದ್ಯಾವಂತರ ಪ್ರತಿಕ್ರಿಯೆಯಲ್ಲೂ ಅದೇ ಇಕ್ಕಟ್ಟನ್ನು ಸುಲಭವಾಗಿ ಗುರುತಿಸಬಹುದು. ಚಂದ್ರನ ನೆರಳು ಭೂಮಿಯ ಮೇಲೆ ಬಿದ್ದುದು ಸೂರ್ಯಗ್ರಹಣವೆಂದು ಒಪ್ಪಿಕೊಂಡ ಅವರ ವೈಜ್ಞಾನಿಕ ಬುದ್ಧಿ, ನಮ್ಮಿಂದ ಸೂರ್ಯ ಯಾವುದೋ ಕಾರಣಕ್ಕೆ ಮರೆಯಾದಾಕ್ಷಣ ಸ್ನಾನ ಮಾಡುವಂತಹ ಸನ್ನಿವೇಶ ವಾಸ್ತವವಾಗಿ ಒದಗಲಿಲ್ಲವೆಂಬುದನ್ನು ಗುರುತಿಸಲಿಲ್ಲ. ಗ್ರಹಣಾನಂತರ ಸ್ನಾನ ಮಾಡಿದುದನ್ನು ನಾನು ಟೀಕಿಸಲು ಬಯಸುವುದಿಲ್ಲ. ಮನುಷ್ಯ ಒಂದು ಸ್ತರದಲ್ಲಿ ವೈಚಾರಿಕನಾದರೂ ಇನ್ನೊಂದು ಸ್ತರದಲ್ಲಿ ಪಾರಂಪರಿಕನೂ ಆಗಿರುತ್ತಾನೆ. ಮತ್ತು ಅವನು ಅಷ್ಟು ಸುಲಭವಾಗಿ ಹಿಂದಿನದಕ್ಕೆ ಗೌರವ ತೋರಿಸುವ ಅವಕಾಶಗಳನ್ನು ಕೈ ಬಿಡುವುದಿಲ್ಲ. ಏನೇ ಹೇಳಲಿ, ಭಾರತೀಯ ವಿದ್ಯಾವಂತರ ಮನಸ್ಸಿನ ಆಳದ ಸ್ತರದಲ್ಲಿ ಪರಂಪರೆಯ ಪ್ರಜ್ಞೆ ಪ್ರಬಲವಾಗಿದೆ; ಆಧುನಿಕ ಜ್ಞಾನ ಮೇಲ್ಪದರದಲ್ಲಿ ಮಾತ್ರ ತನ್ನ ಪರಿಣಾಮವನ್ನು ಬೀರಿದೆ.

### ಯಾರಲ್ಲಿ ಹೆಚ್ಚು ಮೂಢನಂಬಿಕೆಗಳು?

ಗ್ರಹಣವಾಗುತ್ತದೆ; ಅವಿದ್ಯಾವಂತ ಜನ ಉಪವಾಸವಿದ್ದು, ಬಳಿಕ ಸ್ನಾನ ಮಾಡಿ ದೇವರಿಗೆ ದೀಪ ಹಚ್ಚಿ ಪೂಜೆ ಸಲ್ಲಿಸಿದರೆ ಅಲ್ಲಿಗೆ ಆ ಘಟನೆಗೆ ಒಂದು ಮುಕ್ತಾಯ. ಗ್ರಹಣ ಅವರಲ್ಲಿ ಹಿಂದೆ ಅಂತಹ ಭಯವನ್ನು ಮೂಡಿಸಿದಂತೆ ಕಾಣುವುದಿಲ್ಲ. (ಈ ಮಾತು ತೀರ ಪ್ರಾಕ್ತನ ಕಾಲದವರಿಗೆ ಅನ್ವಯಿಸುವುದಿಲ್ಲ). ಅವಿದ್ಯಾವಂತರಿಗೆ ವಿಜ್ಞಾನ ಗೊತ್ತಿಲ್ಲ; ವಿಚಾರ ಮಾಡುವ ಶಕ್ತಿ ಇಲ್ಲ; ಆ ಕಾರಣ ಅವರಲ್ಲಿ ಮೂಢನಂಬಿಕೆಗಳು ಹೆಚ್ಚು ಎಂದೂ, ವಿದ್ಯಾವಂತರಲ್ಲಿ ಅವು ಕಡಮೆ ಎಂದೂ ಸಾಮಾನ್ಯ ತಿಳಿವಳಿಕೆ. ಆದರೆ, ಪ್ರಸ್ತುತ ಸಮೀಕ್ಷೆ ಅದನ್ನು ಅಲ್ಲಗಳೆದಿದೆ. ಗ್ರಹಣಾನಂತರ ವಿಶ್ವದ ಮೇಲೆ ಏನು ಪರಿಣಾಮಗಳಾಗುತ್ತವೆ ಎನ್ನುವ ಬಗ್ಗೆ

ವಿದ್ಯಾವಂತರಲ್ಲಿ ಅತಿ ವಿಚಿತ್ರ ಭಯ ಕಲ್ಪನೆಗಳಿರುವುದು ಗಮನಿಸಬೇಕಾದ ಸಂಗತಿ. ನಾನು ಭೇಟಿ ಮಾಡಿದ ನೂರಕ್ಕೆ ಮೇಲ್ಪಟ್ಟು ಅವಿದ್ಯಾವಂತರಲ್ಲಿ ಯಾರೂ ವಿಶ್ವದ, ದೇಶದ ಅಥವಾ ಜನರ ಭವಿಷ್ಯದ ಮೇಲೆ ಕೆಟ್ಟ ಪರಿಣಾಮವಾಗುವ ಸುದ್ದಿಯನ್ನು ಸ್ಪಷ್ಟವಾಗಿ ಹೇಳಿಲ್ಲ. ಕೆಲವರು ನಾನು ಪ್ರಶ್ನೆ ಕೇಳಿದ್ದರಿಂದಲೋ ಏನೋ, 'ಆಗಬಹುದು' ಎಂಬ ಸಂದೇಹದ ಉತ್ತರ ಕೊಟ್ಟಿದ್ದಾರೆ. ಆದರೆ ವಿದ್ಯಾವಂತರಲ್ಲಿ ಭವಿಷ್ಯದ ಬಗ್ಗೆ ಬಗೆ ಬಗೆಯ ಭಯಗಳಿದ್ದುದು ಗೋಚರವಾಗಿದೆ. ಮತ್ತು ಅವರಲ್ಲಿ ಅವಿದ್ಯಾವಂತರಿಗಿಂತ ಹೆಚ್ಚಿನ (ಮೂಢ) ನಂಬಿಕೆಗಳಿರುವುದು ಸ್ಪಷ್ಟವಾಗಿದೆ. ಪ್ರಪಂಚದ ಬಗ್ಗೆ ವಿದ್ಯಾವಂತರಿಗೆ ಇರುವ ಅರಿವು, ಅವರು ಎದುರಿಸುತ್ತಿರುವ ಅನಿಶ್ಚಿತತೆಯ ಬದುಕು, ವಿಶ್ವದ ಇಂದಿನ ಭಯಾನಕ ಪರಿಸ್ಥಿತಿ ಇವೆಲ್ಲ ಅವರಲ್ಲಿ ಭೀತಿ ಹುಟ್ಟಿಸಲು ಕಾರಣಗಳು.

### ಸಮೂಹ ಮಾಧ್ಯಮಗಳ ಪ್ರಭಾವ: ಜನರ ಪ್ರತಿಕ್ರಿಯೆಗಳನ್ನು ನಿರ್ಣಯಿಸುವಲ್ಲಿ

ಫೆಬ್ರವರಿ ೧೬ರ ಗ್ರಹಣಕ್ಕೆ ಬಗೆ ಬಗೆಯ ಜನರ ಪ್ರತಿಕ್ರಿಯೆಗಳನ್ನು ರೂಪಿಸುವುದರಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಸಾಕಷ್ಟು ಹಿರಿದಾದುದು. ಮುಖ್ಯವಾಗಿ ವೃತ್ತಪತ್ರಿಕೆ, ರೇಡಿಯೋಗಳಲ್ಲಿ ಪ್ರಚಾರವಾದ ಗ್ರಹಣದ ಸುದ್ದಿಯ ವಿವರಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರವಾಗಿಯೇ ಕೊಟ್ಟಿದೆ. ಇಲ್ಲಿ ಅದನ್ನು ಕುರಿತಾದ ಚರ್ಚೆಯನ್ನು ಸಂಕ್ಷಿಪ್ತವಾಗಿ ಮಾಡಿದ್ದೇನೆ.

ಕರ್ನಾಟಕದಲ್ಲಿ ೧೯೭೦ರಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ[೧] ವೃತ್ತಪತ್ರಿಕೆಗಳ ಹನ್ನೆರಡು ಪ್ರತಿಗಳು ಮಾತ್ರ ಇದ್ದುವು. ಇದು ನಗರ, ಹಳ್ಳಿಗಳ ಜನ ಸಂಖ್ಯೆಯನ್ನು ಒಳಗೊಂಡಿದೆ. ಒಟ್ಟು ಪತ್ರಿಕೆಗಳಲ್ಲಿ ಶೇಕಡ ೯೫ರಷ್ಟು ನಗರಗಳಿಗೂ ಉಳಿದ ೫ರಷ್ಟು ಹಳ್ಳಿಗಳಿಗೂ ತಲಪುತ್ತಿದ್ದುವು. ೧೯೬೨ರಲ್ಲಿ ಕರ್ನಾಟಕದಲ್ಲಿ ರೇಡಿಯೋ ಸೆಟ್ಟುಗಳು ಒಂದೂ ಮುಕ್ಕಾಲು ಲಕ್ಷ ಇದ್ದುದು ೧೯೭೩ರಲ್ಲಿ ಆ ಸಂಖ್ಯೆ ಹದಿನಾಲ್ಕು ಲಕ್ಷವನ್ನು ಮೀರಿತು. ೧೯೮೦ ರಲ್ಲಿ ಈ ಸಂಖ್ಯೆ ಇನ್ನೂ ಹೆಚ್ಚಿದೆ ಎಂಬಲ್ಲಿ ಅನುಮಾನವಿಲ್ಲ. ಈಗಂತೂ ಹಳ್ಳಿ ಹಳ್ಳಿಗಳಲ್ಲಿ ರೇಡಿಯೋ ಸೆಟ್ಟುಗಳಿವೆ. ಮತ್ತು ಅನಕ್ಷರಸ್ಥರೇ ಹೆಚ್ಚಾಗಿರುವ ಹಳ್ಳಿಗರ ಮೇಲೆ ಪತ್ರಿಕೆಗಳಿಗಿಂತ ರೇಡಿಯೋ ಪ್ರಭಾವ ಹೆಚ್ಚು ಎಂಬುದು ಸ್ಪಷ್ಟವಾಗಿದೆ. ಜೊತೆಗೆ, ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಶೇಕಡ ೪೨ರಷ್ಟು ಸಂಗೀತ ಕಾರ್ಯಕ್ರಮವಿದ್ದರೆ, ಮತ್ತೆ ಶೇಕಡ ೨೨ ರಷ್ಟು ಸುದ್ದಿ ಸಮಾಚಾರಗಳಿಗೆ ಮೀಸಲು. ಉಳಿದದ್ದು ಬೇರೆ ಕಾರ್ಯಕ್ರಮಗಳಿಗೆ.

ಗ್ರಹಣಕ್ಕೆ ಮುನ್ನಿನ ದಿನಗಳಲ್ಲಿ ಸಂಗೀತವನ್ನು ಹೊರತುಪಡಿಸಿ ಎಲ್ಲ ಬಗೆಯ ಕಾರ್ಯಕ್ರಮಗಳ ಜೊತೆ ಗ್ರಹಣದ ಸುದ್ದಿ ಪ್ರಸಾರವನ್ನು ಗಂಟೆಗೊಮ್ಮೆ ಸೇರಿಸಿದರು. ಜನರನ್ನು ಎಚ್ಚರಿಸಿದರು ಎಂಬ ಸಂಗತಿಯನ್ನು ನೆನೆದರೆ ಜನರಿಗೆ–ನಾಗರಿಕರಿಗೆ ಮತ್ತು ಹಳ್ಳಿಗರಿಗೆ–ಫೆಬ್ರವರಿ ೧೬ಕ್ಕಿಂತ ಮುಂಚೆ ಒಂದು ವಾರ ಸತತವಾಗಿ ಗ್ರಹಣದ ಸುದ್ದಿಯೇ ರೇಡಿಯೋದಲ್ಲಿ ಕೇಳಿ ಬಂತು. ಹಳ್ಳಿಗಳಲ್ಲಿ ರೇಡಿಯೋ ಹಾಕುವುದು ಏನನ್ನಾದರೂ ಕೇಳುತ್ತಲೇ ಇರಬೇಕು ಎಂಬ ಚಾಪಲ್ಯದಿಂದಲೇ ಹೊರತು ನಿರ್ದಿಷ್ಟ ಕಾರ್ಯಕ್ರಮಗಳನ್ನು ಕೇಳಲು ಅಲ್ಲ. ಇದರಿಂದಾಗಿ, ಪಟ್ಟಣದ ಒಂದು ರೇಡಿಯೋಕ್ಕಿಂತ ಹಳ್ಳಿಯ ಒಂದು ರೇಡಿಯೋ ದಿನದಲ್ಲಿ ಹೆಚ್ಚು ಕಾಲ ಉಪಯೋಗದಲ್ಲಿರುತ್ತದೆ.

ಹಳ್ಳಿಯ ಜನರಿಗೆ ಗಹಣದ ವಿಷಯ ತಿಳಿದದ್ದು ಮೂರು ಮಾಧ್ಯಮಗಳ ಮೂಲಕ: ರೇಡಿಯೋ, ಪತ್ರಿಕೆ ಮತ್ತು ಜನ. 'ಜನ' ಎಂದರೆ ರೇಡಿಯೋ, ಪತ್ರಿಕೆಗಳ ಮೂಲಕ ಸುದ್ದಿ ತಿಳಿದ ವಿದ್ಯಾವಂತ ಜನ ಅಥವಾ ಅವಿದ್ಯಾವಂತರಾದರೂ ಹಳ್ಳಿಯ "ಅಭಿಪ್ರಾಯ ಮುಖಂಡರು". (Opinion leaders) "ಸಾಧಾರಣವಾಗಿ ಮುದ್ರಿತ ಪುಟಕ್ಕಿಂತ ಆಡುವ ಮಾತು, ಪತ್ರಿಕೆಗಿಂತ ರೇಡಿಯೋ, ರೇಡಿಯೋಗಿಂತ ಮುಖಾಮುಖಿ ಸಂಪರ್ಕ ಹೆಚ್ಚು ಪ್ರಭಾವಶಾಲಿ ಎಂದು ಹೇಳಬಹುದು".[೨] ಗ್ರಹಣದ ವಿಷಯ 'ಪೇಪರಿ'ನಲ್ಲಿ ಬಂತೆಂದು ಹಳ್ಳಿಯವರು ಹೇಳಿದರೂ ಎಷ್ಟೋ ಸಾರಿ ಅದು 'ಅಭಿಪ್ರಾಯ ಮುಖಂಡರು' ವೃತ್ತಪತ್ರಿಕೆಯಲ್ಲಿ ಬಂದ ಸುದ್ದಿಯನ್ನು ಅವರಿಗೆ ತಿಳಿಸಿದ್ದೇ ಆಗಿತ್ತು. ತಮ್ಮ ಹಳ್ಳಿಯ ಜನ ಹೇಳಿದ್ದರಿಂದ ಗ್ರಹಣ ನೋಡಲಿಲ್ಲವೆಂದು ಹೇಳಿದವರೇ ಬಹಳ. "ಅಭಿಪ್ರಾಯ ಮುಖಂಡರ" "ಆಪ್ತರ" ಮಾತುಗಳಿಂದ ಕೇಳಿದ ಗ್ರಹಣದ ವಿಷಯ ಸಾಮಾನ್ಯ ಜನಕ್ಕೆ ಕಣ್ಣಿಗೆ ಬಗ್ಗೆ ಭೀತಿ ಹುಟ್ಟಿಸಿತ್ತೇ ಹೊರತು ಗ್ರಹಣದ ಬಗ್ಗೆ ಅವರು ನಂಬಿದ್ದ ಪುರಾಣವನ್ನಾಗಲಿ ವಿಧಿ ನಿಷೇಧಗಳನ್ನಾಗಲಿ ಅದು ಸ್ವಲ್ಪವೂ ಮಾರ್ಪಡಿಸಲಿಲ್ಲವೆಂಬುದು ಮುಖ್ಯ ಸಂಗತಿ. ಕಣ್ಣು ದೇಹದ ಮುಖ್ಯ ಅಂಗವಾದ್ದರಿಂದ. "ಗ್ರಹಣ ನೋಡಬೇಡಿ", "ನೋಡಬೇಕಾದರೆ ಹೀಗೆ ನೋಡಿ" ಎಂಬ ಬುದ್ಧಿವಾದಗಳಲ್ಲಿ ಮೊದಲನೆಯದೇ ಹಳ್ಳಿಗರ ಅಥವಾ ಸಾಮಾನ್ಯರ (ಅಥವಾ ಬಹುತೇಕ ಎಲ್ಲರ) ಮನಸ್ಸಿನಲ್ಲಿ ಉಳಿದು ಬಿಟ್ಟಿತು. ಗ್ರಹಣವನ್ನು ನೋಡಬಾರದು ಎಂಬ ಬುದ್ಧಿ ಮೂಡುವಷ್ಟರಮಟ್ಟಿಗೆ ಸಮೂಹ ಮಾಧ್ಯಮ ಹಳ್ಳಿಗರ ಮೇಲೆ ಪರಿಣಾಮವನ್ನುಂಟು ಮಾಡಿತು. ಆದರೆ ಅವರ ನಂಬಿಕೆವ್ಯವಸ್ಥೆಯನ್ನು ಅದು ಸ್ವಲ್ಪವೂ ಅಲುಗಿಸಲಿಲ್ಲ. ಬಹುಶಃ ಅದನ್ನು ಹೀಗೆ ವಿವರಿಸಬಹುದು.

ಪಟ್ಟಣದ ಜನರ ಮೇಲೆ ಪ್ರಭಾವ ಬೀರಿದ್ದು ಮುಖ್ಯವಾಗಿ ಪತ್ರಿಕೆಗಳು (ಮತ್ತು ಎರಡನೆಯದಾಗಿ ರೇಡಿಯೋ). ಅವರು ರಾಹು ಕತೆಯನ್ನು ಕೈ ಬಿಡಲು ಸಮೂಹ ಮಾಧ್ಯಮಗಳು ಕಾರಣ ಅಲ್ಲ, ಏಕೆಂದರೆ ಅವರ ಬಾಲ್ಯ ವಿದ್ಯಾಭ್ಯಾಸದಲ್ಲೇ ಗ್ರಹಣವೇನೆಂಬುದು ತಿಳಿದಿತ್ತು. ಪಟ್ಟಣ ಜನರಲ್ಲೂ, ಹಳ್ಳಿಯ ಜನರಲ್ಲಿನಂತೆಯೇ, ಕಣ್ಣಿನ ಭೀತಿ ಉಂಟಾಗಿ, ಒಂದು ರೀತಿಯಲ್ಲಿ ಸಮೂಹ ಮಾಧ್ಯಮಗಳು ಅವಿದ್ಯಾವಂತ ವಿದ್ಯಾವಂತರೆನ್ನದೆ ಹಳ್ಳಿಗ ಪಟ್ಟಣಿಗರೆನ್ನದೆ ಒಂದೇ ರೀತಿಯ ಪರಿಣಾಮ ಉಂಟುಮಾಡಿದವು. ಗ್ರಹಣವನ್ನು ನೋಡಬೇಕು, ಮತ್ತು ಹೇಗೆ ನೋಡಬೇಕು ಎಂಬುದನ್ನು ಒತ್ತಿ ಹೇಳಿದ್ದರೆ ಭೀತಿ ಕಡಿಮೆಯಾಗಿ ಹೆಚ್ಚು ಜನ ಗ್ರಹಣವನ್ನು ನೋಡುತ್ತಿದ್ದರೆಂದು ತೋರುತ್ತದೆ. ಕೇಂದ್ರ ಸರ್ಕಾರದ ವಶದಲ್ಲಿರುವ ರೇಡಿಯೋದಲ್ಲಿ ಕೇಂದ್ರ ಸರ್ಕಾರದ 'ಗ್ರಹಣವನ್ನು ನೋಡಲೇಬೇಡಿ' ಎಂಬ ಆದೇಶವು ಮೇಲಿಂದ ಮೇಲೆ ಪ್ರಸಾರವಾಗುತ್ತಿರುವಾಗ, ವೃತ್ತಪತ್ರಿಕೆಗಳೂ ಕೂಡ ಅದನ್ನೇ ಅನುಸರಿಸಿ ಅಂತಹುದೇ ಸಂದೇಶವನ್ನು ಸಾರುತ್ತಿರುವಾಗ ಒಟ್ಟು ಜನಸಮೂಹ ಭಯಪಡದೆ ಬೇರೆ ಮಾರ್ಗವಿರಲಿಲ್ಲ. ರೇಡಿಯೋ ಪತ್ರಿಕೆಗಳೆಲ್ಲ ಜನರಲ್ಲಿ ಭೀತಿಯನ್ನು ಹುಟ್ಟಿಸಲು ಉದ್ದೇಶಪೂರ್ವಕವಾಗಿ ಪ್ರಯತ್ನಿಸಿದುವೆಂದು ಹೇಳಿದರೆ ಅನ್ಯಾಯವಾದೀತು. ಗ್ರಹಣವೆಂದರೆ ನಿಜವಾಗಿ ಏನು, ಗ್ರಹಣಗಳ ಬಗ್ಗೆ ಮೂಢನಂಬಿಕೆಗಳು, ಹಿಂದೆ ನಡೆದ ಗ್ರಹಣಗಳು, ಗ್ರಹಣಗಳ ಸಂದರ್ಭದ ವೈಜ್ಞಾನಿಕ ಪ್ರಯೋಗಗಳು, ಸರಿಯಾಗಿ ನೋಡುವ ರೀತಿಗಳನ್ನು ಅವು ಸಾಕಷ್ಟು ಪ್ರಚಾರಮಾಡಿದುವೆಂದೇ ಹೇಳಬೇಕು. "ಹೆಚ್ಚಿನ ಜನ ನಮ್ಮ ಕಣ್ಣೆದುರಿಗೇ ನಡೆಯುವ ಘಟನೆಗಳನ್ನು ನಂಬುವುದು ಅದು ಪತ್ರಿಕೆಯಲ್ಲಿ ರೇಡಿಯೋದಲ್ಲಿ ವರದಿಯಾದ ನಂತರವೇ"[1]. ಗ್ರಹಣದ ಬಗ್ಗೆ ಹೆಚ್ಚಾಗಿ ಅರಿವು ಕುತೂಹಲಗಳನ್ನೂ, ಸ್ವಲ್ಪಮಟ್ಟಿಗೆ ಪರಿಶೀಲನಾಶಕ್ತಿ ಪ್ರಯೋಗಶೀಲತೆಗಳನ್ನೂ ಕುದುರಿಸುವಲ್ಲಿ ಸಮೂಹ ಮಾಧ್ಯಮಗಳು ಯಶಸ್ವಿಯಾದುವೆಂಬಲ್ಲಿ ಅನುಮಾನವಿಲ್ಲ. ಸಾಂಪ್ರದಾಯಕ ನಂಬಿಕೆ ಮತ್ತು ಆಧುನಿಕ ಜ್ಞಾನಗಳ ವಿಚಿತ್ರ ಮಿಶ್ರಣದ ಪರಿಸ್ಥಿತಿಯಲ್ಲಿ ಸಿಲುಕಿಕೊಂಡ ಸಾಮಾನ್ಯ ವಿದ್ಯಾವಂತನ ನಡವಳಿಕೆ ಒಟ್ಟಾರೆ ನಗು ಬರಿಸುವಂತಿತ್ತು. ವಿದ್ಯಾವಂತರಲ್ಲಿ ಹಲವರು ಗ್ರಹಣವನ್ನು ನೋಡಿದರು, ಪ್ರಕೃತಿಯನ್ನು ಪರಿಶೀಲಿಸಿದರು, ಸಣ್ಣ ಪುಟ್ಟ ಪ್ರಯೋಗಗಳನ್ನು ನಡೆಸಿದರು. ಆದರೆ ಬಹುಜನ ಗ್ರಹಣವೆಂದರೇನೆಂದು ತಿಳಿದೂ ತಿಳಿದೂ ಬಾಗಿಲು ಹಾಕಿಕೊಂಡು ಕತ್ತಲಲ್ಲಿ ಕುಳಿತದ್ದು ಮಾತ್ರ ಅತ್ಯಂತ ವಿಲಕ್ಷಣ. ಸಮೂಹ ಮಾಧ್ಯಮಗಳು ನಮ್ಮ ನಂಬಿಕೆವ್ಯವಸ್ಥೆಯನ್ನು ಹೆಚ್ಚು ಸೆಕ್ಯುಲರ್ ಮಾಡುವುದಕ್ಕಿಂತ ಹೆಚ್ಚು ಡೆಮೊಕ್ರಾಟಿಕ್

ಮಾಡುತ್ತವೆಯೆಂಬ ಸಮಾಜಶಾಸ್ತ್ರಜ್ಞರ ಮಾತು ಒಂದು ಅರ್ಥದಲ್ಲಿ ನಿಜವಿರಬಹುದು. ಗ್ರಹಣದ ಬಗೆಗಿನ ಸಾಮಾನ್ಯರ ನಂಬಿಕೆಗಳು ವಿದ್ಯಾವಂತರಲ್ಲಿ ನಿರಾಕರಣೆಯಾಗಿ (avoidance) ಭವಿಷ್ಯದ ಬಗೆಗಿನ ಕಲ್ಪಿತ ಭಯಗಳಾಗಿ ಮಾರ್ಪಾಟು ಹೊಂದಿದುವೆಂದು ಹೇಳಬೇಕಾಗುತ್ತದೆ.

ಪತ್ರಿಕೆಗಳು ವಿಜ್ಞಾನಿಗಳ ಹೇಳಿಕೆಗಳನ್ನಷ್ಟೇ ಅಲ್ಲದೆ ಜ್ಯೋತಿಷ್ಯಜ್ಞರ ಭವಿಷ್ಯವಾಣಿಗಳಿಗೂ ತಮ್ಮ ಸುದ್ದಿಯಲ್ಲಿ ಮಹತ್ವವನ್ನು ಕಾಣಿಸಿದವು. ನಿತ್ಯ ಭವಿಷ್ಯವನ್ನೂ ಅವು ಹಾಕಿದವು. ಎಂದರೆ ಜನರ ಸಾಂಪ್ರದಾಯಕ ನಂಬಿಕೆಗಳನ್ನು ಬೆಳೆಸುವ ಅಂಶಗಳಿಗೂ ಪತ್ರಿಕೆಗಳು ಪೋಷಣೆಯನ್ನು ಕೊಟ್ಟವು. ಸುದ್ದಿಯ ಸ್ವಾರಸ್ಯಕ್ಕೆ ಇವನ್ನು ಕೊಡಲಾಯಿತು ಎಂದು ಪತ್ರಿಕೆಗಳು ಸಮರ್ಥಿಸಿಕೊಂಡರೂ ಅಂತಹ ಸುದ್ದಿಗಳಿಂದಾಗುವ ಪರಿಣಾಮಗಳು ನಡೆದೇ ನಡೆಯುತ್ತವೆ.

ನಿಜವಾಗಿಯೂ ಭೌತವಿಜ್ಞಾನವನ್ನು ಓದಿ ಪರಿಣತರಾದ ಬಹಳ ಮಿತ ಸಂಖ್ಯೆಯ ಜನ ಹಠದಿಂದಲೆಂಬಂತೆ, ಇತರ ಜನಸಮೂಹದ ಸಂಪ್ರದಾಯ ನಿಷ್ಠೆಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸಲೆಂಬಂತೆ ಗ್ರಹಣದ ಸಂದರ್ಭದಲ್ಲಿ ಬೇಕೆಂದೇ ಆಹಾರ ಪಾನೀಯಗಳನ್ನು ಸ್ವೀಕರಿಸಿದರು; ಗ್ರಹಣಾನಂತರ ಸ್ನಾನವನ್ನೂ ಮಾಡಲಿಲ್ಲ, ದೇವರ ಪೂಜೆಯನ್ನೂ ಮಾಡಲಿಲ್ಲ.

ಸಮೂಹ ಮಾಧ್ಯಮಗಳು ಯಾವುದಕ್ಕೆ ಒತ್ತು ಕೊಟ್ಟು ಸುದ್ದಿಯನ್ನು ಪ್ರಸಾರ ಮಾಡಬೇಕು ಎಂಬುದನ್ನು ಯೋಚಿಸಿದ್ದಿದ್ದರೆ ಮತ್ತು ಸಾಮಾನ್ಯ ವಿದ್ಯಾವಂತರು ಸ್ವತಂತ್ರವಾಗಿ ಯೋಚಿಸಿದ್ದಿದ್ದರೆ ಗ್ರಹಣದ ಸಂದರ್ಭದ ಕರ್ನಾಟಕದ (ಭಾರತದ) ಚಿತ್ರವೇ ಬೇರೆಯಾಗುತ್ತಿತ್ತು. ಸಮೂಹ ಮಾಧ್ಯಮಗಳ ಅಜಾಗರೂಕತೆ, ಭಾರತೀಯ ವಿದ್ಯಾವಂತನ ವಿಲಕ್ಷಣ ಮನಸ್ಥಿತಿಗಳೆರಡೂ ಸೇರಿ ಗ್ರಹಣ ಸಂದರ್ಭವನ್ನು ಒಂದು ಕರ್ಫ್ಯೂ ಕಾಲವನ್ನಾಗಿ ಪರಿವರ್ತಿಸಿದವು. ಡಾ. ಜೆ.ಸಿ. ಭಟ್ಟಾಚಾರ್ಯ ಹೇಳುತ್ತಾರೆ–"ಕತ್ತಲ ಕೋಣೆಗಳಲ್ಲಿ ಅವಿತುಕೊಂಡು ಬಹುಪಾಲು ಜನರು ಪ್ರಕೃತಿಯ ಅಪರೂಪ ಸೌಂದರ್ಯದ ಒಂದು ಘಟನೆಯನ್ನು ವೀಕ್ಷಿಸುವ ಅವಕಾಶವನ್ನು ಕಳೆದುಕೊಂಡರು. ಇಂಥ ವಿಚಿತ್ರ ವರ್ತನೆಯ ಹಿಂದಿರುವ ಕಾರಣಗಳು ಅರ್ಥವಾಗುವುದಿಲ್ಲ. ಇತಿಹಾಸಪೂರ್ವದ ಮನುಷ್ಯನನ್ನು ಕಾಡುತ್ತಿದ್ದ ಅಜ್ಞಾತ ಭೀತಿ ಇಂದು ಕೂಡ ಅಂಥ ವಿಚಿತ್ರ ಮನುಷ್ಯ ವರ್ತನೆಗೆ ಕಾರಣವಿರಬಹುದು ಎಂದು ನನಗನ್ನಿಸುತ್ತದೆ. ಈ ಸಲದ ಒಂದೇ ಒಂದು ವ್ಯತ್ಯಾಸವೆಂದರೆ, ಏನಾಗುತ್ತದೆ ಎಂಬುದರ ಬಗ್ಗೆ ಪೂರ್ವ ಕಲ್ಪಿತ ಆಲೋಚನೆಯ ಲಾಭ ನಮಗಿತ್ತು ಎಂಬುದು. ಕಾಗಮ್ಮ ಗೂಗಮ್ಮ ಕಥೆಗಳು ಮತ್ತು ನಮ್ಮ

ಆಧುನಿಕ ಸಮೂಹ ಮಾಧ್ಯಮಗಳು ಪೂರ್ಣಗ್ರಹಣದ ಕಾಲದಲ್ಲಿ ವಿಚಿತ್ರ ಸಂಗತಿಗಳಾಗುವ ಬಗ್ಗೆ ಬಣ್ಣ ಕಟ್ಟಿ ಊಹಾಪೋಹಗಳನ್ನು ಸೃಷ್ಟಿಮಾಡಿದ್ದುವು."[೪] ಭಾರತದ ಮಾನ್ಯ ಖಗೋಳ ವಿಜ್ಞಾನಿಗಳೊಬ್ಬರ ಈ ಮಾತುಗಳಲ್ಲಿ ಬಹುಮಟ್ಟಿನ ಸತ್ಯವಿದೆಯಾದರೂ, ಒಂದು ಸಂಗತಿಯನ್ನು ಅವರು ಗಮನಿಸಿದಂತೆ ತೋರುವುದಿಲ್ಲ. ಭೀತಿ ಕಾಡಿದ್ದು ಮುಖ್ಯವಾಗಿ ವಿದ್ಯಾವಂತರನ್ನು. ಅವಿದ್ಯಾವಂತರು 'ನಿಮಗೆ ಗ್ರಹಣದಿಂದ ಭಯವೇ' ಎಂಬುದಕ್ಕೆ, 'ದೇವರಿರುವಾಗ ಏಕೆ ಭಯ' ಎಂದುದೂ ಉಂಟು. ಮತ್ತು ಹಿಂದೆ ಅನೇಕ ಖಂಡಗ್ರಹಣಗಳನ್ನು ಕಂಡಿದ್ದ ಅವರಿಗೆ ಅಂದು ಇರದಿದ್ದ ಹೊಸ ಭಯ ಇಂದು ಕಾಡಬೇಕಾಗಿರಲಿಲ್ಲ. ಕಳವಳ ಮುಖ್ಯವಾಗಿ ವಿದ್ಯಾವಂತರಿಂದಲೂ ಸಮೂಹ ಮಾಧ್ಯಮಗಳಿಂದಲೂ ದತ್ತವಾಗಿ ಅವರಿಗೆ ಬಂತೆಂದು ಹೇಳಲು ಅವಕಾಶವಿದೆ. ಆದರೆ, ಅಪೂರ್ವ ಅವಕಾಶವೊಂದನ್ನು ಜನ ಕಳೆದುಕೊಂಡರು ಎಂಬ ಡಾ॥ ಭಟ್ಟಾಚಾರ್ಯರ ನೋವನ್ನು ನಾವು ಗುರುತಿಸದಿರಲು ಸಾಧ್ಯವೇ ಇಲ್ಲ.

## ಕೊನೆಯ ಮಾತುಗಳು

ಗ್ರಹಣದ ಬಗ್ಗೆ ಅವಿದ್ಯಾವಂತರು, ವಿದ್ಯಾವಂತರು (ಅಕ್ಷರಸ್ಥರು) ಮತ್ತು ಬುದ್ಧಿಜೀವಿಗಳು (ವಿಜ್ಞಾನಿಗಳೂ ಸೇರಿದಂತೆ) ಪ್ರತಿಕ್ರಿಯಿಸಿರುವ ರೀತಿಗಳಲ್ಲಿ ಒಂದು ಕ್ರಮವಿರುವುದನ್ನು ಗಮನಿಸಿದರೆ ಇಂದಿಗೂ ಭಾರತದಲ್ಲಿ ಆ ಮೂರು ವರ್ಗಗಳಿಗೂ ಇರುವ ಕಂದಕಗಳು ನಾಶವಾಗಿಲ್ಲವೆಂಬುದು ತಿಳಿದುಬರುತ್ತದೆ. ಆ ಮೂರು ವರ್ಗಗಳು ಭಿನ್ನವಲಯಗಳಲ್ಲಿ ಬದುಕುತ್ತಿವೆ. ಹೀಗೆಂದಾಕ್ಷಣ ಒಂದು ವರ್ಗಕ್ಕೂ ಇನ್ನೊಂದಕ್ಕೂ ಮಧ್ಯೆ ಭಾವನೆ ಮತ್ತು ವರ್ತನೆಗಳ ಓಡಾಟ ವಿನಿಮಯಗಳಿಲ್ಲವೆಂದು ಹೇಳಲಾಗದು.

ಸಮೂಹ ಮಾಧ್ಯಮಗಳು 'ಸಮೂಹ ಸಂಸ್ಕೃತಿಯ' (Mass Culture) ನಿರ್ಮಾಣಕ್ಕೆ ಕಾರಣವಾಗುತ್ತವೆ ಎಂದು ಹೇಳುವುದುಂಟು. "ಬೇರೆ ವಿಧದಲ್ಲಿ ಯಾವ ಸಾಮಾನ್ಯ ಅಂಶಗಳನ್ನೂ ಹೊಂದಿಲ್ಲದ ಸಮೂಹಸಮಾಜವನ್ನು ಏಕೀಕರಿಸುವ ಒಂದು ಶಕ್ತಿ ಸಮೂಹಸಂಸ್ಕೃತಿ."[೫] ಎಲ್ಲ ವರ್ಗದ ಜನ ಗ್ರಹಣವನ್ನು ನೋಡದಿರಲು ಮಾಡುವಂತೆ ಸಮೂಹ ಮಾಧ್ಯಮಗಳು ಯಶಸ್ವಿಯಾದುವು; ಒಂದು ಘಟನೆಗೆ ಎಲ್ಲ ಜನ ಸಮಾನವಾದ ನಡವಳಿಕೆಯನ್ನು ತೋರಿದರು– ಅಷ್ಟರ ಮಟ್ಟಿಗೆ ಸಮಾನತೆ ಉಂಟು. ಆದರೆ ಗ್ರಹಣದ ಬಗ್ಗೆ ಜನ ಕೇಳಿದ್ದು, ನೋಡಿದ್ದು, ಅನುಭವಿಸಿದ್ದು, ಪಟ್ಟಣದ ವಿದ್ಯಾವಂತರಿಗೂ ಅಲಭ್ಯವಾಗಿರುವ

ವೈಜ್ಞಾನಿಕ ಉಪಕರಣಗಳನ್ನು ಪೂರ್ಣಗ್ರಹಣ ಪಥದ ಸಾವಿರಾರು ಹಳ್ಳಿಯವರು ನೋಡಿದ್ದು, ಇವೆಲ್ಲ ಒಟ್ಟು ಜನತೆಯ ಮೇಲೆ ತಮ್ಮ ಪ್ರಭಾವವನ್ನು ಬೀರದೆ ಇರುವುದಿಲ್ಲ. ಮುಂದಿನ ಪೂರ್ಣ ಗ್ರಹಣದ ಸಂದರ್ಭದಲ್ಲಿ ಒಟ್ಟು ಜನ ಈ ಗ್ರಹಣದಲ್ಲಿ ತೋರಿದ ಪ್ರತಿಕ್ರಿಯೆಗಿಂತ ಸ್ವಲ್ಪ ಬೇರೆಯಾದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ. ಆ ಪ್ರತಿಕ್ರಿಯೆಗಳಲ್ಲಿ ಇಂದಿನಂತೆ ಹೆಚ್ಚು ಏರುಪೇರುಗಳಿರಲಾರದು (ಆ ಹೊತ್ತಿಗೆ ಅಕ್ಷರಸ್ಥರ ಸಂಖ್ಯೆ ಹೆಚ್ಚಿರುತ್ತದೆ). ಆ ಮುಂದಿನ ಗ್ರಹಣದ ಸಮಯದಲ್ಲಿ (ಕ್ರಿ. ಶ. ೧೯೯೫; ೧೯೯೯) ಯಾರಾದರೂ ಸಮೀಕ್ಷೆಯನ್ನು ಕೈಗೊಂಡು ನಡಸಿದಲ್ಲಿ, ಅವರು ಈ ಗ್ರಹಣದ ಜೊತೆ ಅದನ್ನು ತೌಲನ ಮಾಡಲು, ಜನರ ಮನಸ್ಸಿನ ಮೇಲೆ ಉಂಟಾದ ಪರಿಣಾಮಗಳನ್ನು ಪರಸ್ಪರ ಹೋಲಿಸಿ ನೋಡಲು ಸಾಧ್ಯವಾಗುತ್ತದೆ.

ಅಂತಹ ಅಧ್ಯಯನವೊಂದಕ್ಕೆ ಈ ಸಮೀಕ್ಷೆ ಪ್ರಚೋದಕವಾಗಲಿ ಎಂದೂ ಹಾರೈಸುತ್ತೇನೆ.

## ಅಡಿಟಿಪ್ಪಣಿಗಳು

೧. ಈ ವಿಭಾಗವನ್ನು ಬರೆಯುವಲ್ಲಿ, ಕೆಲವು ತಾತ್ವಿಕ ಸಂಗತಿಗಳು ಮತ್ತು ಅಂಕಿ ಅಂಶಗಳಿಗೆ ಬಿ. ಎಸ್. ಚಂದ್ರಶೇಖರ್ ಅವರ "ಸಮೂಹ ಮಾಧ್ಯಮಗಳು (ಭಾರತೀಯ ಸಮಾಜದಲ್ಲಿ)" ಎಂಬ ಕೃತಿಗೆ ಋಣಿಯಾಗಿದ್ದೇನೆ. (ಮೈಸೂರು ವಿಶ್ವವಿದ್ಯಾನಿಲಯ, ೧೯೭೬).

೨. ಅದೇ, ಪುಟ. ೪೬

೩. ಅದೇ, ಪುಟ. ೪೩

೪. ಜನಪ್ರಿಯ ವಿಜ್ಞಾನ, ನವಂಬರ್, ೧೯೮೦. ಪು ೧೫೧. (ಇಂಗ್ಲಿಷ್ ಮೂಲದ ಕನ್ನಡಾನುವಾದ: ಶಂಕರ್). ಜೆ. ಸಿ. ಭಟ್ಟಾಚಾರ್ಯರನ್ನು ನಾನು ಭೇಟಿಮಾಡಿ, ಅವಿದ್ಯಾವಂತರಿಗಿಂತ ವಿದ್ಯಾವಂತರಲ್ಲಿ ಮೂಢ ನಂಬಿಕೆಗಳು ಪ್ರಬಲವಲ್ಲವೇ ಎಂದಾಗ, ಹೌದು, ನೀವು ಹೇಳುವುದು ನಿಜ ಎಂದು ತಕ್ಷಣ ಪ್ರತಿಕ್ರಿಯಿಸಿದರು.

೫. ಬಿ. ಎಸ್. ಚಂದ್ರಶೇಖರ್: ಸಮೂಹ ಮಾಧ್ಯಮಗಳು (ಭಾರತೀಯ ಸಮಾಜದಲ್ಲಿ), ಪು ೭೩.

# ಅನುಬಂಧ ೫[೧]

ಹುಬ್ಬಳ್ಳಿಗೆ ಮೂವತ್ತು ಕಿಲೋಮೀಟರ್ ದೂರದ ಹೊಸೂರಿನ ಬಳಿ ಎರಡು ಗುಡ್ಡಗಳ ಮಧ್ಯದ ಕಣಿವೆಯಲ್ಲಿ ವಿಜ್ಞಾನಿಗಳ ಶಿಬಿರ ಏರ್ಪಾಟಾಗಿತ್ತು. ISRO ಸಂಸ್ಥೆಯವರು ಅಲ್ಲೇ ಬಿಡಾರ ಮಾಡಿದ್ದರು. ಅಲ್ಲಿ ಅರುವತ್ತು ಅಡಿ ಎತ್ತರದ ಗೋಪುರವನ್ನು ನಿರ್ಮಿಸಿ ಅಲ್ಲಿ ಗ್ರಹಣವನ್ನು ಪರಿಶೀಲಿಸಲು ವೈಜ್ಞಾನಿಕ ಸಾಧನ ಸಲಕರಣಗಳನ್ನು ಜೋಡಿಸಲಾಗಿತ್ತು. ಹಲವು ದಿನಗಳ ಮೊದಲೇ ಬಂದಿದ್ದ ವಿಜ್ಞಾನಿಗಳ ಜೊತೆ ಸುತ್ತಮುತ್ತಲ ಹಳ್ಳಿಯ ಜನ ಕುತೂಹಲದಿಂದ ಮಾತನಾಡುತ್ತಿದ್ದರು. ತಮ್ಮ ಪ್ರಯೋಗಗಳಿಗೆ ಅಡ್ಡಿಯಾದೀತೆಂದು ನಿರ್ದಿಷ್ಟ ಜಾಗದಿಂದ ಒಳಕ್ಕೆ ಯಾರನ್ನೂ ಬಿಡುತ್ತಿರಲಿಲ್ಲ. ವಿಜ್ಞಾನಿಗಳು ಹೇಳುತ್ತಿದ್ದುದರಲ್ಲಿ ಕೆಲ ಭಾಗ ಅರ್ಥವಾಗುತ್ತಿತ್ತು; ಅರ್ಥವಾಗದ್ದೇ ಜಾಸ್ತಿ ಇರಬಹುದು. ಇಷ್ಟು ಹೊತ್ತಿಗೆ ಸರಿಯಾಗಿ ಗ್ರಹಣ ಎಂದು ವಿಜ್ಞಾನಿಗಳು ಹೇಳಿದ್ದಕ್ಕೆ ಸರಿಯಾಗಿ ಗ್ರಹಣ ಆರಂಭವಾದುದು ಜನರನ್ನು ಆಶ್ಚರ್ಯಗೊಳಿಸಿದ್ದು ಮಾತ್ರವಲ್ಲದೆ ವಿಜ್ಞಾನಿಗಳ ಪ್ರಯೋಗಗಳ ಬಗ್ಗೆ ನಂಬಿಕೆ ಬರುವಂತಾಯಿತು. ವಿಜ್ಞಾನಿಗಳು ಕರಾರುವಾಕ್ಕಾದ ವೇಳೆ ಹೇಳಿದ್ದು ಒಂದು ಪವಾಡವಾಗಿ ತೋರಿತು. ಗ್ರಹಣದ ಸಮಯದಲ್ಲಿ ಅಲ್ಲಿದ್ದ ಸುಮಾರು ಐನೂರು ಜನ ಹಳ್ಳಿಗರಿಗೆ ಸ್ವಲ್ಪವೂ ಭಯವಿರದಿದ್ದುದು ಗಮನಾರ್ಹ. ವಿಜ್ಞಾನ ಅರ್ಥವಾಗದಿದ್ದರೂ, ವಿಜ್ಞಾನದ ಅರಿವಿಗೆ ಅವರು ಸುಲಭವಾಗಿ ಒಳಗಾಗಬಲ್ಲರೆಂಬುದಕ್ಕೆ ಇದು ಒಳ್ಳೆಯ ಸಾಕ್ಷಿ (ಪಟ್ಟಣಿಗರು ವಿಜ್ಞಾನ ಗೊತ್ತಿದ್ದೂ ಮನೆಯ ಒಳಗೆ ಕೂತಿದ್ದರ ಜೊತೆ ಹೋಲಿಸಬಹುದು.)[೨] ಅಷ್ಟೇ ಅಲ್ಲ, ಮುಂಬಯಿಯಿಂದ ಬಂದವರಿಂದ ಹತ್ತು ಹದಿನೈದು ಪೈಸೆ, ಕೊನೆಗೆ ಒಂದು ರೂಪಾಯಿ ಕೊಟ್ಟು ಎಲ್ಲರೂ ಫಿಲ್ಟರ್ ಕೊಂಡು ಗ್ರಹಣ ನೋಡಿದರು. ಎಷ್ಟೋ ಜನ ದೂರದ ಹಳ್ಳಿಗಳಿಂದ ನಡೆದು

ಬಂದಿದ್ದರು. ಗ್ರಹಣ ಪೂರ್ಣವಾದಾಗ ಎಲ್ಲರೂ ಒಕ್ಕೊರಲಿನಿಂದ ಕೂಗಿದರು. ಗ್ರಹಣ ಪೂರ್ಣವಾಗುವ ಹೊತ್ತಿಗೆ ಯು. ಎನ್. ಐ. ಪ್ರತಿನಿಧಿ ಮತ್ತು ಇನ್ನೊಬ್ಬ ಪತ್ರಿಕಾ ಪ್ರತಿನಿಧಿ ಕಣ್ಣು ಮುಚ್ಚಿ ಕೂತವರು, ಹೆದರಿಕೆಯಿಂದ ಕಣ್ಣೇ ತೆರೆಯಲಿಲ್ಲ. ಆಮೇಲೆ ಕಣ್ಣು ತೆರೆದು ಬೇರೆಯವರನ್ನು ಕೇಳಿ ತಮ್ಮ ವರದಿಗಳನ್ನು ಬರೆದುಕೊಂಡರು. ಗ್ರಹಣ ಮುಗಿದು ಪ್ರಯೋಗಗಳೆಲ್ಲ ನಡೆದ ಮೇಲೆ ಎಲ್ಲರನ್ನೂ ವೀಕ್ಷಣಾಲಯದೊಳಕ್ಕೆ ಬರಮಾಡಿಕೊಂಡು ವಿಜ್ಞಾನಿಗಳು ಹಳ್ಳಿಗರಿಗೆ ಎಲ್ಲವನ್ನೂ ವಿವರಿಸಿದರು. ಗ್ರಹಣಾನಂತರ (ಕೃಷ್ಣಮೂರ್ತಿಯವರು) ಭೇಟಿ ಮಾಡಿದವರಲ್ಲಿ ಒಂದು ಸುಪ್ರಸಿದ್ಧ ಮೆಡಿಕಲ್ ಕಾಲೇಜಿನ ಶರೀರ ವಿಜ್ಞಾನದ ವೈದ್ಯ ಸಂಶೋಧಕರು ಒಬ್ಬರು. ಅವರು "ಎಂಥಾ Fantastic Eclipse. ಇದರ ಪರಿಣಾಮ ಮುಂದೆ ಏನಾದರೂ ಆಗಲೇ ಬೇಕು" ಎಂದು ಉದ್ಗಾರ ತೆಗೆದಿದ್ದು ಗಮನಾರ್ಹವಾಗಿತ್ತು. ಹೀಗಿರುವಾಗ ಸಾಮಾನ್ಯ ವಿದ್ಯಾವಂತ ಜನ ಗ್ರಹಣಗಳ ಮುಂದಿನ ಪರಿಣಾಮಗಳ ಬಗ್ಗೆ ಊಹೆಗಳನ್ನು ಮಾಡುವುದು ಅಸ್ವಾಭಾವಿಕವಾಗಿ ತೋರುವುದಿಲ್ಲ.

## ಅಡಿಟಿಪ್ಪಣಿಗಳು

೧. ಬೆಂಗಳೂರು ಆಕಾಶವಾಣಿಯ ವಿಜ್ಞಾನಾಧಿಕಾರಿ ಶ್ರೀ ಎಚ್. ಆರ್. ಕೃಷ್ಣಮೂರ್ತಿಯವರ ಅನುಭವ ನಿರೂಪಣೆಯ ಮೇಲೆ ಆಧಾರಿತ.

೨. ಬೆಂಗಳೂರು ವಿಶ್ವವಿದ್ಯಾಲಯದ ಕ್ಯಾಂಪಸಿನಲ್ಲಿ ನನ್ನ ಮನೆಯ ಸಮೀಪದ ಒಬ್ಬ ದೊಡ್ಡ ಅಧಿಕಾರಿ ತಮ್ಮ ಮನೆಯ ಕಿಟಕಿ, ಬಾಗಿಲು ಹಾಕಿದ್ದಲ್ಲದೆ ಬಿರುಕುಗಳಿಗೆ ಬಟ್ಟೆ ತುರುಕಿಸಿ ಕತ್ತಲು ಮಾಡಿಸಿದ್ದರಂತೆ! ಕೆಲವೆಡೆ ಮುಚ್ಚಿದ್ದ ಕಿಟಕಿಯ ಗಾಜುಗಳ ಹಿಂದೆ ಬಟ್ಟೆಗಳ ತೆರೆ ಹಾಕಿದ್ದರಂತೆ. ಮೇಲೆ ಬೆಳಕು ಬರಲು ಹಾಕಿದ್ದ ಗಾಜಿನ ಹೆಂಚನ್ನು ಮುಚ್ಚಿದವರು ಎಷ್ಟೋ! ನಾನು ಅಂತಹ ಕೆಲಸವನ್ನು ಮಾಡಲಿಲ್ಲ. ಸಹಜವಾಗಿ ಹೊರಗೆ ಬಂದು ಸೂರ್ಯನನ್ನು ಬಿಟ್ಟು ಆಕಾಶವನ್ನು ಸುತ್ತ ಮುತ್ತಣ ಪರಿಸರವನ್ನು ಆಗಾಗ್ಗೆ ನೋಡುತ್ತಿದ್ದೆ.

# ಅನುಬಂಧ ೬

## ಪ್ರಾಚೀನ ಭಾರತದಲ್ಲಿ ಸೂರ್ಯ ಮತ್ತು ಸೂರ್ಯಾರಾಧನೆ[1]

ಸೂರ್ಯ ಅನಾದಿಕಾಲದಿಂದ ಮಾನವನ ಕುತೂಹಲದ ವಸ್ತು, ಶ್ರದ್ಧೆ ಭಕ್ತಿಗಳ ಗುರಿ. ಅನಾಗರಿಕ ಮನುಷ್ಯ ಕತ್ತಲೆಗೆ ಹೆದರಿದ್ದ; ಕತ್ತಲೆ ಎಂದರೆ ಭಯ, ಕತ್ತಲೆ ಎಂದರೆ ಕಾಣದ ದುಷ್ಟ ಶಕ್ತಿಗಳ ತವರು; ಸೂರ್ಯನಾದರೋ ಬೆಳಕು, ಭರವಸೆ, ಜೀವಗಳ ಸಂಕೇತ. ಸೂರ್ಯಾರಾಧನೆ ಆರಂಭವಾದುದು ಅವನ ಬಗ್ಗೆ ಬೆಳೆದ ಭಕ್ತಿ, ಪ್ರೀತಿ, ಭರವಸೆಗಳಿಂದ ಎಂಬುದನ್ನು ಹೇಳಬೇಕಾಗಿಲ್ಲ.

ಸೂರ್ಯನ ಆರಾಧನೆ ಇಂದಿಗೂ ಭಾರತದಲ್ಲಿ ಪ್ರಬಲವಾಗಿಯೇ ಇದೆ. ಬೆಳಿಗ್ಗೆ ಎದ್ದೊಡನೆ ಸೂರ್ಯನಿಗೆ ಕೈಮುಗಿದು ಹಳ್ಳಿಯ ಜನ ಕೆಲಸಕ್ಕೆ ತೊಡಗುತ್ತಾರೆ. ಈಗಲೂ ಅದರ ಅವಶೇಷಗಳು ಮೆಕ್ಸಿಕೊ, ಈಜಿಪ್ಟ್, ಇರಾನ್‌ಗಳಲ್ಲಿ ಕಾಣಸಿಗುತ್ತವೆ. ಈಜಿಪ್ಟ್‌ನಲ್ಲಿ ಕ್ರಿ. ಪೂ. ೧೬–೧೪ನೇ ಶತಮಾನಗಳಲ್ಲಿ ಸೂರ್ಯಾರಾಧನೆ ತನ್ನ ಪ್ರಕರ್ಷಸ್ಥಿತಿಯಲ್ಲಿತ್ತು. ಸೂರ್ಯನಿಗೆ ರಾ, ರೆ, ಆಟೋನ್, ಹೊರುಸ್ ಇತ್ಯಾದಿ ಹೆಸರುಗಳಿದ್ದು, ಅವನನ್ನು ಮನುಷ್ಯನಂತೆ, ಗಿಡುಗನ ತಲೆಯುಳ್ಳವನಂತೆ, ಚಕ್ರದಂತೆ ಚಿತ್ರಿಸುತ್ತಿದ್ದರು. ಬ್ಯಾಬಿಲೋನಿಯನ್ನರು ಅವನನ್ನು ಷಂಷ ಎಂದು ಕರೆದರೆ ಅಸ್ಸೀರಿಯನ್ನರು ಅವನನ್ನು ಮರ್ದುಕ್ ಎಂದು ಕರೆಯುತ್ತಿದ್ದರು. ಗ್ರೀಕರು ಹೆಲಿಯೊಸ್, ಅಪೊಲೊ ಎಂಬ ಹೆಸರುಗಳಿಂದ ಆರಾಧಿಸುತ್ತಿದ್ದರು. ಇರಾನಿನಲ್ಲಿ ಅವನನ್ನು 'ಮಿತ್ರ' ಎಂದು ಕರೆಯುತ್ತಿದ್ದರು. (ಋಗ್ವೇದದಲ್ಲೂ ಸೂರ್ಯನಿಗೆ ಇದೇ ಹೆಸರಿದೆ). ಮೆಕ್ಸಿಕೊ, ದಕ್ಷಿಣ ಅಮೆರಿಕಗಳಲ್ಲಿ ಸೂರ್ಯ ಅಮಂಗಳದ ಸಂಕೇತ. ನರರಕ್ತ ಕಂಡರೆ ಅವನಿಗೆ ಆಸೆ, ಅವನೇ ಅನಾವೃಷ್ಟಿ, ಕ್ಷಾಮಗಳಿಗೆ ಕಾರಣ. ಆದ್ದರಿಂದ ಅಲ್ಲಿನ ಜನರ ಸೂರ್ಯಾರಾಧನೆ ಕೇವಲ ಭಯಮೂಲವಾದುದು. ಈಜಿಪ್ಟ್, ಇರಾನ್, ಭಾರತಗಳಲ್ಲಿ ಸೂರ್ಯನನ್ನು

ಉಪಕಾರಿ, ಜೀವದಾಯಕ ಎಂದು ಭಾವಿಸಲಾಗಿದ್ದಿತು. 'ಸುಪರ್ಣ' ಅಥವಾ ಗರುಡ ಸೂರ್ಯನ ಸಂಕೇತ; ಅದು ಕತ್ತಲೆಯ ಸಂಕೇತವಾದ ಹಾವನ್ನು ಹಿಡಿದಿರುವಂತೆ ಕಲ್ಪಿಸಲಾಗಿದೆ. ಭಾರತದಲ್ಲಂತೂ ಸೂರ್ಯನನ್ನು ಸೂರ್ಯಬಿಂಬ ಇರುವಂತೆ, ಚಕ್ರದಂತೆ, ಅರಳಿದ ಕಮಲದಂತೆ, ಸ್ವಸ್ತಿಕದಂತೆ, ಮನುಷ್ಯಾಕೃತಿಯಲ್ಲಿ ಹೀಗೆ ಬಗೆಬಗೆಯಾಗಿ ಕಲ್ಪಿಸಿ ಕಲ್ಲು, ಲೋಹ, ವರ್ಣಗಳಲ್ಲಿ ಮೂಡಿಸಿದ್ದಾರೆ. ಸ್ವಸ್ತಿಕದ ನಾಲ್ಕು ತೋಳುಗಳು ಮಧ್ಯರಾತ್ರಿ, ಬೆಳಗು, ಮಧ್ಯಾಹ್ನ ಮತ್ತು ಸಂಜೆಗಳಲ್ಲಿನ ಸೂರ್ಯನ ಸ್ಥಾನಗಳನ್ನು ಹೇಳುತ್ತವೆ. ಭಾರತದ ಪ್ರಕೃತಿದೇವತೆಗಳಲ್ಲೆಲ್ಲ ಸೂರ್ಯನೇ ಹೆಚ್ಚು ಪವಿತ್ರ. ಅವನು ಅಗೋಚರ ವಿಶ್ವ ಚೈತನ್ಯದ ಸಮಗ್ರಾವತಾರವೆಂದು ಜನ ನಂಬಿದ್ದರು. ಋಗ್ವೇದ ಅವನನ್ನು ದೇವತೆಗಳ ದೇವತೆ ಎಂದು ಹೊಗಳುತ್ತದೆ.

ಸೂರ್ಯನನ್ನು ಮೊದಲು ಸೌರಚಕ್ರದ ಮೂಲಕ ಚಿತ್ರಿಸುತ್ತಿದ್ದು ಕ್ರಿಸ್ತ ಶಕದ ಹಿಂದಿನ ಮುಂದಿನ ಕಾಲದಲ್ಲಿ ಅವನನ್ನು ಮನುಷ್ಯರೂಪದಲ್ಲಿ ಚಿತ್ರಿಸಲು ಆರಂಭಿಸಿದರು. ಕ್ರಿ. ಪೂ. ಒಂದನೇ ಶತಮಾನದ ಮೊದಲನೆಯ ಕಾನಿಷ್ಕ ತನ್ನ ನಾಣ್ಯಗಳ ಮೇಲೆ 'ಮಿಹಿರ' ಎಂಬ ಹೆಸರಿಟ್ಟು ಸೂರ್ಯನ ಚಿತ್ರವನ್ನು ಹಾಕಿಸಿದ. (ಮಿಹಿರ=ಮಿತ್ರ).

ಸೌರಚಕ್ರವೇ ವೈದಿಕ ಯುಗದ ಬಳಿಕ ವಿಷ್ಣುವಿನ ಸುದರ್ಶನ ಚಕ್ರವಾಯಿತು. ಸೂರ್ಯನೇ ಸೂರ್ಯನಾರಾಯಣನಾದ. ವೇದಗಳ ಪೂಷನ್ ಸೂರ್ಯನ ಸೌಮ್ಯರೂಪ. ಮನುಷ್ಯ ಕುಲದ ಪಿತಾಮಹನೆನ್ನಿಸಿಕೊಂಡ ವಿವಸ್ವತ್ ಉದಯಿಸುವ ಸೂರ್ಯನ ಸಂಕೇತ. (ವಿವಸ್ವತ್‌ಗೆ ಅವೆಸ್ತನ್ ಭಾಷೆಯಲ್ಲಿ ಸಮಾನವಾಗಿ 'ವಿವನ್‌ಹಂತ್' ಇದ್ದಾನೆ–ಇವನೇ ಸೋಮರಸವನ್ನು ಮೊದಲು ತಯಾರಿಸಿದಾತ).

ಭಾರತೀಯ ಪುರಾಣಗಳ ಪ್ರಕಾರ ಸೂರ್ಯನಿಗೆ ಹಲವರು ಹೆಂಡಿರು. ಅವನಿಗೆ ವಿಶ್ವಕರ್ಮನ ಮಗಳು 'ಸಂಜ್ಞಾ'ಳಿಂದ ಯಮ, ಯಮಿಯರು ಹುಟ್ಟಿದರು. ಸಂಜ್ಞೆಯು ಸೂರ್ಯನ ತೀಕ್ಷ್ಣ ಬೆಳಕನ್ನು ತಾಳಲಾರದೆ, ತನ್ನ ನೆರಳಾದ 'ಛಾಯಾ'ಳನ್ನು ತನ್ನ ಜಾಗದಲ್ಲಿ ಉಳಿಸಿ ಓಡಿ ಹೋದಳು. ಇದು ತಿಳಿಯದೆ ಸೂರ್ಯನು ಛಾಯಾ ಜೊತೆಗೆ ಎಷ್ಟೋ ಕಾಲ ಸಂಸಾರ ಮಾಡಿ, ಮುಂದೆ ಗೊತ್ತಾಗಿ ಮತ್ತೆ ಹುಡುಕಿಕೊಂಡು ಹೋಗಿ ಹೆಣ್ಣುಕುದುರೆಯ ರೂಪ ತಾಳಿದ್ದ 'ಸಂಜ್ಞಾ'ಳನ್ನು ತಾನು ಗಂಡುಕುದುರೆಯ ರೂಪವನ್ನು ತಾಳಿ ಹುಡುಕಿದ. ಅವರಿಗೆ ಆಗ ಅಶ್ವಿನೀದೇವತೆಗಳು ಹುಟ್ಟಿದರು. ಸಂಜ್ಞಾ ಸೂರ್ಯನ ಬಳಿ ಇರಬೇಕಾದರೆ ಅವನ ಪ್ರಖರತೆ ಕಡಿಮೆಯಾಗಬೇಕೆಂದು ಸಂಜ್ಞಾಳ ತಂದೆ ವಿಶ್ವಕರ್ಮನು

ಸೂರ್ಯನ ಜ್ಯೋತಿಯ ಒಂದು ಭಾಗವನ್ನು ಕತ್ತರಿಸಿ ಹಾಗೆ ಕತ್ತರಿಸಿದ ಜ್ಯೋತಿರ್ಭಾಗದಿಂದ ಬೇರೆ ಬೇರೆ ದೇವತೆಗಳಿಗೆ ಆಯುಧಗಳನ್ನು ಮಾಡಿಕೊಟ್ಟ (ಉದಾ: ಶಿವನ ತ್ರಿಶೂಲ, ಸ್ಕಂದನ ಈಟಿ, ವಿಷ್ಣುವಿನ ಚಕ್ರ ಇತ್ಯಾದಿ). ಪ್ರತಿಯೊಬ್ಬ ದೇವತೆಯ ಬಳಿಯೂ ಸೂರ್ಯನ ಅಂಶವಿರುವುದರಿಂದ ಹಲವು ಹಿಂದೂ ದೇವಾಲಯಗಳಲ್ಲೂ ಸೂರ್ಯನ ವಿಗ್ರಹವಿರುತ್ತದೆ. ಸಂಜ್ಞಾ ಮತ್ತು ಛಾಯಾ ಇವರು ಕ್ರಮವಾಗಿ ಜೀವನ ಮತ್ತು ಮೃತ್ಯುವಿನ ಸಂಕೇತವಾಗಿರುವುದರಿಂದ ಸೂರ್ಯನು ಜೀವನ ಮೃತ್ಯುಗಳೆರಡರ ಅಧಿದೇವತೆಯೂ ಹೌದು.

ಸೂರ್ಯನ ಮಕ್ಕಳಲ್ಲಿ ವೈವಸ್ವತನು ಮನುವಾದ, ಯಮ ನಿಷ್ಪಕ್ಷಪಾತ ನ್ಯಾಯಮೂರ್ತಿಯಾದ, ಯಮಿ ಯಮುನಾನದಿ ಆದಳು, ಅಶ್ವಿನೀದೇವತೆಗಳು ದೇವವೈದ್ಯರಾದರು, ರೇವಂತ ಗುಹ್ಯಕರ ದೊರೆ ಆದ. ಛಾಯಾಳಲ್ಲಿ ಹುಟ್ಟಿದ ಹಿರಿಯಮಗ ಶನಿ ಅಥವಾ ಶನೈಶ್ವರನು ಒಂದು ಗ್ರಹ (Planet Saturn) ಆದ. ಮಗಳು ತಪತಿ ನದಿ ಆದಳು. ಮತ್ತು ಅವಳಲ್ಲಿ ಹುಟ್ಟಿದ ಕುರು ಎಂಬ ಮಗನೇ ಕೌರವ ಪಾಂಡವರಿಗೆ ಮೂಲಪುರುಷನಾದ.

ಸೂರ್ಯಾರಾಧಕರೆಲ್ಲ ಸೊಂಟಕ್ಕೆ 'ಅವ್ಯಂಗ' ದಾರವನ್ನು ಸುತ್ತುವರಿಸಿ ಕಟ್ಟಿಕೊಳ್ಳಲೇಬೇಕು. ಅವ್ಯಂಗವಿಲ್ಲದೆ ಯಾರೂ ಸೂರ್ಯನನ್ನು ಪೂಜಿಸಕೂಡದು. 'ಮಗ'ಗಳು (ಸೂರ್ಯನ ಪೂಜಾರಿಗಳು) ಇವನ್ನು ಕಡ್ಡಾಯವಾಗಿ ಧರಿಸುತ್ತಾರೆ. ಭವಿಷ್ಯಪುರಾಣದ ಪ್ರಕಾರ ಎಲ್ಲ ದೇವತೆಗಳೂ ವಾಸಿಸುವ ಸೊಂಟಪಟ್ಟಿ ಅವ್ಯಂಗದ ಮೂಲದಲ್ಲಿ ವಿಷ್ಣು, ಮಧ್ಯದಲ್ಲಿ ಬ್ರಹ್ಮ, ಅಂತ್ಯದಲ್ಲಿ ರುದ್ರ ವಾಸಿಸುತ್ತಾರೆ. 'ಮಗ'ಗಳು ಮೂಲತಃ ಪರ್ಷಿಯ ದೇಶದವರು. (ಸಂಸ್ಕೃತ. ಅವ್ಯಂಗ/ವಿಯಂಗ/ವಿಯಾಂಗ=ಹಳೆಯ ಪರ್ಷಿಯನ್. ಅಯ್ಯಾ ವ್ಯಾಜಾನ.) ಇಂದಿನ ಪಾರಸಿಗಳು ಕಟ್ಟಿಕೊಳ್ಳುವ 'ಕಸ್ತಿ' ಎಂಬ ನಡು ಪಟ್ಟಿಯೇ ಹಿಂದಿನ 'ಅವ್ಯಂಗ'ವೆಂದೂ ಹೇಳಲಾಗಿದೆ.[೨]

ಸೂರ್ಯಾರಾಧನೆಯು ವೇದಪೂರ್ವ ಸಿಂಧೂಸಂಸ್ಕೃತಿಯಲ್ಲಿಯೂ ಇದ್ದಿತು. ರಾಮಾಯಣ, ಮಹಾಭಾರತಗಳಲ್ಲಿ ಅದರ ಕುರುಹುಗಳಿವೆ. ಹಿಂದೆ ಸೂರ್ಯನೇ ಅತಿಶ್ರೇಷ್ಠ ದೈವವೆಂದೂ ಅವನೇ ಸೃಷ್ಟಿಕರ್ತನೆಂದೂ ನಂಬಿದ್ದ 'ಸೌರ' ಎಂಬ ಪಂಥೀಯರಿದ್ದರು. ಆನಂದಗಿರಿ ತನ್ನ ಶಂಕರ ವಿಜಯದಲ್ಲಿ ಆರು ಬಗೆಯ ಸೌರರನ್ನು ಹೇಳುತ್ತಾನೆ. ಅವರೆಲ್ಲ ಕೆಂಪುಗಂಧ ಧರಿಸಿ ಕೆಂಪು ಹೂ ಮುಡಿದು ಸೂರ್ಯನ ಅಷ್ಟಾಕ್ಷರೀ ಮಂತ್ರವನ್ನು ಜಪಿಸುತ್ತಿದ್ದರು.

ಕನ್ನಡ ಕವಿಗಳಲ್ಲಿ ಬ್ರಹ್ಮಶಿವ (ಸು. ೧೧೫೦) ಸೌರಮತವನ್ನು ಚೆನ್ನಾಗಿ

ಅಭ್ಯಾಸಮಾಡಿದವನಾಗಿದ್ದ ("ಸೌರಂ ಕೌಳೋತ್ತರಮೆಂಬ ಆರಾಧನೆಗಳೊಳಂ... ಸಾರಮನಿಂಬಾಗಿ ನೆರೆಯೆ ನಿರುತಂ ಬಲ್ಲಂ")[೩] ಅವನು ಸಹಜವಾಗಿಯೇ ತನ್ನ 'ಸಮಯ ಪರೀಕ್ಷೆ' ಎಂಬ ಹನ್ನೆರಡನೆಯ ಶತಮಾನದ ಭಿನ್ನಮತಗಳ ವಿಶ್ಲೇಷಣೆಯ ಕೃತಿಯಲ್ಲಿ ಸೌರಸಾಧಕರ ಬಗ್ಗೆ ಹಲವು ವಿವರಗಳನ್ನು ಕೊಟ್ಟಿದ್ದಾನೆ. ಅವನ ಕಾಲದಲ್ಲಿ ಒಂದೇ ಮನೆಯಲ್ಲಿ ಹೆಂಡತಿ ಶಿವಭಕ್ತೆಯಾಗಿ ಅವಳ ಗಂಡ ಜೈನನಾಗಿ ಅವರ ಮಕ್ಕಳು ಸೂರ್ಯಭಕ್ತರಾಗಿದ್ದ ಎಷ್ಟೋ ಉದಾಹರಣೆಗಳಿದ್ದುವು.[೩.೧] ಶಿವನೇ ಸೂರ್ಯನನ್ನು ಸ್ತೋತ್ರಮಾಡಿ ಅದನ್ನು ಗಿರಿಜೆಗೆ ಕಲಿಸಿದನೆಂದು ನಂಬಿದ ಜನರಿದ್ದರು (ಸಮಯ ಪರೀಕ್ಷೆ, ೮.೧೧೩). ಎಷ್ಟೋ ಶೈವರು, ತಮ್ಮ ಇಷ್ಟದೈವ ಶಿವನಿಗೆ ಎರಗುವ ಮುನ್ನ ಸೂರ್ಯನಿಗೆ ಎರಗಬೇಕು ಎಂದು ಹೇಳಿ ಹಾಗೆ ನಡೆದುಕೊಳ್ಳುತ್ತಿದ್ದರು.[೪] 'ಸೌರಸಂಹಿತೆ'ಯನ್ನು ಶಿವನು ಷಣ್ಮುಖನಿಗೆ ಬೋಧಿಸಿದ (ಅದೇ. ೮. ೧೧೫). 'ಆದಿತ್ಯ ಹೃದಯ'ವನ್ನು ಕೃಷ್ಣ ಅರ್ಜುನನಿಗೆ ಬೋಧಿಸಿದ (ಅದೇ. ೮.೧೫೪) ಇವೆರಡರ ಜೊತೆಗೆ. ಮಯೂರನ 'ಸೂರ್ಯಶತಕ'ವೂ ಪ್ರಚುರವಾಗಿದ್ದಿತು. (೯.೧೫) ಸೌರನಾದವನು ಸೂರ್ಯನನ್ನು ಅರ್ಚಿಸುವಾಗ ಇತರ ಚಂದ್ರ, ಬುಧ ಇತ್ಯಾದಿ ಗ್ರಹಗಳನ್ನೂ ಒಂದೇ ಮಣೆಗೆ ತಂದು ಕೂರಿಸುತ್ತಿದ್ದ (೮. ೧೬೪). ಬ್ರಹ್ಮಶಿವನ ಕಾಲದಲ್ಲಿದ್ದ ಸೂರ್ಯನ ವಿಗ್ರಹಗಳ ವೈವಿಧ್ಯ ಗಮನಿಸತಕ್ಕದ್ದು. ಎರಡು ಕೈಗಳ, ನಾಲ್ಕು ಕೈಗಳ, ಒಂದು ತಲೆಯ, ಹಲವು ತಲೆಗಳ, ಆಯುಧ ಹಿಡಿದ ಹಲವು ಕೈಗಳ ಹೀಗೆ ಬಗೆಬಗೆಯ ರೌದ್ರ ಶಾಂತಮೂರ್ತಿಗಳಿದ್ದುವು (ಅದೇ.೮.೧೬೫). ಸೌರಾರಾಧನೆಯಲ್ಲಿ ಅಪ್ರಯೋಜನತಿಲಕ, ಮಾರ್ತಂಡಭೈರವ, ರಣಜಯ ಎಂಬ ಹಲವು ಪ್ರಭೇದಗಳಿದ್ದುವು (ಅದೇ. ೮.೧೬೬). ಸೂರ್ಯ ಹುಟ್ಟುವಾಗ ಶಿವ, ಮಧ್ಯಾಹ್ನ ವಿಷ್ಣು, ಮುಳುಗುವಾಗ ಬ್ರಹ್ಮನೆಂದೂ ಅವನು ತ್ರಿಮೂರ್ತಿ ಸ್ವರೂಪನೆಂದೂ, ಸೂರ್ಯಬಿಂಬದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದಗಳೆಲ್ಲ ಇರುವುದರಿಂದ ಅವನು ವೇದ ಸ್ವರೂಪನೆಂದೂ ಹೇಳುತ್ತಿದ್ದರು. (ಅದೇ. ೮.೧೬೭–೮). ಸೂರ್ಯ ವಿಗ್ರಹದ ಕೈಯಲ್ಲಿ ಪದ್ಮವಿದ್ದುದನ್ನು (ಚಿತ್ರ ೩೦; ಚಿತ್ರ ೩೧) ಒಂದೆಡೆ ಹೇಳುತ್ತಾನೆ (೮.೧೬೯). ಸೌರಾರಾಧಕನು ವೃತ್ತಾಕಾರದ ಬಿಂಬವನ್ನೂ ಪದ್ಮ ಹಿಡಿದ ಮನುಷ್ಯಾಕೃತಿಯ ಸೂರ್ಯನನ್ನೂ ಧ್ಯಾನಿಸುತ್ತಿದ್ದ (ಅದೇ). ಸೂರ್ಯನ ಸಾರಥಿ ಹೆಳವ (ಅರುಣ), ಅವನು ಏಳು ಕುದುರೆಗಳಿಗೆ ಕಟ್ಟಿ ಹಿಡಿದ ಹಗ್ಗ ಆದಿಶೇಷ, ಆಕಾಶವೇ ಆ ರಥದ ಹಾದಿ, ರಥಕ್ಕೆ ಒಂದೇ ಚಕ್ರ (೧೧.೫೧). ಸೂರ್ಯನ ವಿಮಾನಕ್ಕೆ ರಾಹುವಿನ ವಿಮಾನ ಅಡ್ಡ ಬಂದುದನ್ನೇ ರಾಹು ನುಂಗಿತು ಎಂದು

ಅರ್ಥಮಾಡಿಕೊಂಡು ಅನೇಕ ಮೂಢರು ಅಗ್ನಿ ಪ್ರವೇಶ ಮಾಡುತ್ತಾರೆ ಎಂದು ಬ್ರಹ್ಮಶಿವ ಹೇಳುತ್ತಾನೆ. (ಅದೇ, ಅನುಬಂಧ:೧, ಪದ್ಯ ೨೬-೨೭)

ರವಿಯ ವಿಮಾನಕೆ ರಾಹುವಿ
ನ ವಿಮಾನಕ್ಕಡ್ಡಮಾಗೆ ತತ್ಪತಿಯಂ ರಾ
ಹುವೆ ನುಂಗಿತೆಂದು ತಡದಿರ
ದೆ ವಹ್ನಿಯಂ ಪೊಕ್ಕು ಮುರುಟಿ ಸಾವಮೂರ್ಢರ್॥

ಕಿಚ್ಚಂ ಪೊಕ್ಕಡೆ ತೊನ್ನಂ
ಚಚ್ಚರಮಾ ಕ್ಷಣದೆ ದೇವನಾಗಿರ್ಪನದೇ
ನಚ್ಚರಿಯೊ ಪುಗುವುದೆಂದಾ
ಕಿಚ್ಚಂ ಪೊಕ್ಕಲ್ಲಿ ಮುರುಟಿ ಸಾವಮೂರ್ಢರ್॥

ಈ ಪುಸ್ತಕದ ಎರಡನೆಯ ಅಧ್ಯಾಯದಲ್ಲಿ, ಹಿಂದೆ ಮಧ್ಯ ಕರ್ನಾಟಕದಲ್ಲಿ ಗ್ರಹಣದ ದಿನ ಆತ್ಮಬಲಿ ಕೊಟ್ಟುಕೊಳ್ಳುವ ಪದ್ಧತಿ ಇದ್ದುದನ್ನು ನೋಡಿದ್ದೇವೆ. ತೊನ್ನು ರೋಗದಿಂದ ಪೀಡಿತರಾದವರು ಅಗ್ನಿಪ್ರವೇಶ ಮಾಡುತ್ತಿದ್ದರೆಂದೂ, ಹಾಗೆ ಸತ್ತವರು ದೇವರಾಗುತ್ತಾರೆ ಎಂಬ ನಂಬಿಕೆಯಿದ್ದಿತೆಂದೂ ಬ್ರಹ್ಮಶಿವ ಹೇಳುವುದು ಗಮನಾರ್ಹ. ಸೂರ್ಯಗ್ರಹಣದಂದು ಅಗ್ನಿಪ್ರವೇಶ ಮಾಡಿದ ಒಂದಿಬ್ಬರಾದರೂ ರೋಗಪೀಡಿತರಿರಬಹುದು ಎಂಬ ಊಹೆ ಸಾಧ್ಯವಾದರೂ ಶಾಸನಗಳಲ್ಲಿ ಹಾಗೆ ಹೇಳಲು ಆಧಾರಗಳಿಲ್ಲ. ನಾವು ಹಿಂದೆ ನೋಡಿದಂತೆ, ಗ್ರಹಣದಂದು ಅಗ್ನಿ ಪ್ರವೇಶ ಮಾಡುವ ಪದ್ಧತಿ ಶಿವಮೊಗ್ಗ-ಧಾರವಾಡ ಜಿಲ್ಲೆಗಳ ಕೂಡು ಪ್ರದೇಶಕ್ಕೆ (ಸ್ಥೂಲವಾಗಿ ಬನವಾಸಿನಾಡು) ಸೀಮಿತವಾಗಿರುವುದರಿಂದಲೂ, ಆ ಸಂಗತಿಯನ್ನು ಬ್ರಹ್ಮಶಿವ ಹೇಳುವುದರಿಂದಲೂ, ಬೀದರ್ ಸಮೀಪದ ಪೊಟ್ಟಲಕೆರೆಯವನಾದ ಬ್ರಹ್ಮಶಿವನಿಗೆ ಬನವಾಸಿ ನಾಡಿನ ಪರಿಚಯ ನಿಕಟವಾಗಿತ್ತು ಎಂಬ ಊಹೆ ಬಹುಶಃ ನಿರರ್ಥಕವಾಗಲಾರದು. ಗ್ರಹಣಗಳ ದಿವಸ ಶಾಂತಿಕಾರ್ಯಗಳಿಗಾಗಿ ದಾನಗಳನ್ನು ಮಾಡುತ್ತಿದ್ದುದಲ್ಲದೆ ಯಾಗಕಾರ್ಯವನ್ನೂ ನೆರವೇರಿಸಿ, 'ಶಾಂತಿಕರ'ವಾದ 'ಸಂಗ್ರಹಭೋಜನ'ವನ್ನು ಮಾಡುತ್ತಿದ್ದರು ಎಂದು ಬ್ರಹ್ಮಶಿವನ ಹೇಳಿಕೆ ('ಸಂಗ್ರಹಭೋಜನ'ವೆಂದರೇನೋ ತಿಳಿಯದು).[೫] - ಬಹುಶಃ ಎಲ್ಲ ಬಗೆಯ ಅಡುಗೆ ಒಟ್ಟಿಗೆ ಸೇರಿಸಿ ತಿನ್ನುವುದು?.

ಗ್ರಹದೋಷ ನಿವಾರಣೆಗೆ ಬಹುಲೋಹದ ಮುದ್ರಿಕೆಯನ್ನು ತೊಡುತ್ತಿದ್ದುದಲ್ಲದೆ ಅದನ್ನು "ನವಗ್ರಹಮುದ್ರಿಕೆ" ಎಂದೂ ಕರೆಯುತ್ತಿದ್ದರು (ಸಮಯ ಪರೀಕ್ಷೆ, ಅನುಬಂಧ ೧, ಪದ್ಯ ೧೨). ಈ ಪದ್ಧತಿ ಶಿವಮೊಗ್ಗ ಜಿಲ್ಲೆ ಮುಂತಾದ ಕಡೆ ಈಗಲೂ ಪ್ರಚಲಿತವಿದೆಯೆಂದು ಹಿಂದೆಯೇ ನೋಡಿದ್ದೇವೆ.

ಬ್ರಹ್ಮಶಿವನ ಈ ವಿವರಗಳು ಸೌರರು ಕರ್ನಾಟಕದಲ್ಲಿ ವಿರಳವಾಗಿದ್ದುದನ್ನಲ್ಲ, ಬಹುಸಂಖ್ಯೆಯಲ್ಲಿದ್ದುದನ್ನು ಧ್ವನಿಸುತ್ತವೆ. ಕರ್ನಾಟಕದ ಹಿಂದಿನ ಹಲವಾರು ಸೂರ್ಯದೇವಾಲಯಗಳೂ ಇದನ್ನೇ ಸಮರ್ಥಿಸುತ್ತವೆ. ಬ್ರಹ್ಮಶಿವ ಹೇಳುವ ಬಗೆಬಗೆಯ ಆಕಾರದ ಸೂರ್ಯಮೂರ್ತಿಗಳನ್ನು, ವಿಶೇಷವಾಗಿ ಹಲವು ತಲೆಯ ಮೂರ್ತಿಗಳನ್ನು ಈಗ ಗುರುತಿಸಲು ಸಾಧ್ಯವೇ ತಿಳಿಯದು. ಕೆಲವು ವಚನಕಾರರು 'ಸೌರ'ವನ್ನು ಷಡ್ದರ್ಶನಗಳಲ್ಲಿ ಒಂದೆಂದು ಭಾವಿಸಿದ್ದಾರೆ. ಉದಾಹರಣೆಗೆ: ಉರಿಲಿಂಗಪೆದ್ದಿ[೬] ಮತ್ತು ಚನ್ನಬಸವಣ್ಣ (ನೋಡಿ–ಚನ್ನಬಸವಣ್ಣನವರ ವಚನಗಳು. ಸಂ : ಆರ್. ಸಿ. ಹಿರೇಮಠ, ಧಾರವಾಡ. ೧೯೭೧. ಪು: ೨೦೫–೬). ಪರವಸ್ತುವನ್ನು ಶೈವರು, ಶಾಕ್ತೇಯರು, ಸೌರರು ಬಗೆಬಗೆಯಾಗಿ ವರ್ಣಿಸುತ್ತಾರೆ ಎಂದು ಹೇಳುತ್ತ ಚನ್ನಬಸವಣ್ಣ ಹೀಗೆ ಹೇಳುತ್ತಾರೆ–"ಇನ್ನು ಸೌರನ ಯುಕ್ತಿ ಎಂತೆಂದಡೆ: ಘಟಾದಿಮೂಲ ಬಿಂದು ದಿಟವಪ್ಪುದೆ ನಾದ ಎಂಬ". ಇದರ ಅರ್ಥವೇನೇ ಇರಲಿ, ಸೌರಮತ ಉಲ್ಲೇಖ ವಚನಕಾರರಲ್ಲಿ ಕಾಣಿಸುವುದು ಆ ಕಾಲದಲ್ಲಿದ್ದ ಸೌರ ಮತಾನುಯಾಯಿಗಳ ಕುರುಹಿಗೆ ಸಾಕ್ಷಿಯಾಗಿದೆ.

ಕರ್ನಾಟಕದಲ್ಲಿ ಬ್ರಾಹ್ಮಣರಿಗೆ, ಶೈವ ದೇವಾಲಯ ಅಥವಾ ಗುರುಗಳಿಗೆ, ಜೈನ ದೇವಾಲಯ ಅಥವಾ ಗುರುಗಳಿಗೆ ಕೊಟ್ಟ ದತ್ತಿಗಳ ಗಡಿಕಲ್ಲುಗಳ ಮೇಲೆ ಅನುಕ್ರಮವಾಗಿ ವಾಮನ, ಲಿಂಗ, ಮುಕ್ಕೊಡೆಗಳ ಚಿಹ್ನೆಗಳಿರುತ್ತಿದ್ದುವು. ಆದಿತ್ಯನ ಗುರುತಿರುವ ಕಲ್ಲಿನ ('ಆದಿತ್ಯನ ಕಲ್') ಉಲ್ಲೇಖ ಒಂದು ಶಾಸನದಲ್ಲಿದೆ (Ep.Ind.xvi. 56, 1053 A.D) ಇದು ಏನು ಹೇಳುವುದೋ ತಿಳಿಯದು. ಎಲ್ಲ ದತ್ತಿ ಶಿಲೆಗಳ ಮೇಲೆ ಸೂರ್ಯ ಚಂದ್ರರನ್ನು ಕೆತ್ತುವುದು ಸಾಮಾನ್ಯ. ಅದು ಸೂರ್ಯಚಂದ್ರರ ಸಾಕ್ಷಿಯಾಗಿ ಕೊಟ್ಟ ದತ್ತಿ ಎಂಬುದರ ಸೂಚಕವೂ ಆಗಬಹುದು. ಅಥವಾ ಸೂರ್ಯಚಂದ್ರರು ಇರುವ ತನಕ, ಎಂದರೆ ಶಾಶ್ವತವಾಗಿ ದತ್ತಿ ಉಳಿಯಲಿ ಎಂಬ ಅಪೇಕ್ಷೆಯ ಚಿಹ್ನೆ ಇರಬಹುದು.

'ವಿವೇಕಚಿಂತಾಮಣಿ'ಯ ಕರ್ತೃವಾದ ನಿಜಗುಣ ಶಿವಯೋಗಿಯು ತನ್ನ ಕಾಲದಲ್ಲಿ (೧೫–೧೬ನೇ ಶ.) ಪ್ರಚಲಿತವಾಗಿದ್ದ ಸೂರ್ಯಸಂಬಂಧಿ ಜ್ಞಾನವನ್ನು ತನ್ನ ಕೃತಿಯಲ್ಲಿ ಸಂಗ್ರಹಿಸಿ ಕೊಟ್ಟಿದ್ದಾನೆ.[೭] ಅವನ ಮಾತಿನ ಸಾರಾಂಶವಿದು:

ಭೂಮಿಗೆ ಒಂದು ಲಕ್ಷ ಯೋಜನದಲ್ಲಿ ಭುವರ್ಲೋಕದ ಒಡೆಯ

ಸೂರ್ಯ ತನ್ನ ರಥದಲ್ಲಿ ಕುಳಿತು ಮೇರುವನ್ನು ಪ್ರದಕ್ಷಿಣೆ ಮಾಡುತ್ತ ದಿನ ರಾತ್ರಿಗಳಿಗೆ ಕಾರಣನಾಗಿದ್ದಾನೆ. ಅವನ ರಥಕ್ಕೆ ಒಂದೇ ಗಾಲಿ. (ಚಿತ್ರ ೩೪) ಅದರ ಅಗಲ ೭೦,೦೦೦ ಯೋಜನ; ನೇಮಿ ೧,೦೦೦ ಯೋಜನ ವೈಶಾಲ್ಯವುಳ್ಳದ್ದು . ತಪಿನಿ, ತಾಪಿನಿ, ಧೂಮ್ರಾ, ಮರೀಚಿ, ಜ್ವಾಲಿನಿ, ರುಚಿ, ಸುಷುಮ್ನಾ , ಭೋಗದಾ, ವಿಶ್ವಬೋಧಿನಿ, ಧರಣಿ, ಕ್ಷಮಾ ಮತ್ತು ಪ್ರಭಾ ಎಂಬ ಹನ್ನೆರಡು ಕಲೆಗಳಿಂದ ಆವೃತನಾಗಿ ರಥಸ್ಥ ಸಿಂಹಾಸನದಲ್ಲಿ ಕುಳಿತು ಬರುವ ಸೂರ್ಯನಿಗೆ ಸಹಸ್ರಕಿರಣನೆಂದೂ ಹೆಸರು. ಅವನಿಗೆ ಹಿಮಕಿರಣ ೩೩೩, ಉಷ್ಣಕಿರಣ ೩೩೩, ವರ್ಷ ಕಿರಣ ೩೩೩, ಬೀಜಭೂತ (ಬಹುಶಃ ಮೂಲಭೂತ) ಕಿರಣ ೧ : ಹೀಗೆ ಅವನಿಗೆ ಒಟ್ಟು ಸಾವಿರ ಕಿರಣಗಳು. ಅವನಿಗೆ ಚಿನ್ನದ ಬಣ್ಣದ ಮೀಸೆ, ಕಮಲ ಹಿಡಿದ ನಾಲ್ಕು ಕೈ. ಕಿರೀಟ ಗಂಧಮಾಲ್ಯಾದಿಗಳಿಂದ ಅಲಂಕೃತನಾದ ಸಿಂಧೂರ ವರ್ಣದ ಸೂರ್ಯ ೯೦೦೦ ಯೋಜನ ಎತ್ತರದ ಶರೀರದವನು; ೨೭೦೦೦ ಯೋಜನದ ಪ್ರಭಾಮಂಡಲದವನು. ಒಟ್ಟು ಅವನ ವೈಶಾಲ್ಯ ೩೬೦೦೦ ಯೋಜನ. ರಥದ 'ಈಷಾ' ದಂಡದ ತುದಿಯಲ್ಲಿ ಒಂದು, ಎಡ ಬಲಗಳಲ್ಲಿ ಮೂರು ಮೂರು ಕುದುರೆಗಳು, ಒಟ್ಟು ಏಳು; ಅವನ್ನು ಹಿಡಿದಿರುವ ಹಗ್ಗ ಸರ್ಪದ್ದು. ಕುದುರೆಗಳು ಒಂದು ಶ್ವಾಸಕ್ಕೆ ೨೧೬೦೦ ಯೋಜನ ಓಡುತ್ತವೆ. ಪೂರ್ವಾದ್ರಿಯಿಂದ ಪಶ್ಚಿಮಾದ್ರಿಗೆ ಅವನು ಹೋದಾಗ, ಮೇರು ಮರೆಯಾಗಿ ಪೂರ್ವದಿಕ್ಕು ಕತ್ತಲು ತುಂಬುತ್ತದೆ; ಆಗ ರಾತ್ರಿ. ಮೇರುವಿನ ಆಚೆ ಹಗಲು. ಹಗಲು, ರಾತ್ರಿಗಳು ಆಗುವುದು ಹೀಗೆ. ಅವನು ತನಗೆ ಅಡ್ಡಿ ಬಂದ ಮಂದೇಹ ಎಂಬ ರಾಕ್ಷಸರನ್ನು ಸಂಹರಿಸುತ್ತ ಸಂಚರಿಸುವುದರಿಂದ ಗಳಿಗೆ, ದಿನ, ಪಕ್ಷ , ಮಾಸ, ವತ್ಸರ, ಯುಗಗಳು ಏರ್ಪಡುತ್ತವೆ.

ಗ್ರಹಣಗಳನ್ನು ಕುರಿತಂತೆ ನಿಜಗುಣಶಿವಯೋಗಿ ಕೊಟ್ಟಿರುವ ಮಾತುಗಳು ಉಲ್ಲೇಖಾರ್ಹ.

"ಬಳಿಕಾ ಗ್ರಹಂಗಳ ಮಧ್ಯದಲ್ಲಿ ಚಂದ್ರಸೂರ್ಯ ಗ್ರಹಣಂಗಳಹುದು ಎಂತೆನೆ ಆವ ಸಂವತ್ಸರದಲ್ಲಾದರೂ ಮಾಸದಲ್ಲಾದರೂ ಹುಣ್ಣಿಮೆ ಅಮಾವಾಸ್ಯೆಗಳಲ್ಲಿ ಮೇಷಾದಿ ಹನ್ನೆರಡು ರಾಶಿಗಳೊಳಗುಂ ಚಂದ್ರಸೂರ್ಯರಿದ್ದ ರಾಶಿಗೆ ರಾಹು ಬಂದು ಯೋಗಮಾದೊಡೆ ಆಯಾ ಗ್ರಹಣಗಳಪ್ಪವಾ ರಾಶಿಗಳಲ್ಲಿ ವರ್ತಿಸುತ್ತಿರ್ದ ಅಶ್ವಿನೀ ಮೊದಲಾದ ನಕ್ಷತ್ರಂಗಳ ಒಂದು ಪಾದ ಎರಡು ಪಾದ ಮೂರು ಪಾದ ನಾಲ್ಕು ಪಾದ ಕ್ರಮದಿಂದ

ಗ್ರಹಣವೆರಡಂಶದೊಂದಂಶ ಗ್ರಹಣಾಂಶತ್ರಯಗ್ರಹಣವಾ ಪೂರ್ಣಗ್ರಹಣ-ವಹುದೆಂದು ನಿಶ್ಚಿತಮಕ್ಕುಂ"[೮]

ಮುಮ್ಮಡಿ ಕೃಷ್ಣರಾಜ ವಿರಚಿತ ಎಡತೊರೆ 'ಅರ್ಕಪುಷ್ಕರಿಣಿ ಮಹಾತ್ಮೆ' ಎಂಬ ಗ್ರಂಥದಲ್ಲಿ (ಸಂ: ಟಿ.ಆರ್. ಶಾಂತ, ಬೆಂಗಳೂರು, ೧೯೭೯) ಎಡತೊರೆ ಅಥವಾ ಕೃಷ್ಣರಾಜನಗರದ ಅರ್ಕೇಶ್ವರ ದೇವಾಲಯ, ಅಲ್ಲಿನ ಪುರಾಣ, ತೀರ್ಥಗಳು ಅವುಗಳನ್ನು ವಿಸ್ತಾರವಾಗಿ ವರ್ಣಿಸಿದೆ. ಎಡತೊರೆಯು ತನ್ನ ಮಗಳನ್ನೇ ಮೋಹಿಸಿ ಪಾಪಿಷ್ಠನಾಗಿದ್ದ ಸೂರ್ಯನು ಅರ್ಕೇಶ್ವರನನ್ನು ಸ್ಥಾಪಿಸಿ ಪೂಜಿಸಿ ಪಾಪಪರಿಹಾರ ಮಾಡಿಕೊಂಡ ಸ್ಥಳವೆಂದು ಅಲ್ಲಿ ಹೇಳಿದೆ. ಸೂರ್ಯನ ಬಗ್ಗೆ ಹಲವಾರು ಕತೆಗಳು ಇಲ್ಲಿ ಬಂದಿವೆ.

ಸೂರ್ಯನು ಕುಷ್ಠ (ಅಥವಾ ತೊನ್ನು) ರೋಗ ನಿವಾರಕ ಎಂಬ ನಂಬಿಕೆಯನ್ನು ಬ್ರಹ್ಮಶಿವನಂತೆಯೇ ವಚನಕಾರರೂ ಉಲ್ಲೇಖಿಸಿದ್ದಾರೆ.

> ಸೂರ್ಯಜ್ಞಾನವುಳ್ಳವನಾದಡೆ
> ಗೌತಮಮುನೀಶ್ವರನ ಹೆಂಡತಿ ಅಹಲ್ಯಾದೇವಿಗೆ ಮೋಹಿಸಿ
> ಮುನಿಯ ಶಾಪದಿಂದ ಕುಷ್ಠದೊಳಗಿಹನೆ ?
>
> (ಚನ್ನಬಸವಣ್ಣನವರ ವಚನಗಳು. ಧಾರವಾಡ. ಪು. ೨೧೨)

ಮಯೂರನು ಸೂರ್ಯಸ್ತೋತ್ರದ ಮೂಲಕ ಆರೋಗ್ಯವನ್ನು ಪಡೆದನೆಂಬ ಕತೆಯನ್ನೂ ನೋಡಿದ್ದೇವೆ. ಕೃಷ್ಣನ ಮಗ ಸಾಂಬ ಕುಷ್ಠರೋಗಿಯಾಗಿದ್ದು ಸೂರ್ಯನನ್ನು ಪ್ರಾರ್ಥಿಸಿ ಆರೋಗ್ಯವನ್ನು ಪಡೆದುಕೊಂಡಂತೆ ಕತೆಗಳಿವೆ. ಅವನು ಚಂದ್ರಭಾಗಾ ನದಿಯ ದಡದ ಮೇಲೆ ಸೂರ್ಯ ದೇವಾಲಯವನ್ನು ನಿರ್ಮಿಸಿ, ಆ ದೇವತೆಯ ಸೂಚನೆಯಂತೆ ಶಕದ್ವೀಪಕ್ಕೆ (ಇರಾನ್/ಪರ್ಷಿಯ) ಹೋಗಿ ಸೂರ್ಯಾರ್ಚನೆಗಾಗಿ ಅಲ್ಲಿಂದ 'ಮಗ' ಅರ್ಚಕರ ಹದಿನೆಂಟು ಕುಟುಂಬಗಳನ್ನು ಕರೆತಂದನೆಂದು ಪೌರಾಣಿಕ ಕತೆಯಿದೆ. ಸೂರ್ಯ ಕುಷ್ಠರೋಗ ನಿವಾರಕನೆಂಬ ಕತೆ ಬಹುಶಃ ಪರ್ಷಿಯ ಮೂಲದ್ದು . ಹೆರೊಡೊಟೊಸ್ ಪ್ರಕಾರ, ಸೂರ್ಯನಿಗೆ ಕೋಪ ಬರುವಂತಹ ತಪ್ಪುಮಾಡಿದುದರ ಫಲವೇ ಕುಷ್ಠರೋಗವೆಂದು ಪರ್ಷಿಯನ್ನರು ನಂಬಿದ್ದುರು. ಕುಷ್ಠ ಮತ್ತು ತೊನ್ನು ರೋಗದವರು ಊರೊಳಕ್ಕೆ ಪ್ರವೇಶಿಸಬಾರದು ಮತ್ತು ಅವರು ಸೂರ್ಯನ ವಿಷಯದಲ್ಲಿ ಪಾಪಕಾರ್ಯವನ್ನು

ಮಾಡಿದವರು ಎಂಬುದು ಪರ್ಷಿಯನ್ನರಲ್ಲಿ ಪ್ರಚಲಿತವಾಗಿದ್ದ ಒಂದು ನಂಬಿಕೆ. ಕುಷ್ಠರೋಗಕ್ಕೆ ಕಾರಣಕರ್ತನಾದ ಸೂರ್ಯನೇ ಅದರ ನಿವಾರಕನೂ ಆಗುತ್ತಾನೆ ಎಂಬ ನಂಬಿಕೆಯೂ ಸಹಜವಾಗಿಯೇ ಉದ್ಭವಿಸುತ್ತದೆ. ಯಾವನೋ 'ಮ್ಯಾಜಿ' ('ಮಗ' ಸೂರ್ಯಾರಾಧಕ) ಮೂಲಕ ಈ ನಂಬಿಕೆ ಪರ್ಷಿಯದಿಂದ ವಾಯವ್ಯ ಭಾರತಕ್ಕೆ ನುಸುಳಿ ಬಳಿಕ ಭಾರತವನ್ನೆಲ್ಲ ವ್ಯಾಪಿಸಿರುವಂತೆ ತೋರುತ್ತದೆ. ಇರಾನಿನ ಸಾಮ್ ಕಥೆಯೇ ಭಾರತದ ಸಾಂಬನ ಕತೆಯ ಮೂಲವಾಗಿದ್ದಿರಬೇಕು.

> "ಸೂರ್ಯನನ್ನು ಧರ್ಮನೊಂದಿಗೆ ಕೆಲವೆಡೆ ಸಮೀಕರಿಸಲಾಗಿದೆ. ಧರ್ಮನೂ ಸ್ವಯಂಪ್ರಕಾಶ, ಸೂರ್ಯನಂತೆಯೇ. ಧರ್ಮನು ಶೂನ್ಯ, ಶೂನ್ಯವು ಸೊನ್ನೆಯ ಆಕಾರ, ಸೂರ್ಯನೂ ಸೊನ್ನೆಯಂತೆ ಗುಂಡು. ಧರ್ಮನು ಶೂನ್ಯದಲ್ಲಿ ಸಂಚರಿಸುತ್ತಾನೆ, ಅಂತೆಯೇ ಸೂರ್ಯ. 'ಧರ್ಮಪೂಜಾವಿಧಾನ' ಗ್ರಂಥದಲ್ಲಿ ಧರ್ಮಭಕ್ತರು ಸೂರ್ಯದೇವತೆಗೆ ಪೂಜೆ ಸಲ್ಲಿಸುವ ವರ್ಣನೆ ಇದೆ. ಸೂರ್ಯ ತನ್ನ ರಥದೊಂದಿಗೆ ಸಪ್ತಸಮುದ್ರಗಳಿಂದ ಮೂಡುತ್ತಾನೆ. ಕುಂಕುಮ, ವಜ್ರ, ಮುತ್ತು , ಹವಳಗಳಿಂದ ಅಲಂಕೃತವಾಗಿ ಅಚ್ಚಬಿಳಿಯ ಏಳು ಕುದುರೆಗಳನ್ನು ಹೂಡಿದ, ಹದಿನಾರು ಬಗೆಯ ಹೂಗಳನ್ನು ಮುಡಿಸಿದ ರಥವೇರಿ ಬರುತ್ತಾನೆ. ರಥದ ಹಗ್ಗವನ್ನು ಹದಿನಾರು ಸೇವಕರು ಹಿಡಿದಿರುತ್ತಾರೆ. ಹನ್ನೆರಡು ಸುವರ್ಣಕಮಲಗಳ ಹಾರ ಮುಡಿದ ಸೂರ್ಯನಿಗೆ ಸ್ವಯಂ ಇಂದ್ರನೇ ಛತ್ರಿ ಹಿಡಿದಿರುತ್ತಾನೆ. ಇಂತಹ ಸೂರ್ಯನು ಲೋಕದ ಆರ್ತರ .ಕಡೆ ಗಮನ ಕೊಟ್ಟು ಅವರ ಆರೋಗ್ಯ ಐಶ್ವರ್ಯಾದಿಗಳ ಇಷ್ಟಾರ್ಥಗಳನ್ನು ನೆರವೇರಿಸಲು ಪ್ರಾರ್ಥನೆ ಮಾಡಲಾಗಿದೆ."[೯]

ಕರ್ನಾಟಕವೂ ಸೇರಿದಂತೆ ಭಾರತಾದ್ಯಂತ ಸೂರ್ಯದೇವಾಲಯಗಳಿದ್ದುವು. ಇಂದೋರ್ ತಾಮ್ರಪಟಗಳ ಪ್ರಕಾರ ಸ್ಕಂದಗುಪ್ತನ ಕಾಲದಲ್ಲಿ ಅಲ್ಲಿ ಒಂದು ಸೂರ್ಯ ದೇವಾಲಯವಿದ್ದಿತು. ಮೊದಲನೆಯ ಕುಮಾರಗುಪ್ತನ ಮಂದಸೋರ್ ಶಾಸನದಲ್ಲಿ ಮಧ್ಯಪ್ರದೇಶದ ಮಂದಸೋರ್‌ನಲ್ಲಿ ಒಂದು ಸೂರ್ಯ ದೇವಾಲಯವಿದ್ದಿತು. ಗೋಪಾದ್ರಿಯಲ್ಲಿ (ಗ್ವಾಲಿಯರ್ ಬೆಟ್ಟ), ಬಿಹಾರಿನ ಆರಾದಲ್ಲಿಯೂ ಸೂರ್ಯ ದೇವಾಲಯಗಳಿದ್ದುವು. ಕ್ರಿ.ಶ. ೭ನೇ ಶತಮಾನದಲ್ಲಿ ಮುಲ್ತಾನಿನಲ್ಲಿ ಸೂರ್ಯಾರಾಧಕರಿದ್ದರೆಂದು ಹ್ಯುಯೆನ್‌ತ್ಸಾಂಗ್ ಹೇಳುತ್ತಾನೆ. ಜೋಧಪುರ ಪ್ರಾಂತದ ರಣ್ಪೂರ್ ಮತ್ತು ಬರ್ಮೇವಗಳಲ್ಲಿ ಭಗ್ನ ಸೂರ್ಯ ದೇವಾಲಯಗಳಿವೆ. ರಾಜಾಸ್ಥಾನದ ಒಸಿಯ, ಆಂಧ್ರಪ್ರದೇಶದ ಆಲಂಪೂರ್, ಮಧ್ಯಪ್ರದೇಶದ ಭೂಮಾರಗಳಲ್ಲಿ ಈಗಲೂ ಸೂರ್ಯ ದೇವಾಲಯಗಳಿವೆ.

ಗುಜರಾತಿನ ಮೊಢೇರ, ಕಾಶ್ಮೀರದ ಮಾರ್ತಾಂಡ, ಒರಿಸ್ಸದ ಕೊನಾರ್ಕ (ಚಿತ್ರ ೩೨: ೩೩), ತಮಿಳುನಾಡಿನ ಸೂರ್ಯನಾಯರ್ ಕೋಯಿಲ್‌ಗಳು ಪ್ರಸಿದ್ಧ ಸೂರ್ಯ ದೇವಾಲಯಗಳು.

ಸೂರ್ಯನ ವಿಗ್ರಹಗಳು ಎಲ್ಲ ಕಡೆಯೂ ದೊರಕುತ್ತವೆ. ತಮಿಳುನಾಡಿನ ಗುಡಿಮಲ್ಲಂ ಎಂಬಲ್ಲಿರುವ ಪರಶುರಾಮ ದೇವಾಲಯದ ಸೂರ್ಯವಿಗ್ರಹ ದಕ್ಷಿಣ ಭಾರತದ ಪ್ರಾಚೀನ ಸೂರ್ಯ ವಿಗ್ರಹಗಳಲ್ಲೊಂದು. ಬುದ್ಧಗಯೆಯ ಸೂರ್ಯನ ವಿಗ್ರಹ (ಚಿತ್ರ, ೩೪) ಕ್ರಿ. ಪೂ ೨ನೇ ಶತಮಾನದ್ದು .

ಉತ್ತರ ಭಾರತದ 'ಮಗ' ಬ್ರಾಹ್ಮಣರು ಪರ್ಷಿಯದ 'ಮಿತ್ರ' ಅಥವಾ ಸೂರ್ಯಾರಾಧಕರಾದ 'Magi' ಪುರೋಹಿತರಿಗೆ ಬಹುಶಃ ಸಂಬಂಧಿಸಿದವರು. ಆ ಕಾರಣ ಉತ್ತರ ಭಾರತದಲ್ಲಿ ಸೂರ್ಯ ದೇವಾಲಯಗಳಿರುವುದು ಆಶ್ಚರ್ಯವಲ್ಲವೆಂದೂ ಅಂತಹ ದೇವಾಲಯಗಳಲ್ಲಿ ಸೂರ್ಯ ಮತ್ತು ಇತರ ಗ್ರಹಗಳಿಗೆ ಮೀಸಲಾದ ತಂಜಾವೂರಿನ ಸೂರ್ಯನಾಯರ್ ಕೋಯಿಲ್ ಒಂದು ಎಂದೂ (ನಿರ್ಮಾಣ ಕ್ರಿ. ಶ. ೧೦೬೦–೧೧೧೮) ಹೇಳಲಾಗಿದೆ. ಆದರೆ ಕರ್ನಾಟಕದಲ್ಲಿ ಸೂರ್ಯನಿಗೇ ಮೀಸಲಾದ ಹಲವು ದೇವಾಲಯಗಳಿದ್ದುದಕ್ಕೆ ಶಾಸನಾಧಾರಗಳಿವೆ.

(೧) ನಾಗಮಂಗಲ ತಾಲೂಕಿನ ಹೊನ್ನೇನಹಳ್ಳಿ ಶಾಸನದಲ್ಲಿ (ಕ್ರಿ. ಶ. ೧೨೨೪) ಸೂರ್ಯದೇವರ ಪ್ರತಿಷ್ಠೆಯ ವಿಷಯವಿದೆ.[೧೦]

"....ಸಕವರುಷ ೧೧೬೫ ಕ್ರೋಧಿ ಸಂವತ್ಸರದ ಅಸಡ ಸುದ ಬಹುಳ ದಸಮಿ ಆದಿವಾ(ರ)ದಲು....ಹೊನ್ನಾಚಾರ್ಯನ ಪುತ್ರ ಹರೋಜ ಸೂರ್ಯ ಪ್ರತಿಟೆಯಂ ಮ(ಮಾ)ಡಿದ...."

(೨) ಯಳಂದೂರ್ ತಾಲೂಕಿನ ಕ್ರಿ. ಶ. ೧೨೯೦ರ ಅಗರ ಗ್ರಾಮದ ತಮಿಳು ಶಾಸನದಲ್ಲಿ 'ಸೂರ್ಯದೇವರ್ ಕೋಯಿಲ್' ಹೆಸರಿದೆ.[೧೧]

(೩) ಅದೇ ತಾಲೂಕಿನ ಮಾಂಬಳ್ಳಿ ಶಾಸನದಲ್ಲಿ (ಕ್ರಿ. ಶ. ೧೫೬೦)[೧೨] "ಸೂರಿಯ ಮಟ"ದ (=ಸೂರ್ಯಮಠ) ಹೆಸರಿದೆ. ಆ ಊರಲ್ಲಿದ್ದ ಇನ್ನೊಂದು ಮಠ ಸಿದ್ಧರಾಮಯ್ಯ ದೇವರ ಮಠ. ('ಸೂರಿಯ ಮಠ'ವು 'ಸೂರಯ್ಯಮಠ' ವಾಗಿದ್ದರೂ ಆಶ್ಚರ್ಯವಿಲ್ಲ.)

(೪) ಈಶ್ವರ ದೇವಾಲಯದಲ್ಲಿದ್ದ 'ಸೂರಿಯದೇವ'ರಿಗೆ ಹೆಗ್ಗಡ ದೇವನಕೋಟೆ ತಾಲೂಕಿನ ಶಾಸನವೊಂದರಲ್ಲಿ ದತ್ತಿ ಕೊಡಲಾಗಿದೆ.[೧೩]

(೫) ಕೊಳ್ಳೆಗಾಲ ತಾಲೂಕಿನ ಸಿದ್ಧಯ್ಯನಪುರದ ಒಂಬತ್ತನೇ ಶತಮಾನದ ಶಾಸನದಲ್ಲಿ 'ಆದಿತ್ಯಗೃಹ'ದ ನಂದಾದೀವಿಗೆಗೆ ದತ್ತಿ ಕೊಡಲಾಗಿದೆ.[೧೪]

(೬) ಕ್ರಿ. ಶ. ೧೭೮೦ರ ಮೈಸೂರು ಶಾಸನದಲ್ಲಿ[೧೫] ಸುಬ್ರಹ್ಮಣ್ಯೇಶ್ವರ ದೇವಾಲಯದ 'ಪಂಚಾಯತನ'ದಲ್ಲಿ "ಆದಿತ್ಯ ಅಂಬಿಕಾ ವಿಷ್ಣು ಗಣನಾಥ ಮಹೇಶ್ವರ" ಎಂಬ ದೈವಗಳ ಹೆಸರಿವೆ.

(೭) ಧಾರವಾಡ ಜಿಲ್ಲೆಯ ಅಮ್ಮಿನಬಾವಿಯ ಕ್ರಿ.ಶ. ೧೧೧೨ರ ಶಾಸನದಲ್ಲಿ 'ಆದಿತ್ಯದೇವರ ಸ್ಥಾನಾಚಾರ್ಯ'ರ ಉಲ್ಲೇಖವಿದೆ.[೧೬] ಆ ಊರಲ್ಲಿದ್ದ ಸೂರ್ಯದೇವಾಲಯ ನಡೆಸುತ್ತಿದ್ದ ಸತ್ರದ ಉಲ್ಲೇಖವೂ ಉಂಟು ("....ಶ್ರೀಮದಾದಿತ್ಯ ದೇವರ ಸತ್ರಕ್ಕೆ ಇಂದ್ರಸಿವಜೀಯರ ಮಗಳು ಚಂದ್ರಿಯಕ್ಕಂ ಗೊರವಂಬೊಲದೊಳಗೆ ಪಟ್ಟಗಾರಗೊಳದಿಂ ಬಡಗಲು ತನ್ನ ತಮ್ಮನು ಶ್ರಾವಣದಾರು ಮತ್ತರ್ಕೆಯ್ಯುಮದರ ಬಳಿಯದೊಂದು ಮನೆಯುವೊಂದು ಗಾಣವೊಂದು ಬಣಂಬೆಯೊಂದುಮಂ ದೇವರ ಶತ್ರಕ್ಕೆ ಬಿಟ್ಟಳ್").

(೮) ಸೂರ್ಯ ದೇವಾಲಯದ ಉಲ್ಲೇಖಕ್ಕೆ ಈ ಶಾಸನಗಳನ್ನೂನೋಡಿ: Bombay Karnatak Inscriptions, Vol. I Part i No. 37; "ನೆಗಳ್ದುತ್ತುಂಗ ಶಿವಾಲಯಪ್ರತತಿಯಾದಿತ್ಯಾಲಯಂ ಸಾಲೆ ವಿಷ್ಣುಗೃಹಂ ಬುದ್ಧವಿಹಾರ ಮಹಾಭವನಂ" (South Indian Inscriptions. XX. 49, 1076 A.D.)

(೯) ಧಾರವಾಡ ಜಿಲ್ಲೆ ಕುರಹಟ್ಟಿ ಗ್ರಾಮದಲ್ಲಿದ್ದ ಸೂರ್ಯದೇವಾಲಯಕ್ಕೆ ಕ್ರಿ. ಶ. ೧೧೪೨ ಫೈಬ್ರವರಿ ೧೨ರಂದು ಗ್ರಹಣನಿಮಿತ್ತ ದತ್ತಿ ಬಿಟ್ಟು ಕೊಟ್ಟ ವಿಷಯ ಶಾಸನವೊಂದರಲ್ಲಿದೆ (South Indian Inscriptions. XV. No. 15).

(೧೦) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರು ಸೂರ್ಯ ದೇವಾಲಯಗಳು ದಾಖಲಾಗಿವೆ. ಕುಂಭಾಶಿಯ ಸೂರ್ಯನಾರಾಯಣ (ಸು. ೧೦ನೇ ಶ.), ನಾರಾವಿ (೧೦ ನೇ ಶ.), ಮರೋಳಿ (೧೧–೧೨ನೇ ಶ.), ಬಾರಕೂರು (೧೩–೧೪ನೇ ಶ.), ಕೆಲ್ಲಪುತ್ತಿಗೆ, ಬೆಳ್ಳಿಯ ಸೂರ್ಯ ದೇವಾಲಯಗಳನ್ನು ಹೆಸರಿಸಬಹುದು.[೧೭]

ಕರ್ನಾಟಕದಲ್ಲಿರುವ ಕೆಲವು ಸೂರ್ಯ ವಿಗ್ರಹಗಳು ಹೀಗಿವೆ: ಧಾರವಾಡ ಜಿಲ್ಲೆಯ ಹಾವೇರಿಯಲ್ಲಿ ಸೂರ್ಯ ವಿಗ್ರಹ "ಉದರಬಂಧ, ಅವ್ಯಂಗಗಳನ್ನು ಧರಿಸಿದೆ, ಕಾಲುಗಳು ಬರಿದಾಗಿವೆ. ರಾಜ್ಞಿ, ನಿಕ್ಷುಭೆಯರು ಪಕ್ಕಗಳಲ್ಲಿ ನಿಂತು ಚಾಮರವನ್ನು ಬೀಸುತ್ತಿದ್ದಾರೆ. ಏಳು ಕುದುರೆಗಳು ಕೆತ್ತಲ್ಪಟ್ಟಿವೆ, ಸಾರಥಿಯಿಲ್ಲ.... ನುಗ್ಗೆಹಳ್ಳಿಯಲ್ಲಿರುವ ಬಹುಸುಂದರವಾದ ಮೂರ್ತಿ ಹೊಯ್ಸಳ ರೀತಿಯಲ್ಲಿ ಕೆತ್ತಲ್ಪಟ್ಟಿದೆ. ಮೇಲಣ ಅಂತಸ್ತಿನಲ್ಲಿ ಸಪ್ತಋಷಿಗಳನ್ನು ಕಾಣಬಹುದು. ಉಷೆ ಪ್ರತ್ಯುಷೆಯರೂ ಏಳು ಅಶ್ವಗಳೂ ಅರುಣನೂ ತೋರಿಸಲ್ಪಟ್ಟಿದ್ದಾರೆ."[೧೮] ಬೇಲೂರಿನಲ್ಲಿರುವ ಸೂರ್ಯವಿಗ್ರಹವು ನುಗ್ಗೇಹಳ್ಳಿಯ ಬಿಂಬವನ್ನೇ ಹೋಲುತ್ತದೆ.[೧೯]

ಕೋಲಾರದ ಸೂರ್ಯವಿಗ್ರಹದ ಎರಡು ಕೈಗಳಲ್ಲೂ ಪದ್ಮವನ್ನೂ, ಅವ್ಯಂಗವನ್ನೂ ಗುರುತಿಸಬಹುದು (ಚಿತ್ರ ೩೦). (ಅವ್ಯಂಗ = ಸೊಂಟಪಟ್ಟಿ)

ಚನ್ನಗಿರಿ ತಾಲೂಕು ಮದಿಕೆರೆ ಗ್ರಾಮದ ಹೊಯ್ಸಳ ಅಥವಾ ಸ್ವಲ್ಪ ಹೊಯ್ಸಳಪೂರ್ವ ಕಾಲದ ತ್ರಿಮೂರ್ತಿದೇವಾಲಯವೊಂದರಲ್ಲಿ ಸೂರ್ಯವಿಗ್ರಹವಿರುವುದನ್ನು ಯಾರೂ ಗುರುತಿಸಿಲ್ಲ. ಪ್ರವೇಶದ್ವಾರಕ್ಕೆ ನೇರ ಎದುರಿನ ಗರ್ಭಗುಡಿಯಲ್ಲಿ ಕೇಶವವಿಗ್ರಹ, ಎಡ ಗರ್ಭಗುಡಿಯಲ್ಲಿ ಶಿವಲಿಂಗ, ಬಲ ಗರ್ಭಗುಡಿಯಲ್ಲಿ ಸೂರ್ಯವಿಗ್ರಹ ಇವೆ. ಸೂರ್ಯವಿಗ್ರಹವನ್ನು ಜನ ಬ್ರಹ್ಮ ಎಂದು ಕರೆಯುತ್ತಾರೆ. (ಶಿವ, ವಿಷ್ಣುವಾದ ಬಳಿಕ ತ್ರಿಮೂರ್ತಿಗಳಲ್ಲಿ ಬ್ರಹ್ಮ ಬರಬೇಕು ತಾನೇ ?). ಸೂರ್ಯವಿಗ್ರಹ ಪಶ್ಚಿಮಾಭಿಮುಖವಾಗಿದೆ. ಅದರ ಮುಂದೆ ನಾವು ನಿಂತಾಗ ಪೂರ್ವಾಭಿಮುಖವಾಗುತ್ತೇವೆ; ಮತ್ತು ಉದಯ ಸೂರ್ಯನಿಗೆ ಪೂಜೆ ಸಲ್ಲಿಸಿದಂತಾಗುತ್ತದೆ. ಸುಮಾರು ನಾಲ್ಕಡಿ ಎತ್ತರದ ವಿಗ್ರಹದ ಪೀಠದಲ್ಲಿ ಸಪ್ತಾಶ್ವಗಳನ್ನು ಓಡಿಸುತ್ತಿರುವ ಅರುಣ ಇದ್ದಾನೆ. ಎರಡು ಕೈಗಳಲ್ಲೂ ಕಮಲದ ಮೊಗ್ಗುಗಳಿವೆ. ಮೇಲೆ ಪ್ರಭಾವಳಿಯಲ್ಲಿ ಅಷ್ಟಗ್ರಹಗಳನ್ನು ಸುತ್ತಲೂ ಕೆತ್ತಲಾಗಿದೆ. (ಸೂರ್ಯನೂ ಸೇರಿದಂತೆ ನವಗ್ರಹಗಳಾಗುತ್ತವೆ.) ಶಿವ, ವಿಷ್ಣು, ಸೂರ್ಯ ಮೂರಕ್ಕೂ ಪೂಜೆ ನಡೆಯುತ್ತಿದೆ. ಈ ಒಟ್ಟು ದೇವಾಲಯವನ್ನು ಹಳ್ಳಿಯವರು ಮಲ್ಲೇಶ್ವರ ದೇವಾಲಯ ಎನ್ನುತ್ತಾರೆ. (ದೇವಾಲಯಕ್ಕೆ ನಾನು ಭೇಟಿ ಕೊಟ್ಟದ್ದು ೨೬-೫-೮೧ರಂದು; ದೇವಾಲಯದ ವಿಷಯ ತಿಳಿಸಿದವರು ಸಂತೇಬೆನ್ನೂರಿನ ಶ್ರೀ ಸುಮತೀಂದ್ರ ನಾಡಿಗರು).

ಈ ಬಗೆಯ ಉದಾಹರಣೆಗಳನ್ನು ಎಷ್ಟೋ ಬೆಳಸಬಹುದು. "No evidence of a Sun-cult in the shape of a Sun-temple has come from the Deccan-Karnataka in the ancient and medieval periods" ಎಂಬ ಮಾತಾಗಲಿ[೨೦] "The reason why Sun-worship was never popular in South India can be because the Sun is very strong there and people look forward to rains and to a cooler weather"[೨೧] ಎಂಬ ಮಾತಾಗಲಿ ದಕ್ಷಿಣ ಭಾರತಕ್ಕೆ ಅಥವಾ ಕರ್ನಾಟಕಕ್ಕೆ ಅನ್ವಯವಾಗುವುದಿಲ್ಲ .

ಸೂರ್ಯಾರಾಧನೆ ಕರ್ನಾಟಕದಲ್ಲಿ ಸಾಕಷ್ಟು ಜನಪ್ರಿಯವಾಗಿದ್ದಿತು ಮತ್ತು ಮಧ್ಯಯುಗೀನ ಕರ್ನಾಟಕದಲ್ಲಿ ಸ್ವತಂತ್ರ ಸೂರ್ಯ ದೇವಾಲಯಗಳು ಸಾಕಷ್ಟು ಸಂಖ್ಯೆಯಲ್ಲಿ ನಿರ್ಮಾಣವಾಗಿದ್ದುವೆಂಬುದಕ್ಕೆ ಮೇಲಿನ ಆಧಾರಗಳು ಪ್ರಬಲ ಸಾಕ್ಷ್ಯವನ್ನು ಒದಗಿಸುತ್ತವೆ. ಅಲ್ಲದೆ ಸು. ೧೬೪೦ರಲ್ಲಿ 'ಕವಿಕಂಠಹಾರ'ವನ್ನು

ಬರೆದ ಸೂರ್ಯಕವಿಯು ಸೂರ್ಯಾರಾಧಕನಾಗಿದ್ದ ತಿಮ್ಮ ಮಂತ್ರಿಯ ಮಗ. (ತಿಮ್ಮಮಂತ್ರಿಯನ್ನು ಸೂರ್ಯಕವಿ "ಸೂರ್ಯಪದಯುಗಾರುಣಭಾಸುರಸರಸಿಜ ಮರಾಳನ್" ಎಂದು ಹೊಗಳಿದ್ದಾನೆ. ತಂದೆ ತನ್ನ ಆರಾಧ್ಯ ದೈವದ ಹೆಸರನ್ನೇ ಮಗನಿಗೆ ಇಟ್ಟ.)

ಸೂರ್ಯನ ಮಾವ ತನ್ನ ಅಳಿಯನ ಮಹಾಕಾಂತಿಯನ್ನು ಕಡಿಮೆಮಾಡುವಾಗ, ಸೂರ್ಯನ ಕಾಲಿನ ಕಾಂತಿ ನಾಶವಾಗದಂತೆ ಎಚ್ಚರವಹಿಸಿದ. ಆ ಕಾರಣ, ಸಾಂಪ್ರದಾಯಕ ಶಿಲ್ಪಿಗಳು ಕೆಲವೆಡೆ ಸೂರ್ಯನ ಕಾಲುಗಳನ್ನು ಬಿಡಿಸದೆ ಹಾಗೇ ಬಿಡುತ್ತಾರೆ (ಚಿತ್ರ ೩೧) ಅಥವಾ ತೆಳು ಬಟ್ಟೆಯಿಂದ ಅವನ್ನು ಆಚ್ಛಾದನ ಮಾಡಿರುವಂತೆ ಚಿತ್ರಿಸುತ್ತಾರೆ (ಚಿತ್ರ ೩೦). ಉತ್ತರ ಭಾರತದ ಕೆಲವು ವಿಗ್ರಹಗಳಿಗೆ ಉದ್ದನೆ ಬೂಟ್ಸ್ (Gum Boots) ತೊಡಿಸಿರುತ್ತಾರೆ (ಚಿತ್ರ ೩೩).

ಶಿವ, ವಿಷ್ಣು, ಶಕ್ತಿಯರ ಆರಾಧನೆ ಪ್ರಬಲವಾಗಿ ಸೂರ್ಯಾರಾಧನೆ ಹಿಂದೆ ಬಿದ್ದಿತು. ಒಂದು ಕಾಲದಲ್ಲಿ ಬಲಿಷ್ಠವಾಗಿದ್ದ ಸೂರ್ಯನನ್ನು ನಾರಾಯಣ ನೊಡನೆ ಸಮೀಕರಿಸಿ ಸೂರ್ಯನಾರಾಯಣ ಎಂದು ಮಾಡಿಕೊಂಡ ವಿಗ್ರಹಗಳು ಬಹು ಸಂಖ್ಯೆಯಲ್ಲಿವೆ. ಸೂರ್ಯನನ್ನು ವಿರಳವಾಗಿ ಬುದ್ಧ, ಲೋಕೇಶ್ವರ, ಶಿವ, ಬ್ರಹ್ಮರ ಜೊತೆ ಸಮೀಕರಿಸಿರುವುದೂ ಉಂಟು. ಒಂದೇ ವಂಶದಲ್ಲಿ ಭಿನ್ನ ಭಿನ್ನ ದೈವಾರಾಧಕರು ಇದ್ದುದಕ್ಕೆ ಉದಾಹರಣೆಗಳಿವೆ; ಹರ್ಷವರ್ಧನನ ತಂದೆ ಸೌರ, ಅಣ್ಣ ರಾಜ್ಯವರ್ಧನ ಒಬ್ಬ ಬೌದ್ಧ; ಹರ್ಷವರ್ಧನ ಸ್ವಯಂ ಶೈವ; ತಾಯಿಯ ಕಡೆಯವರು ವೈಷ್ಣವರು. ಹೀಗೆ ಸರ್ವಧರ್ಮಗಳ ಸಹ ಅಸ್ತಿತ್ವ ಭಾರತಕ್ಕೆ ಅಪೂರ್ವವಲ್ಲ; ಕರ್ನಾಟಕಕ್ಕಂತೂ ಇದು ತೀರ ಸ್ವಾಭಾವಿಕ.

ಜಾವಾದಲ್ಲಿ ಸೂರ್ಯ, ಬ್ರಹ್ಮ, ವಿಷ್ಣು, ಶಿವ ಇವರ ನಾಲ್ಕು ಮುಖಗಳನ್ನು ಕೆತ್ತಿರುವ ಒಂದು ಶಿವಲಿಂಗವಿದೆ. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯ ಪಂಚಮುಖಿ ಶಿವಲಿಂಗ (ನಾಲ್ಕು ವಿಗ್ರಹಗಳು, ಮಧ್ಯೆ ಶಿವಲಿಂಗ) ಇಂತಹುದೇ ಒಂದು ಮೂರ್ತಿಯಾಗಿರಬೇಕು. ಹಾಗೆಯೇ, ಸೂರ್ಯ ಮತ್ತು ಬುದ್ಧರನ್ನು ಅಕ್ಕಪಕ್ಕದಲ್ಲಿ ಹೊಂದಿರುವ ಹರಿಹರ ವಿಗ್ರಹವೂ ಸಿಕ್ಕಿದೆ.

ಈ ದೈವಸಮನ್ವಯವು ಅಮರಾವತಿ ಶಿಲ್ಪವೊಂದರಲ್ಲಿ ಸ್ಪಷ್ಟವಾಗಿದೆ. ಇಲ್ಲಿಯ ಶಿಲ್ಪದಲ್ಲಿ ಬ್ರಹ್ಮ, ವಿಷ್ಣು, ರುದ್ರ, ಅಗ್ನಿ, ಸೂರ್ಯರನ್ನು ಒಟ್ಟಿಗೆ ತೋರಿಸಿದೆ. ಕೆಳಗೆ ಪಾದಗಳು, ಅದರ ಮೇಲೆ ಕಮಲ, ಮತ್ತು ಸ್ತಂಭದ ತುದಿಯಲ್ಲಿ ಚಕ್ರ; ಮೇಲೆ ತ್ರಿಶೂಲವಿದೆ. ಕಮಲ ಬ್ರಹ್ಮನ ಚಿಹ್ನೆ (ಬ್ರಹ್ಮನು ಹುಟ್ಟಿದ್ದು ಕಮಲದಲ್ಲಿ); ಬೆಂಕಿಯ ಜ್ವಾಲೆ ರುದ್ರನ, ಯೂಪ ಸ್ತಂಭವು ಅಗ್ನಿಯ, ಪಾದಗಳು ವಿಷ್ಣುವಿನ ಚಿಹ್ನೆಗಳು. ಚಕ್ರವು ಸೂರ್ಯನ, ತ್ರಿಶೂಲವು ತ್ರಿರತ್ನಗಳ (ಬುದ್ಧ, ಸಂಘ, ಧರ್ಮ)

ಚಿಹ್ನೆಗಳು. ಇಡೀ ಶಿಲ್ಪ ಎಲ್ಲ ದೈವಗಳಿಗಿಂತ ಬುದ್ಧ ಶ್ರೇಷ್ಠನೆಂದು ತೋರಿಸುವ ಯತ್ನವೂ ಆಗಿರಬಹುದು.

ಸೂರ್ಯ ನವಗ್ರಹಗಳಲ್ಲಿ ಒಬ್ಬ (ಸೂರ್ಯ, ಚಂದ್ರ, ಭೌಮ, ಬುಧ, ಶುಕ್ರ, ಬೃಹಸ್ಪತಿ, ಶನಿ, ರಾಹು, ಕೇತು: ಚಿತ್ರ ೩೬). ಇವುಗಳ ವಿಗ್ರಹಗಳು ಎಂದೂ ಎದುರುಬದರಾಗಿರುವುದಿಲ್ಲ. ಕರ್ನಾಟಕದ ದೇವಾಲಯಗಳಲ್ಲಿ ನವಗ್ರಹ ಮಂಟಪ ಇರುವುದು ತೀರ ಸಾಮಾನ್ಯ ಸಂಗತಿ. ದೋಷ ಪರಿಹಾರಕ್ಕೆ ಶಾಸ್ತ್ರೋಕ್ತ ನವಗ್ರಹಪೂಜೆಯೇ ಮದ್ದು ಎಂಬ ಪ್ರಬಲ ನಂಬಿಕೆಯುಂಟು (ಚಿತ್ರ ೩೭).

ಶಿವಮೊಗ್ಗ ಜಿಲ್ಲೆಯ ಭುವನಗಿರಿದುರ್ಗ, ಕೆಳದಿಗಳಲ್ಲಿ ಸೂರ್ಯ ಚಂದ್ರರನ್ನು ನುಂಗುತ್ತಿರುವ ಸರ್ಪಗಳನ್ನು ಬಿಡಿಸಿರುವ ಶಿಲ್ಪಗಳಿವೆ. (ಚಿತ್ರ ೪೨).

ಒಂದು ಕತೆಯ ಪ್ರಕಾರ ಕೊಡೆ, ಪಾದರಕ್ಷೆಗಳ ಉಗಮಕ್ಕೆ ಸೂರ್ಯನೇ ಕಾರಣ. ಜಮದಗ್ನಿ ಋಷಿ ಧನುರ್ವಿದ್ಯೆಯನ್ನು ಅಭ್ಯಸಿಸುತ್ತ ಬಾಣಬಿಟ್ಟಾಗಲೆಲ್ಲ ಅವನ ಚಿಕ್ಕ ವಯಸ್ಸಿನ ಪತ್ನಿ ರೇಣುಕೆ ಹೋಗಿ ಅವನ್ನು ಆರಿಸಿ ತರುತ್ತಿದ್ದಳು. ಒಮ್ಮೆ ಅವಳು ಹೀಗೆ ಹೋದಾಗ ಸೂರ್ಯನ ತಾಪ ತಡೆಯಲಾರದೆ ಬಿದ್ದುಬಿಟ್ಟಳು. ಜಮದಗ್ನಿ ಕೋಪಿಷ್ಠನಾಗಿ ಇನ್ನೇನು ಸೂರ್ಯನನ್ನು ತನ್ನ ಬಾಣದಿಂದ ಭೇದಿಸಬೇಕು ಎನ್ನುವಷ್ಟರಲ್ಲಿ ಸೂರ್ಯ ಬ್ರಾಹ್ಮಣನಾಗಿ ಬಂದು ಅದನ್ನು ತಡೆದ. ಜಮದಗ್ನಿ ಒಪ್ಪಿ, ಮಧ್ಯಾಹ್ನದ ಹೊತ್ತು ಒಂದು ಕ್ಷಣ ನಿಶ್ಚಲನಾಗಿ ನಿಲ್ಲಬೇಕೆಂದು ಸೂರ್ಯನಿಗೆ ಆಜ್ಞಾಪಿಸಿದ. ಸೂರ್ಯ ಒಪ್ಪಿದ್ದು ಮಾತ್ರವಲ್ಲದೆ ಜಮದಗ್ನಿಯ ಪತ್ನಿಗೆ ಕಾಣಿಕೆಯಾಗಿ ಒಂದು ಕೊಡೆ, ಒಂದು ಜೊತೆ ಪಾದರಕ್ಷೆಗಳನ್ನೂ ಕೊಟ್ಟ. ಅದರಿಂದ ಅವು ಮನುಷ್ಯರಲ್ಲಿ ಬಳಕೆಗೆ ಬಂದುವು.

## ಸೂರ್ಯನ ರಥಕ್ಕೆ ಕೋಣಗಳು

ಬಿಜಾಪುರ ಜಿಲ್ಲೆಯಲ್ಲಿ ಈ ಸಂಗತಿ ಪ್ರಚಲಿತವಾಗಿದೆ. ವಿಜಯದಶಮಿಯಿಂದ ಸಂಕ್ರಾಂತಿಯವರೆಗೆ ಹಗಲು ಚಿಕ್ಕದಾಗುತ್ತ ರಾತ್ರಿ ದೀರ್ಘವಾಗುತ್ತ ಹೋಗುತ್ತದೆ. ಇದಕ್ಕೆ ಕಾರಣ ಸೂರ್ಯ ತನ್ನ ರಥಕ್ಕೆ ಹಗಲು ಕುದುರೆಗಳನ್ನು ಕಟ್ಟಿ ರಾತ್ರಿ ಕೋಣಗಳನ್ನು ಕಟ್ಟುತ್ತಾನೆ. ಕುದುರೆಗಳ ವೇಗ ಜಾಸ್ತಿ, ಕೋಣಗಳ ವೇಗ ಕಡಿಮೆ. ಆ ಕಾರಣ ಹಗಲು ಚಿಕ್ಕದು, ರಾತ್ರಿ ಸುದೀರ್ಘ. ಮತ್ತು ಬೆಳೆಗಳು ದೊಡ್ಡದಾಗುವುದು ಅಥವಾ ಬೆಳೆಯುವುದು ರಾತ್ರಿಯೇ. ಸೂರ್ಯ ವಿಜಯದಶಮಿಯಿಂದ ಸಂಕ್ರಾಂತಿಯವರೆಗೆ ಬೇಕೆಂದೇ ರಾತ್ರಿ ಕೋಣಗಳನ್ನು ರಥಕ್ಕೆ ಹೂಡಿ ರಾತ್ರಿಯನ್ನು ಸುದೀರ್ಘಮಾಡಿ ಬೆಳೆಗಳು ದೊಡ್ಡವಾಗುವುದಕ್ಕೆ ಅವಕಾಶ ಮಾಡಿಕೊಡುತ್ತಾನೆ.

ಸೂರ್ಯ ಸಂಕ್ರಾಂತಿಯಿಂದ ಮುಂದಕ್ಕೆ ಹಗಲು ಕೋಣಗಳನ್ನು ಹೂಡಿ ರಾತ್ರಿ ಕುದುರೆಗಳನ್ನು ಹೂಡುತ್ತಾನೆ. ಆ ಕಾರಣ, ಹಗಲು ದೊಡ್ಡದಾಗುತ್ತ ರಾತ್ರಿ ಚಿಕ್ಕದಾಗುತ್ತ ಬರುತ್ತದೆ. (ಈ ಕತೆಯನ್ನು ಬಿಜಾಪುರ ಪಕ್ಕದ ತೊರವೆ ಗ್ರಾಮದ ರೈತಾಪಿ ಜನರಿಂದ ಸಂಗ್ರಹಿಸಲಾಗಿದೆ.)

**ಮುಮ್ಮಡಿ ಕೃಷ್ಣರಾಜ ಒಡೆಯರ "ಗ್ರಹಣದರ್ಪಣ"**

ಕ್ರಿ. ಶ. ೧೮೧೧ರಲ್ಲಿ ಮೈಸೂರಿನ ರಾಜ್ಯಸೂತ್ರಗಳನ್ನು ಹಿಡಿದ ಮುಮ್ಮಡಿ ಕೃಷ್ಣರಾಜ ಒಡೆಯರ್ (೧೭೯೪–೧೮೬೮) ಅವರ ಹಲವು ಕೃತಿಗಳಲ್ಲಿ ಸಂಸ್ಕೃತ 'ಗ್ರಹಣದರ್ಪಣ'ವೂ ಒಂದು. ಇದು ಇವರು ರಚಿಸಿದ್ದೋ ಅವರ ಹೆಸರಲ್ಲಿ ಆಸ್ಥಾನ ವಿದ್ವಾಂಸ ಸಜ್ಜಯಂ ತಾತಾಚಾರ್ಯ ರಚಿಸಿದ್ದೋ ಸಂದೇಹವಿದೆ.[೨೨] ಇದರಲ್ಲಿ ಕ್ರಿ. ಶ. ೧೮೩೯ರಿಂದ ಮುಂದೆ ಅರುವತ್ತು ವರ್ಷಗಳವರೆಗೆ ನಡೆದ ಚಂದ್ರ ಸೂರ್ಯಗ್ರಹಣಗಳನ್ನು 'ಸೂರ್ಯಸಿದ್ಧಾಂತ ರೀತಿ'ಯ ಪ್ರಕಾರ ವಿವರಿಸಿದೆ. (ಈ ಗ್ರಹಣಗಳಲ್ಲಿ ಕೆಲವು ಕೃತಿರಚನೆಯ ಕಾಲಕ್ಕೆ ನಡೆದಂಥವು ಮತ್ತು ಬಳಿಕ ನಡೆದಂಥವು. ಎಂದರೆ ೧೮೩೯–೧೮೯೯ ಈ ಅವಧಿಯ ಗ್ರಹಣಗಳನ್ನು ವಿವರಿಸಿದೆ. ಬಹುಶಃ ತಾತಾಚಾರ್ಯ ಬರೆದ ಕೃತಿಯೇ ಇರಬಹುದು ಇದು.) ಗ್ರಹಣಗಳ ಸ್ಪರ್ಶ, ಮೋಕ್ಷ ವಿವರಗಳನ್ನು ಈ ಕೃತಿಯಲ್ಲಿ ಚಿತ್ರ ಸಮೇತ ಕೊಟ್ಟಿದೆ. ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ಇರುವ ಕಲ್ಲಚ್ಚಿನ ಪ್ರತಿಯಲ್ಲಿ ಮಧ್ಯೆ ಮಧ್ಯೆ ಕೈಯಲ್ಲಿ ಬರೆದ ವರ್ಣ ಚಿತ್ರಗಳಿವೆ. ಐದನೆಯ ಪುಟದ ಪಾಠವನ್ನು ಕೆಳಗೆ ಕೊಡಲಾಗಿದೆ (ಚಿತ್ರ ೩೮ ನೋಡಿ).

ಅಸ್ಮಿನ್ ವರ್ಷೇ ಅಸ್ಮಿನ್ನೇವ ಮಾಸೇ ಕೃಷ್ಣ
ಅಮಾಯಾಂ ಸೂರ್ಯಗ್ರಹಣಮ್ ॥

**ವಿಷಮವೃತ್ತಂ –**

ಅಬ್ದೇ ತಥಾಸ್ಮಿನ್ನಪಿ ಚಾತ್ರಮಾಸೇ
ನಾಸತ್ಯಪಕ್ಷೇ ಚ ಮುಹೂರ್ತಸಮ್ಮಿತೇ ।
ದಿನೇ ಚ ಕನ್ಯಾಮಿತವಾಸರೇಽಹ್ನಿ
ನಂದೇಂದುಭೇ ವಹ್ನಿಪದೇ ರವಿಗ್ರಹಃ ॥೧॥

**ಉಪಜಾತಿವೃತ್ತಂ –**

ಗುಣೇಷು ಯುಕ್ತೇ ಕ್ಷಣನಾಡಿಕಾಯಾಂ
ಸ್ಪರ್ಶಃ ಸತಿಘ್ನದ್ರಿಘಟೀಷು ಮಧ್ಯಃ ।
ಸಹಾಕ್ಷರೇಶಾನಘಟೀಷು ಮೋಕ್ಷಃ
ಚಾದ್ಯಂತ ಆಯಾರ್ಥಯುತಾ ಹಿ ನಾಡ್ಯಃ ॥೨॥

**ಅನುಷ್ಟುಪ್ –**

ವೇಶ್ಯಾದಿಶಿಭವೇತ್ ಸ್ಪರ್ಶೋ ಮೋಕ್ಷಸ್ಸ್ಯಾತ್ ಭಾರ್ಗವೀದಿಶಿ
ಷೋಡಶಾಂಶನ್ಯೂನ ಪೂರ್ಣಗ್ರಾಸೋಽಸ್ಮಿನ್‌ಗ್ರಹಣೇ ಭವೇತ್ ॥೩॥
ವತ್ಸರೇಽಸ್ಮಿನ್ ಕವೀರಾಜಾ ಮಂತ್ರೀ ಚಂದ್ರಸುತೋ ಭವೇತ್ ।
ನ ವಿದ್ಯತೇಽಧಿಕೋ ಮಾಸಃ ಇತಿ [ಜ್ಞೇಯಂ ಮನೀಷಿಭಿಃ] ॥೪॥

ಗ್ರಂಥಾರಂಭದಲ್ಲಿ "ಶ್ರೀಚಾಮುಂಡಿಕಾಯೈ ನಮಃ ॥ ಶುಭಮಸ್ತು ॥ ಗ್ರಹಣದರ್ಪಣ ಗ್ರಂಥಕ್ಕೆ ನಿರ್ವಿಘ್ನಮಸ್ತು ॥" ಎಂದಿದೆ. ಈ ಕಲ್ಲಚ್ಚಿನ ಪ್ರತಿಯಲ್ಲಿ ನಾಲ್ಕೈದು ಕೃತಿಗಳು ಸೇರಿಕೊಂಡಿರುವುದರಿಂದ ಎಲ್ಲಕ್ಕೂ ಸೇರಿಸಿ ಮುಕ್ತಾಯ ವಾಕ್ಯ ಬಂದಿದೆ. ಅದು ಹೀಗಿದೆ:

> "ಮಹೀಶೂರ ಪುರವರಾಧೀಶ ರಾಜಾಧಿರಾಜ ಮಹಾರಾಜ ಕೃಷ್ಣರಾಜ ಸಾರ್ವಭೌಮರಿಂದ ಲೋಕೋಪಕಾರಾರ್ಥವಾಗಿ ರಚಿತಮಾದ ಪಡಿಯಚ್ಚಿನ ಅಕ್ಷರದಿಂ ಪ್ರಸಿದ್ಧ ಮಾಡಿಸಲ್ಪಟ್ಟ ಸಂಖ್ಯಾರತ್ನ ಕೋಶವೆಂಬ ನಿಘಂಟು ಇದಕ್ಕೆ ವಾಖ್ಯಾನ ಪ್ರಭಾವಳಿ **ಗ್ರಹಣದರ್ಪಣ** ಚತುರ್ಯುಗ ಶಕಪುರುಷರ ವಿವರ ಗೌರೀಪಂಚಾಂಗ ಮುಹೂರ್ತರಾಜೀಯಕ್ಕೆ ಮಂಗಲಮಹಾಶ್ರೀಶ್ರೀ ॥ಶ್ರೀ ಕೃಷ್ಣ ॥"

ಅದೇ ಕೃತಿಯ ಇನ್ನೂ ಎರಡು ಪುಟಗಳ ಚಿತ್ರಗಳನ್ನು ಮಾದರಿಗಾಗಿ ಇಲ್ಲಿ ಕೊಟ್ಟಿದೆ (ಚಿತ್ರ ೩೯, ಚಿತ್ರ ೪೦).[೨೩] ಗ್ರಹಣದ ಬಗ್ಗೆ ಕರ್ನಾಟಕದಲ್ಲಿ ಹುಟ್ಟಿರುವ ಕೃತಿಗಳಲ್ಲಿ ಇದು ವಿಶಿಷ್ಟವಾದುದಾಗಿದೆ.

## ಅಡಿಟಿಪ್ಪಣಿಗಳು

೧. ಈ ಅನುಬಂಧದ ಆರಂಭದ ಕೆಲವು ಪುಟಗಳನ್ನು ಬರೆಯುವಲ್ಲಿ ಶಕ್ತಿ ಎಂ. ಗುಪ್ತ ಅವರ Surya, The Sun God (Somaiya Publications, Bombay, 1977) – ಎಂಬ ಪುಸ್ತಕಕ್ಕೆ ಋಣಿಯಾಗಿದ್ದೇನೆ.

೨. ಸಿ.ಬಿ. ಸೀತಾರಾಂ: 'ಭಾರತದಲ್ಲಿ ಸೂರ್ಯಾರಾಧನೆ' (ಪ್ರಬುದ್ಧ ಕರ್ನಾಟಕ, ೪೪. ೨. ಪು. ೨೩).

೩. ಸಮಯಪರೀಕ್ಷೆ (ಸಂ. ಬಿ.ಎಸ್. ಕುಲಕರ್ಣಿ), ೧.೫೮.

೩.೧ ಪೆಂಡತಿ ಮಾಹೇಶ್ವರಿ ಗಡ । ಗಂಡಂ ಜೈನ ಗಡವನ ಮಕ್ಕಳ್ಗಡ ಮಾ । ರ್ತಂಡಂಗೆ ಭಕ್ತರ್....॥ (ಅದೇ, ೮.೧೨೫).

೪. ಮೊದಲೊಳ್ ಮುನ್ನಂ ಪೊಡೆವಡು
ವುದು ಸೂರ್ಯಂಗಿಷ್ಟದೇವತಾರಾಧನೆ ಮಾ
ಳ್ಪುದು ಬಳಿಕಮೆಂದು ಪೇಳ್ದಂ
ದದಿನೀಶನ ಮತದೆ ಶೈವರೆಲ್ಲಂ ನೆಗಳ್ದರ್ (ಅದೇ, ೮.೧೧೪).

೫. ಗ್ರಹಣಂಗಳಲ್ಲಿ ಶಾಂತ್ಯಾ । ವಹಮೆಂದುಂ ಉಣಲಿಬೇಳ್ವುದುಂ ಕೊಟ್ಟು ದುರಾ ಗ್ರಹಿಗಳು ಶಾಂತಿಕರಂ ಸಂ । ಗ್ರಹ ಭೋಜನವೆಂದು ಮಾಳ್ಪರರಿವಿಲ್ಲದವರ್ ॥
(ಅದೇ. ಅನುಬಂಧ ೧. ಪದ್ಯ ೧೧).

೬. ಉರಿಲಿಂಗಪೆದ್ದಿ – "ಶೈವವೆಂದು ಶಾಕ್ತೇಯವೆಂದು ವೈಷ್ಣವವೆಂದು ಗಾಣಪತ್ಯವೆಂದು ಸೌರವೆಂದು ಕಾಪಾಲಿಕವೆಂದು ಇಂತೀ ಷಡ್ದರ್ಶನಂಗಳಿಗೆಯೂ ಶಿವನೊಬ್ಬನೇ". ಇದಕ್ಕೆ ಅವನಿಗೆ ಆಧಾರ 'ಶಿವಧರ್ಮ'ದ ಈ ಹೇಳಿಕೆ – "ದರ್ಶನಂ ಷಡ್ವಿಧಂ ಪ್ರೋಕ್ತಂ ಶೈವಂ ಶಾಕ್ತೇಯವೈಷ್ಣವೇ । ಗಾಣಪತ್ಯಂ ಚ ಸೌರಂ ಚ ಕಾಪಾಲಿಕಮಿತಿ ಸ್ಮೃತಂ" (ಗಣಭಾಷ್ಯ ರತ್ನಮಾಲೆ. ಸಂ: ಶ್ರೀ ಪ್ರಭುಸ್ವಾಮಿಗಳು. ಪು. ೮೦–೮೧; ೧೩೫).

೭. ವಿವೇಕಚಿಂತಾಮಣಿ (ಸಂ: ಜಿ. ಎಂ. ಉಮಾಪತಿಶಾಸ್ತ್ರೀ. ಹುಬ್ಬಳ್ಳಿ, ೧೯೬೯). ಪುಟ. ೨೧೫–೨೨೦.

೮. ೧೯೧೯ ರಲ್ಲಿ ಎಂ.ಆರ್. ವೆಂಕಟಾಚಲಶೆಟ್ಟಿ, ಬೆಂಗಳೂರು, ಅವರು ಪ್ರಕಟಿಸಿರುವ ಮತ್ತು ಅದರ ಹಿಂದಿನ ಆವೃತ್ತಿಗಳಲ್ಲಿ ಇಲ್ಲಿಂದ ಮುಂದೆ ಈ ಮಾತುಗಳಿವೆ – "......ರವಿಚಂದ್ರರ ಮಧ್ಯದೊಳ್ಬೈದುವ ಭೂಮಿಗೋಳದ ನೆರಳು ತಮೋನಾಮದಿ ರವಿಚಂದ್ರರಿಗಡ್ಡಮಾಗಲದೇ ಗ್ರಹಣಮೆನ್ನಲ್ಪಡುವುದಲ್ಲದೆ ಕಾರಣಾಂತರಮಿಲ್ಲ" – ಈ ಮಾತುಗಳಾಗಲಿ, ಮುಂದೆ ಬರುವ 'ದರ್ಪಣವಿಕಾರ' (Lens ?) ಎಂಬ

ಮಾತಾಗಲಿ ಆಧುನಿಕ ಜ್ಞಾನದ ಅರಿವುಳ್ಳ ಶ್ರೀ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳು ತಾವು ೧೮೬೩ ರಲ್ಲಿ ಹೊರತಂದ 'ವಿವೇಕಚಿಂತಾಮಣಿ'ಯ ಮೂಲಪಾಠಕ್ಕೆ ಸೇರಿಸಿದ ಭಾಗಗಳೆಂಬಲ್ಲಿ ಅನುಮಾನವಿಲ್ಲ. ಈ ಭಾಗಗಳು 'ವಿವೇಕಚಿಂತಾಮಣಿ'ಯ ಪ್ರಾಚೀನ ಓಲೆಗರಿ ಹಸ್ತಪ್ರತಿಗಳಲ್ಲಿಲ್ಲವೆಂದು ಶ್ರೀ ಉಮಾಪತಿ ಶಾಸ್ತ್ರಿಗಳು ತಮ್ಮ ಆವೃತ್ತಿಯ ಕೊನೆಯಲ್ಲಿ ಪ್ರಕ್ಷಿಪ್ತ ಭಾಗದಲ್ಲಿ ಕೊಟ್ಟಿರುವುದು ಸರಿಯಾಗಿದೆ.

೯. Shashibhushan Dasgupta: Obscure Religious Cults (Calcutta. 1969). pp. 291-2.

೧೦. Ep. Carn. VII. Nagamangala, 104. (Mysore Edition).

೧೧. Ep. Carn. IV. Yalandur. 111 (Mysore Edition)

೧೨. ಅದೇ. No. ೧೬೨

೧೩. Ep. Carn. III. Heggadadevanakote, 152 (Mysore Edition)

೧೪. Ep. Carn. IV. Kollegala. 38 (Mysore Edition)

೧೫. Ep. Carn. V. Mysore, 16 (Mysore Edition)

೧೬. ಧಾರವಾಡ ತಾಲೂಕಿನ ಶಾಸನಗಳು (ಸಂ: ಎಂ. ಎಂ. ಕಲಬುರ್ಗಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬). ಪು. ೫–೬.

೧೭. P. Gururaja Bhat: Studies in Tulu History and Culture. 1975. pp. 337-47.

೧೮. T.A. Gopinatha Rao: Elements of Hindu Iconography. Plates No. XCI. XCII, XCIV-Fig.2 (ಉಲ್ಲೇಖ: ಸಿ.ಬಿ. ಸೀತಾರಾಂ: 'ಭಾರತದಲ್ಲಿ ಸೂರ್ಯಾರಾಧನೆ' (ಪ್ರಬುದ್ಧ ಕರ್ಣಾಟಕ, ೪೪.೨ ಪು. ೪೨–೩).

೧೯. ಅದೇ.

೨೦. Shakti M. Gupta: ಪೂರ್ವೋಕ್ತ. ಪು. ೧೬.

೨೧. ಅದೇ. ಪು. ೧೭.

೨೨. ಶ್ರೀನಿವಾಸ ಹಾವನೂರ್: ಹೊಸಗನ್ನಡ ಅರುಣೋದಯ (ಮೈಸೂರು. ೧೯೭೪) ಪು. ೧೮೮. (ಈ ಉಲ್ಲೇಖದ ಕಡೆ ನನ್ನ ಗಮನವನ್ನು ಸೆಳೆದವರು ಶ್ರೀ ಎಸ್. ಶಿವಣ್ಣ ).

೨೩. 'ಗ್ರಹಣ ದರ್ಪಣ'ವನ್ನು ಓದಿ ಮಾಹಿತಿಕೊಟ್ಟ ಮೈಸೂರು ಓರಿಯಂಟಲ್ ಲೈಬ್ರರಿಯ ಶ್ರೀ. ಬಿ. ವಿ. ನರಸಿಂಹಾಚಾರ್ಯ ಅವರಿಗೆ, ಸಹಕರಿಸಿದ ಶ್ರೀ ಟಿ. ಮರಿಬಸವಾರಾಧ್ಯ ಅವರಿಗೆ, ಪುಟಗಳ ಚಿತ್ರ ತೆಗೆದುಕೊಟ್ಟ ಶ್ರೀ ಸಿ. ಎಸ್. ಶ್ರೀನಿವಾಸ್ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

# ಅನುಬಂಧ ೭

## ವ್ರತಗಳಲ್ಲಿ ಸೂರ್ಯ

ಆಧುನಿಕರು ಮಾಡುವ ಎರಡು ವ್ರತಗಳಲ್ಲಿ ಸೂರ್ಯ ಕೇಂದ್ರಬಿಂದುವಾಗಿದ್ದಾನೆ. ಒಂದು ರಥಸಪ್ತಮೀ ವ್ರತ; ಮತ್ತೊಂದು, ನಿರಶನಾರ್ಕವಾರ ವ್ರತ.

## ರಥಸಪ್ತಮಿ

ಮಾಘ ಶುದ್ಧ ಸಪ್ತಮಿಯ ದಿನ ರಥಸಪ್ತಮೀ ವ್ರತವನ್ನು ಮಾಡಬೇಕು. ಷಷ್ಠಿ ದಿನ ಸ್ನಾನಾನಂತರ ದೇವಾಲಯಕ್ಕೆ ಹೋಗಿ ಸೂರ್ಯನನ್ನು ಪೂಜಿಸಿ, ಮನೆಯಲ್ಲಿ ಪಂಚಯಜ್ಞಗಳನ್ನು ಮಾಡಿ ಎಲ್ಲರ ಊಟವಾದ ಮೇಲೆ ತಾನು ಎಣ್ಣೆಯಿಲ್ಲದ ಊಟ ಮಾಡಿ ದೇವತಾಧ್ಯಾನದಲ್ಲಿ ಹಗಲನ್ನು ಕಳೆದು ರಾತ್ರಿ, ನಾನು ವ್ರತ ಮಾಡುತ್ತೇನೆ ಎಂದು ಸೂರ್ಯನಿಗೆ ಹೇಳಿಕೊಂಡು ಸಂಕಲ್ಪ ಮಾಡಬೇಕು. ರಾತ್ರಿ ನೆಲದ ಮೇಲೆ ಮಲಗಿದ್ದು ಮಾರನೆಯ ದಿನ – ಸಪ್ತಮಿಯ ದಿನ – ಸ್ನಾನ ಸಂಧ್ಯಾದಿಗಳು ಮುಗಿದ ಮೇಲೆ ಸೂರ್ಯ ರಥವನ್ನು ಚಿನ್ನ ಅಥವಾ ಬೆಳ್ಳಿ ಅಥವಾ ತಾಮ್ರದಲ್ಲಿ ಮಾಡಿಸಿಟ್ಟು ಮಧ್ಯಾಹ್ನ ಜಲಾಶಯದಲ್ಲಿ ಸ್ನಾನಮಾಡಿ ಸೂರ್ಯಸೂಕ್ತವನ್ನು ಜಪಿಸುತ್ತ ಹೂವು ಚಿಗುರುಗಳ ಮಧ್ಯೆ ರಥವನ್ನಿಟ್ಟು ಪೂಜಿಸಬೇಕು. ಬಳಿಕ ಅದರಲ್ಲಿ ಸೂರ್ಯನ ವಿಗ್ರಹವನ್ನಿಟ್ಟು ಪೂಜೆ ಧೂಪ ದೀಪ ನೈವೇದ್ಯಗಳಿಂದ ಸ್ತುತಿಸಿ, ನನ್ನ ಇಷ್ಟಾರ್ಥಗಳನ್ನು ಸಲ್ಲಿಸು ಎಂದು ಪ್ರಾರ್ಥಿಸಬೇಕು. ಇಡೀ ದಿನ ಉಪವಾಸವಿದ್ದು, ಶಯನವನ್ನು ತೊರೆಯಬೇಕು. ಆ ರಾತ್ರಿಯೆಲ್ಲ ಮತ್ತೆ ರಥವನ್ನೂ ವಿಗ್ರಹವನ್ನೂ ಪೂಜಿಸಿ ಸೌರಮಂತ್ರಜಪ, ಸೂರ್ಯಪುರಾಣ ವಾಚನಗಳನ್ನು ಮಾಡುತ್ತ ಕಾಲ ಕಳೆದು ಮಾರನೆಯ ದಿನ ಬ್ರಾಹ್ಮಣರಿಗೆ ದಾನ

ದಕ್ಷಿಣೆ ಕೊಡಬೇಕು. ಸೂರ್ಯ ರಥವನ್ನು ಆಚಾರ್ಯನಿಗೆ ದಾನ ಮಾಡಬೇಕು. ಈ ವ್ರತದಿಂದ ಅಶ್ವಮೇಧ ಯಾಗ ಫಲವು ಲಭಿಸುತ್ತದೆ.

ಶ್ರೀ ಜೆ. ಎ. ಕವಲಿಯವರ **ಭಾರತೀಯರ ಹಬ್ಬಗಳು** (ಧಾರವಾಡ, ೧೯೫೭), ಡಿ.ಟಿ. ರಂಗಸ್ವಾಮಿಯವರ **ಭಾರತದ ಹಬ್ಬ ಹರಿದಿನಗಳು** (ಹೊರೆಕೆರೆ ದೇವನಪುರ, ೧೯೬೧) ಈ ಪುಸ್ತಕಗಳಲ್ಲಿ ರಥಸಪ್ತಮಿ ಹಬ್ಬದ ಬಗ್ಗೆ ಹೆಚ್ಚಿನ ವಿವರಗಳಿವೆ. ಮನೆಯ ಮುಂದಿನ ತುಳಸಿ ಕಟ್ಟೆಯ ಮುಂದೆ ರಂಗೋಲಿ ಬರೆದು ಮಧ್ಯದಲ್ಲಿ ರಥಾರೂಢ ಸೂರ್ಯ ಪ್ರತಿಮೆಯಿಟ್ಟು ಅಥವಾ ಅದರ ಚಿತ್ರ ಬರೆದು ರಕ್ತಚಂದನ (ಕೆಂಪು ಗಂಧ) ಕೆಂಪು ಹೂವುಗಳಿಂದ ಪೂಜಿಸಿ, ಪಾತ್ರೆಯಲ್ಲಿ ಹಾಲಿಟ್ಟು ಸೂರ್ಯನ ಪ್ರಕಾಶದಿಂದ ಅಥವಾ ಬೆರಣಿ ಬೆಂಕಿಯಿಂದ ಕಾಯಿಸಿ ಉಕ್ಕಿಸುತ್ತಾರೆ. ಆ ದಿನ ವೈದಿಕರು ಏಳೇಳು ಎಕ್ಕದ ಎಲೆಗಳನ್ನು ('ಅರ್ಕ' ಎಂದರೆ ಸೂರ್ಯನೂ ಆಗುತ್ತದೆ, ಎಕ್ಕದ ಗಿಡವೂ ಆಗುತ್ತದೆ) ಭುಜ, ತಲೆ ಮೇಲೆ ಇಟ್ಟುಕೊಂಡು ಸೂರ್ಯೋದಯಕ್ಕೆ ಮುನ್ನ ಸ್ನಾನ ಮಾಡುತ್ತಾರೆ. ಬೆಳಗಿನ ಜಾವ ಸ್ನಾನ ಮಾಡುವಾಗ ತಲೆಯ ಮೇಲೆ ದೀಪವನ್ನಿರಿಸಿಕೊಂಡು ಸೂರ್ಯನನ್ನು ಧ್ಯಾನಿಸಿ ಆ ದೀಪವನ್ನು ನೀರಿನಲ್ಲಿ ತೇಲಿ ಬಿಡುವ ಸಂಪ್ರದಾಯವೂ ಇದೆ. ಕಬ್ಬಿನ ಜಲ್ಲೆಯಿಂದ ನೀರನ್ನು ಕದಡಿ ನಂತರ ಎಕ್ಕದ ಎಲೆಗಳನ್ನೂ ಬದರಿ ಎಲೆಗಳನ್ನೂ ತಲೆಯ ಮೇಲಿಟ್ಟುಕೊಂಡು ಸ್ನಾನಮಾಡಿ ಎಳ್ಳಿನ ಅಪೂಪವನ್ನು ಸೂರ್ಯನಿಗೆ ಅರ್ಪಿಸಿ ದಾನಮಾಡುವ ಪದ್ಧತಿಯೂ ಇದೆ.

## ನಿರಶನಾರ್ಕವಾರ ವ್ರತ

ಈ ವ್ರತ ಮಾಡುವವರು ಶನಿವಾರ ಏಕ ಭುಕ್ತಿ (ಒಪ್ಪೊತ್ತು )ಯಲ್ಲಿದ್ದು ಭಾನುವಾರ ನಿರಾಹಾರಿಯಾಗಿದ್ದು ಆ ದಿನ ಜಾಗರಣ ಮಾಡಿ ಸೋಮವಾರ ವಿಧಿವತ್ತಾಗಿ ಪೂಜಿಸಿ ಪಾರಣೆ ಮಾಡಬೇಕು. ಅರಿತೋ ಅರಿಯದೆಯೋ ಮಾಡಿದ ಪಾಪ ಪರಿಹಾರಕ್ಕೆ, ಆರೋಗ್ಯಕ್ಕಾಗಿ, ಉತ್ತರಾಯಣ ಪುಣ್ಯಕಾಲದಲ್ಲಿ ಮರಣ ಹೊಂದಿ ಸೂರ್ಯಲೋಕವನ್ನು ಹೊಂದಲಿಕ್ಕಾಗಿ ಈ ವ್ರತಾಚರಣೆ. ವಿಶೇಷವಾಗಿ ಅಕಾಲರತಿಯಿಂದ ಸ್ತ್ರೀ ಪುರುಷರಿಗೆ ಉಂಟಾಗುವ ರಜಸ್ಸಂಬಂಧವಾದ ದೋಷ ಪರಿಹಾರಕ್ಕೆ ಇದು ಉತ್ತಮ ಫಲಕಾರಿ. ಈ ವ್ರತವನ್ನು ಆಚರಿಸುವವರಿಗೆ ಸೂರ್ಯದೇವನು ಆರೋಗ್ಯವನ್ನೂ ಸರ್ವ ಮಂಗಳಗಳನ್ನೂ ದಯಪಾಲಿಸುತ್ತಾನೆ.

ವ್ರತದ ವಿಧಾನ ಹೀಗೆ. ವ್ರತ ಸಂಕಲ್ಪಾನಂತರ ಸೂರ್ಯಮಂಡಲವನ್ನೂ

ಸೂರ್ಯ ಬಿಂಬವನ್ನೂ ಬರೆದು ಗಣಪತಿ ವಿಗ್ರಹವನ್ನು ಸ್ಥಾಪಿಸಿ ಪೂಜಿಸಬೇಕು. ಅರುಣ, ಸೂರ್ಯನಾರಾಯಣರನ್ನು ಅಲ್ಲಿಗೆ ಆವಾಹನೆ ಮಾಡಬೇಕು. ಬಳಿಕ ಸೂರ್ಯಾಷ್ಟೋತ್ತರ ಶತನಾಮ ಪೂಜೆಯನ್ನು ಮಾಡಬೇಕು, 'ಸೂರ್ಯ ನಮಸ್ಕಾರ'ಗಳ ಪೂರ್ವಕ. 'ಪ್ರದಕ್ಷಿಣ ನಮಸ್ಕಾರ'ಗಳ ಮೂಲಕ ಸೂರ್ಯ ಸ್ತೋತ್ರವನ್ನು ಮಾಡಬೇಕು. ರಾಮಾಯಣದ ಯುದ್ಧ ಕಾಂಡದಲ್ಲಿ ನಿರೂಪಿತವಾದ ಅಗಸ್ತ್ಯ ರಾಮನಿಗೆ ಬೋಧಿಸಿದ 'ಆದಿತ್ಯ ಹೃದಯ'ವನ್ನು ಜಪಿಸಬೇಕು.[೧] (ಸೂರ್ಯನಿಗೆ ಸೂರ್ಯೋದಯದಲ್ಲಿ ಅರ್ಪಿಸಲಾಗುವ ಮಂಗಳ ಸಾಮಗ್ರಿಗಳನ್ನಿಟ್ಟಿರುವ ವೇದಿಕೆಯ ಮೇಲೆ ಮಾಡುವ ನಮಸ್ಕಾರವೇ ಸೂರ್ಯ ನಮಸ್ಕಾರ)

ಈ ಎರಡು ವ್ರತಗಳನ್ನು ಈಗಲೂ ಸಂಪ್ರದಾಯಸ್ಥರು ತಮ್ಮ ಮನೆಗಳಲ್ಲಿ ನಡಸುತ್ತಾರೆ. ಈ ವ್ರತಗಳಲ್ಲಿ ಮುಖ್ಯ ಆರಾಧ್ಯದೈವ ಸೂರ್ಯ ಎಂಬುದು ಗಮನಾರ್ಹ.

ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರು ಪ್ರತಿದಿನ ಸೂರ್ಯ ನಮಸ್ಕಾರ ಮಾಡುವಾಗ ಉಪಯೋಗಿಸುತ್ತಿದ್ದ ಸೂರ್ಯ ಮಂಡಲವು ಅರಮನೆ ಪ್ರಾಕಾರದ ಭುವನೇಶ್ವರೀ ದೇವಾಲಯದಲ್ಲಿದೆ. ಇದರಲ್ಲಿ ಇಪ್ಪತ್ತನಾಲ್ಕು ಆವರಣಗಳಿದ್ದು ಒಂದೊಂದರಲ್ಲೂ "ಸೂರ್ಯ ನಮಸ್ಕಾರದ ವಿವರಣಾತ್ಮಕ ಶ್ಲೋಕಗಳಿವೆ."[೨]

## ಹಳ್ಳಿಗಳಲ್ಲಿ ಮಕರ ಸಂಕ್ರಮಣ

"ಮಕರ ಸಂಕ್ರಾಂತಿಯ ದಿನದಿಂದ ದೇವತೆಗಳಿಗೆ ಹಗಲು, ರಾಕ್ಷಸರಿಗೆ ರಾತ್ರಿ ಆಗುವುದೆಂದು ಪುರಾಣಗಳ ಹೇಳಿಕೆ. ಈ ಸಂತೋಷಕ್ಕಾಗಿ ಎಳ್ಳು ಬೆಲ್ಲ ತಿಂದು ಒಳ್ಳೆಯವರಾಗೋಣವೆಂದು ಎಳ್ಳು ಬೆಲ್ಲ ಹಂಚುತ್ತಾರೆ. ಮನೆಯಲ್ಲಿ ಎಲ್ಲರೂ ಸ್ನಾನ ಮಾಡಿ, ಮನೆಯ ಸಾರಣೆ ಕಾರಣೆ ಮಾಡಿರುತ್ತಾರೆ. ಮಕ್ಕಳಿಗೆ ಹೊಸಬಟ್ಟೆ. ಈ ಹಬ್ಬದ ವಿಶೇಷ ಅಡಿಗೆ ಕಿಚಡಿ, ಕಾಯಾಲು, ಗೆಣಸು ಅವರೆಕಾಳು ಹಸಿಕಡ್ಲೆಕಾಳು ಅಗಸೆ ಕಾಯಿಗಳನ್ನು ಹಾಕಿ ಮಾಡಿದ 'ಮೇಲೋಗರ'. ಮನೆಯಲ್ಲಿರುವ ದನಕರುಗಳನ್ನು ತೊಳೆದು ದನಗಳ ಕೊಂಬಿಗೆ ವಿವಿಧ ಬಣ್ಣಗಳನ್ನು ಮತ್ತು ವರ್ಣ ಕಾಗದವನ್ನು ಅಂಟಿಸಿ ಅಲಂಕಾರ ಮಾಡುತ್ತಾರೆ. ಎಮ್ಮೆಗಳ ಕೊಂಬಿಗೆ ಸುಣ್ಣ ಕೆಮ್ಮಣ್ಣು ಸವರುತ್ತಾರೆ. ಹಾಗೆಯೇ ಮನೆಯ ಹಿತ್ತಲಿನಲ್ಲಿರುವ ಮರಗಿಡಗಳ ಬುಡಕ್ಕೆ ಸುಣ್ಣ ಕೆಮ್ಮಣ್ಣಿನ ಪಟ್ಟೆಯನ್ನು ಬಳಿಯುತ್ತಾರೆ. ಸಾಯಂಕಾಲ ಹೊಲಗಳಿಂದ ಮೇದು ಬರುವ ದನಗಳಿಂದ ಕಿಚ್ಚು ಹಾಯಿಸುತ್ತಾರೆ. ಇದರ ಉದ್ದೇಶ ದನಗಳಿಗೆ ಕಾಯಿಲೆಗಳು ಬರದಿರಲೆಂದು ಮತ್ತು ಅವುಗಳ

ಅಭಿವೃದ್ಧಿಯಾಗಲೆಂದು. ಎಲಚಿಹಣ್ಣು ಮತ್ತು ಸೊಪ್ಪಿನ ಕಡ್ಲೆಕಾಯಿ ತಿನ್ನಬೇಕು. ಇಲ್ಲದಿದ್ದರೆ ಕತ್ತೆ ಕಿವಿಯಾಗುತ್ತದೆಂಬ ನಂಬಿಕೆಯುಂಟು. ಸಾಯಂಕಾಲ ಮಕ್ಕಳನ್ನು ಹಸೆಯ ಮೇಲೆ ಕುಳ್ಳಿರಿಸಿ ಆರತಿ ಮಾಡಿ ನಗವೆಳ್ಳು ಕೊಡುವುದು ಶಿಷ್ಟರಲ್ಲಿ ಮಾತ್ರ ಪ್ರಚಲಿತವಾಗಿದೆ. ರೈತರು ಸುಗ್ಗಿಯ ಹಿಗ್ಗಿನಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ."[೩]

## ಅಡಿಟಿಪ್ಪಣಿಗಳು

೧. ಈ ಎರಡು ವ್ರತಗಳ ಕೆಲವು ಮುಖ್ಯ ಸಂಗತಿಗಳನ್ನು ಎಚ್. ನಾಗಪ್ಪ ಶಾಸ್ತ್ರಿಗಳು ಬರೆದ 'ಸಟೀಕಾ ವ್ರತರತ್ನ ಮಾಲಾ' ಗ್ರಂಥದಿಂದ (ಪ್ರ: ಟಿ. ಕೆ. ಗೋಪಾಲ ಶೆಟ್ಟಿ ಅಂಡ್ ಸನ್ಸ್ , ಬೆಂಗಳೂರು, ೧೯೬೬) ಸಂಗ್ರಹಿಸಿದ್ದೇನೆ. ಉಳಿದೆಲ್ಲ ವಿವರಗಳನ್ನು ತಿಳಿಯಬಯಸುವವರು ಆ ಗ್ರಂಥವನ್ನು ನೋಡಬೇಕು. ವ್ರತ ಸಮಯದಲ್ಲಿ ಹೇಳಬೇಕಾದ ಎಲ್ಲ ಮಂತ್ರಗಳೂ ಅಲ್ಲಿವೆ ('ಆದಿತ್ಯ ಹೃದಯ'ವನ್ನು ಕೃಷ್ಣ ಅರ್ಜುನನಿಗೆ ಬೋಧಿಸಿದನೆಂಬ ನಂಬಿಕೆಯೂ ಹಿಂದೆ ಇತ್ತು).

೨. ಕೆ.ವಿ. ಶ್ರೀನಿವಾಸಪ್ರಭು: ದೇವ ಮಂದಿರ ಕೈಪಿಡಿ. ಪು. ೪, ಅದರ ಚಿತ್ರವು ಪು. ೮ರ ಎದುರಿಗಿದೆ.

೩. ಟಿ. ಎಸ್. ರಾಜಪ್ಪ: 'ಗ್ರಾಮಂತರದ ಕೆಲವು ಹಬ್ಬಗಳು'. (ಗ್ರಾಮಜ್ಯೋತಿ, ಸಂ. ಗೊ. ರು. ಚೆನ್ನಬಸಪ್ಪ, ಪುಟ ೨೭೪–೫)

# ಅನುಬಂಧ ೮

## ದೇವಾಲಯಗಳಲ್ಲಿ ಗ್ರಹಣ, ಮಕರಸಂಕ್ರಮಣ ಮತ್ತು ರಥಸಪ್ತಮಿ ಉತ್ಸವಗಳು

### (ಅ) ಗ್ರಹಣ

೧. ಮೂಡಿಗೆರೆ ತಾ। ಕಳಸದ ಶ್ರೀಕಲಶೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ[೧]

"ನಿತ್ಯಕಟ್ಟಲೆ ಎರಡು ವೇಳೆಯಲ್ಲಿ ಮಾತ್ರ ಅರ್ಚನೆ ನಡೆಯುವುದು ಸರಿಯಷ್ಟೆ. ಗ್ರಹಣಕಾಲಗಳಲ್ಲಿ ನಾಲ್ಕುವೇಳೆ ಪೂಜೆ ನಡೆಯಬೇಕಾಗುತ್ತದೆ. ಸೂರ್ಯಗ್ರಹಣವಾದ ಪಕ್ಷದಲ್ಲಿ ಗ್ರಹಣ ಹಿಡಿಯುವುದಕ್ಕೆ ಮೊದಲೆ ಮಧ್ಯಾಹ್ನದ ಕಟ್ಟಳೆ ಪೂಜೆ ನಡೆಯಬೇಕು. ಆಗ ಕ್ರಮವಾಗಿ ಏಕದಶವಾರ ರುದ್ರಾಭಿಷೇಕ ಮಹಾನೈವೇದ್ಯ ಸಹ ನಡೆಯುತ್ತವೆ. ಗ್ರಹಣ ಹಿಡಿದಾಗ ಏಕವಾರ ರುದ್ರಾಭಿಷೇಕ ಹಣ್ಣುಕಾಯಿ ನೈವೇದ್ಯ ಸಹ ನಡೆಯುತ್ತದೆ. ಮಹಾನೈವೇದ್ಯವಿಲ್ಲ. ಗ್ರಹಣ ಶುದ್ಧಮಂಡಲವಾದ ಕೂಡಲೆ ಎಲ್ಲರೂ ಪುನಃ ಸ್ನಾನಮಾಡಿ ಪಾತ್ರೆಗಳನ್ನು ಶುಚಿಮಾಡಿಕೊಂಡು ಹೊಸದಾಗಿ ಅಗ್ರೋದಕವನ್ನು ಗಂಗೆ ಗಂಧದವರು ಒದಗಿಸಬೇಕು. ಅಡಿಗಳು ಪುನಃ ಏಕವಾರ ರುದ್ರಾಭಿಷೇಕದ ಮೂಲಕ ಅರ್ಚಿಸಿ ಮಹಾನೈವೇದ್ಯ ಮಾಡುತ್ತಾರೆ. ರಾತ್ರಿ ಪುನಃ ಮಾಮೂಲಿನಂತೆ ಅರ್ಚನೆಯೂ ನಡೆಯಬೇಕು.

ಚಂದ್ರಗ್ರಹಣವಾದರೂ ಕೂಡ ಇದೇ ಕ್ರಮವನ್ನೇ ಅನುಸರಿಸಬೇಕು. ಅಂತೂ ಒಟ್ಟಿನಲ್ಲಿ ಮೇಲೆ ಹೇಳಿದಂತೆ ಗ್ರಹಣಬರುವ ದಿವಸಗಳಲ್ಲಿ ನಾಲ್ಕು ಅಭಿಷೇಕಗಳೂ ಮೂರು ಮಹಾನೈವೇದ್ಯಗಳೂ ನಡೆಯಬೇಕು.

ಗ್ರಹಣಬಿಟ್ಟ ನಂತರ ಉತ್ಸವಮೂರ್ತಿಗೂ ಸಹ ಅಭಿಷೇಕ ಪೂಜೆ ನಡೆಯಬೇಕು.

ಎಂದಿನಂತೆ ಸ್ವಾಮಿ ಸೋಮಸೂತ್ರದ ಬಳಿ ಗರ್ಭಗೃಹದ ಬಳಿಗೆ ಉತ್ಸವದೇವರಿಗೆ ಅಭಿಷೇಕವಾಗಬೇಕು.

ಗ್ರಹಣದ ವಿಷಯದಲ್ಲಿ ದೇವಸ್ಥಾನದ ಆಚರಣೆಗೂ ಮತ್ತು ಇತರರ ಆಚರಣೆಗೂ ಭೇದವಿಲ್ಲ. ಈ ಎರಡು ಗ್ರಹಣಗಳಲ್ಲಿ ಯಾವುದು ಬಂದಾಗ್ಲೂ ಬೊಕ್ಕಸದವನು ಹಬ್ಬಗಟ್ಲೆ ಹಿಡಿಯಬೇಕು."

## ೨. ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ[೨]

"ಸೂರ್ಯಗ್ರಹಣ ಅಥವಾ ಚಂದ್ರಗ್ರಹಣ ಬಂದಲ್ಲಿ ಗ್ರಹಣ ಹಿಡಿದಾಗ ೫ ಸನ್ನಿಧಿಗಳ ಪರಿಚಾರಕರು ವಾಲಗ ಸಮೇತ ಮೂಲವರು, ಉತ್ಸವರು, ಅಮ್ಮನವರು, ತಾಂಡವೇಶ್ವರ, ನಾರಾಯಣಸ್ವಾಮಿ ಈ ದೇವರುಗಳಿಗೆ ಅಭಿಷೇಕ, ಪೂಜೆ, ನೈವೇದ್ಯ, ಮಂಗಳಾರತಿ ಮಾಡತಕ್ಕದ್ದು, ಷಟ್ಕಾಲಾರ್ಚನೆಗಳು ಆಗತಕ್ಕ ಕಾಲಗಳಲ್ಲಿ ಯಾವ ಕಾಲದಲ್ಲಿ ಗ್ರಹಣ ಹಿಡಿದರೆ ಆ ಕಾಲದಲ್ಲಿ ಸರ್ಕಾರಿ ಅಭಿಷೇಕದ ಜೊತೆಯಲ್ಲಿ ಗ್ರಹಣ ಕಟ್ಲೆ ಅಭಿಷೇಕ ಪೂಜೆ ನಡೆಯತಕ್ಕದ್ದು. ಅಲ್ಲದೆ ಬೇರೆ ಕಾಲದಲ್ಲಿ ಗ್ರಹಣ ಹಿಡಿದರೆ ಅದಕ್ಕಾಗಿ ಪ್ರತ್ಯೇಕ ಅಭಿಷೇಕ ಪೂಜೆ ಸಹಾ ನಡೆಯತಕ್ಕದ್ದು."

## ೩. ಬೇಲೂರಿನ ಶ್ರೀ ಸೌಮ್ಯಕೇಶವದೇವರ ದೇವಸ್ಥಾನದಲ್ಲಿ[೩]

"ಈ ದಿವಸ ನಿತ್ಯಾರಾಧನೆ ಪೂರ್ವವೇ ಅಂದರೆ ಹೊತ್ತಿನ ಪೂಜೆಗೂ ಲೋಪವಿಲ್ಲದಂತೆ ಗ್ರಹಣಬಿಟ್ಟ ನಂತರ ಮೂಲವರಿಗೆ ಅಭಿಷೇಕ ನಡೆದು ಅನಂತರ ನಿತ್ಯಾರಾಧನೆ ವಗೈರೆ ನಡೆಯಬೇಕು. ಈ ದಿವಸ ನೇಹಮಿಯಾಗಿ ಅರ್ಚಕರು................ರ ವಂಶೀಕರು ಬ್ರಾಹ್ಮಣ ಸಂತರ್ಪಣೆ ನಡೆಸುತ್ತಿದ್ದಾರೆ. ಅನಂತರ ದೇವರಿಗೆ ಮಂಗಳಾರತಿ ನಿವೇದನವಾಗಿ ರಾಜಾಶೀರ್ವಾದ ರಾಜಮರ್ಯಾದೆ ನಡೆದು ನಿತ್ಯಕಟ್ಲೆಯಂತೆ ನಡೆಯಬೇಕು."

## (ಆ) ಮಕರ ಸಂಕ್ರಮಣ

### ೧. ಕಳಸದ ಶ್ರೀಕಲಶೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ[1]

"ಇದು ಉತ್ತರಾಯಣ ಪುಣ್ಯಕಾಲದ ದಿವಸವಾಗಿರುತ್ತೆ. ಈ ದಿವಸ ಹಗಲು ಕಟ್ಟಲೆಗಳು ಯಾವುದೂ ಇಲ್ಲ. ರಾತ್ರಿಯೂ ಸಹ ಹೆಚ್ಚು ಕಟ್ಲೆ ಪಂಚಾಮೃತವಾಗಲಿ ಅಥವಾ ದೀಪಾರಾಧನೆಯಾಗಲಿ ಇಲ್ಲ. ಹೊಸ ಧಾನ್ಯವನ್ನು ಈ ದಿವಸ ಎಲ್ಲಾ ದೇವರುಗಳಿಗೂ ನೈವೇದ್ಯವಿಡುವ ವಾಡಿಕೆಯಿದೆ. ಹೊಸ ಧಾನ್ಯವೆಂದರೆ, ಹೊಸ ಫಸಲಿನ ಭತ್ತವನ್ನು ಕುಟ್ಟಿಸಿ ಅವಲಕ್ಕಿ ಮಾಡಿ ಅದನ್ನು "ಸಿಹಿಯವಲಕ್ಕಿ" ಮಾಡಿ, ಎಂದರೆ ಸಕ್ಕರೆ ಅಥವಾ ಬೆಲ್ಲ ಮಿಶ್ರ ಮಾಡಿ ಕಾಯಿತುರೀ ಹಾಕಿ ರಾತ್ರಿ ಶ್ರೀದೇವರಿಗೂ, ಶ್ರೀ ಅಮ್ಮನವರಿಗೂ ಮತ್ತು ಆನೆ ವಿಘ್ನೇಶ್ವರರಿಗೂ ನೈವೇದ್ಯ ಮಾಡಿಸಿ ಎಲ್ಲರಿಗೂ ಹಂಚಬೇಕು. ಈ ದಿವಸ ನಡೆಯಬೇಕಾದ ಹೆಚ್ಚು ಕಟ್ಟಲೆ ಸೇವಾದಿಗಳು ಯಾವುದೂ ಇರುವುದಿಲ್ಲ. ಮಿಕ್ಕ ಅಭಿಷೇಕ ನೈವೇದ್ಯ ಮಹಾಮಂಗಳಾರತಿ ಅಷ್ಟಾವಧಾನ ಸೇವೆ ವಸವಂತ ಮುಂತಾದುವು ಎಂದಿನಂತೆ ಮಾಮೂಲ್ ಪ್ರಕಾರ ನಡೆಯುತ್ತವೆ.

ಆಯಾ ವರ್ಷದ ಫಸಲಿನಲ್ಲಿ ಅದೇ ಪ್ರಾರಂಭದ ಅರ್ಪಣೆಯಾದುದರಿಂದ ಈ ದಿವಸ ನೈವೇದ್ಯಕ್ಕಿಡುವ ಸಿಹಿಯವಲಕ್ಕಿಯು ಹೊಸ ಭತ್ತದ್ದಾಗಿರಬೇಕು. ಶಾಂತಿಗಳು ಪಣಿವಾರಕ್ಕೆ ತಯಾರಿಸಬೇಕು. ಈ ಅವಲಕ್ಕಿ ಆನೆದೇವರಲ್ಲಿ ಮಹಾಮಂಗಳಾರತಿಯಾದ ನಂತರ, ದಕ್ಷಿಣದಿಕ್ಕಿನ ಚಂದ್ರಶಾಲೆಯಲ್ಲಿ ಅಗ್ನಿಯು ಹಂಚಬೇಕು.

ಮಕರ ಸಂಕ್ರಾಂತಿ ಹಬ್ಬಗಟ್ಲೆ ಅಥವಾ ಅಯನಸಂಕ್ರಮಣ ಆ ದಿವಸ ದೀಪಾರಾಧನೆ ಕೆಲಸಗಳಲ್ಲಿ ಸ್ವಾಮಿ ದೇವಸ್ಥಾನದ ದೇವಕಾರಿಯು ಸಹಾಯ ಮಾಡಬೇಕು."

### ೨. ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ[2]

"ಈ ದಿವಸ ಅಗ್ರೋದಕ ಬಂದ ನಂತರ ಯುಗಾದಿ ಹಬ್ಬದಂತೆ ಎಣ್ಣೆ ಮೆರವಣಿಗೆಯಾಗತಕ್ಕದ್ದು. ತಾಂಡವೇಶ್ವರ ವಗ್ಯೆರೆ ಎಲ್ಲಾ ದೇವರುಗಳಿಗೂ ಪ್ರಾತಃಕಾಲದಲ್ಲಿ ಪಂಚಾಮೃತ ಅಭಿಷೇಕ ಬೆಳೆಯತಕ್ಕದ್ದು. ಅಲಂಕಾರ ನಿತ್ಯ ಕಟ್ಲೆ ಪೂಜೆ ನಡೆಯತಕ್ಕದ್ದು. ಅನಂತರ ಸಾಯಂಕಾಲ

ಐದು ಗಂಟೆ ಹೊತ್ತಿಗೆ ಕೈ ಬೆಳ್ಳಿಕುದುರೆ ವಾಹನದ ಮೇಲೆ ಶ್ರೀಪಾದದವರು ಶ್ರೀಯವರನ್ನು ಬಿಜ ಮಾಡಿಸಿಕೊಂಡು ಗುಂಡ್ಲುಸೇತುವೆ ಮಾರ್ಗವಾಗಿ ಪರಶುರಾಮ ದೇವಸ್ಥಾನದ ಬಳಿ ಮೃತ್ತಿಕೆ ತಿಟ್ಟಿನ ಬಳಿ ಮಂಟಪಕ್ಕೆ ಬಿಜ ಮಾಡಿಸತಕ್ಕದ್ದು. ಅನಂತರ ಉತ್ಸವರ ಗುಡಿ ಪರಿಚಾರಕರು ಉಗ್ರಾಣದಿಂದ ಮಂಟಪೋತ್ಸವಕ್ಕೆ ತೆಗೆದುಕೊಂಡು ಹೋಗಿದ್ದ ಸ್ನಪನದ ಸಾಮಾನಿನಿಂದ ಅರ್ಚಕರಿಂದ ಜೋಯಿಸರ ಸಮೇತ ಸ್ನಪನ ಮಾಡಿಸತಕ್ಕದ್ದು. ಇದಕ್ಕೆ ಮೊದಲೇ ಜೋಯಿಸರು ಮಂಟಪಕ್ಕೆ ಪುಣ್ಯಾಹ ಮಾಡಿರತಕ್ಕದ್ದು. ಹೀಗೆ ಯಾವ ಮಂಟಪಕ್ಕೆ ದೇವರು ಬಿಜ ಮಾಡಿಸಿದರೂ ಅದಕ್ಕೆ ಮೊದಲೇ ಜೋಯಿಸರು ಪುಣ್ಯಾಹ ಮಾಡಿರತಕ್ಕದ್ದು. ಉತ್ಸವರ ಗುಡಿ ಪರಿಚಾರಕರು ಸ್ನಪನದ ಸಾಮಾನು ಸಿದ್ಧಪಡಿಸಿ ಅರ್ಚಕರ ಕೈಲಿ ಸ್ನಪನ ಮಾಡಿಸತಕ್ಕದ್ದು. ಸಂಕ್ರಾಂತಿ ಸ್ಥಾನೀಕರು ತಂದಿರತಕ್ಕ ಪೂಜಾದಿ ಸಾಮಾನುಗಳು ಹಣ್ಣುಕಾಯಿಗಳನ್ನು ಅರ್ಚಕರು ನೈವೇದ್ಯ ಮಾಡತಕ್ಕದ್ದು. ನಂತರ ಶ್ರೀಯವರಿಗೆ ಪೊಂಗಲು ನಿವೇದನವಾಗಿ ಮಂಗಳಾರತಿ ಬೆಳೆದು ಒಟ್ಟು ಉಪಚಾರವಾಗಬೇಕು. ರಾಜಾಶೀರ್ವಾದವಾಗತಕ್ಕದ್ದು. ಜೋಯಿಸರಿಗೆ ಮಂತ್ರ ಪುಷ್ಪದವರು ಮಹಾರಾಜರವರ ಹೆಸರಿನಲ್ಲಿ ಓದಿಸತಕ್ಕದ್ದು. ಅನಂತರ ಶ್ರೀಯವರನ್ನು ಶ್ರೀಪಾದದವರು ಬಿಜ ಮಾಡಿಕೊಂಡು ಪರಶುರಾಮರ ದೇವಸ್ಥಾನದ ಮಂಟಪಕ್ಕೂ ಮಧ್ಯೆ ಗೋಳೂರು ಪಟೇಲ್ ವಗೈರೆ ಸರ್ಕಾರದ ಮಿರಾಸೆ ಮೇಲೆ ತಂದಿರುವ ಮೊಲವನ್ನು ಶ್ರೀಯವರ ಮುಂದೆ ನಿಲ್ಲಿಸಿಕೊಂಡು ಮೊಲಕ್ಕೂ ಪಟೇಲನಿಗೂ ಮಾಲೆಹಾಕಿ ಶ್ರೀಯವರಿಗೆ ಮಂಗಳಾರತಿ ಆಗತಕ್ಕದ್ದು. ಅನಂತರ ಬಾಣಗಾರನು ಬಾಣಬಿಟ್ಟ ನಂತರ ಮೊಲವನ್ನು ದೇವರ ಮುಂಭಾಗದಲ್ಲಿ ಪಟೇಲನು ಬಿಡತಕ್ಕದ್ದು.[೬] ದವಣೆ, ಜಾಗಟೆ ಸಮೇತ ಸುವರ್ಣಾವತಿಯಿಂದ ಅಗ್ರೋದಕ ತರತಕ್ಕದ್ದು. ಅನಂತರ ಶ್ರೀಯವರನ್ನು ಕೈ ಉತ್ಸವದಿಂದ ಅಜಬಾಬುಗಳೊಡನೆ ಗುಂಡ್ಲು ಸೇತುವೆ ಮಾರ್ಗವಾಗಿ ಮೇಲುಭಾಗಕ್ಕೆ ಬಂದು ಕಾಮಾಟದವರು ತಂದು ಸಿದ್ಧ ಮಾಡಿರುವ ದೊಡ್ಡ ಕುದುರೆ ವಾಹನದ ಮೇಲೆ ಬಿಜಮಾಡಿಸಿ ಛತ್ರಿ ವಗೈರೆಯಿಂದ ಕಟ್ಟತಕ್ಕದ್ದು. ಅನಂತರ ಹಿಂದೆ ನಮೂದಿಸಿರುವ ಉತ್ಸವಗಳಂತೆಯೇ ಊರು ಸುತ್ತೂ ಉತ್ಸವವಾಗಿ ದೇವಸ್ಥಾನಕ್ಕೆ ಬರತಕ್ಕದ್ದು. ಬಳಿಕ ಯಥಾ ಪ್ರಕಾರ ಶ್ರೀಪಾದದವರು ದೊಡ್ಡ ಕುದುರೆ ವಾಹನದಿಂದ ಉತ್ಸವವನ್ನು ಬಿಜಮಾಡಿಸಿ ಕೈ ಉತ್ಸವದಿಂದ ಸನ್ನಿಧಿ ಒಳಕ್ಕೆ ಬಿಜಮಾಡಿಸತಕ್ಕದ್ದು."

೩. **ಚಾಮರಾಜನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ[೭]: (ಉತ್ತರಾಯಣ ಪುಣ್ಯಕಾಲದ ಕಟ್ಲೆ )**

"ಅಭಿಷೇಕ ಉತ್ಸವಗಳೆಲ್ಲಾ ದಕ್ಷಿಣಾಯನ ಪುಣ್ಯಕಾಲದಂತೆಯೇ ಮಂಟಪೋತ್ಸವಕ್ಕೆ ಪ್ರಾರಂಭವಾಗುವುದಕ್ಕೆ ಮುಂಚೆ ಜೋಯಿಸರು ದೇವರ ಎದುರಿಗೆ ಮಣೆಹಾಕಿ ಕುಳಿತುಕೊಂಡು ಪಂಚಾಂಗಪೂಜೆ, ಪಂಚಾಂಗಶ್ರವಣ ಸಹ (ಅಂದರೆ ಮಕರ ಸಂಕ್ರಾಂತಿ ಫಲಮಾತ್ರ) ಓದಿದ ಮೇಲೆ ಎಲ್ಲರಿಗೂ ಪ್ರಸಾದ ಮಂತ್ರಾಕ್ಷತೆ ಮರ್ಯಾದೆಯನ್ನನುಸರಿಸಿ ಕೊಟ್ಟ ತರುವಾಯ ಶ್ರಮಣ ನಕ್ಷತ್ರ ಕಟ್ಲೆ ರಾತ್ರಿ ಮಂಟಪೋತ್ಸವದಂತೆಯೇ ಮಂಟಪೋತ್ಸವ ಒಟ್ಟು ಉಪಚಾರ ವಿನಿಯೋಗ ಸಹ ಬೆಳೆದು ಪ್ರದೋಷಕಾಲ ಕಟ್ಲೆ ಪೂಜೆ ಆರಂಭವಾಗಬೇಕು. ಈ ದಿವಸ ಕುದುರೆ ವಾಹನ ಉತ್ಸವ ನಡೆಯತಕ್ಕದ್ದು. ದಕ್ಷಿಣಾಯನ ಮತ್ತು ಉತ್ತರಾಯಣ ಪುಣ್ಯಕಾಲವು ಮಧ್ಯಾಹ್ನಾತ್ಪರ ಪ್ರದೋಷ ಕಾಲಕ್ಕೆ ಪೂರ್ವ ಭಾವಿಯಾಗಿ ಹುಟ್ಟಿದರೆ ದಕ್ಷಿಣಾಯನದಲ್ಲಿ ಅದೇ ದಿವಸವೂ ಉತ್ತರಾಯಣದಲ್ಲಿ ಮಾರನೇ ದಿವಸವೂ ಅಭಿಷೇಕ ದಕ್ಷಿಣಾಯನ ಪುಣ್ಯಕಾಲದಲ್ಲಿ ಬರೆದಿರುವ ತಪಶೀಲ್ ಮೇರೆ ನಡೆಯತಕ್ಕದ್ದು. ಉತ್ಸವ ೪ ಗಂಟೆಯಲ್ಲಿ ನಡೆದ ನಂತರ ಪ್ರದೋಷ ಕಾಲಕ್ಕೆ ಆರಂಭವಾಗಬೇಕು."

೪. **ಮೇಲ್ಕೋಟೆ ಶ್ರೀ ನಾರಾಯಣಸ್ವಾಮಿ ದೇವಸ್ಥಾನದಲ್ಲಿ[೮]**

"ಮಕರಸಂಕ್ರಮಣ: ಪ್ರಾತಃಕಾಲದಲ್ಲಿ ಮಜ್ಜನ ಬಂದು ರಾಮಾನುಜಾಚಾರ್ಯರ ಸನ್ನಿಧಿಯಲ್ಲಿ ಆರಾಧನೆ ಮೊದಲು ವಿಶ್ವರೂಪವಾಗಿ, ಶ್ರೀಯವರು ಉಭಯನಾಚಾರಮ್ಮನವರು, ನಮ್ಮಾಳ್ವಾರು ತಿರುಮಂಗಿ ಆಳ್ವಾರು ಶ್ರೀರಾಮಾನುಜಾಚಾರ್ಯರು ಮತ್ತು ಬಾಕಿ ಆಳ್ವಾರುಗಳಿಗೆ ರಂಗಮಂಟಪದಲ್ಲಿ ಮಜ್ಜನಕ್ಕೆ ಪಾರ್ವಧರಿಸಿ ತೆರೆ ತೆಗೆದು ಶ್ರೀ ನಾರಾಯಣಸ್ವಾಮಿಯವರಿಗೆ ನಿತ್ಯಕಟ್ಲೆ ಆರಾಧನೆ ಮೊದಲು ರಾಜಾಶೀರ್ವಾದವಾಗಿ ಶ್ರೀಯವರಿಗೆ ಅಷ್ಟೋತ್ತರ ಸಹ ಆಗಿ ಆರತಿ ಸಹ ಆಗಿ ಅನಂತರ ಅಭಿಷೇಕಕ್ಕೆ ಪುಣ್ಯಾಹ ಕಲಶಸ್ಥಾಪನೆ ವಗೈರೆ ನಡೆದು ಶ್ರೀಯವರಿಗೆ ಆರಾಧನೆ ಆರತಿ ಪಂಚಾಮೃತ ಅಭಿಷೇಕವಾಗಿ ಶ್ರೀಯವರಿಗೆ ಮತ್ತು ಆಳ್ವಾರುಗಳಿಗೆ ಹರಿದ್ರಾಚೂರ್ಣ ಸಮರ್ಪಿಸಿ, ತಾಂಬೂಲ ಪಂಚಾಮೃತ ನಿವೇದನವಾಗಿ ಶ್ರೀಮಠಕ್ಕೆ ಸರ್ಕಾರಕ್ಕೆ ಮಾಲೆ ತಾಂಬೂಲವಾಗಿ ಆರತಿ ಆಗಿ ಮಧ್ಯದಲ್ಲಿರುವ ಕುಂಭಾಭಿಷೇಕ ನಡೆದು ಅಭಿಷೇಕವಾಗಿ ಸುತ್ತಲು ಗುಡಿ ಆರಾಧನೆ ದೊಡ್ಡಮ್ಮನವರು ಮತ್ತು

ಚಿಕ್ಕಮ್ಮನವರಿಗೆ ಅಭಿಷೇಕ ಆರತಿ ನಿವೇದನ ಮರ್‍ಯಾದೆ ಆಗಿ ಆಳ್ವಾರುಗಳನ್ನು ಅವರವರ ಸನ್ನಿಧಿಗಳಿಗೆ ಬಿಜಮಾಡಿಸಿದ ತರುವಾಯ ದೇವರುಗಳಿಗೆ ಅಲಂಕಾರವಾಗಿ ತಳಿಗೆ ನಿವೇದನ ಎಲ್ಲಾ ಸನ್ನಿಧಿಗಳಲ್ಲಿಯೂ ಆಗಿ ಅಮ್ಮನವರಿಗೆ ನಿವೇದನವಾಗಿ ಶಾತ್ತುಮೊರೆ ಆಗಿ ರಾಮಾನುಜಾಚಾರ್ಯರ ಸನ್ನಿಧಿಯಲ್ಲಿ ಪ್ರಾರ್ಥನಾಪಂಚಕ ಪಾರಾಯಣ, ತೀರ್ಥ ವಿನಿಯೋಗವಾಗಿ ಬದರಿ ನಿವೇದನ ಬಲಿಪ್ರದಾನವಾಗಿ ಶ್ರೀ ನಾರಾಯಣಸ್ವಾಮಿ ಸನ್ನಿಧಿಯಲ್ಲಿ ಆರತಿ ಉಪನಿಷತ್ ಶಾತ್ತುಮೊರೆ ಆಗಿ, ಶ್ರೀಯವರು ಉಭಯನಾಚಾರಮ್ಮನವರ ಸಂಗಡ ಮತ್ತು ರಾಮಾನುಜಾಚಾರ್ಯರ ಸಮೇತ ಉತ್ಸವ ಗ್ರಾಮ ಪ್ರದಕ್ಷಿಣೆಯಿಂದ ಸಂಕ್ರಾಂತಿಫಲಶ್ರವಣಕ್ಕೆ ಕೊಠಾರ ಮಂಟಪಕ್ಕೆ ಬಿಜ ಮಾಡಿಸಿ ನಾಲ್ಕನೇ ಸೌಮ್ಯದವರ ಹೂವು ಕೈಕಾಣಿಕೆ ತಟ್ಟೆ ಇವರ ಮನೆ ಮುಂಭಾಗದಲ್ಲಿ ಶ್ರೀಯವರಿಗೆ ಸಮರ್ಪಣೆಯಾಗಿ ಆರತಿಯಾಗಿ ಬೀದಿಪ್ರದಕ್ಷಣೆಯಿಂದ ದಯಮಾಡಿಸಿ ಆರಾಧನೆ ಆಗುವಲ್ಲಿ ನಾಲ್ಕನೇ ಸೌಮ್ಯದವರ ಗಂಡಾಮಾಲೆ ಸಹ ಹಣ್ಣು ಕಾಯಿ ತಾಂಬೂಲ ನಿವೇದನವಾಗಿ ಆರತಿ ಆಗಿ ಶ್ರೀಮಠಕ್ಕೆ ಪರಿವಟ್ಟಮಾಲೆ ಆಗಿ, ಬೃಹಸ್ಪತಿಗೆ ಅರುಳಪ್ಪಾಡಾಗಿ ಜೋಯಿಸರಿಗೆ ಪರಿವಟ್ಟಮಾಲೆ ಆಗಿ ತಾಂಬೂಲ ತೆಂಗಿನಕಾಯಿ ಕೊಟ್ಟು ಮೇಲೆ ಸನ್ನಿಧಿ ಬಾಗಿಲಿನಲ್ಲಿ ನಿಂತುಕೊಂಡು ಪಂಚಾಂಗ ಶ್ರವಣ ಸಂಕ್ರಾತಿಯಫಲ ಪಠನೆಯಾದ ನಂತರ ಜೋಯಿಸರು ಗೋಷ್ಠಿಯಲ್ಲಿ ನಮಸ್ಕರಿಸಿ ದೇವರ ಸಮೀಪಕ್ಕೆ ಹೋಗುವಲ್ಲಿ ಮಾಲೆಹಾಕಿ ಪರಿವಟ್ಟ ಬಿಚ್ಚಿ, ಸರ್ಕಾರಿತಟ್ಟೆ ಸಕ್ಕರೆ ನಿವೇದನವಾಗಿ ವಿನಿಯೋಗವಾಗಿ ತೆರೆಯಲ್ಲಿ ನಾಲ್ಕನೇ ಸೌಮ್ಯದವರ ಮತ್ತು ಗಂಡಾಮಾಲೆಯವರ ಸೇವಾರ್ಥಗಳಿಗೆ ನಿವೇದನವಾಗಿ ಅರತಿ ತೀರ್ಥಪ್ರಸಾದ ವಿನಿಯೋಗವಾಗಿ ಉತ್ಸವ ವಾಪಸು ಹೊರಟು ನಾಲ್ಕನೇ ಸೌಮ್ಯದ ಗಂಡಾಮಾಲೆಯವರ ಮನೆ ಬಾಗಿಲಿಗೆ ಬರುವಲ್ಲಿ ಪುಷ್ಪ ಮತ್ತು ಕೈಕಾಣಿಕೆ ತಟ್ಟೆ ಕೊಟ್ಟಮೇಲೆ ಶ್ರೀಮಠಕ್ಕೆ ಮರ್‍ಯಾದೆ ಆಗಿ ಆರತಿ ಆಗಿ ಉತ್ಸವ ಒಳಗೆ ಬಿಜಮಾಡಿಸಿದ ಮೇಲೆ ಆಳ್ವಾರರು ಅಮ್ಮನವರ ಸನ್ನಿಧಿಗೆ ಬಂದು, ತಿರುವಾಯಿಮುಳಿ ಶಾತ್ತುಮೊರೆ ಆಗಿ ಮಠಕ್ಕೆ ಸರ್ಕಾರಕ್ಕೆ ಮಾಲೆಯಾಗಿ ತೀರ್ಥಪ್ರಸಾದ ವಿನಿಯೋಗವಾದ ನಂತರ ಆಳ್ವಾರರು ತಿರುಮಂಗಿ ಆಳ್ವಾರರು ರಾಮಾನುಜಾಚಾರ್ಯರು ಶ್ರೀಯವರ ಸಮೇತ ಆಸ್ಥಾನದ ಮುಂಭಾಗದ ಮಂಟಪದಲ್ಲಿ ಬಿಜ ಮಾಡಿಸಿ

ಶ್ರೀನಾರಾಯಣಸ್ವಾಮಿ ಸನ್ನಿಧಿಯಲ್ಲಿ ತೆರೆ ತೆಗೆದು ಮಠಕ್ಕೆ ಪರಿವಟ್ಟಮಾಲೆ ಆಗಿ ವಸಂತರಾಗದ ಉದ್ದಿಶ್ಯ ಅರುಳಪ್ಪಾಡಾಗಿ ಅರೆಯರಿಗೆ ಮಾಲೆ ಪರಿವಟ್ಟ ಆಗಿ ಅರೆಯರು ಎದುರಿಗೆ ಪಾಶರ ಅನುಸಂಧಾನ ಮಾಡಿದ ಬಳಿ ಶ್ರೀ ನಾರಾಯಣಸ್ವಾಮಿಯವರಿಗೆ ಅಲಂಕಾರ ತಿರುವಾರಾಧನೆ ನಾಲ್ಕನೇ ಸೌಮ್ಯದವರ ಪುಷ್ಪ ಕೈಕಾಣಿಕೆ ಸಮರ್ಪಣೆಯಾದ ನಂತರ ಶ್ರೀಮಠಕ್ಕೂ ಅರೆಯರಿಗೂ ಸಮಕಾಲ ಮರ್ಯಾದೆಯಾಗಿ ಅರೆಯರು "ಯತಿರಾಜದಾರ್ಸ" ಎಂಬ ತಿರುನಾಮ ಹೇಳಿದ ತರುವಾಯ ನಾಲ್ಕನೇ ಸೌಮ್ಯದವರು ಬಾಳೆಹಣ್ಣು ತಾಂಬೂಲ ಅರೆಯರಿಗೆ ಬಟ್ಟಲಿನಲ್ಲಿ ತೆಗೆದುಕೊಂಡುಹೋಗಿ ಕೊಟ್ಟು ಪಟ್ಟುಪಚ್ಚಡ ಕೊಟ್ಟಿರುತ್ತಾರೆಂದು ಹೊಗಳತಕ್ಕದ್ದು. ಮಠಕ್ಕೂ ಅರಿಯರಿಗೂ ಸಮಕಾಲದಲ್ಲಿ ಆಗತಕ್ಕದ್ದು. ಅನಂತರ ಎಲ್ಲಾ ಸೌಮ್ಯದವರಿಗೂ......ಪೇಷ್ಕಾರರು ಕಛೇರಿ ಗುಮಾಸ್ತರು ಇವರುಗಳಿಗೆ ಮಾಲೆ ತಾಂಬೂಲ ಬಾಳೆಹಣ್ಣು ಕೊಟ್ಟ ಮೇಲೆ ಅಡಕಾರ್ತಿ, ಧೂಪಾರ್ತಿ ಕವಿ ಹೇಳಿದವರಿಗೆ ಮಾಲೆ ಎಲೆ ಅಡಿಕೆ ಆದ ಮೇಲೆ ಗುಂಭಾರ್ತಿ ವಗೈರೆ ನಡೆದು ಮಂತ್ರಪುಷ್ಪ ಸಹಸ್ರನಾಮ ಆಶೀರ್ವಾದವಾಗಿ ತೊಣೂರು ನಂಬಿಯವರ ತಳಿಗೆ ನಿವೇದನದಿಂದ ಶಾತ್ತುಮೊರೆ ಎಲ್ಲಾ ಸನ್ನಿಧಿಗಳಲ್ಲೂ ನಿತ್ಯಕಟ್ಲೆ ನಡೆದು ಕ್ಷೀರಾನ್ನ ನಿವೇದನದಿಂದ ಬೀಗಮುದ್ರೆ ಆಗತಕ್ಕದ್ದು."

## (ಇ) ರಥಸಪ್ತಮಿ

### ೧. ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ

"ರಥಸಪ್ತಮಿ ದಿವಸ ಪ್ರಾತಃಕಾದಲ್ಲಿ ಅಲಂಕಾರ ಬೆಳೆದು ನಿತ್ಯೋತ್ಸವವಾದ ನಂತರ ಮಾಮೂಲ್‌ಮೇರೆ ವಾದ್ಯಗಳ ಸಮೇತ ದೇವಸ್ಥಾನದ ದರೋಬಸ್ತು ನೌಕರರೂ ಅವರವರ ಕೆಲಸಗಳನ್ನೂ ಅವರವರು ಮಾಡುತ್ತಾ ಉತ್ಸವರನ್ನು ಪೂರ್ಣಿಮಾ ರಥದ ಮೇಲೆ ಮಾಮೂಲ್‌ಮೇರೆ ಶ್ರೀಪಾದದವರು ಬಿಜ ಮಾಡಿಸತಕ್ಕದ್ದು. ಶ್ರೀಯವರು ಹಿಂದೆ ಸೂರ್ಯಮಂಡಲವನ್ನು ಧರಿಸಿ ಅಲಂಕಾರ ಮಾಡತಕ್ಕದ್ದು. ರಥಾರೋಹಣ ಕಾಲದಲ್ಲಿ ಮೂಹೂರ್ತ ಇಲ್ಲ. ಅನಂತರ ರಥೋತ್ಸವ ಊರು ಸುತ್ತಾ ನಡೆಯತಕ್ಕದ್ದು. ದೇವಸ್ಥಾನದಲ್ಲಿ ಕಲ್ಯಾಣ ಮಂಟಪದ

ಮುಂಭಾಗದಲ್ಲಿ ಚಿತ್ರಗಾರನಿಂದ ರಥ ಸಮೇತ ಸೂರ್ಯ ಮಂಡಲವನ್ನು ಬರೆದು ಸಿದ್ಧಪಡಿಸಿರತಕ್ಕದ್ದು. ಕಾಮಾಟದವರು ಮೂರು ಹಂತದ ಮೇಲೆ ಮಂಚ ಹಾಕಿ ಮಾವಿನ ಸೊಪ್ಪು ಕಟ್ಟಿ ಸಿದ್ಧಪಡಿಸಿರತಕ್ಕದ್ದು. ಅನಂತರ ಸೂರ್ಯಮಂಡಲದ ಸಮೀಪದಲ್ಲಿ ಜೋಯಿಸರು ಪುಣ್ಯಾಹ ಸಾಮಾನುಗಳನ್ನು ಸಿದ್ಧಪಡಿಸಿ ಮಣೇಗಾರ ಕೂರ್ಮಾಸನವನ್ನು ತರಿಸಿ ಹಾಕಿಸಿರತಕ್ಕದ್ದು. ಯಾಗಶಾಲೆ ಪರಿಚಾರಕರು ಪೂಜಾ ಸಾಮಗ್ರಿಗಳನ್ನು ಸಿದ್ಧಪಡಿಸಿರತಕ್ಕದ್ದು. ಆಗಮೀಕರು, ಜೋಯಿಸರು ಸೂರ್ಯಮಂಡಲದ ಸಮೀಪದಲ್ಲಿ ಮಂತ್ರ ಪುಷ್ಪದವರ ಸಮೇತ ಪುಣ್ಯಾಹ ನವಗ್ರಹಪೂಜೆ ಮಾಡಿ ಚರುವನ್ನು ನೈವೇದ್ಯ ಮಾಡಿಸಿ ಮಂಗಳಾರತಿ ಮಾಡಿಸತಕ್ಕದ್ದು. ಶ್ರೀಯವರಿಗೆ ಯರಿಯಪ್ಪ ಪೊಂಗಲು ನಿವೇದನವಾಗತಕ್ಕದ್ದು. ಅನಂತರ ಒಟ್ಟು ಉಪಚಾರ ಮಂಗಳಾರತಿ ಆಗತಕ್ಕದ್ದು. ಮಾಮೂಲ್ ಪ್ರಕಾರ ಪ್ರಸಾದ ಕೊಟ್ಟ ನಂತರ ಶ್ರೀಯವರು ಸನ್ನಿಧಿಗೆ ಬಿಜಮಾಡಿಸತಕ್ಕದ್ದು."

## ೨. ಮೇಲ್ಕೋಟೆ ಶ್ರೀನಾರಾಯಣಸ್ವಾಮಿ ದೇವಸ್ಥಾನದಲ್ಲಿ[೧೦]

"ರಥಸಪ್ತಮಿಪ್ರಯುಕ್ತ ಹಿಂದಿನ ದಿವಸ ಸಾಯಂಕಾಲ ಕಲ್ಯಾಣಿಯಿಂದ ಮಜ್ಜನ ಬರತಕ್ಕದ್ದು.

ಬೆಳಗಿನ ಝಾವದಲ್ಲಿ ಎಲ್ಲಾ ಸನ್ನಿಧಿಗಳಲ್ಲಿ ಆರಾಧನೆ ಆಗಿ ಶ್ರೀಯವರಿಗೆ ತಳಿಗೆ ನಿವೇದನವಾಗಿ, ಬಲಿಪ್ರದಾನವಾಗಿ, ಶಾತ್ತುಮೊರೆ ಆಗಿ ಶ್ರೀಯವರನ್ನು ಸೂರ್ಯಮಂಡಲವಾಹನಕ್ಕೆ ಬಿಜಮಾಡಿಸಿ, ಆರಾಧನೆ, ಅಷ್ಟೋತ್ತರ, ನಿವೇದನ, ಆರತಿ, ಸರ್ಕಾರಕ್ಕೆ ಅರುಳಪ್ಪಾಡಾಗಿ, ತೀರ್ಥಪ್ರಸಾದ ವಿನಿಯೋಗವಾಗಿ, ಅಲಂಕಾರ ನೈವೇದ್ಯವಾಗತಕ್ಕದ್ದು."

## ೩. ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದಲ್ಲಿ ರಥಸಪ್ತಮಿ (ಮಾಘ ಶುದ್ಧ ಸಪ್ತಮಿ)[೧೧]

"ಇದು ರಥಸಪ್ತಮಿ ಬ್ರಹ್ಮೋತ್ಸವ ಮಾಘಶುದ್ಧಬಿದಿಗೆಗೆ ೧೨ದಿವಸ ಹಿಂದೆ ಪ್ರಾರಂಭವಾಗುತ್ತೆ.

ಪ್ರಾರಂಭದ ದಿವಸ ಅಂಕುರಾರ್ಪಣದ ಲಾಗಾಯಿತು ೪ನೇ ತಿರುನಾಳ್‌ವರೆಗೆ ಅಂಕುರಾರ್ಪಣೆ, ಅತಿವಾಸರ, ಧ್ವಜಾವರೋಹಣ, ಭೇರಿತಾಡನ, ಯಾಗಶಾಲಾ ಪ್ರವೇಶ, ತಿರುನಾಳ್ ಕಟ್ಟೆ ಬ್ರಹ್ಮೋತ್ಸವದಂತೆ ನಡೆಯತಕದ್ದು.

## ೫ನೇ ತಿರುನಾಳ್ ಪ್ರಹ್ಲಾದ ಪರಿಪಾಲನೆ

ಈ ದಿವಸ ರಾತ್ರಿ ನಿತ್ಯಕಟ್ಲೆ ಆದನಂತರ ಶ್ರೀಯವರೊಬ್ಬರಿಗೆ ಪ್ರಭಾವಳಿ ಧಾರಣೆಯಿಂದ ಹೊರಪ್ರಾಕಾರದ ಗೋವಿಂದಸ್ವಾಮಯ್ಯಂಗಾರ ಮಂಟಪಕ್ಕೆ ಶ್ರೀಯವರು ದಯಮಾಡಿಸಿ ಅಲ್ಲಿ ಆರಾಧನೆ ಅಷ್ಟೋತ್ತರ ನಡೆದು ಪ್ರಹ್ಲಾದ ಪುರಾಣ ಓದತಕ್ಕ ಕುಮಾರರ ಆಚಾರ್ಯಪುರುಷರಿಗೆ ಅರ್ಚಕರು ಪರಿವಟ್ಟಕಟ್ಟಿ ಮಾಲೆ ಹಾಕಬೇಕು. ಜಿನಸಿ ಗುಮಾಸ್ತರು ಒಂದು ತಟ್ಟೆಯಲ್ಲಿ ತೆಂಗಿನಕಾಯಿ, ಬಾಳೆಹಣ್ಣು, ಎಲೆ ಅಡಿಕೆ, ಕರ್ಪೂರ ಇವುಗಳನ್ನು ಗೊಲ್ಲನ ಮೂಲಕ ಕಳಿಸಿಕೊಟ್ಟದ್ದನ್ನು ಕಾಯಿ ಒಡೆದು ನಿವೇದನೆಮಾಡಿ ಕರ್ಪೂರಾರ್ತಿ ಮಾಡಿ ಪುರಾಣ ಓದತಕ್ಕದ್ದು. ಪುರಾಣವಾದ ನಂತರ ನಿವೇದನವಾಗಿ ಆರ್ತಿ ಆದನಂತರ ಎಲೆ ಅಡಿಕೆ ಮರ್ಯಾದೆಮಾಲೆ ಪರಿವಟ್ಟ ಸರ್ವತ್ರ ತೀರ್ಥವಾಗಿ ಮೊಸರನ್ನದಲ್ಲಿ ವರಸೆಕಟ್ಲೆ ಎತ್ತಿಸಿ ಸರ್ವತ್ರಗೋಷ್ಠಿ ವಿನಿಯೋಗವಾಗತಕ್ಕದ್ದು. ತರುವಾಯ ಶ್ರೀಯವರ ಉತ್ಸವ ಅಲ್ಲಿಂದ ದಯಮಾಡಿಸುವಾಗ ಹೊರ ಪ್ರಾಕಾರದಲ್ಲಿ ಬಾಣ ಬಿರುಸುಗಳಾಗಿ ಹೊರಪ್ರಾಕಾರ ಮತ್ತು ರಥ್ಯಾವರಣ ಸುತ್ತಲೂ ಪ್ರದಕ್ಷಿಣೆಯಿಂದ ಉತ್ಸವ ನಡೆದು ಶ್ರೀಯವರು ಸೀದಾ ಸನ್ನಿಧಿ ಒಳಿಗೆ ದಯಮಾಡಿಸಿದನಂತರ ಅಲ್ಲಿ ಪ್ರೋಕ್ಷಣೆ ಮತ್ತು ವಾಹನಕಟ್ಲೆ ಶಾತುಮೊರೆ ವಗೈರೆ ತೆರೆ ಒಳಗೆ ನಡೆಯತಕ್ಕದ್ದು.

## ೬ನೇ ತಿರುನಾಳ್ ಗಜೇಂದ್ರಮೋಕ್ಷ

ಈ ದಿವಸ ರಾತ್ರಿ ನಿತ್ಯಕಟ್ಲೆಯಾದ ನಂತರ ಶ್ರೀಯವರೊಬ್ಬರಿಗೆ ಗರುಡ ದೇವರು ಧಾರಣೆಯಿಂದ ಅಲಂಕಾರಮಾಡಿ ಗಜೇಂದ್ರಮೋಕ್ಷ ಮಂಟಪಕ್ಕೆ ದಯಮಾಡಿಸಿದ ನಂತರ ಆರಾಧನೆ ಅಷ್ಟೋತ್ತರ ನಡೆದು ಗಜೇಂದ್ರ ಮೋಕ್ಷದ ಪುರಾಣಕ್ಕಾಗಿ.....ರಿಗೆ ಅರ್ಚಕರು ಪರಿವಟ್ಟಕಟ್ಟಿ ಮಾಲೆ ಹಾಕಿದ ನಂತರ ಅವರು ತೆಂಗಿನಕಾಯಿ ಬಾಳೆಹಣ್ಣನ್ನು ಪುರಾಣದ ಪುಸ್ತಕಕ್ಕೆ ನಿವೇದನೆ ಮಾಡಿ ಕರ್ಪೂರಾರ್ತಿ ಆಗಿ ಪುರಾಣ ಓದತಕ್ಕದ್ದು. ಇದಾದನಂತರ ಆರತಿ, ಎಲೆ ಅಡಿಕೆ ಮರ್ಯಾದೆ, ಮಾಲೆ, ಪರಿವಟ್ಟ, ಸರ್ವತ್ರ ತೀರ್ಥ ಇವುಗಳಾಗಿ ಹುಳಿಯನ್ನು ವರಸೆ ಕಟ್ಲೆ ಎತ್ತಿಸಿ ಸರ್ವತ್ರ ಗೋಷ್ಠಿ ವಿನಿಯೋಗವಾಗಿ ಅನಂತರ ಗಜೇಂದ್ರ ಮೋಕ್ಷಕ್ಕಾಗಿ ಸದರಿ ಮಂಟಪದಿಂದ ದೇವರನ್ನು ಶ್ರೀಪಾದದವರು ಬಿಜಮಾಡಿಸಿಕೊಂಡು ಬಂದ ನಂತರ

ಬಂಡಿಕಾರನಿಗೆ ಮಾಲೆಹಾಕಿ ಕೆಳಗೆ ಕೊಳದಲ್ಲಿರುವ ಆನೆಯ ಸೊಂಡಲಿಗೆ ಹಗ್ಗವನ್ನು ಕಟ್ಟಿ ಮೇಲಕ್ಕೆ ಕಟ್ಟಿರುವ ರಾಮಬಾಣ ಹಚ್ಚಿದನಂತರ ಅಲ್ಲಿ ಬಾಣಬಿರುಸು ವಗೈರೆಗಳು ನಡೆದು ಪುನಃ ದೇವರು ಹಿಂದಕ್ಕೆ ವಾಪಸು ದಯಮಾಡಿಸಿ ತೆರೆ ಒಳಗೆ ಅರ್ಚಕರು ಗರುಡದೇವರ ಅಲಂಕಾರವನ್ನು ತೆಗೆಯತಕ್ಕದ್ದು. ವಾಹನ ಮಂಟಪದ ಮುಂಭಾಗದಲ್ಲಿ ಭಂಡಿಕಾರನು ಸ್ಥಾಪಿಸಿರುವ ಚಂದ್ರಮಂಡಲ ವಾಹನಕ್ಕೆ ಬಿಜಮಾಡಿಸಿದ ನಂತರ ಮಾಮೂಲು ಪ್ರಕಾರ ಚತುರ್ಬೀದಿ ಉತ್ಸವದಿಂದ ಶ್ರೀಯವರನ್ನು ಆಸ್ಥಾನಕ್ಕೆ ಬಿಜಮಾಡಿಸಿದ ತರುವಾಯ ತೆರೆ ಒಳಗೆ ಪ್ರೋಕ್ಷಣೆಯಾಗಿ ವಾಹನಕಟ್ಲೆ ಶಾತುಮೊರೆ ವಗೈರೆ ನಡೆಯತಕ್ಕದ್ದು.

## ೭ನೇ ತಿರುನಾಳ್ ರಥಸಪ್ತಮಿ

ಈ ದಿವಸ ಬೆಳಗ್ಗೆ ೫ ಗಂಟೆಯೊಳಗಾಗಿ ನಿತ್ಯಕಟ್ಲೆ ಗೋಷ್ಠಿ ವಿನಿಯೋಗಗಳೆಲ್ಲಾ ನಡೆದು ಆ ಕೂಡ್ಲೆ ಶ್ರೀಯವರನ್ನು ಸೂರ್ಯಮಂಡಲಕ್ಕೆ ಬಿಜಮಾಡಿಸತಕ್ಕದ್ದು. ಅಲ್ಲಿ ಅಲಂಕಾರ ವಗೈರೆಗಳೆಲ್ಲಾ ನಡೆದ ನಂತರ ಒಬ್ಬೊಟ್ಟು ನಿವೇದನವಾಗಿ ೬ ಗಂಟೆಗೆ ಸರಿಯಾಗಿ ಸೂರ್ಯಮಂಡಲ ಚಲನೆಯಾಗಿ ದೇವಸ್ಥಾನದಿಂದ ಹೊರಡುವಾಗ್ಯೆ ಇವರೆದುರಿಗೆ ಗಜಲಕ್ಷ್ಮಿ ವಾಹನದಲ್ಲಿ ಅಲಂಕಾರವಾಗಿರುವ ಉತ್ಸವ ರಂಗನಾಯಕಿ ಅಮ್ಮನವರು ಉತ್ಸವವಾಗತಕ್ಕದ್ದು. ಈ ರೀತಿ ನರಸಿಂಹರಾಯರ ಮನೆ ಬೀದಿಯಿಂದ ಮಾರಿಗುಡಿ ಮಾರ್ಗವಾಗಿ ಸರ್ಕಾರಿ ಹೆಣ್ಣುಮಕ್ಕಳ ಸ್ಕೂಲ್ ಮುಂಭಾಗದಲ್ಲಿ ಹೊರಟು ದೇವಸ್ಥಾನದ ಸುತ್ತಲೂ ಪ್ರದಕ್ಷಣೆಯಿಂದ ದೇವಸ್ಥಾನಕ್ಕೆ ಬಂದನಂತರ ವಾಹನಗಳ ಮೇಲೆ ಪಾಯಸ ನಿವೇದನವಾಗಿ ಶ್ರೀಯವರನ್ನು ಅಲ್ಲಿಂದ ಬಿಜಮಾಡಿಸಿಕೊಂಡು ಕೋಠಾರ ಮಂಟಪದಲ್ಲಿ ಬಿಜಮಾಡಿಸತಕ್ಕದ್ದು. ರಥದ ಪೀಠದಲ್ಲಿ ಅಲಂಕಾರವಾಗಿರುವ ಉಭಯ ಅಮ್ಮನವರನ್ನೂ ಕೊಠಾರ ಮಂಟಪಕ್ಕೆ ಬಿಜಮಾಡಿಸಿ ಅನಂತರ ಗಜಲಕ್ಷ್ಮಿ ವಾಹನದಲ್ಲಿರುವ ರಂಗನಾಯಕಿ ಅಮ್ಮನವರನ್ನು ಸಹಾ ಕೊಠಾರ ಮಂಟಪಕ್ಕೆ ಬಿಜಮಾಡಿಸಿ ಉಭಯ ಅಮ್ಮನವರು ಬಿಜಮಾಡಿಸಿರುವ ರಥದ ಪೀಠಕ್ಕೆ ಉತ್ಸವದೇವರನ್ನೂ ರಂಗನಾಯಕಿ ಅಮ್ಮನವರನ್ನೂ ಬಿಜಮಾಡಿಸಿ ಅಲಂಕಾರ ಮಾಡಿ ಸಂಕ್ರಾಂತಿ ರಥೋತ್ಸವದ ದಿವಸ ನಡೆದಂತೆ ಯಾತ್ರಾದಾನವಾಗಿ ಅಲ್ಲಿಂದ ಶ್ರೀಯವರು ಕ್ಯಾತನಹಳ್ಳಿ.......ರ ಮಂಟಪಕ್ಕೆ ದಯಮಾಡಿಸಿ

ಅಲ್ಲಿ ಆರಾಧನೆ ಮಂಗಳಾರತಿ ಅಷ್ಟೋತ್ತರ ನಿವೇದನ ಮಂಗಳಾರತಿ ಆಗಿ ಎಲೆ ಅಡಿಕೆ ಮರ್ಯಾದೆಗಳು ನಡೆದು ಪರಿವಟ್ಟಮಾಲೆ ಆಗಿ ಸರ್ವತ್ರ ತೀರ್ಥವಾದ ನಂತರ ವರಸೇಟ್ಲೆ ಎತ್ತಿಸಿ ಗೋಷ್ಠಿಯವರಿಗೂ ಹೆಂಗಸರಿಗೂ ವಿನಿಯೋಗವಾಗತಕ್ಕದ್ದು. ಇದರಂತೆ ವೀಣೆ.....ರ ಮಂಟಪದಲ್ಲಿಯೂ ಮಂಟಪೋತ್ಸವಗಳು ಬೆಳೆದು ಅಲ್ಲಿಂದ ಹೊರ ಪ್ರಾಕಾರ ಪ್ರದಕ್ಷಣೆಯಾಗಿ ಸಂಕ್ರಾಂತಿ ರಥೋತ್ಸವದಂತೆ ವಿಶಿಷ್ಟ ಸೇವೆಗಳೂ ನಡೆದು ಶ್ರೀಯವರು ಸಾಯಂಕಾಲ ರಥದಿಂದ ಆಸ್ಥಾನಕ್ಕೆ ದಯಮಾಡಿಸತಕ್ಕದ್ದು. ರಥಾರೋಹಣವಾಗಿ ರಥ ಚಲನೆಯಾದ ನಂತರ ದೇವಸ್ಥಾನದಲ್ಲಿ ಕ್ಯಾತನಹಳ್ಳಿ.........ರ ಸಂತರ್ಪಣೆ ನಡೆಯುತ್ತದೆ.

೮, ೯, ೧೦ನೇ ತಿರುನಾಳ್ ಕಟ್ಟೆಗಳ ವಿಶಿಷ್ಟ ಸೇವೆಗಳೂ ಸಂಕ್ರಾಂತಿ ಬ್ರಹ್ಮೋತ್ಸವದ ೮, ೯, ೧೦ನೇ ತಿರುನಾಳ್‌ಗಳಂತೆ ನಡೆಯತಕ್ಕದ್ದು."

## ೪. ಬೇಲೂರಿನ ಶ್ರೀ ವೇಲಾಪುರಿ ಸೌಮ್ಯಕೇಶವದೇವರ ದೇವಾಲಯದಲ್ಲಿ[೧೨]

"ಮಾಘಶುದ್ಧ ಷಷ್ಠಿ ದಿವಸ ಹಗಲು ನಿತ್ಯಾರಾಧನೆ ನಡೆದನಂತರ ನೆಹಮಿ ಸೇವಾರ್ಥಗಾರರು........ರು ನಡೆಸತಕ್ಕ ಅಭಿಷೇಕ ಸೇವಾರ್ಥವು ೧೨ ಗಂಟೆಯೊಳಗಾಗಿ ಪೂರೈಯಿಸಿ ನಿತ್ಯಗಟ್ಲೆಯಂತೆ ನಡೆಯತಕ್ಕದ್ದು. ಈ ದಿನವೇ ಸೂರ್ಯಮಂಡಲವನ್ನು ಚೆನ್ನಾಗಿ ಬೆಳಗಿಸಿ ರಥದಮೇಲೆ ಕಟ್ಟಿ ಮಂಡಲವನ್ನು ಹೂಡಿ ಸಾಯಂಕಾಲದೊಳಗಾಗಿ ಅರುಣೋದಯಕ್ಕೆ ಉತ್ಸವ ಹೊರಡಲು ಅನುಕೂಲವಾಗುವಂತೆ ಭದ್ರಪಡಿಸಿರತಕ್ಕದ್ದು. ಸಾಯಂಕಾಲ ಆರಾಧನೆ ಜಾಗ್ರತೆಯಾಗಿ ಪೂರೈಸಿ ಅನಂತರ ಉತ್ಸವರು ಮತ್ತು ಅಮ್ಮನವರುಗಳನ್ನು ಅಮ್ಮನವರ ದೇವಸ್ಥಾನಕ್ಕೆ ಬಿಜಮಾಡಿಸಿ ಅಲ್ಲಿ ಸೂರ್ಯಮಂಡಲದ ಹಲಿಗೆಗೆ ಅರ್ಚಕರು ಸ್ಥಾನೀಕ ಪರಿಚಾರಕರುಗಳ ಸಹಾಯದಿಂದ ಬಿಜಮಾಡಿಸಿ ಪೀಠಬಂಧನವನ್ನು ಘಟ್ಟಿಯಾಗಿ ಮಾಡತಕ್ಕದ್ದು. ಈ ದಿನ ರಾತ್ರಿ ನಿತ್ಯಗಟ್ಲೆಯಾಗಿ ದ್ವಾರಬಂಧನವಾದ ನಂತರ ಅರ್ಚಕ ಪರಿಚಾರಕರು ಸ್ಥಾನೀಕರು ದೇವಸ್ಥಾನದಲ್ಲಿಯೇ ಮಲಗಿ ಅರುಣೋದಯಕ್ಕೆ ಸರಿಯಾಗಿ ಸ್ನಾನವನ್ನು ಮಾಡಿ ದೇವರುಗಳಿಗೆಲ್ಲಾ ಸೂರ್ಯೋದಯಕ್ಕೆ ಮುಂಚೆಯೇ ನಿತ್ಯಾರಾಧನೆ ಪೂರೈಸಿ ಉಭಯ ಅಮ್ಮನವರ ಸಮೇತ ಉತ್ಸವರಿಗೆ ಅಭಿಷೇಕಮಾಡಿ ದೇವರಿಗೆ ನಾರಾಯಣನ ಅಲಂಕಾರ ಮಾಡಿದ

ನಂತರ ಅರ್ಚಕ ಪರಿಚಾರಕರು ಸ್ಥಾನೀಕರು ಮಣೇಗಾರರು ವಾದ್ಯಗಾರರ ಸಮೇತ ಮಂಡಲ ಪ್ರೋಕ್ಷಣೆ ಅರ್ಚನೆ ಮಾಡಿ ಸ್ಥಾನೀಕರು ಪೀಠಕ್ಕೂ ದೇವರು ಬಿಜಮಾಡಿರುವ ಹಲಗೆಗೂ ಬಂಧಿಸಿ ಕಟ್ಟಬೇಕು. ದೇವರನ್ನು ಮಂಡಲಾರೋಹಣ ಮಾಡುವಾಗ ಜೋಯಿಸರು ಮಂಗಳಾಷ್ಟಕವನ್ನು ಹೇಳಬೇಕು. ಅನಂತರ ಮಂಗಳಾರತಿಯಾಗಿ ಮೊದಲು ರಾಜಮರ್ಯಾದೆಯಾದ ನಂತರ ರಥವನ್ನು ಎಳೆಯಲು ಪ್ರಾರಂಭ ಮಾಡಬೇಕು. ಮಂಡಲದ ಮೇಲೆ ಬಂದವರಿಗೆಲ್ಲಾ ಅರ್ಚಕರು ಪರಿಚಾರಕರು ಫಲ ಸಮರ್ಪಣೆ ಮಾಡಿಕೊಡಬೇಕು. ಒಬ್ಬ ಸ್ಥಾನೀಕರು ಚಾಮರ ಬೀಸುತ್ತಾ ಮತ್ತೊಬ್ಬರು ಛತ್ರಿ ಹಿಡಿದಿರತಕ್ಕದ್ದು. ಎಂಟು ಬೀದಿಗಳಲ್ಲೂ ಉತ್ಸವವಾಗಿ ಮಂಡಲಾರೋಹಣವಾದ ನಂತರ ಶ್ರೀಯವರನ್ನು ಅಮ್ಮನವರ ದೇವಸ್ಥಾನಕ್ಕೆ ಬಿಜಮಾಡಿಸತಕ್ಕದ್ದು. ಅಲ್ಲಿ ಮಣೇಗಾರರು ದೇವಸ್ಥಾನದಿಂದ ತೀರ್ಥ ಬಟ್ಟಲನ್ನು ಮರ್ಯಾದೆಯಿಂದ ತೆಗೆಸಿಕೊಂಡು ಬರತಕ್ಕದ್ದು. ಅನಂತರ ದೇವರಿಗೆ ನಿವೇದನ ಮಂಗಳಾರತಿಯಾಗಿ ಶಾತುಮೊರೆ ಮಾಡಿ ರಾಜಾಶೀರ್ವಾದ ರಾಜಮರ‍್ಯಾದೆ ನಡೆದು ಸರ್ವತ್ರ ಮರ‍್ಯಾದಾನುಸಾರವಾಗಿ ತೀರ್ಥಪ್ರಸಾದಾದಿಗಳು ವಿನಿಯೋಗವಾದನಂತರ ಹೆಚ್ಚುಗಟ್ಲೆ ತಳಿಗೆ ವಿನಿಯೋಗವಾಗತಕ್ಕದ್ದು. ಇಲ್ಲಿ ನೆಹಮಿ ಸೇವಾರ್ಥಗಾರರಿಗೆ ಹೂಮಾಲೆ ಪ್ರಸಾದವನ್ನು ಅರ್ಚಕರು ಕೊಡಬೇಕು. ಈ ಸೂರ್ಯಮಂಡಲೋತ್ಸವವನ್ನು ಸರ್ಕಾರಿ ಮೊಬಲಗಿನಿಂದಲೂ..........ರ ಮಕ್ಕಳು...........ರಿಂದಲೂ ಬರತಕ್ಕ ಮೊಬಲಗನ್ನು ಸಹ ಸೇರಿಸಿ ನಡೆಸತಕ್ಕದ್ದು. ಸೇವಾರ್ಥವು ಸೇರಿರುವುದರಿಂದ ದೇವಸ್ಥಾನದ ನೌಕರರಿಗೆ ತೇಜಸ್ವಾಮ್ಯ ಸಲುತ್ತದೆ. ಇದು ನಿಂತು ಸರ್ಕಾರದ ಉತ್ಸವವೊಂದೇ ನಡೆಯುವುದಾದರೆ ಯಾರಿಗೂ ತೇಜಸ್ವಾಮ್ಯ ಸಲ್ಲತಕ್ಕುದ್ದಿಲ್ಲಾ. ಆದರೂ ಸೂರ್ಯಮಂಡಲೋತ್ಸವವನ್ನು ನಡೆಸಬೇಕು."

ಮೇಲಿನ ದೇವಾಲಯಗಳಲ್ಲಿ ನಡೆಯುವ ಉತ್ಸವಗಳಿಗೆ ಸಂಬಂಧಿಸಿದಂತೆ ಬಂದಿರುವ ಹಲವು ಅಪೂರ್ವ ಪಾರಿಭಾಷಿಕ ಪದಗಳಿಗೆ (ಉದಾ: 'ತೇಜ ಸ್ವಾಮ್ಯ', 'ಹಬ್ಬಗಟ್ಲೆ', 'ಸೋಮಸೂತ್ರ') ಸಂದರ್ಭೋಚಿತವಾದ ವಿವರಗಳನ್ನು ಪಡೆದುಕೊಂಡರೆ ಹಿಂದಿನ ಹಲವು ಶಾಸನಗಳ ದತ್ತಿ ವಿಭಾಗಗಳನ್ನು ಸರಿಯಾಗಿ ಅರ್ಥೈಸಲು ಸಹಾಯಕವಾಗುತ್ತದೆ.

## ಜಾನಪದ ವಾಙ್ಮಯದಲ್ಲಿ ಸೂರ್ಯ

ಜಾನಪದ ಸಾಹಿತ್ಯದಲ್ಲಿ ಸೂರ್ಯ ಸ್ತೋತ್ರ ಹೆಚ್ಚಾಗಿ ಕಾಣಿಸದು ಮತ್ತು ಸೂರ್ಯನ ವರ್ಣನೆಗಳೂ ವಿರಳವೇ. ಚಂದ್ರನ ಆರಾಧನೆ (Cult) ಇರುವಂತೆ –ಉದಾಹರಣೆ, ಬೆಳ್ದಿಂಗ್ಳಪ್ಪನ ಪೂಜೆ–ಸೂರ್ಯನ ಆರಾಧನೆಯೊಂದು ಇರುವಂತೆ ತೋರದು. ಆದರೂ ವಿರಳವಾಗಿ ಸೂರ್ಯೋದಯದ ವರ್ಣನೆಗಳು, ಸೂರ್ಯನನ್ನು ಸೂರ್ಯನಾರಾಯಣ ಎಂದು ಕರೆದಿರುವುದು, ಜನರು ಸೂರ್ಯನಂತಹ ಮಗನನ್ನು ಬಯಸಿರುವುದು ಹಾಡುಗಳಲ್ಲಿ ಕಾಣುಬರುತ್ತದೆ. ಕೆಳಗಿನ ಒಂದು ಜಾನಪದ ಗೀತದಲ್ಲಿ ಹಳ್ಳಿಯ ಹೆಣ್ಣು ಅದೇ ಹುಟ್ಟುತ್ತಲಿರುವ ಸೂರ್ಯನನ್ನು ತನ್ನ ಹಣೆಯ ಕುಂಕುಮಕ್ಕೆ ಹೋಲಿಸಿಕೊಂಡಿರುವುದು ತೀರ ವಿನೂತನ ಕಲ್ಪನೆಯಾಗಿದೆ. ಹಾಡು ಹೀಗಿದೆ:

### ಸೂಲಗರಾಯ[೧೩]

ವುಟ್ಟಿಬರೋ ಸೂಲುಗರಾಯನ ವಪ್ಪ ನೋಡೆ ನನ್ನಕ್ಕ
ನಮ್ಮಟ್ಟೀಲಿ ಕುಂಕುಮ ವೊಳದಂಗೇ ಸೂಲುಗರಾಯ
ವುಟ್ಟಿದನೇಳಾ ಜಗಕೆಲ್ಲ

ಮೂಡಿ ಬರೋ ಸೂಲುಗರಾಯನ ರೂಢಿ ನೋಡೆ ನನ್ನಕ್ಕ
ನಮ್ಮಣೇಲಿ ಕುಂಕುಮವೊಳೆದಂತೆ । ಸೂಲುಗರಾಯ
ಮೂಡಿದಾ ಏಳಾ ಜಗಕೆಲ್ಲ

ಹಕ್ಕಳೇಳಾಕೆ ಮೊದಲೇ ಮಕ್ಕಳೇಳಾಕೆ ಮೊದಲೆ
ನಾರಾಯಣಸ್ವಾಮಿ ರಥವೇರಿ । ಬರುವಾಗ
ನಾರೀರ ಗುರುತ ಅರಿಯಾನು

ಕೋಳಿ ಕೂಗಾಕೆ ಮೊದಲೆ ಇಸ್ತ್ರೇರೇಳಾಕೆ ಮೊದಲೆ
ಸೂಲುಗರಾಯ ರಥವೇರಿ । ಬರುವಾಗ
ಇಸ್ತ್ರೇರ ಗುರುತಾ ಅರಿಯಾನು

ಹಸುವಾ ಬಿಟ್ಟಿಲ್ಲ ಹಸುಮಕ್ಕಳೆದ್ದಿಲ್ಲಾ

ವೊಸಮನೆ ಬೀಗ ತಗದಿಲ್ಲಾ । ಸೂಲುಗರಾಯ
ನೀನೊತ್ತುವಂತೆ ಬಂದಾ ಬಗೆಯೇನೋ

ಎಮ್ಮೆ ಬುಟ್ಟಿಲ್ಲಾ ಮಕ್ಕಳೆದ್ದಿಲ್ಲಾ
ನಮ್ಮನೆ ಬೀಗ ತಗದಿಲ್ಲಾ । ಸೂಲುಗರಾಯ
ನೀನು ಒಟ್ಟಿಗೆ ಬಂದಾ ಬಗೆಹೇಳೋ

ಮೂಡಲಾಗಿ ಪುಟ್ಟೋ ಮುತ್ತುನಂತೆ ಸೂಲುಗರಾಯ
ನಿನ್ನಂತನೊಬ್ಬ ಮಗ ಬೇಕೋ । ಸೂಲುಗರಾಯ
ನೀಲಮ್ಮನಂತೆ ಸೊಸೆ ಬೇಕೋ

ಬೆಳ್ಳಾನೆ ಬೆಳಕರಿದು ಬೆಳ್ಳಿದೇವ ಮೂಡಾನೆ
ಒಳ್ಳೊಳ್ಳೆ ಮೀನು ಗರಿಬುಟ್ಟು । ಆಡಾವಲ್ಲೆ
ಬೆಳ್ಳಿದೇವಾನಾ ಬೆಳಕೀಗೆ

ಸೂರ್ಯನನ್ನು ಇಲ್ಲಿ 'ಸೂಲುಗರಾಯ' ಎಂದಿದೆ [ಸೂರ್ಯ (ಸಂ) > ಸೂರಿಯ > ಸೂರಿ > ಸೂಲಿ + ಗ].

ಎದ್ದ ತಕ್ಷಣ ಹಳ್ಳಿಯವರು 'ಸ್ವಾಮಿಗೆ' (= ಸೂರ್ಯನಿಗೆ) ಕೈಮುಗಿದು ತಮ್ಮ ಕೆಲಸಕಾರ್ಯಗಳನ್ನು ಆರಂಭಿಸುತ್ತಾರೆ. ಭಾರತದ ಕೆಲವು ಕಡೆ (ಉದಾ: ಗುಜರಾತ್) ಮಳೆಗಾಲದ ನಾಲ್ಕು ತಿಂಗಳಲ್ಲಿ ಸೂರ್ಯನನ್ನು ದರ್ಶನಮಾಡದೆ ಊಟ ಮಾಡಕೂಡದೆಂಬ ವ್ರತವನ್ನು ತೊಟ್ಟಿದ್ದರೆಂದೂ, ಮಳೆಗಾಲದಲ್ಲಿ ಅವರು ಸೂರ್ಯದರ್ಶನವಾಗದೆ ಎಷ್ಟೋ ದಿನ ಉಪವಾಸವಿರುತ್ತಿದ್ದರೆಂದೂ, ಹುಡುಗರು ಹೊರಗೆ ಕಾದಿದ್ದು ಸೂರ್ಯ ಕಾಣಿಸಿದೊಡನೆ ಒಳಗೆ ಹೋಗಿ ಹೇಳಿ ತಾಯಿಯನ್ನು ಕರೆತರುವಲ್ಲಿ ಸೂರ್ಯ ಮರೆಯಾಗಿ ಆಕೆ 'ನಾನು ಊಟ ಮಾಡುವುದು ದೇವರಿಗೆ ಇಷ್ಟವಿಲ್ಲ' ವೆಂದು ಹೇಳಿ ತಮ್ಮ ಕೆಲಸಕಾರ್ಯಗಳಲ್ಲಿ ತೊಡಗುತ್ತಿದ್ದರೆಂದೂ ಒಂದು ಕಡೆ ಹೇಳಿದ್ದಾರೆ.[೧೪]

ಕರ್ನಾಟಕದಲ್ಲಿ ಹೆಣ್ಣುಮಕ್ಕಳು 'ಚಂದಮಾಮ'ನ ಹಬ್ಬವನ್ನು ವೈಭವದಿಂದ ಆಚರಿಸುತ್ತಾರೆ. 'ತಿಂಗಳು ಮಾವನ ಪೂಜೆ' ಅಥವಾ 'ಬೆಳ್ದಿಂಗಳಪ್ಪನ ಪೂಜೆ' ಎಂದು ಕರೆಯುವ ಆಚರಣೆಯಲ್ಲಿ ಚಂದ್ರಮಂಡಲ, ಹೂವಿನ ಚಪ್ಪರ ಇತ್ಯಾದಿ

ಚಿತ್ರ ಬರೆದು ಬೆಳದಿಂಗಳ ದಿನಗಳಲ್ಲಿ ಹಾಡು ಹೇಳುತ್ತ ಪೂಜೆ ಮಾಡುತ್ತಾರೆ.[೧೫] ಮಳೆ ಬಾರದಿದ್ದಾಗಲೂ ಈ ಆಚರಣೆ ನಡೆಯುತ್ತದೆ. ಕರ್ನಾಟಕದ ಜಾನಪದ ಶಾಸ್ತ್ರದಲ್ಲಿ (Folklore) ಚಂದ್ರನಂತೆ ಸೂರ್ಯ ಎಲ್ಲೂ ಕೇಂದ್ರವಾಗಿ ನಿಂತಂತೆ ಕಾಣುವುದಿಲ್ಲ. "ಇಂದಿಗೂ ಬಂಗಾಳದಲ್ಲಿ ಕನ್ಯೆಯರು ಸೂರ್ಯನ ಪ್ರೀತ್ಯರ್ಥವಾಗಿ" ಮಾಘಮಂಡಲ ವ್ರತವನ್ನು ಆಚರಿಸುತ್ತಾರೆ. ಅದು ಅವರ ಐದನೆಯ ವಯಸ್ಸಿನಿಂದ ಪ್ರಾರಂಭವಾಗಿ ಏಳು ವರ್ಷಗಳ ಕಾಲ ಅವಿಚ್ಛಿನ್ನವಾಗಿ ನಡೆಯುತ್ತದೆ. ಅನುರೂಪನಾದ ಪತಿಯನ್ನು ಪಡೆಯುವುದೇ ಅದರ ಉದ್ದೇಶ[೧೬] ಇಂತಹ ಆಚರಣೆ ಸೂರ್ಯನಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿಲ್ಲ. ಇದಕ್ಕೆ ಬಹುಶಃ ದ್ರಾವಿಡರ 'ಕುಲಪತಿ' ಸೂರ್ಯ ಅಲ್ಲ, ಚಂದ್ರ.[೧೭] ಭೀಮನಮಾವಾಸ್ಯೆ, ಗೌರೀಪೂಜೆ, ಗೌರೀ ವ್ರತಗಳಂತಹವು ಕರ್ನಾಟಕದಲ್ಲಿ ಹೆಣ್ಣು ಮಕ್ಕಳು ಒಳ್ಳೆಯ ಗಂಡನಿಗಾಗಿ ನಡಸುವ ಆಚರಣೆಗಳು.

## 'ಸೂರ್ಯಸಂದೇಶ' / 'ಸೂರ್ಯದೂತ'

ಹಿಂದಿನ ಕನ್ನಡ ಸಾಹಿತ್ಯದಲ್ಲೇ ಅತ್ಯಂತ ವಿಶಿಷ್ಟವೆನ್ನಬಹುದಾದ ಭಾವಗೀತೆಯೊಂದು ಹದಿನಾರನೇ ಶತಮಾನದ ರತ್ನಾಕರ ವರ್ಣಿಯ ಲೇಖನಿಯಿಂದ ಹೊಮ್ಮಿದೆ; ದಿವ್ಯಲೋಕದ 'ಗಂಧಕುಟಿ'ಯ ಸಿದ್ಧಚೇತನಗಳಿಗೆ ರತ್ನಾಕರನು ಸೂರ್ಯನ ಮೂಲಕ ಒಂದು ಸಂದೇಶವನ್ನು ಕಳಿಸುತ್ತಾನೆ. ತನ್ನ ಇಳಿವಯಸ್ಸಿನಲ್ಲಿ ಆತ್ಮ ಸಿದ್ಧಿಯನ್ನು ಪಡೆದುಕೊಂಡ ಸಂತೋಷದ ಸಂಗತಿಯನ್ನು ತನ್ನ ಜನರಿಗೆ ('ನಮ್ಮವರು') ಹೋಗಿ ತಿಳಿಸುವಂತೆ ಸೂರ್ಯನನ್ನು ಕೇಳಿಕೊಳ್ಳುತ್ತಾನೆ. ಸೂರ್ಯನನ್ನು ಇಲ್ಲಿ ಕವಿ ತನ್ನ ದೂತನಾಗಿ, ಸಂದೇಶವಾಹಕನಾಗಿ ಕೆಲಸಮಾಡುವಂತೆ ಕೇಳಿಕೊಂಡಿರುವ ಕಾರಣವಾಗಿಯೇ ಆ ಹಾಡನ್ನು 'ಸೂರ್ಯಸಂದೇಶ', 'ಸೂರ್ಯದೂತ' ಎಂದು ಕರೆದಿದ್ದೇನೆ. (ನೋಡಿ–'ಮೇಘದೂತ') ಅದರ ಪೂರ್ಣಪಾಠವನ್ನು ಕೊಡುತ್ತೇನೆ.

ಒಸಗೆಯ ಹೇಳು ಕಂಡಾ ಸೂರ್ಯ ಒಸಗೆಯ ಹೇಳು ಕಂಡಾ[೧೮]
ಪುಸಿಯಲಾ ಪೋಗಿ ನಮ್ಮವರ ಕಂಡರೆ ನೀನೊಂದೊಸಗೆಯ
ಹೇಳು ಕಂಡಾ ॥ ಪಲ್ಲವಿ ॥
ಭರತಭೂಮಿಯಲ್ಲಿ ನಾ ನಿಂದನೆಂದೆಂದೂ

ಬರು(ತ) ಕಂಡೆನು ಬಹಿರಂಗಕೆ ಸುಳಿಯಾ

ಪರಮಾತ್ಮ ಯೋಗದೊಳಿರ್ದನೆಂದೆನ್ನೊ ಭಾ
ಪುರೆಯೆಂದು ಕೊಂಡಾಡಿ ಹರುಷವೆಯ್ದುವರೂ ॥
ಇಂದು ನಾ(ನೀ)ನಿಲ್ಲಿರ್ದು ನಾಳೆ ಪೂರ್ವ ವಿದೇಹ
ವೆಂದೆಂಬ ಕ್ಷೇತ್ರಕೆ ಹೋಹೆ ಹೋದಾಗ
ಗಂಧಕುಟಿಯಲಿ (ನ)ಂಮವರ ಕಂಡರೆ ನಿಮ್ಮ
ಬಂಧುವ ಕಂಡೆನು ಕ್ಷೇಮವೆಂದೆನ್ನು ॥
ಧ್ಯಾನಿಸಿ ಧ್ಯಾನಿಸಿ ತನ್ನ ಮೈಯೊಳಗಾತ್ಮ
ಭಾನುವ ಕಂಡೆನು ದಿವ್ಯಾಮೃತವ
ನಾ ನೆನ್ನೆ ಬರುತಿರ್ದಡೆನ್ನ ಕರೆದು ನಿಮ
ಗಾನಂದವಾಹಂತೆ ಹೇಳಿದೆನೆಂದು ॥
ಕರ್ಮ ಶಿಥಿಲವಾಯಿತು ಆತ್ಮಗೆ ಪ್ರಾಯವಾಯಿತು
ಕರ್ಮಂಗಳ ಧ್ಯಾನ ಸುಜ್ಞಾನದಿಂದ ಅ
ಘರ್ಮದಿಂದೊಯ್ಯನೆ ಸುಡುತಿರ್ದನೆಂದೆನ್ನೊ ॥
ಮರಣದ ನೆವದಿಂದ ಮೈಯ ಬಿಸುಡು (ಡಿ) ಸ್ವರ್ಗ
ದರಸಾಗಿ ಬಂದು ನಿಮ್ಮೆಲ್ಲರ ಕಂಡು
ಪರನು ಮುಕ್ತಿಗೆ ಹೋಗುವನ ಹೆಸರು ರತ್ನಾ
ಕರಸಿದ್ಧಯೆನ್ನು ನಮ್ಮವರು ಮೆಚ್ಚುವರು ॥

ಕಾಮಾರ್ತರಿಗೆ ಚೇತನ ಅಚೇತನ ಎಂಬುದರ ಭೇದ ಹೋಗುತ್ತದೆ: ಆ ಕಾರಣವೇ ಯಕ್ಷ ತನ್ನ ಪ್ರೇಯಸಿಗೆ ಜಡವಾದ ಮೇಘದ ಮೂಲಕ ಸಂದೇಶವನ್ನು ಕಳಿಸಿದನೆಂದು ಕಾಳಿದಾಸ ಹೇಳುತ್ತಾನೆ. ಆದರೆ, ಇಲ್ಲಿ ಪೂರ್ಣ ಸಿದ್ಧಿಯನ್ನು ಪಡೆದು ಜೀವನ್ಮುಕ್ತನೆಂದು ಭಾವಿಸಿದ ರತ್ನಾಕರ ಕವಿ ಪೂರ್ಣಜ್ಞಾನದಿಂದಲೇ ತನ್ನ ಆನಂದವನ್ನು, ಜ್ಞಾನಕ್ಕೆ ಸಂಕೇತವಾದ ಸೂರ್ಯನ ಮೂಲಕ ಸಿದ್ಧ ಲೋಕದ 'ಗಂಧಕುಟಿ'ಯ ತನ್ನವರಾದ ಸಿದ್ಧಾತ್ಮರಿಗೆ ಸಂದೇಶವನ್ನು ಕಳಿಸುತ್ತಾನೆ. ತನ್ನ ದೇಹವನ್ನು ಸದ್ಯದಲ್ಲೇ ಬಿಸುಡಿ ಅವರನ್ನು ಸೇರುವುದಾಗಿಯೂ ಹೇಳಿ ಕಳುಹಿಸುತ್ತಾನೆ. ತನ್ನ ದೇಹಕ್ಕೆ ಮುಪ್ಪು ಕವಿದರೂ, ಸಿದ್ಧಿಯಿಂದ ತನ್ನ ಆತ್ಮಕ್ಕೆ ಪ್ರಾಯ ಒದಗಿತೆಂಬ ಕಲ್ಪನೆ ಅತ್ಯಂತ ನೂತನವಾದುದು. ಕನ್ನಡದ ಮೆಚ್ಚಿನ ಕವಿಯಾದ ರತ್ನಾಕರನ ಆತ್ಮ ಚರಿತ್ರೆಗೆ ಅತ್ಯಮೂಲ್ಯ ದಾಖಲೆಯಾದ ಈ ಕವನ ಒಂದು ಶ್ರೇಷ್ಠ ಅನುಭವವನ್ನು ವಿಶಿಷ್ಟ ರೀತಿಯಲ್ಲಿ ಅಭಿವ್ಯಕ್ತಗೊಳಿಸಿದ

ಕಾರಣದಿಂದಾಗಿ ಒಂದು ಅಪೂರ್ವ ಕೃತಿಯೆನ್ನಿಸುತ್ತದೆ. ಕಾಳಿದಾಸನ 'ಮೇಘದೂತ' ಶೃಂಗಾರಪರವಾದರೆ, ಈ 'ಸೂರ್ಯದೂತ' ಅಧ್ಯಾತ್ಮಪರ. ಕಾಳಿದಾಸನಿಂದ ಸ್ಫೂರ್ತವಾದರೂ ಈ ಕವಿತೆ ತನ್ನ ಕಾಲ ಮೇಲೆ ತಾನು ಸ್ವತಂತ್ರವಾಗಿ ನಿಲ್ಲುವಷ್ಟು ಉಜ್ವಲವಾಗಿದೆ.

## ಸೂರ್ಯನ ಬಗ್ಗೆ ಕೆಲವು ಆಧುನಿಕ ಕವನಗಳು

ಫೆಬ್ರವರಿ ೧೬, ೧೯೮೦ರ ಪೂರ್ಣಗ್ರಹಣ ಕೊನೆಯ ಪಕ್ಷ ಎರಡು ಕವನಗಳಿಗೆ ಪ್ರೇರಣೆಯಾಯಿತು – ದೇ. ಶ. ಕುಲಕರ್ಣಿ ಅವರ "ಕೊಂಪೆ, ಫೆ. ೧೬" ಎಂಬ ಹೆಸರಿನ ಕವನ (ಪ್ರಜಾವಾಣಿ ೨ನೇ ಮಾರ್ಚ್ ೧೯೮೦) ಮತ್ತು ಚಿ. ಶ್ರೀನಿವಾಸರಾಜು ಅವರ "ಕಪ್ಪು ನೆರಳು" (ಸಾಧನೆ, ೯, ೧. ಜನವರಿ – ಮಾರ್ಚ್, ೧೯೮೦). ಸೂರ್ಯನ ಬಗ್ಗೆ ಮಿಡಿದ ಕವಿಹೃದಯದ 'ಕಲ್ಪನೆ'ಗಳು ಇಲ್ಲಿವೆ. ಕವನಗಳ ಚೆಲುವಿಗೆ ಅನುಬಲವಾದ ರೇಖಾ ಚಿತ್ರಗಳು ಇಲ್ಲುಂಟು.

ಹಿಂದಿನ ಇಂದಿನ ಕನ್ನಡ ಕಾವ್ಯಗಳಲ್ಲಿ ಬರುವ ಸೂರ್ಯವರ್ಣನೆಗಳ ಚರ್ಚೆ ನನ್ನ ಉದೇಶವಲ್ಲದುದರಿಂದ ಮೇಲೆ ಕೆಲವನ್ನು ಮಾತ್ರ ಆರಿಸಿ ಕೊಟ್ಟಿದೆ. ಹಾಗೆ ಆಯ್ಕೆ ಮಾಡಿರುವ ಭಾಗಗಳು ವಿಶಿಷ್ಟವಾಗಿವೆ ಮತ್ತು ಈ ಅನುಬಂಧಕ್ಕೆ ಮತ್ತು ಒಟ್ಟು ಕೃತಿಗೆ ಉಚಿತವಾಗಿ ಹೊಂದಿಕೊಳ್ಳುತ್ತವೆಯೆಂಬುದನ್ನು ಸುಲಭವಾಗಿ ಗುರುತಿಸಬಹುದು.

ಎಲ್ಲ ವೈದಿಕರೂ ಪ್ರತಿದಿನ ಸಂಧ್ಯಾವಂದನೆಯಲ್ಲಿ ಪಠಿಸುವ ಗಾಯತ್ರೀ ಮಂತ್ರ ಇದು:

ಓಂ ॥ ತತ್ಸವಿತುರ್ವರೇಣ್ಯಂ
ಭರ್ಗೋ ದೇವಸ್ಯ ಧೀಮಹಿ
ಧಿಯೋ ಯೋ ನಃ ಪ್ರಚೋದಯಾತ್ ॥

(ನಮ್ಮ ಬುದ್ಧಿಯನ್ನು ಪ್ರಚೋದಿಸುವ ದೇವ ಸವಿತೃವಿನ ಉಜ್ವಲ ಕಾಂತಿಯನ್ನು ನಾವು ಧ್ಯಾನಿಸುತ್ತೇವೆ)

ಸೂರ್ಯನನ್ನು ಸ್ತೋತ್ರಮಾಡಿ ಕುಷ್ಠರೋಗವನ್ನು ನಿವಾರಣೆ ಮಾಡಿ ಕೊಂಡನೆಂದು ಹೇಳಲಾಗಿರುವ ಮಯೂರನ 'ಸೂರ್ಯ ಶತಕ'ದ[೯] ಕೊನೆಯ ಪದ್ಯ ಹೀಗಿದೆ–

ಶ್ಲೋಕಾ ಲೋಕಸ್ಯ ಭೂತ್ಯೈ ಶತಮಿತಿರಚಿತಾಃ ಶ್ರೀ ಮಯೂರೇಣ ಭಕ್ತ್ಯಾ
ಯುಕ್ತಶ್ಚೈತಾನ್ ಪಠೇತ್ ಯಃ ಸಕೃದಪಿ ಪುರುಷಃ ಸರ್ವಪಾಪೈರ್ವಿಮುಕ್ತಃ ॥
ಆರೋಗ್ಯಂ ಸತ್ಕವಿತ್ವಂ ಮತಿಮತುಲಬಲಂ ಕಾಂತಿಮಾಯುಃ ಪ್ರಕರ್ಷಂ
ವಿದ್ಯಾಮೈಶ್ವರ್ಯಮರ್ಥಂ ಸುತಮಪಿ ಲಭತೇ ಸೋಽತ್ರ ಸೂರ್ಯಪ್ರಸಾದಾತ್ ॥

"ಈ ಶತಕವು ಕವಿ ಮಯೂರನಿಂದ ಲೋಕ ಕಲ್ಯಾಣಾರ್ಥವಾಗಿ ರಚಿಸಲ್ಪಟ್ಟಿದೆ. ಯಾವನು ಇದನ್ನು ಭಕ್ತಿಯಿಂದ ಪಠಿಸುತ್ತಾನೋ ಅವನು ಪಾಪ ವಿಮುಕ್ತನಾಗುತ್ತಾನೆ. ಅವನಿಗೆ ಸೂರ್ಯನ ಪ್ರಸಾದದಿಂದ ಆರೋಗ್ಯ, ಕವಿತಾಶಕ್ತಿ, ಮತಿ, ಅತುಲಬಲ, ಕಾಂತಿ, ಆಯುಷ್ಯಾಭಿವೃದ್ಧಿ, ವಿದ್ಯೆ, ಐಶ್ವರ್ಯ, ಪುತ್ರ ಸಂತಾನ ಇವು ತಪ್ಪದೆ ದೊರಕೊಳ್ಳುವುವು."

## ಅಡಿ ಟಿಪ್ಪಣಿಗಳು

೧. ಬಿ. ರಾಮಯ್ಯ: ಶ್ರೀ ಕಲಶೇಶ್ವರ ಸ್ವಾಮಿಯವರ ದೇವಸ್ಥಾನದ ಕೈಪಿಡಿ (ಮ್ಯಾನ್ಯುಯಲ್) (ಮೈಸೂರು ಸರ್ಕಾರ, ಬೆಂಗಳೂರು. ೧೯೩೪), ಪು. ೧೧೭ (ಅನುಬಂಧ ೮ರಲ್ಲಿ ಬೇರೆ ಬೇರೆ ದೇವಾಲಯಗಳ ಕೈಪಿಡಿಗಳಿಂದ ಮಾಹಿತಿಯನ್ನು ಹಾಗೇ ಉಲ್ಲೇಖಮಾಡಿ ಕೊಟ್ಟಿದೆ.)

೨. ಬಿ. ರಾಮಯ್ಯ: ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೨), ಪು. ೧೩೭.

೩. ಬಿ. ರಾಮಯ್ಯ: ಶ್ರೀ ವೇಲಾಪುರಿ ಸೌಮ್ಯಕೇಶವದೇವರ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೨), ಪು. ೧೧೯.

೪. ಬಿ. ರಾಮಯ್ಯ: ಶ್ರೀ ಕಲಶೇಶ್ವರ ಸ್ವಾಮಿಯವರ ದೇವಸ್ಥಾನದ ಕೈಪಿಡಿ (ಮ್ಯಾನ್ಯುಯಲ್) (ಮೈಸೂರು ಸರ್ಕಾರ, ಬೆಂಗಳೂರು. ೧೯೩೪), ಪು. ೧೧೫.

೫. ಬಿ. ರಾಮಯ್ಯ: ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೨), ಪು. ೧೩೩.

೬. ಈ ವಿಲಕ್ಷಣ ಸಂಪ್ರದಾಯದ ಮೂಲ, ಅರ್ಥಗಳು ವಿಚಾರಣೀಯವಾಗಿವೆ.

೭. ಬಿ. ರಾಮಯ್ಯ: ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೨), ಪು. ೧೬೪.

೮. ಬಿ. ರಾಮಯ್ಯ: ಮೇಲ್ಕೋಟೆ ಶ್ರೀ ನಾರಾಯಣಸ್ವಾಮಿ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೮), ಪು. ೩೩೬–೩೮.

೯. ಬಿ. ರಾಮಯ್ಯ: ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೨), ಪು. ೧೩೪.

೧೦. ಬಿ. ರಾಮಯ್ಯ: ಮೇಲ್ಕೋಟೆ ಶ್ರೀ ನಾರಾಯಣಸ್ವಾಮಿ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೮), ಪು. ೩೪೧.

ಡಾ॥ ಪು.ತಿ. ನರಸಿಂಹಾಚಾರ್ಯರು "ರಥಸಪ್ತಮಿ ಮತ್ತು ಇತರ ಚಿತ್ರಗಳು" ಗ್ರಂಥದಲ್ಲಿ (ಕಾವ್ಯಾಲಯ, ಮೈಸೂರು) ತಮ್ಮೂರಾದ ಮೇಲ್ಕೋಟೆಯ ಚಲುವ ನಾರಾಯಣಸ್ವಾಮಿಯ ರಥಸಪ್ತಮಿ ಉತ್ಸವವನ್ನು ಭಾವುಕವಾಗಿ, ತಮ್ಮ ಬಾಲ್ಯದ ಅನುಭವಗಳನ್ನು ಬೆರಸಿ ವರ್ಣಿಸಿದ್ದಾರೆ. ಮಾಘ ಶುದ್ಧ ಷಷ್ಠಿಯ ರಾತ್ರಿಯೇ ಹೆಂಗಸರು ಬೀದಿಗಳನ್ನು ಗುಡಿಸಿ ಸಾರಿಸಿ ರಂಗವಲ್ಲಿ ಇಡುತ್ತಾರೆ. ಸೂರ್ಯಮಂಡಲಾಧೀಶ್ವರನಾಗಿ ಭಗವಂತ ಬಿಜಯಮಾಡುವನೆಂದು ಸಂಭ್ರಮ. ಮಾರನೆಯ ದಿನ ಸಪ್ತಮಿ; ಸುತ್ತಲ ಹಳ್ಳಿಹಳ್ಳಿಗಳಿಂದ ಜನ ಮೇಲುಕೋಟೆಗೆ ಧಾವಿಸುತ್ತಾರೆ. ಬೆಳಿಗ್ಗೆ ದೇವರ ಉತ್ಸವ ವೈಭವದಿಂದ ನಡೆಯುತ್ತದೆ. ಸೂರ್ಯಮಂಡಲವಾಹನದ ಮೇಲೆ ಚಲುವರಾಯಸ್ವಾಮಿ: ಆ ವಾಹನಕ್ಕೆ ಸಾರಥಿ ಅರುಣ ಏಳು ಚಿನ್ನದ ಕುದುರೆಗಳ ಕಡಿವಾಣ ಹಿಡಿದು ಕುಳಿತಿರುತ್ತಾನೆ. ಮೆರವಣಿಗೆ ಮುಂದೆ ದೊಡ್ಡ ಎತ್ತಿನ ಮೇಲೆ ನಗಾರಿ ಬಾರಿಸುವವನು ಬರುತ್ತಾನೆ. ಶ್ವೇತಚ್ಛತ್ರ, ಧ್ವಜ, ಬಾವುಟ, ಬಿರುದುಗಳನ್ನು ಹೊತ್ತವರು ಬರುತ್ತಾರೆ. ಹಿಂದೆ ವೇದಘೋಷ ಮಾಡುವ ಬ್ರಾಹ್ಮಣರ ಸಮೂಹ. ಈ ಸಮೂಹಗಳ ಮಧ್ಯೆ ಚಲುವರಾಯಸ್ವಾಮಿ ಇರುವ ಸೂರ್ಯಮಂಡಲವಾಹನವಿರುತ್ತದೆ. ಜನ ಮನೆಮನೆಗಳ ಮುಂದೆ ಹಣ್ಣು ಕಾಯಿಗಳನ್ನು ದೇವರಿಗೆ ಒಪ್ಪಿಸುತ್ತಾರೆ.

ಮೈಸೂರು ಅರಮನೆ ಆವರಣದಲ್ಲಿ ನಡೆಯುವ

ಸೂರ್ಯಮಂಡಲವಾಹನದ ಉತ್ಸವದ ಚಿತ್ರಕ್ಕೆ, ನೋಡಿ– ಕೆ.ವಿ. ಶ್ರೀನಿವಾಸಪ್ರಭು ಅವರ "ದೇವಮಂದಿರ ಕೈಪಿಡಿ", ಪು. ೯.

೧೧. ಬಿ. ರಾಮಯ್ಯ: ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೨), ಪು. ೧೩೩–೩೫.

೧೨. ಬಿ. ರಾಮಯ್ಯ: ಶ್ರೀ ವೇಲಾಪುರಿ ಸೌಮ್ಯಕೇಶವದೇವರ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಬೆಂಗಳೂರು. ೧೯೩೨), ಪು. ೧೧೪–೬.

೧೩. ಹೀ.ಚಿ. ಬೋರಲಿಂಗಯ್ಯ ಅವರ ಸ್ವಂತ ಸಂಕಲನದಿಂದ. ಮತಿಘಟ್ಟ ಕೃಷ್ಣಮೂರ್ತಿಯವರ "ಗೀತೆಗಳು": ಸಂಪುಟ ೧ (ಗುರುಮೂರ್ತಿ ಪ್ರಕಾಶನ, ಬೆಂಗಳೂರು. ೧೯೭೫) – ಇದರಲ್ಲಿ (ಪು. ೨೯೭) "ಸೂಲಿಗರಾಯ" ಎಂಬ ಶೀರ್ಷಿಕೆಯಲ್ಲಿ ಮೂರು ತ್ರಿಪದಿಗಳು ಇವೆ. (ಸೂರ್ಯ→ಸೂರಿ→ಸೂಲಿ+ಗ+ರಾಯ).

೧೪. M. K. Gandhi: An Autobiography or the story of my experiments with Truth (Ahmedabad, 1948). P. 13.

೧೫. ಕಾಳೇಗೌಡ ನಾಗವಾರ: ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ (ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೭೫). ಪು. ೧೧೫. ಈ ಬಗ್ಗೆ ವಿಶೇಷ ಅಧ್ಯಯನ ನಡೆಸಿರುವ ಅಗ್ರಹಾರ ಕೃಷ್ಣಮೂರ್ತಿಯವರು, ಹೆಣ್ಣುಮಕ್ಕಳು ಚಂದ್ರನನ್ನು ಗಂಡನೆಂದು ಭಾವಿಸಿ ಆಚರಿಸುವ ರಿಚುಯಲ್ಲಿನ ಕ್ರಿಯೆಯಾಗಿರುವ ಬೆಳ್ದಿಂಗ್ಳಪ್ಪನ ಪೂಜೆಯ ವಿವರಗಳನ್ನು ಕೊಟ್ಟಿದ್ದಾರೆ. (ಬೆಳ್ದಿಂಗ್ಳಪ್ಪನ ಪೂಜೆ. ಬೆಂಗಳೂರು. ೧೯೭೬. ಪ್ರಸ್ತಾವನೆ). ದ್ರಾವಿಡರ ನಂಬಿಕೆ ಪ್ರಕಾರ, ಒಬ್ಬ ಚೆಲುವ ಹುಡುಗ ದೊರೆಯುವವರೆಗೆ ಎಲ್ಲ ಹುಡುಗಿಯರಿಗೂ ಚಂದ್ರನೇ ಗಂಡ, ಚಂದ್ರ ಗರ್ಭರಕ್ಷಕ ದೇವತೆಯೂ ಹೌದು ಎಂಬ ನಂಬಿಕೆ ಇದೆ (ಅದೇ. ಪು. ೧೭–೧೮). ಈ ಸಂಬಂಧದಲ್ಲಿ ಬರುವ ಹಾಡುಗಳಲ್ಲಿ – "ಸೂರ್ಯಗೆ ಗುಡಿ ಕಟ್ಟಿ ಮ್ಯಾಲೆ ಬಾವಿ ತೋಡಿ । ಮ್ಯಾಲಿದ್ದ ಕಲ್ಲಾ ಮರಿಮಾಡಿ। ಮಲ್ಲಯ್ಯೆ ಲಿಂಗಕಾಗ್ಗುಣಿಯ ಕೊಡ ಬನ್ನಿ" (ಅಗ್ಗುಣಿ= ಅಗ್ಗವಣಿ, ನೀರು) ಎಂಬುದು ಗಮನಾರ್ಹ (ಅದೇ. ಪು. ೫೪). ಜಾನಪದ ಸಂಪ್ರದಾಯದಲ್ಲಿ ಚಂದ್ರನ ಪೂಜೆ ಜೊತೆ ಸೂರ್ಯನಿಗೂ ಪೂಜೆ ಸಲ್ಲುತ್ತದೆಯೆಂದು ಇದು ಸೂಚಿಸುತ್ತದೆ. ಆದರೆ ಸೂರ್ಯನಿಗೇ ಸಂಬಂಧಿಸಿದಂತೆ ಜಾನಪದ ವಿಧಿ ಇರುವಂತೆ ಕಾಣಿಸದು. ಮಕರ ಸಂಕ್ರಾಂತಿಯ ಆಚರಣೆ ಬಹುಶಃ ಉತ್ತರದಿಂದ ಸ್ವೀಕೃತವಾದದ್ದಿರಬಹುದು. ಅಲ್ಲಿಯೂ, ತತ್ವಶಃ ಸೂರ್ಯ

ಮುಖ್ಯನಾಗಿದ್ದರೂ ಹಳ್ಳಿಗರ ಸಂಕ್ರಾಂತಿ ಹಬ್ಬದಲ್ಲಿ ಹಬ್ಬದ ಆಚರಣೆಯೇ ಮುಖ್ಯ; ಸೂರ್ಯ ಅಲ್ಲಿ ಪ್ರಸ್ತಾಪಿತನಾಗುವುದೇ ಇಲ್ಲ.

೧೬. ಸಿ.ಬಿ. ಸೀತಾರಾಂ: 'ಭಾರತದಲ್ಲಿ ಸೂರ್ಯಾರಾಧನೆ' (ಪ್ರಬುದ್ಧ ಕರ್ಣಾಟಕ, ೪೪.೨. ಪು. ೧೯).

೧೭. ಶಂ. ಬಾ. ಜೋಶಿ: ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ (ದ್ವಿತೀಯ ಭಾಗ). ಧಾರವಾಡ. ೧೯೬೬. ಪು. ೬೨.

೧೮. ರತ್ನಾಕರನ ಹಾಡುಗಳು (ಸಂ: ಹಂಪ. ನಾಗರಾಜಯ್ಯ. ೧೯೭೯. ಬೆಂಗಳೂರು), ಪು. ೬೬-೬೭.

೧೯. ಹರಿಹರ ಕವಿಯ 'ಬಾಣಶರಣರ ಮಹಾತ್ಮೆ' ಎಂಬ ಕೃತಿಯಲ್ಲಿ (ಹರಿಹರನ ರಗಳೆಗಳು. ಸಂ: ಫ.ಗು. ಹಳಕಟ್ಟಿ, ಧಾರವಾಡ. ೧೯೬೮. ಪು. ೧೮೦-೧), ದುರ್ವ್ರಣಗಳಿಂದ ಪೀಡಿತನಾದ ಮಯೂರ ಕವಿ ಉದಯಕಾಲದಲ್ಲಿ ನೀರಲ್ಲಿ ಕಂಠಪ್ರಮಾಣ ನಿಂತುಕೊಂಡು ಸೂರ್ಯನನ್ನು ಸ್ತೋತ್ರ ಮಾಡಿ ತನ್ನ ರೋಗದಿಂದ ಮುಕ್ತನಾದುದನ್ನು ವರ್ಣಿಸಲಾಗಿದೆ.

ಸೂರ್ಯಾಭಿಮುಖನಾಗಿ ಕೆಯ್ಯೆತ್ತಿ ಪೊಡಮಟ್ಟು
ಸಾರಮಂತ್ರಂಗಳಂ ಮನದ ತುದಿಯೊಳಗಿಟ್ಟು
"ತ್ರಿಜಗಮಂ ಬೆಳಗುವ ಮಹಾಕಾಂತಿಸಂಪನ್ನ
ಭುಜಗಭೂಷಣ ಸರ್ವಕಾರುಣ್ಯಸಂಪನ್ನ
ಲೋಕಕ್ಕೆ ಕಣ್ಣಾಗಿ ಕಾಣಿಸುವ ಮಹಿಮನೇ
ಲೋಕಕ್ಕೆ ಬೆಳಗಾಗಿ ಬೆಳಗುವಾದಿತ್ಯನೇ
ಜೀವರಾಯುಷ್ಯರಾಶಿಯನಳಿವ ನಿಶ್ಚಳನೆ
ಭಾವಿಸಲು ತಮಕುಲವನೋಡಿಸುವ ನಿರ್ಮಳನೆ"
ಎಂದಲ್ಲಿ ಸೂರ್ಯಶತಕವನೋದೆ ಮೆಚ್ಚುತಂ
ಬಂದು ಮೆಯ್ಯಂಗೊಟ್ಟನಾದಿತ್ಯನುನ್ನತಂ
ಪಡೆದು ಬಂದ ಮಯೂರ ಮೆಯ್ಯನಾನಂದದಿಂ
ಪಡೆದು ಬರೆ ಮೈ ಸುವರ್ಣಚ್ಛಾಯೆಯಂದದಿಂ....

ಈಗ ದೊರಕುವ ಸಂಸ್ಕೃತ ಸೂರ್ಯಶತಕದ ಪಾಠದಲ್ಲಿನ ಯಾವುದೇ ಒಂದು ಪದ್ಯವನ್ನು ಹರಿಹರನ ಸ್ತೋತ್ರಭಾಗಕ್ಕೆ ಮೂಲವೆಂದು ಗುರುತಿಸಲು ಸಾಧ್ಯವಿಲ್ಲದಿದ್ದರೂ ಹರಿಹರನ ಕೃತಿಯ ಸ್ತೋತ್ರದ ಭಾವಗಳು ಸಂಸ್ಕೃತಕೃತಿಯಲ್ಲಿ ಅಲ್ಲಲ್ಲಿ ದೊರಕುತ್ತವೆಯೆಂದು ಶ್ರೀ ಡಿ. ಪ್ರಹ್ಲಾದಾಚಾರ್ ಅವರು ತಿಳಿಸುತ್ತಾರೆ.

# ಅನುಬಂಧ ೯ (ಪ್ರಶ್ನಾವಳಿ)

**ಬೆಂಗಳೂರು ವಿಶ್ವವಿದ್ಯಾಲಯ, ಕನ್ನಡ ಅಧ್ಯಯನ ಕೇಂದ್ರ**
**ಪ್ರಶ್ನಾವಳಿ**
(೧೬-೨-೯೮೦ನೇ ಶನಿವಾರ ನಡೆದ ಸೂರ್ಯಗ್ರಹಣದ ಬಗ್ಗೆ)

೧೬-೨-೯೮೦ನೇ ಶನಿವಾರ ನಡೆದ ಸೂರ್ಯಗ್ರಹಣ ಈಚೆಗೆ ಕೋಲಾಹಲವನ್ನುಂಟುಮಾಡಿದ ವಿಶೇಷ ಘಟನೆ. ಅದನ್ನು ಕುರಿತಂತೆ ಬಗೆ ಬಗೆಯ ಜನ ಬಗೆ ಬಗೆಯ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಹಳತು ಹೊಸತರ ಜೊತೆ ಹೊಂದಿಕೊಳ್ಳಲು ಪ್ರಯತ್ನಗಳು ನಡೆಯುತ್ತಿರುವ ಇಂದಿನ ಭಾರತದ ಸಂದರ್ಭದಲ್ಲಿ ಒಟ್ಟಾರೆ ನಮ್ಮ ಜನ ಸೂರ್ಯಗ್ರಹಣವನ್ನು ಹೇಗೆ ಭಾವಿಸುತ್ತಾರೆ ಎಂಬುದನ್ನು ತಿಳಿಯುವ ಉದ್ದೇಶದಿಂದ ನಿಮ್ಮ ಬಳಿ ಬಂದಿದ್ದೇವೆ. ಈ ಪ್ರಶ್ನಾವಳಿಯ ಸಹಾಯದಿಂದ ನಿಮ್ಮ ಪ್ರತಿಕ್ರಿಯೆಯನ್ನು ತಿಳಿಯುವ ಬಯಕೆ ನಮ್ಮದು. ಇದು ಹದಿನೈದು - ಇಪ್ಪತ್ತು ನಿಮಿಷಗಳಿಗಿಂತ ಹೆಚ್ಚು ತೆಗೆದುಕೊಳ್ಳುವುದಿಲ್ಲ. ನಮ್ಮ ಅಧ್ಯಯನ ಸಮರ್ಪಕವಾಗಬೇಕಾದರೆ ನಿಮ್ಮ ಪೂರ್ಣ ಸಹಕಾರ ಅಗತ್ಯವಾಗಿದೆ. ನಿಮ್ಮ ಹೆಸರನ್ನು ಯಾವುದೇ ಸಂದರ್ಭದಲ್ಲಿ ಬಹಿರಂಗಪಡಿಸುವುದಿಲ್ಲವೆಂಬ ಪೂರ್ಣ ಭರವಸೆಯನ್ನು ಕೊಡುತ್ತಿದ್ದೇವೆ. ಸಹಕರಿಸಬೇಕಾಗಿ ವಿನಂತಿ.

೧. ಹೆಸರು-ವಿಳಾಸ :
೨. ವಯಸ್ಸು :
೩. ಉದ್ಯೋಗ :
೪. ವಿದ್ಯಾಭ್ಯಾಸ :
೫. ಮತ/ಜಾತಿ :

೬. ಗ್ರಹಣವೆಂದರೆ ನೀವು ಏನಂದುಕೊಂಡಿದ್ದೀರಿ ?
(೧) ಸೂರ್ಯನನ್ನು ಸರ್ಪವೊಂದು ನುಂಗುತ್ತದೆ.
(೨) ಚಂದ್ರನ ನೆರಳು ಭೂಮಿಯ ಮೇಲೆ ಬೀಳುತ್ತದೆ.
(೩) ಗೊತ್ತಿಲ್ಲ.

೭. ಮೇಲಿನ ಮಾಹಿತಿ ನಿಮಗೆ ಎಲ್ಲಿ ದೊರಕಿತು?
(೧) ಜನರ ಬಾಯಿಂದ
(೨) ಪುಸ್ತಕದ ಮೂಲಕ
(೩) ಗೊತ್ತಿಲ್ಲ.

೮. ನೀವು ನೋಡುತ್ತಿರುವ ಸೂರ್ಯ ಗ್ರಹಣಗಳಲ್ಲಿ ಇದು ಎಷ್ಟನೆಯದು?
(೧) ಒಂದು
(೨) ಎರಡು
(೩) ಮೂರು

೯. ರೇಡಿಯೋ, ಪತ್ರಿಕೆಗಳ ಮೂಲಕ ನಡೆದ ಪ್ರಚಾರದಿಂದ ನಿಮಗೆ ಭಯವಾಗಿತ್ತೇ?
(೧) ಹೌದು
(೨) ಇಲ್ಲ

೧೦. ಭಯವಾಗಿದ್ದರೆ, ಏಕೆ?

೧೧. ಗ್ರಹಣವನ್ನು ನೀವು ನೋಡಿದಿರಾ?
(೧) ಹೌದು
(೨) ಇಲ್ಲ

೧೨. ಹೌದು ಎಂದಾದರೆ ಹೇಗೆ ನೋಡಿದಿರಿ?
(೧) ಕಪ್ಪು ಮಸಿಯ ಗಾಜಿನ ಮೂಲಕ
(೨) ಫಿಲ್ಮ್ ಮೂಲಕ
(೩) ಕನ್ನಡಿ ಪ್ರತಿಫಲನ ಮೂಲಕ
(೪) ಸಗಣಿ ರಾಡಿಯ ಮೂಲಕ
(೫) ಬರಿ ಕಣ್ಣಿನ ಮೂಲಕ
(೬) ಇತರೇ ವಸ್ತುಗಳ ಮೂಲಕ

೧೩. ನಿಮ್ಮ ಮನೆಯಲ್ಲಿ ಎಲ್ಲರೂ ನೋಡಿದಿರಾ?
(೧) ಹೌದು
(೨) ಇಲ್ಲ

೧೪. ನೀವು ಗ್ರಹಣ ನೋಡದಿದ್ದರೆ, ನೀವು ಗ್ರಹಣದ ಸಮಯದಲ್ಲಿ ಏನು ಮಾಡುತ್ತಿದ್ದಿರಿ?

(೧) ಪೂಜೆ/ಜಪ

(೨) ಸುಮ್ಮನೆ ಇದ್ದೆ

(೩) ಇತರೆ

೧೫. ಗ್ರಹಣವನ್ನು ನೀವು ಏಕೆ ನೋಡಲಿಲ್ಲ?

(೧) ಕಣ್ಣಿಗೆ ಅಪಾಯ

(೨) ಬರೀ ಹೆದರಿಕೆ

(೩) ಹಿರಿಯರು ಬೇಡ ಎಂದರು

(೪) ಪತ್ರಿಕೆಗಳ ಪ್ರಚಾರ

(೫) ಇತರೇ ಕಾರಣ

೧೬. ನೀವು ನೋಡಿದರೂ, ಬೇರೆ ಯಾರಿಗಾದರೂ ಅವಕಾಶ ಕೊಡಲಿಲ್ಲವೆ?

(೧) ಚಿಕ್ಕ ಮಕ್ಕಳು

(೨) ಹೊಸ ದಂಪತಿಗಳು

(೩) ಗರ್ಭಿಣಿ

(೪) ಬಾಣಂತಿ

(೫) ಮನೋವಿಕಲರು

(೬) ಇತರೆ

೧೭. ಗ್ರಹಣವನ್ನು ನೀವು ನೋಡಿದ್ದರೆ, ಅದು ಎಂತಹ ಗ್ರಹಣ?

(೧) ಅಪೂರ್ಣ

(೨) ಪೂರ್ಣ

(೩) ಬಹುತೇಕ ಪೂರ್ಣ

೧೮. ಗ್ರಹಣದ ಸಮಯದಲ್ಲಿ ಏನಾದರೂ ವೈಜ್ಞಾನಿಕ ಪ್ರಯೋಗ ನಡಸಿದಿರಾ?

(೧) ಹೌದು

(೨) ಇಲ್ಲ

೧೯. ಹೌದು ಎಂದಾದರೆ, ಎಂತಹ ಪ್ರಯೋಗ?

೨೦. ಗ್ರಹಣದ ಸಮಯದಲ್ಲಿ ಜನಪ್ರಿಯ ಪ್ರಯೋಗ ನಡಸಿದಿರಾ?
(೧) ಹೌದು
(೨) ಇಲ್ಲ
೨೧. ಹೌದು ಎಂದಾದರೆ ಎಂತಹ ಪ್ರಯೋಗ?
೨೨. ಗ್ರಹಣದ ಸಮಯದಲ್ಲಿ ವಿಶೇಷ ಪರಿಶೀಲನೆ ನಡಸಿದಿರಾ?
(೧) ಹೌದು
(೨) ಇಲ್ಲ
೨೩. ಹೌದು ಎಂದಾದರೆ ಎಂತಹ ಪರಿಶೀಲನೆ?
೨೪. ಪೂರ್ಣ ಅಥವಾ ಬಹುತೇಕ ಪೂರ್ಣಗ್ರಹಣವಾದಾಗ ನಿಮಗೆ ಏನನ್ನಿಸಿತು?
(೧) ಭಯ
(೨) ಕುತೂಹಲ
(೩) ಉದ್ರೇಕ
(೪) ಏನೂ ಇಲ್ಲ
(೫) ಇತರೆ ವಿಶೇಷ ಅನ್ನಿಸಿಕೆ
೨೫. ಗ್ರಹಣ ಬಿಟ್ಟ ಮೇಲೆ ಏನು ಮಾಡಿದಿರಿ?
(೧) ಸ್ನಾನ
(೨) ಜಪ/ಪೂಜೆ
(೩) ದೇವಸ್ಥಾನಕ್ಕೆ ಭೇಟಿ
(೪) ಪುರೋಹಿತರಿಂದ ಶಾಂತಿ
(೫) ಇತರೇ
(೬) ಏನೂ ಇಲ್ಲ
೨೬. ಗ್ರಹಣದ ದಿನ ಊಟ ಮಾಡಿದಿರಾ?
(೧) ಹೌದು
(೨) ಇಲ್ಲ
೨೭. ಹೌದಾದರೆ, ಯಾವಾಗ ಊಟ ಮಾಡಿದಿರಿ?
(೧) ಬೆಳಿಗ್ಗೆ
(೨) ಮಧ್ಯಾಹ್ನ (ಗ್ರಹಣದ ಸಂದರ್ಭದಲ್ಲಿ)
(೩) ರಾತ್ರಿ

೨೮. ಇಲ್ಲವಾದರೆ:

(೧) ಪೂರ್ತಿ ಉಪಾಹಾರ

(೨) ಲಘು ಉಪಾಹಾರ

(೧) ಪಾನೀಯ ಮಾತ್ರ

೨೯. ಗ್ರಹಣ ಬಿಟ್ಟ ಮೇಲೆ ನಡೆದ ಶುದ್ಧಿ ಕಾರ್ಯ ಏನು?

೩೦. ಗ್ರಹಣವು ನಮ್ಮ (ಪರಿಸರ) ಹಾಗೂ ದೇಶದ ಅಥವಾ ವಿಶ್ವದ ಪರಿಸ್ಥಿತಿಯ ಮೇಲೆ ಪ್ರಭಾವ ಬೀರುತ್ತದೆ ಎಂದು ನೀವು ನಂಬುವಿರಾ?

(೧) ಹೌದು

(೨) ಇಲ್ಲ

೩೧. ಹೌದು ಎಂದಾದರೆ, ಅದು ಬಹುಶಃ ಎಂತಹುದು?

# ಗ್ರಂಥಸೂಚಿ

## ಆಧುನಿಕ ಕೃತಿಗಳು–ಕನ್ನಡ


ಕಲಬುರ್ಗಿ, ಎಂ.ಎಂ.: ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು (ಐಬಿಎಚ್ ಪ್ರಕಾಶನ, ಬೆಂಗಳೂರು. ೧೯೮೦)

ಕವಲಿ, ಜೆ.ಎ.: ಭಾರತೀಯರ ಹಬ್ಬಗಳು (ಧಾರವಾಡ, ೧೯೫೭)

ಕಾಳೇಗೌಡ, ನಾಗವಾರ: ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ (ಬೆಂಗಳೂರು ವಿಶ್ವವಿದ್ಯಾಲಯ. ೧೯೭೫)

ಕೃಷ್ಣಮೂರ್ತಿ, ಅಗ್ರಹಾರ: ಬೆಳ್ದಿಂಗಳಪ್ಪನ ಪೂಜೆ (ಬೆಂಗಳೂರು. ೧೯೭೬)

ಕೃಷ್ಣಶಾಸ್ತ್ರೀ, ಎ. ಆರ್.: ವಚನಭಾರತ (ಬೆಂಗಳೂರು. ೧೯೫೩)

ಚಂದ್ರಶೇಖರ್, ಬಿ.ಎಸ್.: ಸಮೂಹ ಮಾಧ್ಯಮಗಳು–ಭಾರತೀಯ ಸಮಾಜದಲ್ಲಿ (ಮೈಸೂರು ವಿಶ್ವವಿದ್ಯಾನಿಲಯ. ೧೯೭೬)

ಚಕ್ರವರ್ತಿ ಮತ್ತು ಷಣ್ಮುಗಂ: ಖಗೋಳಶಾಸ್ತ್ರ (ಮೈಸೂರು ವಿಶ್ವವಿದ್ಯಾನಿಲಯ.)

ಚೆನ್ನಬಸಪ್ಪ ಗೊ.ರು.: (ಸಂ.) ಗ್ರಾಮಜ್ಯೋತಿ (ಬೆಂಗಳೂರು. ೧೯೭೯)

ಚಿದಾನಂದಮೂರ್ತಿ. ಎಂ.: ಸಂಶೋಧನತರಂಗ, ಸಂಪುಟ ೨, (ಬೆಂಗಳೂರು ವಿಶ್ವವಿದ್ಯಾಲಯ. ೧೯೭೦)

: ಗ್ರಾಮೀಣ (ಬಾಪ್ಕೊ ಪ್ರಕಾಶನ. ಬೆಂಗಳೂರು. ೧೯೭೭)

: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಮೈಸೂರು ವಿಶ್ವವಿದ್ಯಾನಿಲಯ. ೧೯೭೯)

ಜೋಶಿ, ಶಂ. ಬಾ.: ಕರ್ನಾಟಕ ಸಂಸ್ಕತಿಯ ಪೂರ್ವಪೀಠಿಕೆ–ದ್ವಿತೀಯ ಭಾಗ (ಧಾರವಾಡ. ೧೯೬೭)

ನರಸಿಂಹಾಚಾರ್, ಪು.ತಿ.: ರಥಸಪ್ತಮಿ ಮತ್ತು ಇತರ ಚಿತ್ರಗಳು (ಕಾವ್ಯಾಲಯ. ಮೈಸೂರು.)

ನಾಗಪ್ಪಶಾಸ್ತ್ರೀ, ಎಚ್.: ಸಟೀಕಾ ವೃತರತ್ನಮಾಲಾ (ಟಿ.ಕೆ. ಗೋಪಾಲಶೆಟ್ಟಿ ಅಂಡ್ ಸನ್ಸ್. ಬೆಂಗಳೂರು. ೧೯೬೬)

ನಾರಾಯಣರಾವ್, ಜಿ.ಟಿ.: ಗ್ರಹಣಗಳು (ಐಬಿಎಚ್ ಪ್ರಕಾಶನ. ಬೆಂಗಳೂರು. ೧೯೮೦)

ಬಾಲೂರಾವ್, ಶಾ.: ಸೂರ‍್ಯ ಇವನೊಬ್ಬನೇ ('ಕಾವೇರಿ'. ದೆಹಲಿ. ೧೯೮೦)

ಮಲ್ಲಾಪೂರ, ಬಿ.ವ್ಹಿ.: ನಯಸೇನ ಮತ್ತು ಅವನ ಕೃತಿಗಳು (ಕರ್ನಾಟಕ ವಿಶ್ವವಿದ್ಯಾಲಯ. ೧೯೭೮)

ರಂಗಸ್ವಾಮಿ, ಡಿ.ಟಿ.: ಭಾರತದ ಹಬ್ಬ ಹರಿದಿನಗಳು (ಹೊರಕೆರೆ ದೇವನಪುರ. ೧೯೬೧)

ರಾಮಯ್ಯ, ಬಿ.: ಶ್ರೀ ಕಲಶೇಶ್ವರ ಸ್ವಾಮಿಯವರ ದೇವಸ್ಥಾನದ ಕೈಪಿಡಿ (ಮ್ಯಾನ್ಯುಯಲ್) (ಮೈಸೂರು ಸರ್ಕಾರ, ಬೆಂಗಳೂರು. ೧೯೩೪)

: ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೨)

: ಶ್ರೀ ವೇಲಾಪುರಿ ಸೌಮ್ಯಕೇಶವದೇವರ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೨)

: ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೨)

: ಮೇಲ್ಕೋಟೆ ಶ್ರೀ ನಾರಾಯಣಸ್ವಾಮಿ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೨)

: ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಸ್ಥಾನದ ಮ್ಯಾನ್ಯುಯಲ್ ಯಾ ಕೈಪಿಡಿ. (ಮೈಸೂರು ಸರ್ಕಾರ, ಬೆಂಗಳೂರು. ೧೯೩೨)

ರಾಮರಾವ್, ಬೆನಗಲ್ ಮತ್ತು ಸುಂದರಶಾಸ್ತ್ರಿ, ಪಾನ್ಯಂ: ಪುರಾಣನಾಮ ಚೂಡಾಮಣಿ (ಮೈಸೂರು ವಿಶ್ವವಿದ್ಯಾನಿಲಯ. ೧೯೭೭)

ವೆಂಕಟೇಶ ಅಯ್ಯಂಗಾರ್, ನಂ.: ಜ್ಯೋತಿರ್ವಿನೋದಿನಿ (ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ೧೯೩೧)

ಶಿವರಾಮ ಕಾರಂತ: ಈ ಜಗತ್ತು (ಐಬಿಎಚ್ ಪ್ರಕಾಶನ. ಬೆಂಗಳೂರು. ೧೯೭೯)

ಹಾವನೂರ್, ಶ್ರೀನಿವಾಸ: ಹೊಸಗನ್ನಡ ಅರುಣೋದಯ (ಮೈಸೂರು. ೧೯೭೪)

## ಪ್ರಾಚೀನ ಕೃತಿಗಳು

ಆರ‍್ಯಭಟ: ಆರ‍್ಯಭಟೀಯ (ಅನು: ಎನ್.ಕೆ. ನರಸಿಂಹಮೂರ್ತಿ. ಬೆಂಗಳೂರು ವಿಶ್ವವಿದ್ಯಾಲಯ. ೧೯೭೮)

ಕುಮಾರವ್ಯಾಸ: ಕರ್ನಾಟಕ ಭಾರತ ಕಥಾಮಂಜರಿ/ಕುಮಾರವ್ಯಾಸಭಾರತ. (ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು. ೧೯೫೮)

(ಸಂ :) ಕೃಷ್ಣಮೂರ್ತಿ, ಮತಿಘಟ್ಟ : ಗೀತೆಗಳು, ಸಂಪುಟ ೧, (ಗುರುಮೂರ್ತಿ ಪ್ರಕಾಶನ. ಬೆಂಗಳೂರು. ೧೯೭೫)

ಗುಬ್ಬಿಯ ಮಲ್ಲಣ್ಣ : ಗಣಭಾಷ್ಯರತ್ನಮಾಲೆ (ಸಂ: ಶ್ರೀ ಪ್ರಭುಸ್ವಾಮಿಗಳು. ಮುರುಘಾ ಮಠ, ಧಾರವಾಡ. ೧೯೪೮)

ಗೂಳೂರು ಸಿದ್ಧ ವೀರಣ್ಣೊಡೆಯ: ಶೂನ್ಯಸಂಪಾದನೆ (ಸಂ: ಎಸ್.ಎಸ್. ಭೂಸನೂರ ಮಠ. ೧೯೫೮)

ಚಾವುಂಡರಾಯ (ಇಮ್ಮಡಿ): ಲೋಕೋಪಕಾರ (ಸಂ: ಎಚ್. ಶೇಷಯ್ಯಂಗಾರ್. ಮದ್ರಾಸ್ ವಿಶ್ವವಿದ್ಯಾಲಯ. ೧೯೫೦)

ನಿಜಗುಣ ಶಿವಯೋಗಿ: ವಿವೇಕ ಚಿಂತಾಮಣಿ (ಸಂ: ಜಿ.ಎಂ. ಉಮಾಪತಿಶಾಸ್ತ್ರಿ. ಹುಬ್ಬಳ್ಳಿ. ೧೯೬೯)

: ವಿವೇಕ ಚಿಂತಾಮಣಿ (ಪ್ರ: ಎಂ.ಆರ್. ವೆಂಕಟಾಚಲಶೆಟ್ಟಿ. ಬೆಂಗಳೂರು. ೧೯೦೯)

ನಿರಂಜನಾವಧೂತ: ಗಗನತಾರಾವಳಿ (ಪ್ರ: ಟಿ.ಎನ್. ಕೃಷ್ಣಯ್ಯಶೆಟ್ಟಿ. ಬೆಂಗಳೂರು. ೧೯೦೬)

ಬಸವಣ್ಣ: ಬಸವಣ್ಣನವರ ಟೀಕಿನ ವಚನಗಳು (ಸಂ: ಎಂ.ಎಂ. ಕಲಬುರ್ಗಿ. ಕರ್ನಾಟಕ ವಿಶ್ವವಿದ್ಯಾಲಯ. ೧೯೭೯)

ಬಾಹುಬಲಿ ಪಂಡಿತ: ಧರ್ಮನಾಥ ಪುರಾಣ (ಸಂ: ಎನ್. ಬಸವಾರಾಧ್ಯ, ಮೈಸೂರು ವಿಶ್ವವಿದ್ಯಾನಿಲಯ. ೧೯೭೫)

ಬ್ರಹ್ಮಶಿವ: ಸಮಯಪರೀಕ್ಷೆ (ಸಂ: ಬಿ.ಎಸ್. ಕುಲಕರ್ಣಿ. ಕರ್ನಾಟಕ ವಿಶ್ವ ವಿದ್ಯಾಲಯ. ೧೯೫೮)

ಭೀಮಕವಿ: ಬಸವಪುರಾಣ (ಸಂ: ಪಾವಟೆ, ಇಷ್ಟಲಿಂಗಪ್ಪ ಸಿದ್ಧರಾಮಪ್ಪ ಮತ್ತು ಇತರರು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ. ಧಾರವಾಡ. ೧೯೬೯)

ಮಧುರ: ಧರ್ಮನಾಥ ಪುರಾಣ (ಮೈಸೂರು, ೧೯೫೫)

ಮುಮ್ಮಡಿ ಕೃಷ್ಣರಾಜ ಒಡೆಯರ್: ಅರ್ಕಪುಷ್ಕರಣಿ ಮಹಾತ್ಮೆ (ಸಂ: ಟಿ.ಆರ್. ಶಾಂತ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೯)

: ಗ್ರಹಣ ದರ್ಪಣ (ಕಲ್ಲಚ್ಚಿನ ಪ್ರತಿ)

ರಟ್ಟಕವಿ: ರಟ್ಟಮತಂ (ಸಂ: ಎಚ್. ಶೇಷಯ್ಯಂಗಾರ, ಮದ್ರಾಸ್ ವಿಶ್ವವಿದ್ಯಾಲಯ, ೧೯೫೦)

ರತ್ನಾಕರ : ರತ್ನಾಕರನ ಹಾಡುಗಳು (ಸಂ: ಹಂಪ. ನಾಗರಾಜಯ್ಯ, ಬೆಂಗಳೂರು, ೧೯೭೯)

ರನ್ನ : ಗದಾಯುದ್ಧ (ಸಂ: ಎಂ.ಎ. ರಾಮಾನುಜ ಅಯ್ಯಂಗಾರ್, ಮೈಸೂರು, ೧೯೨೫)

ಶ್ರೀಪಾದರಾಯ : ಶ್ರೀಪಾದರಾಜರ ಕೃತಿಗಳು (ಸಂ: ಜಿ. ವರದರಾಜರಾವ್, ಮೈಸೂರು ವಿಶ್ವವಿದ್ಯಾನಿಲಯ, ೧೯೭೩)

ಹರಿಹರ : ಹರಿಹರನ ರಗಳೆಗಳು (ಸಂ: ಫ. ಗು. ಹಳಕಟ್ಟಿ , ಧಾರವಾಡ, ೧೯೬೮)

## ಇಂಗ್ಲಿಷ್ ಕೃತಿಗಳು

Crooke, William : Religion and Folklore of Northern India (New Delhi, 1925).

Bappu, M.K.V. : The Eclipses of the Sun (Contribution No. 10, Contributions from Nizamiah and Japal Rangapur Observatories, Center of Advanced Study in Astronomy, Osmania University, Hyderabad.)

Cunningham, Alexander : Book of Indian Eras (Oriental Publishers, Delhi, 1971).

Enthoven, R.E. : Folklore of the Konkan (Delhi, 1976).

Frazer, James Goerge : The Golden Bough (Macmillan Paper Backs, 1978).

Gandhi, M.K. : Autobiography (Ahmedabad, 1948).

Gururaja Bhat, P. : Studies in Tuluva History and Culture (1975).

Kane, P.V. : History of Dharmashastra, Vol. V, Part i (Poona, 1958).

Kroeber, A.L. : Anthropology (Oxford and IBH Publishing Company, 1972).

Maple, Eric : Superstition and the Supersitious (W.A. Allen, London, 1971).

Pandey, L.P. : Sun Worship in Ancient India (Motilal Banarasidas, Benares).

Sachau : Alberuni's India.

Shakti M. Gupta ; Surya the Sun God (Somaiya Publications, Baombay, 1977).

Shashibhushan Dasgupata : Obscure Religious Cults (Calcutta, 1969).

Srivastava, V. C. : Sun worship in Ancient India (Indological Publications, Allahabad).

Tylor, Edward Burnett : The Origins of Culture (Harper Torchbooks, New York, 1959).

- Total Solar Eclipse, 16-2-1980, (Pub: Indian Institute of Astrophysics, Bangalore, 1980).
- Total Solar Eclipse (Pub : The Indian Meteorological Department, Bangalore, 16-2-1980).

## ಶಾಸನ ಸಂಪುಟಗಳು

ಧಾರವಾಡ ತಾಲೂಕಿನ ಶಾಸನಗಳು (ಸಂ: ಎಂ.ಎಂ. ಕಲಬುರ್ಗಿ, ಕರ್ನಾಟಕ ವಿಶ್ವವಿದ್ಯಾಲಯ, ೧೯೭೬)

Bombay Karnatak Inscriptions, Vol. I, Part i.

Karnataka Inscriptions, Vol. V; Vol. VI. (Ed. B.R. Gopal).

Epigraphia Carnatica (Rice Edition), Vol. VII; VIII.

Epigraphia Carnatica (Mysore Edition), Vol. III; IV; V; VII.

Epigraphia Indica, Vol. XIII; XVI.

South Indian Inscriptions, Vol. IX, Part i; XV; XX.

## ನಿಘಂಟುಗಳು, ವಿಶ್ವಕೋಶಗಳು

ಕನ್ನಡ ನಿಘಂಟು II (ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು)

ವೆಂಕಟಾಚಲಶಾಸ್ತ್ರೀ, ಟಿ.ವಿ. : ಶ್ರೀವತ್ಸ ನಿಘಂಟು (ಶಾರದಾ ಮಂದಿರ, ಮೈಸೂರು, ೧೯೭೧)

ಕನ್ನಡ ವಿಶ್ವಕೋಶ (ಸಂಪುಟ ೬)

Brewer's Dictionary of Phrase and Fable

Jobes, Gertrude : Dictionary of Mythology, Folklore and Symbols.

Williams, Monier : The Sanskrit English Dictionary

Encyclopaedia of the Social Sciences

Encyclopaedia of Religion and Ethics

The World Book Encyclopaedia

## ಪತ್ರಿಕೆಗಳು

ಕನ್ನಡ

ಉದಯವಾಣಿ; ಕನ್ನಡಪ್ರಭ; ಜನಪ್ರಿಯ ವಿಜ್ಞಾನ; ಪ್ರಜಾವಾಣಿ; ಪ್ರಬುದ್ಧ ಕರ್ಣಾಟಕ; ಮಧುರವಾಣಿ; ಸಾಧನೆ; ಸಿದ್ಧಗಂಗಾ; ಸುಧಾ.

ಇಂಗ್ಲಿಷ್

College Magazine (S.J.R.C. College of Science and Arts, Bangalore); Deccan Herald; Economic Times; Hawk; Illustrated Weekly of India; Science Reporter; Science Today; Span; The City Tab; The Times of India.